ITIHASA DARPANA (Quarterly) : A Peer Reviewed Journal of Historical Research in Kannada, Book - 29, April - June : 2016. Pages : 112. Edited by : Rajesh H.G., # 33/A, Near I.T.I College, Kempegowda Nagara, Vishwaneedam-Post, Bengaluru-560091. Mob : 7829404063. Email: itihasadarpana@gmail.com

ಬೆಲೆ : ₹ 100/–

ISSN 0232-1351

ಇತಿಹಾಸ ದರ್ಪಣ ಪುಸ್ತಕ-29

ISSN 2321-3590
ಪುಸ್ತಕ
29

ಏಪ್ರಿಲ್–ಜೂನ್ : 2016

# ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

## ITIHASA DARPANA (Quarterly)

A Peer Reviewed Journal of Historical Research in Kannada

BOOK - 29

APRIL - JUNE : 2016

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

**ISSN 2321 - 3590**

# ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

**ಇತಿಹಾಸ ದರ್ಪಣ**
(ತ್ರೈಮಾಸಿಕ)

***Itihasa Darpana***
**(Quarterly)**

**ಪುಸ್ತಕ : ೨೯**

**Book : 29**

ಏಪ್ರಿಲ್-ಜೂನ್ : ೨೦೧೬
**April-June : 2016**

| | |
|---|---|
| **ಸಂಪಾದಕರು** | **Editor** |
| ಹಂ.ಗು. ರಾಜೇಶ್ | H.G. Rajesh |
| ಸಂ.ದೂ. : ೭೮೨೯೪೦೪೦೬೩ | Mob : 7829404063 |
| **ಉಪ ಸಂಪಾದಕರು** | **Sub Editors** |
| ಸುಂಕಂ ಗೋವರ್ಧನ | Sunkam Govardhan |
| ರಶ್ಮಿ ಎಸ್. | Rashmi S. |
| ಶಿವಕುಮಾರಿ ಎಂ.ಎಸ್. | Shivakumari M.S. |
| **ಅಕ್ಷರ ಜೋಡಣೆ** | **DTP** |
| ಮಹೇಶ್ ಎಂ. | Mahesh M. |
| ಸಂ.ದೂ. : ೯೨೦೬೭೯೦೬೭೦ | Mob : 9206790670 |
| **ಮುಖಪುಟ ವಿನ್ಯಾಸ** | **Cover Design** |
| ಸುರೇಶ್‌ಕುಮಾರ್ ಎಚ್. | Sureshkumar H. |
| ಸಂ.ದೂ. : ೮೯೭೦೬೬೬೮೦೯ | Mob : 8970666809 |
| **ಮುದ್ರಕರು** | **Printed at** |
| ಶ್ರೀ ರಂಗನಾಥ ಪ್ರಿಂಟರ್ಸ್ | Sri Ranganatha Printers |
| ಸಂ.ದೂ. : ೯೬೩೨೫೧೭೭೫೫ | Mob : 9632517755 |

*ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.*

*E-mail :* ***itihasadarpana@gmail.com***

*ಈ ಪತ್ರಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.*

**"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE ICHR."**

## ಪರಿವಿಡಿ. . .


ನುಡಿಗನ್ನಡಿ ... ೫
**–ಹಂ.ಗು. ರಾಜೇಶ್**

೧. ಹಿರೇಗುಡ್ಡ : ಮನುಕುಲ ಪೂರ್ವ ಸಂಸ್ಕೃತಿಯ ಪ್ರತಿಬಿಂಬಕ ... ೧೧
**–ಮೋಹನ್ ಆರ್.**

೨. ತುಳುನಾಡಿನ ಸ್ಥಳೀಯ ಆಡಳಿತ : ಅಳುಪರ ಕಾಲದಿಂದ ವಿಜಯನಗರದರಸರ ಕಾಲದವರೆಗೆ ... ೧೯
**–ಬಿ. ಉದಯ**

೩. ಅಣ್ಣಿಗೇರಿಯ ಶಾಸನಗಳೋಕ್ತ ಗಾವುಂಡರು ... ೪೯
**–ಸಂಜಯ ಎನ್. ಹಂಚೆ**

೪. ಹೊಯ್ಸಳರ ಕಾಲದ ಜೈನ ಶಾಸನ ಸಾಹಿತ್ಯ ಮತ್ತು ಕವಿಗಳು ... ೫೭
**–ಲೋಕೇಶ**

೫. ಬೋರನಕಣಿವೆ ಜಲಾಶಯ ನೀರಾವರಿ, ಮೈಸೂರು ಸಂಸ್ಥಾನದ ಭೂಕಂದಾಯ ನೀತಿ ಮತ್ತು ರೈತರು : ಬಿಕ್ಕಟ್ಟಿನ ಆಯಾಮಗಳು ... ೬೫
**–ತಿಮ್ಮನಹಳ್ಳಿ ವೇಣುಗೋಪಾಲ್**

೬. ಗತ ಮತ್ತು ವರ್ತಮಾನವನ್ನು ಜೋಡಿಸುತ್ತಾ ... ೭೧
**–ರಣ್‌ಬೀರ್ ಚಕ್ರವರ್ತಿ / ಪ್ರದೀಪ ಕುಮಾರ ಶೆಟ್ಟಿ**

೭. 'ವಡ್ಡಾರಾಧನೆ' ಹೆಸರು ಒಂದು ಹೊಸ ವಿಚಾರ ಮರು ಪರಿಶೀಲನೆ ... ೮೩
**–ಹಂಪ ನಾಗರಾಜಯ್ಯ**

೮. ವಡ್ಡಾರಾಧನೆಯ ಹೆಸರು – ಮರು ಪರಿಶೀಲನೆ ... ೮೯
**–ಸೀತಾರಾಮ ಜಾಗೀರ್‌ದಾರ್**

**ಪುಸ್ತಕ ವಿಮರ್ಶೆ**

೯. ಭಾರತವೆಂಬ ಬಹುಮುಖಗಳ ಹುಡುಕಾಟದಲ್ಲಿ ವಸು ಮಳಲಿ ಅವರ ಕಳ್ಳು-ಬಳ್ಳಿ ಬರಹಗಳು ... ೯೭
**–ಸೌಮ್ಯ ಹೇರಿಕುದ್ರು**

**ಆಕರ ವಿಭಾಗ**

೧೦. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು, ಬಿಜ್ಜಾವರ ಗ್ರಾಮದ ವೀರಭದ್ರ ದೇವಾಲಯದ ಜೀರ್ಣೋದ್ಧಾರದ ವೇಳೆ ನೆಲದಲ್ಲಿ ಪತ್ತೆಯಾದ ಕೃಷ್ಣದೇವರಾಯನ ಶಾಸನ ...೧೦೧
**–ಡಿ.ವಿ. ಪರಮಶಿವ ಮೂರ್ತಿ**

೧೧. ಹಂಪೆಯ ಸೋಮವಾರದ ಬಾಗಿಲ ಸಮೀಪದ ಜೈನಬಸದಿಯ ಅಪ್ರಕಟಿತ ಶಿಲ್ಪಶಾಸನ ಮತ್ತು ಇತರ ಅಂಶಗಳು ...೧೦೩
**–ಎಸ್. ಕಾರ್ತಿಕ್ / ಆರ್ .ಮಂಜನಾಯಕ್**









## ನುಡಿಗನ್ನಡಿ

.........................

### ಹೀಗೊಂದು ಅವಿಸ್ಮರಣೀಯ ಹೋರಾಟ...

**ಪ್ರ**ತಿಭಟನೆ ಎಂಬುದು ನಮ್ಮ ಅಸ್ತಿತ್ವದ ಸಂಕೇತ. ಎಲ್ಲಿಯವರೆಗೆ ನಮ್ಮ ಹೋರಾಟ ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೂ ಬೇಡಿಕೆಯ ಪ್ರಶ್ನೆ ಕೂಡ ಜೀವಂತವಾಗಿರುತ್ತದೆ. ಈ ಮಾತನ್ನು ಆರಂಭದಲ್ಲಿಯೇ ಏಕೆ ಹೇಳುತ್ತಿದ್ದೇನೆಂದರೆ ಕಳೆದ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಮತ್ತು ಪ್ರಾಂಶುಪಾಲರು ವೇತನ ತಾರತಮ್ಯ ಸಂಬಂಧ ಹೋರಾಟ ನಡೆಸುತ್ತಾ ಬಂದಿದ್ದೇವೆ. ಆದರೆ ಈ ವರೆಗೂ ಬಂದು ಹೋದ ಯಾವ ಸರ್ಕಾರಗಳೂ ಕೂಡ ಉಪನ್ಯಾಸಕರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಶಿಕ್ಷಣ ಕ್ಷೇತ್ರ ಒಂದು ಅನುತ್ಪಾದಕ ವಲಯ ಎಂಬ ತಪ್ಪುಗ್ರಹಿಕೆಗೆ ಎಲ್ಲಾ ಸರ್ಕಾರಗಳು ಒಳಗಾಗಿರುವುದೇ ಇದಕ್ಕೆ ಕಾರಣ. ಸದೃಢ ದೇಶ ಕಟ್ಟುವಲ್ಲಿ ಕೃಷಿ ಮತ್ತು ಕೈಗಾರಿಕೆಯಂತಹ ಉತ್ಪಾದನಾ ಕ್ಷೇತ್ರದಷ್ಟೇ ಮಹತ್ವವನ್ನು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ಹೊಂದಿವೆ. ಒಂದು ದೇಶದ ಸ್ವಾಸ್ಥ್ಯವನ್ನು ಶಿಕ್ಷಣ ಮತ್ತು ಆರೋಗ್ಯಗಳು ನಿರ್ಧರಿಸುತ್ತವೆ ಎಂಬುದು ಸಾರ್ವಕಾಲಿಕ ಸತ್ಯ. ಈ ಹಿನ್ನೆಲೆಯಲ್ಲಿ ಉಪನ್ಯಾಸಕರ ಬೇಡಿಕೆಗಳನ್ನು ಯಾವ ಸರ್ಕಾರಗಳೂ ಗಂಭೀರವಾಗಿ ಪರಿಗಣಿಸದಿರುವುದು ವಿಷಾದನೀಯ. ಈ ಸಂಬಂಧ 1990ರ ದಶಕದಲ್ಲಿ ಆರಂಭವಾದ ಹೋರಾಟಗಳನ್ನು ಹಲವು ನಾಯಕರು ಮುನ್ನಡೆಸಿದರೂ ಈವರೆಗೆ ಯಾವುದೇ ಪ್ರತಿಫಲಗಳು ಲಭಿಸಲಿಲ್ಲ. ಆದರೂ ಭ್ರಮನಿರಸನಗೊಳ್ಳದೆ ಹೋರಾಟವನ್ನು ಜೀವಂತವಾಗಿಡುವಲ್ಲಿ ಅವರು ಯಶಸ್ವಿಯಾದರು. 2011ರಲ್ಲಿ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ





ಉಪನ್ಯಾಸಕರ ಸಂಘದ ಅಧ್ಯಕ್ಷತೆಯನ್ನು ತಿಮ್ಮಯ್ಯಪುರ್ಲೆ ಅವರು ವಹಿಸಿಕೊಂಡ ನಂತರ ಉಪನ್ಯಾಸಕರ ಹೋರಾಟಕ್ಕೆ ಹೊಸ ರೂಪ ಬಂತು. ಹೊಸ ಶಕ್ತಿ ಬಂತು. ಹೋರಾಟದ ಕಾವು ಹೆಚ್ಚಿತು. ಪುರ್ಲೆ ಅವರಿಗೆ ಉತ್ತಮ ಸಾಥ್ ನೀಡಿದವರು ಪ್ರಾಂಶುಪಾಲರ ಸಂಘದ ಅಧ್ಯಕ್ಷರಾದ ಕೆ.ಟಿ. ಶ್ರೀಕಂಠೇಗೌಡರು. ಇವರಿಬ್ಬರ ಜುಗಲ್ ಬಂದಿಯ ಹೋರಾಟದ ರೂಪುರೇಷೆಗಳು ಹಿಂದೆಂದಿಗಿಂತ ಈ ಭಾರಿ ಹೆಚ್ಚು ಸಂಘಟಿತವಾಗಿತ್ತು. ಪರಿಣಾಮವಾಗಿ, ಇತ್ತೀಚಿನ ದಶಕಗಳಲ್ಲಿ ಯಾವ ಸರ್ಕಾರಿ ನೌಕರರ ಸಂಘಟನೆಗಳೂ ನಡೆಸದಂತಹ ಒಂದು ಸುದೀರ್ಘ ಹೋರಾಟಕ್ಕೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮತ್ತು ಪ್ರಾಂಶುಪಾಲರ ಸಂಘಗಳು ಮುನ್ನುಡಿ ಬರೆದವು.

ಪ್ರತೀಬಾರಿ ಮೌಲ್ಯಮಾಪನದ ಸಂದರ್ಭದಲ್ಲಿ ಬೇಡಿಕೆಯನ್ನು ಮುಂದಿಟ್ಟು ಮೌಲ್ಯಮಾಪನ ಬಹಿಷ್ಕರಿಸುವ ಮೂಲಕ ಸರ್ಕಾರ ಮತ್ತು ಸಾರ್ವಜನಿಕರ ಕೆಂಗಣ್ಣಿಗೆ ಮತ್ತು ಮಾಧ್ಯಮಗಳಿಗೆ ಆಹಾರವಾಗುತ್ತಿದ್ದ ನಮ್ಮ ನ್ಯಾಯಯುತ ಹೋರಾಟಕ್ಕೆ ಒಂದು ಭೂಮಿಕೆಯನ್ನು ಸಿದ್ಧಪಡಿಕೊಳ್ಳಲು ಎರಡೂ ಸಂಘಗಳ ನಾಯಕರು ನಿಶ್ಚಯಿಸಿದರು. ಅದರಂತೆ 'ಜಿ.ಕುಮಾರ್ ನಾಯಕ್ ವರದಿಯ ಅನುಷ್ಠಾನ'ಕ್ಕಾಗಿ ನಾಲ್ಕು ಹಂತದ ಹೋರಾಟಗಳನ್ನು ರೂಪಿಸಿದರು. ಮೊದಲ ಹಂತದ ಹೋರಾಟವಾಗಿ 2016ರ ಜನವರಿ 8ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಂದ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಸಂಘಗಳ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಅದೇ ತಿಂಗಳು 13ರಂದು ಬೆಂಗಳೂರಿನಲ್ಲಿ ಭಾರಿ ಪ್ರತಿಭಟನಾ ಸಭೆಯನ್ನೂ ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಸ್. ದೊರೆಸ್ವಾಮಿ ಅವರು ಮತ್ತು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಆ ಪ್ರತಿಭಟನಾ ಸಭೆಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಅವರು ಆಗಮಿಸಿ ಮಾತನಾಡುತ್ತಾ, ಈ ಇಲಾಖೆಗೆ ನಾನು ತಾಯಿ ಇದ್ದಂತೆ ನೀವೆಲ್ಲ ಮಕ್ಕಳಿದ್ದಂತೆ. ನಿಮ್ಮ ಸಮಸ್ಯೆಗಳನ್ನು ತಂದೆಗೆ (ಮುಖ್ಯಮಂತ್ರಿಗಳಿಗೆ) ಮನವರಿಕೆಮಾಡಿ ಬಗೆಹರಿಸಿ ಕೊಡುವ ವಿಶ್ವಾಸವನ್ನು ವ್ಯಕ್ತಪಡಿಸಿದರು. ಸರಳ ಮತ್ತು ಸಜ್ಜನಿಕೆಯ ವ್ಯಕ್ತಿತ್ವದವರಾದ ಕಿಮ್ಮನೆಯವರ ಮಾತುಗಳು ಮೇಲ್ನೋಟಕ್ಕೆ ಒರಟು ಸ್ವಾಭಾವದವರಂತೆ ಕಾಣುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮನವೊಲಿಸುವಲ್ಲಿ ಯಶಸ್ವಿಯಾದಂತೆ ಕಾಣಲಿಲ್ಲ. ಆಗ ಅನಿವಾರ್ಯವಾಗಿ ಮೂರನೇ ಹಂತದ ಹೋರಾಟದ ಹಾದಿಯನ್ನು ತುಳಿಯಬೇಕಾಯಿತು. ಅದರಂತೆ, ಫೆಬ್ರವರಿಯಲ್ಲಿ ನಡೆದ ಪ್ರಥಮ ಪಿ.ಯು.ಸಿ ಪರೀಕ್ಷೆ ಮತ್ತು ಮಾರ್ಚ್ ತಿಂಗಳಲ್ಲಿ ನಡೆದ ದ್ವಿತೀಯ ಪಿ.ಯು.ಸಿ ಪರೀಕ್ಷೆಗಳನ್ನು ರಾಜ್ಯಾದ್ಯಂತ ಕಪ್ಪುಪಟ್ಟಿ ಧರಿಸಿ ಆಚರಿಸಿದೆವು. ಈ ಎಲ್ಲಾ ಸಾತ್ವಿಕ ಪ್ರತಿಭಟನೆಗಳ ನಂತರವೂ ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸದಿದ್ದರೆ ಅನಿವಾರ್ಯವಾಗಿ ಮೌಲ್ಯಮಾಪನವನ್ನು ಬಹಿಷ್ಕರಿಸಬೇಕಾಗುತ್ತದೆ ಎಂಬ ಸಂಗತಿಗಳನ್ನು ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವ ಮೂಲಕ ಅವರೆಲ್ಲರ ವಿಶ್ವಾಸವನ್ನು ಗಳಿಸುವುದು ನಮ್ಮ ಉದ್ದೇಶವಾಗಿತ್ತು.

ಹೀಗೆ ಪೂರ್ವಭಾವಿ ಹೋರಾಟಗಳ ಮೂಲಕ ಮುಂದಿನ ಭಾರಿ ಹೋರಾಟಕ್ಕೆ ಜನಾಭಿಪ್ರಾಯವನ್ನು ಮೂಡಿಸುವು ಅನಿವಾರ್ಯವಾಗಿತ್ತು.

ಮಾರ್ಚ್ 31ರಂದು ಮುಖ್ಯಮಂತ್ರಿಗಳು ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಸಂಘದ ಪದಾಧಿಕಾರಿಗಳನ್ನು ಕರೆದು ಮೌಲ್ಯಮಾಪನ ಬಹಿಷ್ಕಾರವನ್ನು ಕೈಬಿಡುವಂತೆ ಮನವಿ ಮಾಡಿದರೆ ವಿನಃ ಬೇಡಿಕೆಯನ್ನು ಈಡೇರಿಸುವುದಾಗಿ 2015ರ ಏಪ್ರಿಲ್‌ನಲ್ಲಿ ಹೇಳಿದ ಮಾತುಗಳನ್ನೆ ಮರೆತರು. ನೆನಪುಮಾಡಿದ ಪದಾಧಿಕಾರಿಗಳಿಗೆ "ನಾನು ಹಾಗೆ ಹೇಳೇ ಇಲ್ರಪ್ಪ, ಹೋಗಿ ಮೌಲ್ಯಮಾಪನ ಮಾಡಿ" ಎಂದು ಸೂಚಿಸಿದರು. ಇದರಿಂದ ನಿರಾಶರಾದ ಪದಾಧಿಕಾರಿಗಳು ಮರುದಿನ ಶಾಸಕರ ಭವನದಲ್ಲಿ ಸಂಯುಕ್ತ ಸಂಘಗಳ ಪದಾಧಿಕಾರಿಗಳ ಸಭೆಕರೆದು ಮಹತ್ವದ ನಿರ್ಣಯವೊಂದನ್ನು ಕೈಗೊಂಡರು. ಈ ಸಭೆಗೂ ಮುನ್ನ ಉಪನ್ಯಾಸಕರ ಸಂಘದ ಪ್ರಮುಖರಲ್ಲಿ ಹೋರಾಟ ನಡೆಸುವ ಧೈರ್ಯವೇ ಇರಲಿಲ್ಲ. ಮತ್ತೆಲ್ಲಿ ಸಾರ್ವಜನಿಕರು, ಮಾಧ್ಯಮಗಳು ಮತ್ತು ಸರ್ಕಾರದ ಕೆಂಗಣ್ಣಿಗೆ ಗುರಿಯಾಗುತ್ತೇವೆಯೋ ಎಂಬ ಆತಂಕದಲ್ಲಿ ಹೋರಾಟ ಕೈಬಿಡುವ ಮನಸ್ಥಿತಿಯಲ್ಲಿದ್ದರು. ಹಾಗೇನಾದರೂ ನಡೆದಿದ್ದರೆ ಸಂಘಟನೆಯೇ ಮುರಿದುಬೀಳುತ್ತಿತ್ತು. ಪ್ರಮುಖರ ಮನಸ್ಥಿತಿಗೆ ತಿಮ್ಮಯ್ಯ ಪುರ್ಲೆ ಅವರ ತೀರ್ಮಾನ ವ್ಯತಿರಿಕ್ತವಾಗಿತ್ತು. ಹೋರಾಟದ ನಿರ್ಧಾರ ಅವರಲ್ಲಿ ಅಚಲವಾಗಿತ್ತು. "ಯಾರಾದ್ರು ಬರ್ಲಿ ಬರದೇ ಇರ್ಲಿ. ನಾನಂತು ಒಂದು ಪೆಂಡಾಲಾಕಿ ಕುಂಡ್ರುತಿನಿ" ಎನ್ನುವ ಮೂಲಕ ನಿಜವಾದ ನಾಯಕತನದ ಎದೆಗಾರಿಕೆಯನ್ನು ಪ್ರದರ್ಶಿಸಿದರು. ಆಗ ಹಿಂದೆ ಸರಿದಿದ್ದ ನಾಯಕರು ಒಲ್ಲದ ಮನಸ್ಸಿನಿಂದಲೇ ಅನಿವಾರ್ಯವಾಗಿ ಬರಬೇಕಾಯಿತು. ಏಪ್ರಿಲ್ ಎರಡರಂದೆ ಸ್ವತಂತ್ರ ಉದ್ಯಾನದಲ್ಲಿ ಉಪನ್ಯಾಸಕರ ಸಂಘದ ಖಜಾಂಚಿ ಜಯಣ್ಣ ಪೆಂಡಾಲ್ ಹಾಕಿಸಿದರು. ಏಕೆಂದರೆ ಏಪ್ರಿಲ್ ಐದರಿಂದ ಆರಂಭವಾಗಬೇಕಿದ್ದ ಮೌಲ್ಯಮಾಪಕ್ಕೆ ಡಿ–ಕೋಡಿಂಗ್ ಮಾಡಲು ಏಪ್ರಿಲ್ ಮೂರರಿಂದಲೇ ಪ್ರಾಂಶುಪಾಲರು ಆಗಮಿಸುತ್ತಿದ್ದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರ ಸಂಘದ ರಾಜ್ಯ ಪದಾಧಿಕಾರಿಗಳು ಕೆ.ಟಿ.ಶ್ರೀಕಂಠೇಗೌಡರ ನೇತೃತ್ವದಲ್ಲಿ ಮಹತ್ವದ ನಿರ್ಣಯ ಕೈಗೊಂಡರು. ಅದರಂತೆ, "ಬೆಂಗಳೂರಿನ ಎಲ್ಲಾ ಮೌಲ್ಯಮಾಪನ ಕೇಂದ್ರಗಳ ಪ್ರಾಂಶುಪಾಲರುಗಳು ಫ್ರೀಡಂ ಪಾರ್ಕಿಗೆ ಬಂದು ಸೇರಬೇಕು. ಬೆಂಗಳೂರಿನ ಹೊರಗಿನ ಕೇಂದ್ರಗಳಲ್ಲಿ ಕೂಡ ಡಿ–ಕೋಡಿಂಗ್ ಬಹಿಷ್ಕರಿಸಿ ಒಂದೆಡೆ ಸೇರಿ ಪ್ರತಿಭಟನಾ ಸಭೆ ನಡೆಸಬೇಕು" ಎಂದು ಕರೆನೀಡಿದರು. ಅಷ್ಟು ಮಾತ್ರವಲ್ಲದೆ ಪದಾಧಿಕಾರಿಗಳು ಮೌಲ್ಯಮಾಪನ ಕೇಂದ್ರಗಳಿಗೂ ಹೋಗಿ ಮನವೊಲಿಸಿ ಕರೆತರುವಲ್ಲಿ ಯಶಸ್ವಿಯೂ ಆದರು. ಸಮಾಜಶಾಸ್ತ್ರ ಮೌಲ್ಯಮಾಪನ ಕೇಂದ್ರದ ಮುಖ್ಯಸ್ಥರಾದ ಮಾಯಪ್ಪನವರೇ ಕೇಂದ್ರವನ್ನು ಬಂದ್ ಮಾಡಿ ಬಂದು ಫ್ರೀಡಂ ಪಾರ್ಕಿನಲ್ಲಿ ಕುಳಿತರು. ಇದೇ ರೀತಿ ಪ್ರಾಂಶುಪಾಲರ ಸಂಘದ ಕಾರ್ಯದರ್ಶಿಗಳಾದ ಪ್ರಕಾಶ್ ಅವರು ಕೂಡ ತಮ್ಮ ಕೇಂದ್ರವನ್ನು ಮುಚ್ಚಿಸಿ ಬಂದು ಕುಳಿತರು. ಹೀಗೆ ಏಪ್ರಿಲ್ 3 ಮತ್ತು 4 ರಂದು ಆಶಾದಾಯಕ ಪ್ರತಿಕ್ರಿಯೆಯೊಡನೆ ಆರಂಭವಾದ ಹೋರಾಟಕ್ಕೆ 5ನೇ ತಾರಿಖ್‌ನಂದು ಅಭೂತಪೂರ್ವ ಪ್ರತಿಭಟನೆಗೆ ವೇದಿಕೆ ಸಜ್ಜಾಯಿತು. ಎಲ್ಲಾ ಉಪನ್ಯಾಸಕರು ಮೌಲ್ಯಮಾಪನ ಬಹಿಷ್ಕರಿಸಿ ಫ್ರೀಡಂ ಪಾರ್ಕಿನತ್ತ ಬಂದರು. ಆರೇಳು ಸಾವಿರ ಜನರು ಜಮಾಯಿಸಿದರು. ದಿನೇ ದಿನೇ





ಹೋರಾಟ ತೀವ್ರಗೊಂಡಿತು. ಸರ್ಕಾರ ಮೌಲ್ಯಮಾಪನ ನಡೆಸಲು ಮಾಡಿದ ಪರ್ಯಾಯ ಪ್ರಯತ್ನಗಳೆಲ್ಲವೂ ನಗೆಪಾಟಲಿಗೆ ಗುರಿಯಾದವು. ಅತಿಥಿ ಉಪನ್ಯಾಸಕರ ಸಂಘ, ಅನುದಾನೇತರ ಉಪನ್ಯಾಸಕರ ಸಂಘಗಳು ಕೂಡ ನಮ್ಮ ಮನವಿಗೆ ಸ್ಪಂದಿಸಿದವು. ಪ್ರತೀಬಾರಿ ಮೌಲ್ಯಮಾಪನ ನಡೆಸಲೊರಟಾಗ ಒಡಕು ಮಾತುಗಳನ್ನಾಡುತ್ತಿದ್ದ ಕೆಲವು ಲೆಟರ್ ಹೆಡ್ ಉಪನ್ಯಾಸಕ ಸಂಘಗಳೂ ಕೂಡ ಈ ಬಾರಿ ಮೌನವಹಿಸಿ ಹೋರಾಟಕ್ಕೆ ಕೈಜೋಡಿಸಿದವು. ಮಾದ್ಯಮಗಳು ಕೂಡ ನಮ್ಮ ಪರ ನಿಂತವು. ಕೆಲವು ವಿಧಾನ ಪರಿಷತ್ತು ಸದಸ್ಯರು ತಮ್ಮ ಬೇಳೆ ಬೇಯಸಿಕೊಳ್ಳಲು ಮುಂದಾದರು. ಹೈಸ್ಕೂಲ್ ಶಿಕ್ಷಕರನ್ನೂ ಪ್ರತಿಭಟನೆಗೆ ಎಳೆದರು. ಹಿಂದಿನಿಂದಲೂ ಅವರ ಷಡ್ಯಂತ್ರಗಳಿಂದ ರೋಸಿಹೋಗಿದ್ದ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಅವರನ್ನು ಪ್ರತಿಭಟನಾ ಸಭೆಯ ಹತ್ತಿರ ಸುಳಿಯದಂತೆ ನಿರ್ಬಂಧಿಸಿದರು. ಈ ಸಂದರ್ಭದಲ್ಲಿ ಸರ್ಕಾರ ಮತ್ತು ಸಂಘಟನೆಗಳ ನಡುವೆ ನಮಗೆ ಕೊಂಡಿಯಾಗಿ ಬರಗೂರು ರಾಮಚಂದ್ರಪ್ಪನವರು ಪ್ರಾಮಾಣಿಕವಾಗಿ ಶ್ರಮಿಸಿದವರು. ಅವರು ಎಷ್ಟು ಸೂಕ್ಷ್ಮವಾಗಿ ನಡೆದುಕೊಂಡರೆಂದರೆ 17 ದಿನಗಳ ಕಾಲ ನಡೆದ ಈ ಪ್ರತಿಭಟನೆಯ ಸಭೆಗಳಿಗೆ ಒಮ್ಮೆಯೂ ಬಾರದೆ ತೆರೆಮರೆಯಲ್ಲಿ ಎಲ್ಲಾ ಪ್ರಯತ್ನಗಳನ್ನು ನಡೆಸಿದರು. ಏಕೆಂದರೆ ಪ್ರತಿಭಟನಾ ಸಭೆಗೆ ಬಂದಲ್ಲಿ ಉಪನ್ಯಾಸಕರ ಮತ್ತು ಪ್ರಾಂಶುಪಾಲರ ವಕಾಲತ್ತು ವಹಿಸಿ ಬಂದಿದ್ದಾರೆ ಎಂಬ ಭಾವನೆ ಸರ್ಕಾರಕ್ಕೆ ಮೂಡಬಾರದೆಂಬ ಸಂವೇದನೆ ಅವರದು. ಆದರೆ ನಿರಂತರವಾಗಿ ಎಂ.ಎನ್.ಕೆ.ಆರ್.ವಿ ಕಾಲೇಜಿನ ರಾಜಶೇಖರ್ ಅವರು ಮತ್ತು ನಾನು ಬರಗೂರು ಸರ್ ಜೊತೆಗೆ ಸಂಪರ್ಕದಲ್ಲಿದ್ದೆವು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಮತ್ತು ಇಲಾಖೆಯ ಕಾರ್ಯದರ್ಶಿಗಳಾದ ಅಜಯ್ ಸೇಠ್ ಅವರೊಂದಿಗೆ ಹಲವು ಸುತ್ತುಗಳ ಮಾತುಕತೆಗಳಿಗೆ ಉಪನ್ಯಾಸಕರ ಸಂಘದ ಪರವಾಗಿ ಬರಗೂರು ಸರ್ ಕೂಡ ಬಂದರು. ಹೆಚ್ಚುವರಿ ವೇತನ ಬಡ್ತಿ ನೀಡುವುದರಿಂದ ಸರ್ಕಾರಕ್ಕೆ ಬಹಳ ದೊಡ್ಡ ಹೊರೆಯಾಗುತ್ತದೆ ಎಂಬ ಅಂಕಿಅಂಶಗಳನ್ನು ಅಜಯ್ ಸೇಠ್ ಅವರು ನೀಡುವ ಮೂಲಕ ಎಲ್ಲೊ ಒಂದು ಕಡೆ ಸರ್ಕಾರ ಮತ್ತು ಸಚಿವರ ದಾರಿ ತಪ್ಪಿಸುತ್ತಿದ್ದಾರೆ ಎಂಬ ಭಾವನೆ ನಮ್ಮಲ್ಲಿ ಮೂಡಿತು. ಇದಕ್ಕೆ ಕೂಡಲೆ ಪ್ರತಿತಂತ್ರ ರೂಪಿಸಿದ ತಿಮ್ಮಯ್ಯ ಪುರ್ಲೆ ಅವರು ನನಗೊಂದು ಹೊಸ ಜವಾಬ್ದಾರಿಯನ್ನು ವಹಿಸಿದರು. ರಾಜ್ಯದಲ್ಲಿ ಇರುವ ಉಪನ್ಯಾಸಕರಿಗೆ 3 ಮತ್ತು 4 ವೇತನ ಬಡ್ತಿಗಳನ್ನು ನೀಡುವುದರಿಂದ ಸರ್ಕಾರಕ್ಕೆ ತಗುಲುವ ಹೊರೆ ಎಷ್ಟು ಎಂಬುದರ ಲೆಕ್ಕಾಚಾರ ಮಾಡಿ ನಾಳೆಯೇ ಅಂಕಿಅಂಶಗಳನ್ನು ಕೊಡಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಇಲಾಖೆಯಿಂದ ಉಪನ್ಯಾಸಕರ ಸಂಘದ ಕಾರ್ಯಾಧ್ಯಕ್ಷರಾದ ವೆಂಕಟೇಶ್ ಅವರು ಒದಗಿಸಿ ಕೊಟ್ಟ ಅಂಕಿಅಂಶಗಳನ್ನು ಆಧರಿಸಿ ಬೆಳಗಿನ ಜಾವ ನಾಲ್ಕರವರೆಗೂ ಲೆಕ್ಕಾಚಾರ ಮಾಡಿ 2, 3 ಮತ್ತು 4 ವೇತನ ಬಡ್ತಿಗಳನ್ನು ನೀಡುವುದರಿಂದ ಸರ್ಕಾರಕ್ಕೆ ಆಗಬಹುದಾದ ಆರ್ಥಿಕ ಹೊರೆ ಎಷ್ಟು ಎಂಬುದರ ಅಂಕಿಅಂಶಗಳನ್ನು ಸಿದ್ದಪಡಿಸಿದೆ. ಮುಂಜಾನೆ 7.30ಕ್ಕೆ ವೆಂಕಟೇಶ್ ಅವರೊಡನೆ ತರಳಿ ಶಿಕ್ಷಣ ಸಚಿವರಿಗೆ ಅಂಕಿಅಂಶಗಳನ್ನು ತಲುಪಿಸಿ ಬಂದಿದ್ದಾಯಿತು. ಇದೇ ಅಂಕಿಅಂಶವನ್ನು ಆಧರಿಸಿ ಮುಖ್ಯಮಂತ್ರಿಗಳ ಜೊತೆಗೆ ಸುದೀರ್ಘ ಚರ್ಚೆಗಳೂ ನಡೆದವು.

ಇದಾದ ನಂತರ ಗೃಹಸಚಿವರ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಬರಗೂರು ಸರ್ ಅವರು ಕಾರ್ಯದರ್ಶಿಗಳನ್ನು "ಇವರದು ಯಾವ ಗಣಿತ, ನಿಮ್ಮದು ಯಾವ ಗಣಿತ ಸ್ವಾಮಿ?" ಎಂದು ನಮ್ಮ ಅಂಕಿ ಅಂಶಗಳನ್ನು ತೋರಿಸುತ್ತಾ ಕೇಳಿಯೇ ಬಿಟ್ಟರು. ಅಂತಿಮವಾಗಿ ಈ ಸಭೆಯಲ್ಲಿ ಶಿಕ್ಷಣ ಸಚಿವರು, ಬರಗೂರು ಸರ್ ಮತ್ತು ಗೃಹ ಸಚಿವರಾದ ಪರಮೇಶ್ವರ್ ಅವರ ಸಮ್ಮುಖದಲ್ಲಿ ಎರಡು ವಾರ್ಷಿಕ ಭಡ್ತಿಗಳನ್ನು ನೀಡಲು ಒಪ್ಪಿದರು ಮತ್ತು ಪ್ರಸ್ತುತ ನೀಡುತ್ತಿರುವ ಏಕ್ಸ್‌ಗ್ರೇಷಿಯವನ್ನು ನಿಲ್ಲಿಸುವುದಾಗಿ ತಿಳಿಸಿದರು. ಆದರೆ ತಿಮ್ಮಯ್ಯ ಪುರ್ಲೆ ಅವರು ಏಕ್ಸ್‌ಗ್ರೇಷಿಯವನ್ನು ಮುಂದುವರೆಸಬೇಕೆಂದು ಪಟ್ಟು ಹಿಡಿದರು. ಸಕಾರಾತ್ಮಕವಾಗಿಯೇ ಸ್ಪಂದಿಸಿದ ಸಚಿವರು ಈ ಕುರಿತು ಖುದ್ದು ಮುಖ್ಯಮಂತ್ರಿಗಳ ಜೊತೆಗೆ ಮಾಡನಾಡಬೇಕೆಂದು ಅಭಿಪ್ರಾಯಪಟ್ಟರು. ಅವರು ರಾಜ್ಯ ಸಚಿವರಾದ್ದರಿಂದ ಚರ್ಚಿಸುವ ಅನಿವಾರ್ಯತೆ ಕೂಡ ಇತ್ತು. ಸಂಘದ ಪದಾಧಿಕಾರಿಗಳನ್ನು ಕೂಡ ಮುಖ್ಯಮಂತ್ರಿಯವರ ಗೃಹಕಚೇರಿಗೆ ಬರಲು ಆಹ್ವಾನಿಸಿದ್ದರು. ಭಾರೀ ಆಶಾಭಾವನೆಯಿಂದ ನಾಲ್ಕೈದು ಮಂದಿ ಪದಾಧಿಕಾರಿಗಳು ತೆರಳಿದೆವು. ಆ ಸಭೆಗೆ ಬರಗೂರು ಸರ್ ಅವರನ್ನು ಸಚಿವರು ಆಹ್ವಾನಿಸಿದ್ದರೆ ಖಂಡಿತ ಫಲಿತಾಂಶವೇ ಬೇರೆಯಾಗುತ್ತಿತ್ತು. ದುರಾದೃಷ್ಟ ನಮ್ಮ ಪಾಲಿನದಾಗಿತ್ತು. ಮುಖ್ಯಮಂತ್ರಿಗಳು ಹೈಸ್ಕೂಲ್ ಶಿಕ್ಷಕರಿಗೂ ಮತ್ತು ಉಪನ್ಯಾಸಕರಿಗೂ ಒಂದೇ ಒಂದು ವೇತನ ಬಡ್ತಿ ಮಾತ್ರ ಕೊಡಲು ಸೂಚಿಸಿರುವುದಾಗಿ ನಂತರ ಸಚಿವರು ಸಭೆ ಕರೆದು ತಿಳಿಸಿದಾಗ ನಮಗೆ ಆಘಾತವಾಯಿತು. ಯಾವ ಹೋರಾಟಗಳನ್ನು ಮಾಡದ ಪ್ರೌಢಶಾಲಾ ಶಿಕ್ಷಕರ ಸಂಘವು ಸಹಜವಾಗಿ ಇದನ್ನು ಒಪ್ಪಿಕೊಂಡಿತು. ಆದರೆ ನಾವುಗಳು ಸಭೆಯನ್ನು ಬಹಿಷ್ಕರಿಸಿ ಹೊರನಡೆದವು. ಈ ಹೊತ್ತಿಗೆ ಪ್ರತಿಭಟನೆಯು ಹದಿಮೂರನೇ ದಿನಕ್ಕೆ ಕಾಲಿಟ್ಟಿತ್ತು.

ಏಳನೇ ದಿನದಿಂದ ಆರಂಭವಾದ ಸರಣಿ ಉಪವಾಸ ಸತ್ಯಾಗ್ರಹಗಳು ಮುಂದುವರೆದಿತ್ತು. ಒಂದು ತಂಡ ಬೆಳಗ್ಗೆ 9 ಗಂಟೆಗೆ ಉಪವಾಸ ಕುಳಿತರೆ ನಾಳೆ ಬೆಳಗ್ಗೆ 9 ಗಂಟೆಗೆ ಉಪವಾಸವನ್ನು ಅಂತ್ಯಗೊಳಿಸುತ್ತಿದ್ದರು (ವೇದಿಕೆಯಲ್ಲಿಯೇ ಅವರಿಗೆ ಮಲಗಲು ಹಾಸಿಗೆ ಮತ್ತಿತರ ವ್ಯವಸ್ಥೆಗಳನ್ನು ಮಾಡಲಾಗಿತ್ತು). ಆ ವೇಳೆಗೆ ಮತ್ತೊಂದು ತಂಡ ಉಪವಾಸ ಕೂರಲು ಸಿದ್ಧವಾಗಿರುತ್ತಿತ್ತು. ಒಂದು ದಿನ ಮಹಿಳೆಯರ ತಂಡ ಉಪವಾಸ ಕುಳಿತರು. ಎಲ್ಲಾ ವೃತ್ತಿಬಾಂಧವರು ಒಂದೇ ಕುಟುಂಬದ ಸದಸ್ಯರಂತೆ ಐಕ್ಯತೆಯಿಂದ ಹದಿನೇಳು ದಿನಗಳನ್ನು ಹೇಗೆ ಕಳೆದರೆಂಬುದು ತಿಳಿಯಲೇ ಇಲ್ಲ. ಬೆಳಗಿನಿಂದ ರಾತ್ರಿಯವರೆಗೂ ಸಾವಿರಾರು ಜನ ಕದಲದೆ ನೆರೆದಿರುತ್ತಿದ್ದರು. ಸಭೆಯಲ್ಲಿ ಭಾಷಣಗಳ ನಡುವೆ ಕಲಾ ಪ್ರತಿಭೆಯುಳ್ಳ ವೃತ್ತಿಬಾಂಧವರು ರಂಗಗೀತೆ, ಪೌರಾಣಿಕ ನಾಟಕ ಅಭಿನಯ, ಭಾವಗೀತೆ, ಜನಪದಗೀತೆ, ಮಿಮಿಕ್ರಿ ಮೊದಲಾದ ಪ್ರದರ್ಶನಗಳ ತಮ್ಮ ಕಲಾ ಪ್ರತಿಭೆಯನ್ನು ಅನಾವರಣಗೊಳಿಸಿದರು. ಆ ಮೂಲಕ ಎಲ್ಲರ ಮೆಚ್ಚುಗೆಗೂ ಪಾತ್ರರಾದರು. ಅವರಲ್ಲಿ ತುಮಕೂರಿನ ಅಕ್ಕಮ್ಮ ಪ್ರಮುಖರು. ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಉಪನ್ಯಾಸಕ ಮತ್ತು ಪ್ರಾಂಶುಪಾಲ ಬಂಧುಗಳ ಹೋರಾಟದ ಬದ್ಧತೆ ಮತ್ತು ಉತ್ಸಾಹ ನಮ್ಮೆಲ್ಲರ ಗಮನ ಸೆಳೆಯಿತು. ಅಷ್ಟು ದಿನಗಳ ಕಾಲ ಮನೆಮಠ ತೊರೆದು ಸ್ವತಂತ್ರ ಉದ್ಯಾನದಲ್ಲಿ ಸೇರಿದ್ದ ಅವರು ಯುಗಾದಿಯ ಸಂದರ್ಭದಲ್ಲಿಯೂ ಊರಿಗೆ ತೆರಳದೆ





'ಒಣ ಯುಗಾದಿ'ಯನ್ನು ಅಲ್ಲಿಯೇ ಆಚರಿಸಿದರು ('ಒಣ ಯುಗಾದಿ' ಪದವನ್ನು ಟಂಕಿಸಿದ್ದು ಕವಿ ಎಲ್.ಎನ್.ಮುಕುಂದರಾಜ್). ಉತ್ತರ ಕನ್ನಡಿಗರ ಹೋರಾಟ ಮತ್ತು ಬದ್ಧತೆಯ ಮನಸ್ಥಿತಿ ಬೆಂಗಳೂರಿನ ವೃತ್ತಿಬಾಂಧವರಿಗೆ ಆದರ್ಶವಾಗಿತ್ತು. ಇವೆಲ್ಲದರ ನಡುವೆ ಉಪನ್ಯಾಸಕರ ಸಂಘದ ಪ್ರ.ಕಾರ್ಯದರ್ಶಿ ನಿಂಗೇಗೌಡ ಮತ್ತು ರಾಜ್ಯ ಪದಾಧಿಕಾರಿಗಳಾದ ಪ್ರವೀಣ್ ಮಹೀಷಿ, ರಾಜಶೇಖರ್ ಮೊದಲಾದವರು ರಾಜ್ಯ ಪ್ರವಾಸವನ್ನು ಕೈಗೊಂಡು ಇತರ ಕೇಂದ್ರಗಳಲ್ಲಿಯೂ ಹೋರಾಟದ ಕಾವನ್ನು ಕಾಯ್ದುಕೊಳ್ಳಲು ಎಚ್ಚರವಹಿಸಿದರು. ಅಷ್ಟೂ ದಿನಗಳ ಹೋರಾಟಕ್ಕೆ ಬೇಕಾಗಿದ್ದ ಲಕ್ಷಾಂತರ ರೂಪಾಯಿಗಳನ್ನು ಅನೇಕ ಉಪನ್ಯಾಸಕರು ಮತ್ತು ಪ್ರಾಂಶುಪಾಲರು ಹಾಗೂ ಕೆಲವು ಸಂಘ ಸಂಸ್ಥೆಗಳು ಸ್ವಯಂಪ್ರೇರಣೆಯಿಂದ ಉದಾರವಾಗಿ ಧನಸಹಾಯ ಮಾಡಿದರು. ಚಿಕ್ಕಮಗಳೂರಿನ ವಕೀಲರಾದ ಭೋಜೇಗೌಡರು ಒಂದು ಲಕ್ಷ ರೂಪಾಯಿಗಳನ್ನು ದೇಣಿಗೆ ನೀಡಿದರಲ್ಲದೆ, ಉಚಿತ ಕಾನೂನಾತ್ಮಕ ಸಲಹೆಗಳನ್ನು ನೀಡುವ ಮೂಲಕ ಎಲ್ಲರಲ್ಲಿಯೂ ನೈತಿಕ ಸ್ಥೈರ್ಯ ತುಂಬಿದರು. ಒಟ್ಟಾರೆ, ರಾಜ್ಯ ಸರ್ಕಾರದ ಯಾವ ಇಲಾಖೆಯ ನೌಕರರಿಂದಲೂ ಈ ಶತಮಾನದಲ್ಲಿಯೇ ನಡೆಯದಂತಹ ಅವಿಸ್ಮರಣೀಯ ಹೋರಾಟವೊಂದು ಎಲ್ಲರ ಸಹಕಾರ, ಬದ್ಧತೆ, ಉದಾರತೆ ಮತ್ತು ಒಮ್ಮನಸ್ಸಿನಿಂದ ಪದವಿ ಪೂರ್ವ ಇಲಾಖೆಯ ಬೋಧಕ ವರ್ಗದಿಂದ ಸಾಧ್ಯವಾಯಿತು.

ಅಂತಿಮವಾಗಿ ಸರ್ಕಾರ ಒಂದೇ ವೇತನ ಬಡ್ತಿಗೆ ಅಂಟಿಕೊಂಡಾಗ, "ಮಕ್ಕಳ ಹಿತದೃಷ್ಟಿಯಿಂದ ಹೋರಾಟವನ್ನು ಕೈಬಿಟ್ಟು ಮೌಲ್ಯಮಾಪನಕ್ಕೆ ಮುಂದಾಗುತ್ತೇವೆ. ಸರ್ಕಾರ ನೀಡುವ ಒಂದು ವೇತನ ಬಡ್ತಿಯನ್ನು ನಿರಾಕರಿಸಿ ನಮ್ಮ ಹೋರಾಟವನ್ನು ಜೀವಂತವಾಗಿಟ್ಟು ಕೊಳ್ಳುತ್ತೇವೆ" ಎಂಬ ಹೇಳಿಕೆಯನ್ನು ನೀಡಿ ಪ್ರತಿಭಟನೆ ಕೈಬಿಟ್ಟು ಮೌಲ್ಯಮಾಪನಕ್ಕೆ ತೆರಳುವಂತೆ ಬರಗೂರು ರಾಮಚಂದ್ರಪ್ಪನವರು ಸಲಹೆ ನೀಡಿದರು. ಅದೇ ಹೊತ್ತಿಗೆ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡು ದೊಡ್ಡ ಅವಾಂತರ ಕೂಡಾ ಸೃಷ್ಟಿಯಾಗಿ ಸಚಿವರೊಬ್ಬರ ಸಹಾಯಕನ ಬಂಧನವಾಗಿತ್ತು. ಆದ್ದರಿಂದ ಬರಗೂರು ಸರ್ ಸಲಹೆಯಂತೆ ತಿಮ್ಮಯ್ಯ ಪುರ್ಲೆ ಅವರು ಏಪ್ರಿಲ್ 19ರಂದು ಶ್ರೀಕಂಠೇಗೌಡರ ಒಡಗೂಡಿ "ಹೋರಾಟವನ್ನು ಕೈಬಿಟ್ಟು ಮಕ್ಕಳ ಹಿತದೃಷ್ಟಿಯಿಂದ ಮೌಲ್ಯಮಾಪನಕ್ಕೆ ಹೋಗುತ್ತಿದ್ದೇವೆ. ಸರ್ಕಾರ ಕೊಡುತ್ತೇನೆಂದಿರುವ ಒಂದು ವೇತನ ಬಡ್ತಿಯ ಭಿಕ್ಷೆ ನಮಗೆ ಬೇಡ. ನಾವು ಹೋರಾಟವನ್ನು ಜೀವಂತವಾಗಿಟ್ಟುಕೊಂಡು ಮುಂದಿನ ದಿನಗಳಲ್ಲಿ ಮತ್ತೆ ಹೋರಾಟವನ್ನು ರೂಪಿಸುತ್ತೇವೆ" ಎಂದು ಘೋಷಿಸಿದರು. ಇದರಿಂದ ನಾವು ಭಂಡ ಸರ್ಕಾರದ ವಿರುದ್ಧ ಜನಮನವನ್ನು ಗೆದ್ದೆವು. ನಮ್ಮ ನಡೆಗೆ ಮಾದ್ಯಮಗಳಿಂದಲೂ ಉತ್ತಮ ಪ್ರಶಂಸೆ ವ್ಯಕ್ತವಾಯಿತು.

ಹೀಗೆ ನಿರೀಕ್ಷಿತ ಪ್ರತಿಫಲ ದೊರೆಯದಿದ್ದರೂ ಅವಿಸ್ಮರಣೀಯ ಹೋರಾಟವೊಂದು ತಾತ್ಕಾಲಿಕವಾಗಿ ಅಂತ್ಯಗೊಂಡಿದೆ. ಆದರೆ ಈ 17 ದಿನಗಳ ಹೋರಾಟ ನಮ್ಮೊಳಗೆ ಅದಮ್ಯವಾದ ಹೋರಾಟದ ಶಕ್ತಿಯನ್ನು ತುಂಬಿದೆ. ಅದು ಸದ್ಯದಲ್ಲಿಯೇ ಮತ್ತೆ ಗರಿಗೆದರಲಿದೆ!!

**–ಹಂ.ಗು.ರಾಜೇಶ್**

# ಹಿರೇಗುಡ್ಡ : ಮನುಕುಲ ಪೂರ್ವ ಸಂಸ್ಕೃತಿಯ ಪ್ರತಿಬಿಂಬಕ

❑ **ಮೋಹನ ಆರ್.**
**ಪೋಸ್ಟ್ ಡಾಕ್ಟರಲ್**
**ಸಂಶೋಧನಾರ್ಥಿ,**
**ಡೆಕ್ಕನ್ ಕಾಲೇಜ್,**
**ಸ್ನಾತಕೋತ್ತರ ಮತ್ತು**
**ಸಂಶೋಧನ ಸಂಸ್ಥೆ**
**ಸ್ವಾಯತ್ತ ವಿಶ್ವವಿದ್ಯಾಲಯ,**
**ಪುಣೆ – 411006**
**mohangulya@gmail.com**

**ಹಿ**ರೇ ಗುಡ್ಡವು ಪ್ರಾಗಿತಿಹಾಸ ಕಾಲದ ಚಿತ್ರಕಲೆಯ ನೆಲೆಯಾಗಿದ್ದು ನಂದಿಕೇಶ್ವರದಿಂದ ಸು. 3 ಕಿ.ಮೀ. ಉತ್ತರಕ್ಕೆ ಅಂದರೆ ನಂದಿಕೇಶ್ವರದಿಂದ ಗುಳೇದ ಗುಡ್ಡಕ್ಕೆ ಹಾದು ಹೋಗುವ ರಸ್ತೆಯ ಬಲ ಬದಿಯಲ್ಲಿ ಚಾಚಿಕೊಂಡಿರುವ ಗುಡ್ಡಗಾಡು ಪ್ರದೇಶದಲ್ಲಿದೆ (ಚಿತ್ರ 1). ಈ ನೆಲೆಯು ಮೂಲತಃ ಹಿರೇ ಗುಡ್ಡವಾಗಿದ್ದು, ಪ್ರಸ್ತುತ ಹನುಮಂತ ದೇವರ ಸಣ್ಣ ಗುಡಿಯಿರುವುದರಿಂದ ಸ್ಥಳೀಯವಾಗಿ 'ಹಂಡೆ ಹನುಮಪ್ಪನ ಕೊಳ್ಳ' ವೆಂದೇ ಕರೆಯಲ್ಪಡುತ್ತಿದೆ. ಇಲ್ಲಿನ ಮೂರು ಕಲ್ಲಾಸರೆಗಳಲ್ಲಿ ವರ್ಣ/ರೇಖಾ ಚಿತ್ರಗಳ ಜೊತೆಗೆ ಕಲ್ಗುಳಿಗಳು ಕಂಡುಬಂದಿವೆ. ಮತ್‌ಪಾಲ್ ಮತ್ತು ನ್ಯೂಮಯರ್[1]ರವರು 1978 ರಲ್ಲಿ ಬೆಳಕಿಗೆ ತಂದಿದ್ದು, ಕೆಲವು ಸರಳ ಕೈ ಚಿತ್ರಣಗಳನ್ನು ನ್ಯೂಮಯರ್‌ರವರ ಹೊತ್ತಿಗೆ[2–3]ಯಲ್ಲಿ ನೋಡಬಹುದು. ಪ್ರಸ್ತುತ ಲೇಖಕರು[4] ಇನ್ನು ಹಲವು ವರ್ಣ



**ಚಿತ್ರ 1 : ವರ್ಣವಿತ್ರ ನೆಲೆಯ ಸಾಮಾನ್ಯ ನೋಟ**





ಚಿತ್ರಗಳನ್ನು ಬೆಳಕಿಗೆ ತರುವುದರ ಜೊತೆಗೆ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ಅಧ್ಯಯನ ನಡೆಸುತ್ತಿದ್ದಾರೆ.

ಚಿತ್ರ 2 – ಮಾನವಾಕೃತಿ ಹಾಗೂ ಕಾಡುಹಂದಿಯ ಈ ವರ್ಣಚಿತ್ರವು ಉರುಮಂಜು ಬಣ್ಣದಲ್ಲಿದೆ. ಇಲ್ಲಿನ ಮನುಷ್ಯಾಕೃತಿಯ ವರ್ಣಚಿತ್ರದಲ್ಲಿನ ಎಡ ಭಾಗದಲ್ಲಿರುವ ಮನುಷ್ಯ ತನ್ನ ಬಲಗೈಯಲ್ಲಿ ಬೆತ್ತ/ಬಾಣ ಹಿಡಿದಿರುವಂತೆಯೂ, ಇನ್ನೊಬ್ಬ ಬರಿಕೈಯಲ್ಲಿರುವಂತೆಯೂ ಚಿತ್ರಿಸಲಾಗಿದ್ದು ತಲೆ, ಕಣ್ಣು, ತೊಡೆ ಹಾಗೂ ಕೂದಲನ್ನು ಬಿಂಬಿಸಿರುವುದರಿಂದ ವಿಶಿಷ್ಟವಾಗಿದೆ. ಈ ಶೈಲಿಯನ್ನು ಪ್ರಸ್ತುತ ಲೇಖಕರು ಮೊಟ್ಟಮೊದಲಿಗೆ "ಪ್ರಾಗಿತಿಹಾಸ ಬಾದಾಮಿ ಶೈಲಿಯ ಮಾನವ ವರ್ಣಚಿತ್ರಗಳು" ಎಂದು ಪುರಾತತ್ತ್ವ ಲೋಕಕ್ಕೆ ಪರಿಚಯಿಸಿದ್ದರು. ಇಂತಹ ವರ್ಣಚಿತ್ರಗಳು ಮಲಪ್ರಭಾ ನದಿ ತೀರದ ನೆಲೆಗಳಲ್ಲಿ ಸರ್ವೇ ಸಾಮಾನ್ಯ.

ಕಾಡುಹಂದಿ ವರ್ಣಚಿತ್ರವು ತನ್ನದೆ ಛಾಪನ್ನು ಒಳಗೊಂಡಿದೆ. ಈ ಪ್ರಾಣಿಯನ್ನು 'ಕ್ಷ–ಕಿರಣ' ಮಾಧ್ಯಮದಲ್ಲಿ ತೋರಿಸಲಾಗಿದ್ದು, ಹಂದಿಯ ಒಳಭಾಗಗಳಾದ ಹೃದಯ, ಕರುಳು, ನರವ್ಯವಸ್ಥೆ, ಕೂದಲಿನ ವಿನ್ಯಾಸ ಹಾಗೂ ಪುರುಷತ್ವವನ್ನು ಪ್ರತಿನಿಧಿಸುವ ಶಿಶ್ನವನ್ನು ಚಿತ್ರಿಸಲಾಗಿದೆ. ಈ ಪ್ರಾಣಿಯ ಮತ್ತೊಂದು ವಿಶೇಷವೆಂದರೆ ಅದರ ಕಾಲಿನ 'ಗೊರಸು' ಮತ್ತು ಕೋರೆ ಹಲ್ಲುಗಳ ಸೂಕ್ಷ್ಮತೆಯನ್ನು ಕಾಣಬಹುದು. ಈ ಅಂಶಗಳು ಚಿತ್ರಕಲಾಕಾರನ ನೈಪುಣ್ಯ ಮತ್ತು ಪ್ರೌಢಿಮೆಗೆ ಸಾಕ್ಷಿಯಾಗಿವೆ. ಈ ವರ್ಣಚಿತ್ರವು ಅಲಂಕಾರದ ದೃಷ್ಟಿಯಿಂದ ಭಾರತ ಉಪಖಂಡದಲ್ಲಿಯೇ ಒಂದು ಉತ್ತಮ ನಿದರ್ಶನ.



**ಚಿತ್ರ 2 : ಅ. ಕಾಡುಹಂದಿ ಮತ್ತು ಮಾನವರ ವರ್ಣಚಿತ್ರಗಳು ಆ. ಛಾಯಾಪ್ರತಿ**

ಪ್ರಾಣಿಯ ದಪ್ಪ ಚರ್ಮವನ್ನು ಅವು ಸಂಕೇತಿಸಬಹುದು. ಈ ಚಿತ್ರದ ಪ್ರಾಣಿಯ ಹಿಂಭಾಗವು ಮಳೆನೀರಿಗೆ ತೋಯ್ದಿರುವುದರಿಂದ ಅಸ್ಪಷ್ಟವಾಗಿದೆ.

ಘೇಂಡಾಮೃಗ ವರ್ಣಚಿತ್ರವು ವಿಶೇಷವಾಗಿದ್ದು ಇದುವರೆಗೂ ದಕ್ಷಿಣ ಭಾರತದಲ್ಲಿನ ಯಾವುದೇ ಚಿತ್ರಕಲೆ ನೆಲೆಗಳಲ್ಲಿ ಕಂಡುಬಂದಿರುವ ಉದಾಹರಣೆಗಳು ಇಲ್ಲದಿರುವುದರಿಂದ ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಆದರೆ ಇಂತಹ ವರ್ಣಚಿತ್ರಗಳು ಭೀಂಬೆಟ್ಕ, ಚತುರ್ಭುಜನಾಥನಾಲ, ಕೇರ್ವ್‌ಘಾಟ್, ಮತ್ತು ಕೈಮೂರ್‌ರೇಂಜ್‌ನಲ್ಲಿ ಕಂಡುಬಂದಿವೆ.[5] ಭಾರತದಲ್ಲಿ ಏಕ ಕೊಂಬುಳ್ಳ ಘೇಂಡಾಮೃಗಗಳು ಮಾತ್ರ



ಕಂಡುಬಂದಿದ್ದು ಅವೆಲ್ಲವು ಮನುಷ್ಯನಿಂದ ಬೇಟೆಗೊಳಗಾಗುವ ಸಂದರ್ಭವನ್ನು ಬಿಂಬಿಸಲಾಗಿದೆ.

ಚಿತ್ರ 4 – ನಿಚ್ಚಣಿಕೆ ರೂಪದಲ್ಲಿರುವ ಮನುಷ್ಯನ ವಿಶೇಷವಾದ ವರ್ಣಚಿತ್ರವು ದಪ್ಪ ಗೆರೆಗಳಿಂದ ಬಿಡಿಸಲ್ಪಟ್ಟಿದ್ದು ಇದರ ಬಲಭಾಗದಲ್ಲಿ ಅಸ್ಪಷ್ಟ ಚಿತ್ರವಿದ್ದು ಅದನ್ನು ಸಣ್ಣ ಗೆರೆಗಳಿಂದ ತೋರಿಸಲಾಗಿದೆ.



**ಚಿತ್ರ 4**

**ಚಿತ್ರ 3 :**
**ಘೇಂಡಾಮೃಗ ಮತ್ತು ಅದರ ಛಾಯಾಪ್ರತಿ**

ಚಿತ್ರ 5 – ಚಿಕ್ಕ ಕೊಂಬುಗಳ ಪ್ರಾಣಿಯು ಉದ್ದ ಮೂತಿಯನ್ನು ಮತ್ತು ಬಾಲವನ್ನು ಮೊಟುಕಾಗಿಯೂ ಚಿತ್ರಿಸಲಾಗಿದೆ.



**ಚಿತ್ರ 5**

ಚಿತ್ರ 6 – ಗೂಳಿಯನ್ನು ಆಕ್ರಮಣಕಾರಿಯಾಗಿ ಅಂದರೆ ಅದರ ಕೋಡುಗಳನ್ನು ಕೆಳಮುಖವಾಗಿ ಚಿತ್ರಿಸಿದ್ದು, ಬೀಜಗಳನ್ನು ಪ್ರಧಾನವಾಗಿ ತೋರಿಸಲಾಗಿದೆ. ಇದರ ಮುಂಭಾಗ ಮತ್ತು ಕಾಲುಗಳನ್ನು ಬಣ್ಣದಿಂದಲೂ



**ಚಿತ್ರ 6**





ದೇಹವನ್ನು ಚುಕ್ಕಿಯಿಂದಲೂ ವಿನ್ಯಾಸಗೊಳಿಸಲಾಗಿದೆ. ಈ ಪ್ರಾಣಿಯು ಅಲ್ತಮೀರ್[6] ನೆಲೆಯಲ್ಲಿನ ಗೂಳಿ ಜೊತೆ ಹೆಚ್ಚು ಸಾಮ್ಯವನ್ನು ಹೊಂದಿದೆ.

ಚಿತ್ರ 7 – ಉದ್ದ ದೇಹ, ಕಾಲು ಹಾಗೂ ಬಾಲವನ್ನು ಲಂಬವಾಗಿ ಚಿತ್ರಿಸಲಾಗಿರುವ ಈ ಪ್ರಾಣಿಯು ವಿಭಿನ್ನ ವಿನ್ಯಾಸದಿಂದ ಕೂಡಿದೆ.



**ಚಿತ್ರ 7**

ಚಿತ್ರ 8 – ಸರಳ ಗೆರೆಗಳಿಂದ ಬಿಡಿಸಲ್ಪಟ್ಟಿರುವ ಈ ಪ್ರಾಣಿಯು ವಿಭಿನ್ನವಾಗಿದ್ದು, ತಲೆಯ ಮೇಲೆ ಕೋಡುಗಳಂತೆ ವಿಶೇಷ ವಿನ್ಯಾಸವನ್ನು ಹೊಂದಿದೆ.



**ಚಿತ್ರ 8**

ಚಿತ್ರ 9 – ಈ ವರ್ಣಚಿತ್ರದಲ್ಲಿ ಮೂರು ಪ್ರಾಣಿಗಳು ಅಂದರೆ ಮೊಸಳೆ, ಕತ್ತೆ(?), ಮತ್ತು ಕಾಡೆಮ್ಮೆ ಹಾಗೂ ಆರು "ಪ್ರಾಗಿತಿಹಾಸ ಬಾದಾಮಿ ಶೈಲಿಯ ಮಾನವ ವರ್ಣಚಿತ್ರ"ಗಳಿದ್ದು ಅಂದಿನ ಕಲಾ ಪ್ರೌಢಿಮೆಯ ಜೊತೆಗೆ ವನ್ಯಜೀವಿ ಮತ್ತು ಮನುಷ್ಯರ ನಡುವಿನ ಬಾಂಧವ್ಯವನ್ನು ಬಿಂಬಿಸುವಲ್ಲಿ ತನ್ನ ಪ್ರಾಧಾನ್ಯತೆಯನ್ನು ಮೆರೆದಿದೆ. ಇಲ್ಲಿನ ಪ್ರಾಣಿಗಳಲ್ಲಿ ಮೊಸಳೆಯು ತನ್ನ ಕಣ್ಣುಗಳನ್ನು ಬಟ್ಟಲಿನಾಕಾರದಲ್ಲಿ ತೆರೆದುಕೊಂಡಿರುವಂತೆ ಹಾಗೂ ತಲೆ ಮತ್ತು ಕುತ್ತಿಗೆ ಭಾಗವನ್ನು ಅಡ್ಡ–ಲಂಬ ಗೆರೆಗಳಿಂದ ಬಿಡಿಸಿದ್ದು ಅದರ ಕಾಲುಗಳ 'ಗೊರಸ'ನ್ನು ಬಿಂದುಗಳಿಂದ ಚಿತ್ರಿಸಲಾಗಿದೆ.



**ಚಿತ್ರ 9**



**ಚಿತ್ರ 10**

ಕಾಡೆಮ್ಮೆಯ ವರ್ಣಚಿತ್ರವು ಮನೋಹರವಾಗಿದ್ದು 'ಕ್ಷ–ಕಿರಣ' ವಿಧಾನದಿಂದ ಅದರ ಒಳಾಂಗಗಳನ್ನು ಬಿಂಬಿಸುವ ಪ್ರಯತ್ನ ನಡೆಸಲಾಗಿದೆ.

ಚಿತ್ರ 10 – ಮನುಷ್ಯನ ಗುಪ್ತಾಂಗವನ್ನು ತೋರಿಸಿರುವ ಈ ಚಿತ್ರದಲ್ಲಿ ದೇಹದ ಭಾಗವನ್ನು ಅಡ್ಡ ಗೆರೆಗಳಿಂದ ಚಿತ್ರಿಸಲಾಗಿದೆ. ಇದರ ಎಡ ಭಾಗದಲ್ಲಿ ಪ್ರಾಯಶಃ ಕಾಡುಬೆಕ್ಕು ಓಡುತ್ತಿರುವಂತೆ ಅಭಿವ್ಯಕ್ತಿಸಲಾಗಿದೆ.



ಚಿತ್ರ 11

ಚಿತ್ರ 11 – ಪ್ರಾಣಿಯು ಅಸ್ಪಷ್ಟವಾಗಿದ್ದು ಕೇವಲ ಬಾಹ್ಯ ಗೆರೆಗಳಿಂದ ಬಿಡಿಸಿದ್ದು ತಲೆಯ ಮೇಲ್ಭಾಗದಲ್ಲಿ ಕೆಲವು ಮೊಟುಕಾದ ಲಂಬಗೆರೆಗಳನ್ನು ಕಾಣಬಹುದು.

ಚಿತ್ರ 12 – ಮಲಪ್ರಭಾ ನದಿ ತೀರದಲ್ಲಿ ವಜ್ರಾಕೃತಿ[7–8] ವರ್ಣಚಿತ್ರಗಳು ಸಾಮಾನ್ಯವಾಗಿದ್ದು, ತಟಕೋಟಿ[9]ಯಲ್ಲಿ ರೇಖಾಚಿತ್ರವು ಸಹ ದೊರೆತಿದ್ದು ಇವು ಚರಿತ್ರೆಯ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಇಂತಹ ವರ್ಣ/ರೇಖಾ ಚಿತ್ರಗಳು ದಕ್ಷಿಣ ಭಾರತದಲ್ಲಿ



ಚಿತ್ರ 12





ಇದುವರೆಗಿನ ಅಧ್ಯಯನದಿಂದ ಕಂಡುಬಂದಿರುವ ದಾಖಲೆಯಿಲ್ಲ ಹಾಗೂ ಭಾರತದಲ್ಲೂ ತುಂಬ ವಿರಳವಾಗಿವೆ. ಉದಾಹರಣೆಗೆ ಸೊನವನೆ[10]ಯವರು ಶೋಧಿಸಿದ ಗುಜರಾತ್‌ನ ಚಂದ್ರವತಿ ನೆಲೆಯಲ್ಲಿ ದೊರೆತ ಅಂತ್ಯ ಹಳೆಯ ಶಿಲಾಯುಗ ಕಾಲದ ತಿರುಳಿನ ಮೇಲೆ ವಜ್ರಾಕೃತಿ ರೇಖಾಚಿತ್ರವಿದೆ. ಇಂತಹ ಚಿತ್ರ/ಚಿಹ್ನೆಗಳು ಅಂತ್ಯಹಳೆಯ ಶಿಲಾಯುಗ ಘಟ್ಟಕ್ಕೆ ಸೇರಿದ್ದವೆಂಬುದು ಪ್ರಪಂಚದ ಎಲ್ಲಾ ವಿದ್ವಾಂಸರ ಒಮ್ಮತದ ಅಭಿಪ್ರಾಯ. ಆದಿ ಮಾನವರ ಇಂತಹ ಚಿಹ್ನೆಗಳು ಅವರ ಭಾವಾಭಿವ್ಯಕ್ತಿಯ ಮೊದಲ ಪ್ರಯತ್ನವೆನ್ನಬಹುದು.



ಚಿತ್ರ 13

ಚಿತ್ರ 13 – ಈ ನೆಲೆಯಲ್ಲಿನ ಎತ್ತಿನ ಗಾಡಿ ರೇಖಾ ಚಿತ್ರವು ಬಹುಶಃ ನವಶಿಲಾಯುಗ ಹಂತಕ್ಕೆ ಸೇರಿದ್ದು ಮನುಕುಲದ ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಿದೆ. ಜೋಡಿ ಎತ್ತುಗಳನ್ನು ಸಾಂಕೇತಿಕವಾಗಿ ತೋರಿಸಿದ್ದು ಅವುಗಳಿಗೆ ಗಾಡಿಯಿಂದ 'ಈಸ್' (ಮರದ ತುಂಡು)ನ್ನು ಸೂಚಿಸಲಾಗಿದೆ ಹಾಗೂ ಎರಡು ಚಕ್ರಗಳಿಗೆ ದೂರಿ/ಅಚ್ಚು (ಎರಡು ಚಕ್ರಗಳಿಗೆ ಸಂಪರ್ಕ ಕಲ್ಪಿಸಿಕೊಡುವ ಸಾಧನ) ನಿಂದ ಬೆಸುಗೆ ಹಾಕಿರುವುದನ್ನು ಚಿತ್ರದಲ್ಲಿ ಕಾಣಬಹುದು. ಚಕ್ರಗಳಿಗೆ ಹಿಡಿತ ಬರಲು 'ಅರೆಕಾಲು' (ಸ್ಪೋಕ್ಸ್) ಅಳವಡಿಸಿರುವಂತೆ ಚಿತ್ರಿಸಿರುವುದು ಕಲಾಗಾರಿಕೆಯ ಸೂಕ್ಷ್ಮತೆಯನ್ನು ಸೂಚಿಸುತ್ತದೆ. ಇದರ ಬಲ ಚಕ್ರದಲ್ಲಿ ಐದು 'ಅರೆಕಾಲು'ಗಳಿದ್ದು ಪ್ರಾಯಶಃ ಎಂಟು 'ಅರೆಕಾಲು'ಗಳನ್ನು ಬಿಡಿಸುವ ಪ್ರಯತ್ನವಿದ್ದಿರ ಬಹುದು. ಇಂತಹ ವರ್ಣ/ರೇಖಾಗಳನ್ನು ಕುರಿತು ನ್ಯೂಮಯರ್[11] ಅವರು ಒಂದು ಸುದೀರ್ಘ ಪ್ರಬಂಧವನ್ನು ಪ್ರಕಟಿಸಿದ್ದಾರೆ.

ಚಿತ್ರ 14 – ಬಹು ಕೊಂಬುಗಳುಳ್ಳ ಕೃಷ್ಣಮೃಗದ ತಲೆಯನ್ನು ಹಿಮ್ಮುಖವಾಗಿ ಚಿತ್ರಿಸಲಾಗಿದೆ. ಕುತ್ತಿಗೆ ಮತ್ತು ಹಿಂಬದಿಯನ್ನು ಬಣ್ಣದಿಂದ ತುಂಬಿ, ದೇಹದ ಮಧ್ಯಭಾಗವನ್ನು ಅಡ್ಡ–ಲಂಬ ಗೆರೆಗಳಿಂದ ಸೂಚಿಸಲಾಗಿದೆ. ಮನುಷ್ಯನ ಚಿತ್ರವನ್ನು ಪ್ರಾಣಿಯ ಮುಖದ ಬಳಿ ಬಿಡಿಸಿರುವುದು ವಿಶೇಷವಾಗಿದೆ.



ಚಿತ್ರ 14



ಚಿತ್ರ 15

ಚಿತ್ರ 15 – ಎರಡು ಜಿಂಕೆಗಳನ್ನು 'ಕ್ಷ–ಕಿರಣ' ವಿಧಾನದಿಂದ ಅವು ಪರಸ್ಪರ ವಿರುದ್ಧ ದಿಕ್ಕಿಗೆ ಮುಖಮಾಡಿರುವಂತೆ ಚಿತ್ರಿಸಲಾಗಿದೆ. ಮೂರು ನಗ್ನ ಮನುಷ್ಯರ ಚಿತ್ರಗಳಿದ್ದು ಇಬ್ಬರನ್ನು ಅಭಿಮುಖವಾಗಿರುವಂತೆಯೂ ಮತ್ತೊಬ್ಬನನ್ನು ಕೋಲು ಮನುಷ್ಯನಂತೆಯೂ ಚಿತ್ರಿಸಲಾಗಿದೆ.

**ಸಮಾರೋಪ**

ವರ್ಣಚಿತ್ರಗಳ ಗುಣ–ವೈಶಿಷ್ಟ್ಯವನ್ನು ಕಾಲಮಾನ ದೃಷ್ಟಿಯಿಂದ ನೋಡಿದರೆ ಇವು ಅಂತ್ಯ ಹಳೆಯ ಶಿಲಾಯುಗ/ಸೂಕ್ಷ್ಮ ಶಿಲಾಯುಗದವುಗಳಾಗಿದ್ದು ಅದರಲ್ಲಿ ವಜ್ರಾಕೃತಿ ಚಿತ್ರಗಳು ಮಾನವನ ಕಲಾ ಸೃಷ್ಟಿಯ ಮೊದಲ ಹೆಜ್ಜೆಗಳಾಗಿವೆ. ಇಲ್ಲಿನ ಎತ್ತಿನಗಾಡಿ ರೇಖಾಚಿತ್ರವು ನವಶಿಲಾಯುಗ ಸಂಸ್ಕೃತಿಯ ಕಾಲಘಟ್ಟಕ್ಕೆ ಸೇರಿದೆ. ನೈಸರ್ಗಿಕವಾಗಿಯೂ ವನ್ಯಜೀವಿಗಳಿಂದಲೂ ಸಂಪದ್ಭರಿತವಾಗಿರುವ ಈ ಸ್ಥಳವು ಆದಿ ಮಾನವನು ನೆಲೆಸಲು ಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ. ಘೇಂಡಾಮೃಗ ವರ್ಣಚಿತ್ರವು ದಕ್ಷಿಣ ಭಾರತದ ಚರಿತ್ರೆ ಮೇಲೆ ತನ್ನದೇ ಛಾಯೆ ಬೀರಿದ ಹಾಗೇ ಕಾಡುಹಂದಿ, ಗೂಳಿ, ಜಿಂಕೆ, ಮೊಸಳೆ, ಕಾಡೆಮ್ಮೆ, ಕಾಡುಬೆಕ್ಕು, ಕೃಷ್ಣಮೃಗ ಮತ್ತು ಕತ್ತೆ(?) ಪ್ರಾಣಿಯ ವರ್ಣ/ರೇಖಾ ಚಿತ್ರಗಳ ಜೊತೆಗೆ ಮಾನವರ ಚಿತ್ರಗಳು ಅಂದಿನ ಪರಿಸರದೊಂದಿಗಿನ ಅನ್ಯೋನ್ಯತೆಯನ್ನು ಬಿಂಬಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಈ ನೆಲೆಯು ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮಹತ್ವ ಪಡೆದುಕೊಂಡಿದ್ದು ಮನುಕುಲದ ಚರಿತ್ರೆ ಮೇಲೆ ತನ್ನದೆ ಛಾಪನ್ನು ಮೂಡಿಸಿದೆ.

**ಕೃತಜ್ಞತೆಗಳು:**

ಕಾರ್ಯಕ್ಷೇತ್ರ ಅನ್ವೇಷಣೆಗೆ ಸ್ಫೂರ್ತಿದಾಯಕರಾದ ಪ್ರೊ. ಅ. ಸುಂದರ ಹಾಗೂ ಕಾರ್ಯಕ್ಷೇತ್ರ ಅನ್ವೇಷಣೆಯಲ್ಲಿ ಸಹಕರಿಸಿದ ಚಂದ್ರಕಾಂತ್ ಕಲ್‌ವಂಕರ್, ಆರ್. ಅರ್ಜುನ್, ಡಿ. ವಿನಯ್‌ಕುಮಾರ್ ಮತ್ತು ತಂಗಲು ವ್ಯವಸ್ಥೆ ಮಾಡಿಕೊಟ್ಟ ಶ್ರೀಯುತ ಇಷ್ಟಲಿಂಗ ಶಿರ್ಸಿ (ವಿಶ್ವಚೇತನ ಶ್ರದ್ಧಾ, ಬಾದಾಮಿ) ಹಾಗೂ ಈ ಪ್ರತಿಯನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡಿದ ಸಿ. ಶಿವರಾಜ್ ರವರಿಗೆ ಕೃತಜ್ಞತೆಗಳು.





## ಗ್ರಂಥ ಋಣ

1. Mathpal, Y. amd Nuemayer, E. 1981. 'Mesolithic Rock Paintings, District Bijapur, Karnataka'. *IAR*, 1978-79: 96.
2. Neumayer, E. 1983. *Prehistoric Indian Rock Paintings.* Delhi: Oxford University Press.
3. Neumayer, E. 1993. *Lines on Stone: The Prehistoric Rock Art of India.* New Delhi: Manohar Publishers and Distributors.
4. Mohana, R. 2015. *Reading Rock Art: Interpeting Temporal and Geographic Variability in the Lower Malaprabha Basin, Karnataka.* Ph.D thesis submitted to the Deccan College, Post Graduate and Research Institute, Pune.
5. Neumayer,E. 2010. *Rock Art of India.* Oxford & New Delhi: Oxford University Press.
6. Cartailhace, E. 1902. 'Les Caveres Ornees de dessins La grotte d Altamira, Espagne. "Mea Culpa d'um septique", *L Anthropologie* 13: 348-354.
7. Mohana, R. 2013. 'Newly Discovered Rock Art Sites in North Karnataka, India', in *Asian Art, Culture and Heritage* (Anura Manatunga and Chamindi Dilkushi Senaratne Wettewe Eds.), pp. 191-198. International Association for Asian Heritage, Centre for Asian Studies, University of Kelaniya, Sri Lanka.
8. ಮೋಹನ, ಆರ್. 2015. 'ಹಂಸನೂರು: ಪ್ರಾಗಿತಿಹಾಸಿಕ ವರ್ಣಚಿತ್ರಕಲೆ ನೆಲೆಯ ಅಧ್ಯಯನ.' *ಇತಿಹಾಸ ದರ್ಪಣ–24* (ಜನವರಿ–ಮಾರ್ಚ್): 11-16.
9. Mohana, R. 2014. `Further Discovery of Rock Art at Tatakoti (Badami), North Karnataka', in *Rock Art: Recent Researches and New Perspectives* (Ajit Kumar Ed.). Delhi: New Bharatiya Book Corporation.
10. Sonawane, V.H. 1987. *An Engraved Mesolithic core from Chantravati,Rajasthan, in Achaeology and History* (B.H. Pandey and B.D. Chattopadhyaya Eds.), pp. 53-56. Delhi: Agam Kala Prakashan.
11. Neumayer, E. 1991. 'Wheeled Vehicles and Mounted Animals in Prehistoric Indian Rock Art', *Man and Environment* XVI(2): 39-70.

■

# ತುಳುನಾಡಿನ ಸ್ಥಳೀಯ ಆಡಳಿತ : ಆಳುಪರ ಕಾಲದಿಂದ ವಿಜಯನಗರದರಸರ ಕಾಲದವರೆಗೆ


❑ **ಬಿ.ಉದಯ**
ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199
udayabarkur@gmail.com


## ತುಳುನಾಡಿನ ಸಂಕ್ಷಿಪ್ತ ಪರಿಚಯ

ತುಳುವ, ತುಳವನಾಡು, ತುಳುದೇಶ ಎಂಬುದಾಗಿಯೂ ಕರೆಯಲ್ಪಡುವ ತುಳುನಾಡು, ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆಂದು ಸ್ಥೂಲವಾಗಿ ಹೇಳಬಹುದು. ಇತಿಹಾಸದ ಕೆಲವು ಕಾಲಗಳಲ್ಲಿ ಇದು ಉತ್ತರ ಕನ್ನಡದ ಕೆಲವು ಭಾಗಗಳನ್ನೂ, ಪಶ್ಚಿಮ ಘಟ್ಟದ ಮೇಲಿನ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು. ಪರಂಪರಾತ್ಮಕ ಹೇಳಿಕೆಗಳ ಪ್ರಕಾರ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ನದಿಯಿಂದ (ಇದು ಈಗ ಕಾಸರಗೋಡು ಜಿಲ್ಲೆಗೆ ಸೇರಿದೆ), ಉತ್ತರದಲ್ಲಿ ಕಲ್ಯಾಣಪುರದವರೆಗೆ ಇರುವ ಕರಾವಳಿ ಪ್ರದೇಶ ತುಳುನಾಡು ಎಂದು ಕರೆಯಲ್ಪಡುತ್ತಿತ್ತು.

ತುಳು ಶಬ್ದದ ಉತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಬಿನ್ನಾಭಿಪ್ರಾಯಗಳಿವೆ. ತುರು ಎಂಬ ಶಬ್ದದಿಂದ ತುಳು ಬಂತೆಂಬುದು ಒಂದು ಅಭಿಪ್ರಾಯವಾದರೆ, ತುಳುವೆ (ಮೃದು) ಎಂಬ ಶಬ್ದದಿಂದ (ಮೃದು ನೆಲ) ಬಂತೆಂಬುದು ಇನ್ನೊಂದು ಅಭಿಪ್ರಾಯ. ತುಳು ಎಂಬುದು ಪ್ರದೇಶವಾಚಕವೂ ಹೌದು, ಭಾಷಾವಾಚಕವೂ ಹೌದು. ತುಳುನಾಡಿನ ಕಲ್ಯಾಣಪುರದ ಉತ್ತರ ಭಾಗದಲ್ಲಿ ತುಳುಭಾಷೆ ಇಲ್ಲದಿರುವಾಗ, ತುಳು ಎಂಬ ಶಬ್ದ ಮೂಲತ: ಪ್ರದೇಶವಾಚಕವೇ ಇದ್ದಿರಬೇಕು. ಈ ಪ್ರದೇಶಕ್ಕೆ ಮತ್ತೆ ಬಂದು ನೆಲೆಸಿದ ಜನಾಂಗವೊಂದರ ಭಾಷೆಯೂ ತುಳು ಎಂಬ ಅಭಿದಾನವನ್ನು ಪಡೆದಿರಬಹುದು. ತುಳು ಭಾಷೆ ದಕ್ಷಿಣದ ಇತರ ದ್ರಾವಿಡ ಭಾಷೆಗಳಲ್ಲಿ ಯಾವುದಕ್ಕೆ ಹತ್ತಿರವಾದುದು ಎಂಬುದನ್ನು ಕುರಿತು ಅಭಿಪ್ರಾಯ ಭಿನ್ನತೆಯಿಂದ ಮೇಲಿನ ಸಂದೇಹ ಬಲಪಡುತ್ತದೆ. ತುಳು ಭಾಷೆ ಬಳಕೆಯಲ್ಲಿಲ್ಲದ ಬಾರಕೂರು, ಬಸರೂರು, ಹಾಡುವಳ್ಳಿ, ಗೇರುಸೊಪ್ಪೆಗಳು





ಕೂಡ ತುಳುನಾಡಿನ ಕೇಂದ್ರಗಳಾಗಿದ್ದವು. ಸ್ಕಂದ ಪುರಾಣದ ಭಾಗವಾದ ಸಹ್ಯಾದ್ರಿ ಖಂಡದಲ್ಲಿ ತುಳುನಾಡಿಗೆ ಸಂಬಂಧಿಸಿದ ಹಲವು ಅಸಂಬದ್ಧ ವಿಚಾರಗಳಿವೆ. ತುಳುನಾಡು ಪರಶುರಾಮ ಕ್ಷೇತ್ರದ ಭಾಗವೆಂಬ ಕಥೆಯೂ ಇದೆ.

ಅಶೋಕನ ಶಿಲಾಶಾಸನದಲ್ಲಿ ಬರುವ ಸತಿಯಪುತ ತುಳುನಾಡಿರಬಹುದು. ಕ್ರಿ.ಶ. 1ನೆಯ ಶತಮಾನದ ಟಾಲೆಮಿಯ ಭೂಗೋಳದಲ್ಲಿ ನಮೂದಿತವಾದ ಒಲೆಖೊಯ್ರಾ ತುಳುನಾಡಿನ ನಾಮಾಂತರವಾದ ಆಳ್ವಖೇಡವಿರಬೇಕು, ಕ್ರಿ.ಶ. 3–4ನೆಯ ಶತಮಾನದ ತಮಿಳಿನ ಸಂಗಮ್ ಸಾಹಿತ್ಯದಲ್ಲಿ ತುಳುನಾಡಿನ ಉಲ್ಲೇಖವಿದೆ. ಪಲ್ಲವ ಅರಸನಾದ 2ನೆಯ ನಂದಿವರ್ಮನ ಕಾಲದ (731–795) ಪಟಟ್ಟಾಲ್ ಮಂಗಲಮ್ ತಾಮ್ರ ಶಾಸನದಲ್ಲೂ, 1012ರ ಕೊಂಗಾಳ್ವನ ಬಲ್ಮೂರಿಯ ಶಾಸನದಲ್ಲೂ, ತುರು ಪದದ ಉಲ್ಲೇಖವಿದೆ. ಎರಡನೆಯದು, ಕನ್ನಡ ಭಾಷೆಯಲ್ಲಿ ತುರುವನ್ನು ಕುರಿತ ಮೊದಲ ಶಾಸನೋಲ್ಲೇಖ. ತುಳುನಾಡಿನಲ್ಲಿ ತುಳುನಾಡಿನ ಉಲ್ಲೇಖ ಮೊದಲು ದೊರಕುವುದು 11ನೆಯ ಶತಮಾನದ ಬಂಕಿಯಾಳುಪೇಂದ್ರನ ಕಾಲದ ಬಾರಕೂರು ಶಾಸನದಲ್ಲಿ. ಹೊಯ್ಸಳ, ವಿಜಯನಗರ ಕಾಲದ ಶಾಸನಗಳಲ್ಲಿ ತುಳುನಾಡಿನ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ರತ್ನಾಕರ ವರ್ಣಿಯ ಭರತೇಶ ವೈಭವ ಕೃತಿಯಲ್ಲಿ ಮೊದಲಾಗಿ ತುಳು ವಾಕ್ಯವೂ, ತುಳು ಶಬ್ದವೂ ಸಿಗುತ್ತವೆ.

ಕ್ರಿಸ್ತ ಪೂರ್ವ ಸುಮಾರು 3–2ನೆಯ ಶತಮಾನಗಳಲ್ಲಿ, ಇಲ್ಲಿ ಬೃಹತ್ ಶಿಲಾ ಸಮಾಧಿ ಸಂಸ್ಕೃತಿ ಹರಡಿದ್ದಂತೆ ತೋರುತ್ತದೆ. ಕ್ರಿಸ್ತ ಶಕೆಯ ಆರಂಭದಿಂದ 15ನೆಯ ಶತಮಾನದವರೆಗೆ, ಆಳುಪರು (ಆಳುವರು) ಇಲ್ಲಿ ಆಳಿದ್ದರು. ಮುಂದೆ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ತುಳುನಾಡು, ಬಾರಕೂರು ಮತ್ತು ಮಂಗಳೂರು ಪ್ರಾಂತ್ಯಗಳಾಗಿ ವಿಭಾಗವಾಯಿತು. ಅವರಿಂದ ನೇಮಿತರಾದ ರಾಜ್ಯಪಾಲರು ತುಳುನಾಡನ್ನು ಆಳುತ್ತಿದ್ದರು. ತುಳುವ ವಂಶದ ಕೃಷ್ಣದೇವರಾಯನ ಪೂರ್ವಜರು, ಮೂಲತ: ತುಳುನಾಡಿನ ಪಾಡುವಳ್ಳಿಯವರೆಂದು ಕೆಲವರ ಅಭಿಪ್ರಾಯವಿದೆ. ವಿಜಯನಗರ ಕಾಲದಲ್ಲಿ ಮತ್ತು ಆ ನಂತರ ಸೂರಾಲಿನ ತೊಳಹರರು (ಈಗಿನ ತೋಳಾರರು), ಬಂಗಾಡಿಯ ಬಂಗರು, ಪುತ್ತಿಗೆಯ ಚೌಟರು ಮೊದಲಾದ ಹಲವು ಕಿರು ಅರಸು ಮನೆತನಗಳು ತುಳುನಾಡಿನ ವಿವಿಧ ಭಾಗಗಳ ಮೇಲೆ ಒಡೆತನ ಹೊಂದಿದ್ದುವು. ತುಳುನಾಡು ಕೆಲಕಾಲ ಕೆಳದಿ ಸಂಸ್ಥಾನಕ್ಕೂ ಸೇರಿತ್ತು. ಕೆಳದಿಯ ಅರಸರ ಬಳಿಕ, ತುಳುನಾಡು ಹೈದರಾಲಿಯ ಅಧೀನವಾಯಿತು. 19ನೆಯ ಶತಮಾನದಲ್ಲಿ ಬ್ರಿಟೀಷರ ಕೈ ಸೇರಿ, ದಕ್ಷಿಣ ಕನ್ನಡ, ಉತ್ತರ ಕನ್ನಡಗಳಾಗಿ ವಿಭಜಿತವಾಗಿ, ದಕ್ಷಿಣ ಕನ್ನಡ ಮದರಾಸು ಪ್ರಾಂತ್ಯಕ್ಕೂ, ಉತ್ತರ ಕನ್ನಡ ಮುಂಬಯಿ ಪ್ರಾಂತ್ಯಕ್ಕೂ ಸೇರಿದುವು. ಭಾಷಾನುಗುಣ ರಾಜ್ಯ ರಚನೆಯಾದಾಗ ಕಾಸರಗೋಡು ಬಿಟ್ಟು ಉಳಿದ ತುಳುನಾಡು ಕರ್ನಾಟಕಕ್ಕೆ ಸೇರಿತು.

ಪಶ್ಚಿಮ ಘಟ್ಟಗಳಿಂದಾಗಿ ಈ ನಾಡು ಕರ್ನಾಟಕದ ಇತರ ಭಾಗಗಳಿಂದ ಬಹಳ ಕಾಲ ಬೇರೆಯಾಗಿ ಇದ್ದುದರಿಂದ, ಇದು ತನ್ನದೇ ಆದ ಸಂಸ್ಕೃತಿ, ನಡೆನುಡಿ, ಆಚಾರ ವಿಚಾರಗಳನ್ನು ಕಂಡುಕೊಳ್ಳುವಂತಾಗಿದೆ. ಈ ವಿಶಿಷ್ಟ ಸಂಸ್ಕೃತಿ ಇಂದಿಗೂ ಉಳಿದು ಬಂದಿದೆ. ತುಳು ಭಾಷೆ, ಅಳಿಯ ಸಂತಾನ ಪದ್ಧತಿ, ಭೂತಾರಾಧನೆ, ಯಕ್ಷಗಾನ, ತಾಳಮದ್ದಲೆಗಳು, ಕೋಲ, ಕೋಳಿ ಅಂಕ, ಕಂಬಳಗಳು ಈ ಪ್ರದೇಶದ ಸಂಸ್ಕೃತಿಯ ಕೆಲವು ವೈಶಿಷ್ಟ್ಯಗಳು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ ತಾಲೂಕುಗಳು ವಿಶೇಷವಾಗಿ ಪ್ರಚಲಿತವಾಗಿವೆ. ತುಳು ಮಾತೃಭಾಷೆಯಾಡುವವರನ್ನು ತುಳುವರೆಂದೂ, ಈ ಪ್ರದೇಶವನ್ನು ತುಳುನಾಡೆಂದೂ ಕರೆಯಲಾಗುತ್ತಿತ್ತು. ಉತ್ತರಕ್ಕೆ ಉತ್ತರ ಕನ್ನಡ ಜಿಲ್ಲೆ, ದಕ್ಷಿಣಕ್ಕೆ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ, ಪೂರ್ವಕ್ಕೆ ಶಿವಮೊಗ್ಗ, ಚಿಕ್ಕಮಂಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳು ಮತ್ತು ಪಶ್ಚಿಮಕ್ಕೆ ಅರಬ್ಬೀ ಸಮುದ್ರ ತುಳುನಾಡಿನ ಸರಹದ್ದುಗಳು.

ತುಳುನಾಡನ್ನು, ಮುಖ್ಯವಾಗಿ, ಎರಡು ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಬಹುದು. ಅವು ಪೂರ್ವಭಾಗದ ಬೆಟ್ಟ ಪ್ರದೇಶ ಮತ್ತು ಇದಕ್ಕೂ ಸಮುದ್ರಕ್ಕೂ ಮಧ್ಯೆ ಇರುವ ಮಟ್ಟ ಪ್ರದೇಶ ಎರಡೂ ಭಾಗಗಳು ದಕ್ಷಿಣೋತ್ತರವಾಗಿ ಹಬ್ಬಿವೆ. ಪೂರ್ವಭಾಗ ಪಶ್ಚಿಮ ಘಟ್ಟ ಶ್ರೇಣಿಯ ಪ್ರದೇಶ. ಕೆಲವೆಡೆ ಶಿಖರಗಳ ಎತ್ತರ 910ರಿಂದ 1,830 ಮೀಟರ್‌ಗಳಷ್ಟಿವೆ. ಬೆಳ್ತಂಗಡಿಗೆ ಅಭಿಮುಖವಾಗಿರುವ, ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಲ್ಲಿ ಹಬ್ಬಿರುವ ಕುದುರೆಮುಖ ಪರ್ವತಸ್ತೋಮ, ಅತೀ ಬೃಹತ್ತಾದುದು (1881 ಮೀ), ಕುಂದಾಪುರಕ್ಕೆ 27 ಕಿ.ಮೀ ದೂರದಲ್ಲಿರುವ ಕೊಡಚಾದ್ರಿ ಶಿಖರ (1,841 ಮೀ), ಚಾರ್ಮಾಡಿ ಘಾಟ್ ರಸ್ತೆಯ ದಕ್ಷಿಣಕ್ಕಿರುವ ಕಟ್ಟೆಗುಡ್ಡ (1,382 ಮೀ), ಬಿಸಿಲೆ ಘಾಟ್‌ಗೆ ಎದುರಾಗಿರುವ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ (1,727ಮೀ), ಮತ್ತು ಹಳೆ ಸಿಸಲ ಘಾಟ್ ಮೇಲಿರುವ ಸಿಸಲ್‌ಕಲ್ ಶಿಖರ (1,125ಮೀ) ಮುಖ್ಯವಾದವು. ಜಿಲ್ಲೆ ಭಾಗದಲ್ಲಿರುವ ಪಶ್ಚಿಮ ಘಟ್ಟ ಶ್ರೇಣಿ, ಉತ್ತರದ ಕಡೆ ಕಡಿದಾದ ಗೋಡೆಗಳಿಂದ ಮೇಲೆದ್ದಿವೆ. ಆದರೆ, ದಕ್ಷಿಣದ ಭಾಗದಲ್ಲಿ ಶ್ರೇಣೀ ಸಮುದ್ರದಿಂದ ಹೆಚ್ಚು ದೂರವಿದ್ದು, ಹಲವು ಸಮಾನಾಂತರ ಶ್ರೇಣಿಗಳು ಇದ್ದುದರಿಂದ, ಪಶ್ಚಿಮಕ್ಕೆ ಹಬ್ಬಿ ಮಧ್ಯೆ ಮಧ್ಯೆ ಕಂದರಗಳು ಮತ್ತು ಕಣಿವೆಗಳನ್ನು ನಿರ್ಮಿಸಿವೆ. ಅನೇಕ ನದಿಗಳು ಉಗಮಿಸಿ ಪ್ರವಹಿಸುವುದು ಇಲ್ಲಿಯೇ. ಈ ಪರ್ವತ ಹಂದರದ ನಡು ನಡುವೆ ಕಣಿವೆಗಳ ಕೆಳಭಾಗದಲ್ಲಿ ಕಂಡುಬರುವ ಕಿರು ಬಯಲುಗಳು, ಘಟ್ಟದ ಮೇಲಿನಿಂದ ನೋಡುವವರಿಗೆ ಇಡೀ ಭೂ ದೃಶ್ಯಕ್ಕೆ ಅಲ್ಲಲ್ಲಿ ಚುಕ್ಕೆ ಇಟ್ಟಂತೆ ಕಂಡುಬರುತ್ತವೆ. ಈ ಪರ್ವತ ಪ್ರದೇಶ ದಟ್ಟ ಅರಣ್ಯಗಳಿಂದ ಕೂಡಿ, ಜಲ ಮತ್ತು ಪ್ರಾಣಿ ಹಾಗೂ ಅರಣ್ಯ ಸಂಪತ್ತಿನ ಆಗರವಾಗಿದೆ. ಅಡ್ಡ ಶ್ರೇಣಿಗಳಲ್ಲಿ ಬಲ್ಲಾಳರಾಯನ ದುರ್ಗದಿಂದ ಧರ್ಮಸ್ಥಳದವರೆಗೆ ಹಬ್ಬಿರುವ ಚಿಬ್ಬದ್ರಿ ಪರ್ವತಶ್ರೇಣಿ ಅತೀ ಉದ್ದವಾಗಿದೆ. ಕುದುರೆಮುಖದಿಂದ ಹೊರಟು ಜಮಾಲಾಬಾದ್–ಮೂಡಬಿದಿರೆ ಎಡೆಗೆ ಹಾಯುವ ಮತ್ತೊಂದು ಪಂಕ್ತಿ ಸಹ ದೊಡ್ಡದು.

ಈ ಘಟ್ಟ ಪ್ರದೇಶದಿಂದ ಇಳಿದು ಪಶ್ಚಿಮದಲ್ಲಿ ಮುಂದೆ ಹೋದರೆ, ಕಡಿಮೆ ಎತ್ತರದ ಬಯಲು ಪ್ರದೇಶ ಬರುತ್ತದೆ. ಹಾಗೇ ಮುಂದೆ ಹೋದಂತೆಲ್ಲಾ ಎತ್ತರವಲ್ಲದ ಗುಡ್ಡಗಳು ವಿರಳವಾಗಿ ಕಂಡುಬರುತ್ತವೆ. ಅಲ್ಲಿ ಸಾಗುವಳಿಗೆ ಯೋಗ್ಯವಾದ ಬಯಲುಗಳು ಮತ್ತು ಎತ್ತರದ ಬರಡು ಪ್ರದೇಶಗಳಿವೆ. ಈ ಜಿಲ್ಲೆಯ ತೀರ ಪ್ರದೇಶದ ಉದ್ದ 140 ಕಿ.ಮೀ. ಇದು ಬಹುತೇಕ ನೇರವಾಗಿದೆ. ಆದರೆ, ನದಿಗಳು ಸಮುದ್ರ ಸೇರುವ ಸ್ಥಳಗಳಲ್ಲಿ ಮತ್ತು ಇನ್ನಿತರೆಡೆಗಳಲ್ಲಿ ಕೊರೆತದಿಂದ ಕೊಲ್ಲಿ ಹಾಗೂ ಒಳ ಚಾಚುಗಳುಂಟಾಗಿವೆ.





ಕೋಟೆ ಕಟ್ಟಿದಂತಿರುವ ಪಶ್ಚಿಮ ಘಟ್ಟ ಶ್ರೇಣಿಗಳು, ಅವುಗಳ ಮೇಲೆ ಗೆರೆ ಎಳೆದಂತೆ ಕಾಣುವ ರಸ್ತೆಗಳು, ವೈಭವೋಪೇತ ಅರಣ್ಯರಾಶಿ, ಅದ್ಭುತವಾದ ಗಿರಿ ಕಂದರಗಳು, ಪರ್ವತಗಳ ಇಳಿಜಾರಿನಿಂದ ದೌಡಾಯಿಸುವ ಅಸಂಖ್ಯಾತ ತೊರೆಗಳು, ರೋಮಾಂಚನ ಗೊಳಿಸುವ ಶಿಖರಸಮೂಹ, ಮನೋಲ್ಲಾಸಕ್ಕೂ, ಸಾಹಸ ಪ್ರವೃತ್ತಿಗೂ ಪ್ರಚೋದಕವಾದ ಸಮುದ್ರತೀರ–ಇವು ಇಲ್ಲಿಯ ಸ್ವಾಭಾವಿಕ ಸನ್ನಿವೇಶವನ್ನು ಜೀವಂತಗೊಳಿಸಿವೆ.

ಈವರೆಗೆ ನೋಡಿದಂತೆ ತುಳುನಾಡಿನ ರಾಜಕೀಯ ಚರಿತ್ರೆ, ಅರಸು ಮನೆತನಗಳ ಮೇಲಾಟದ ಕಥೆ. ಇದು ಈ ತುಳುನಾಡಿಗೆ ಮಾತ್ರವಲ್ಲ, ನಾವೂ ಹಿಂದಕ್ಕೆ ಹೋದಂತೆಲ್ಲಾ ಎಲ್ಲಾ ದೇಶಗಳ ಚರಿತ್ರೆಯ ಪ್ರಧಾನ ವಿಷಯವೂ ಇದೇ. ಒಂದೊಂದು ಕಾಲದಲ್ಲಿ ಒಂದೊಂದು ರಾಜವಂಶ, ಮತ್ತು ಅದರಲ್ಲಿ ಕೆಲವು ರಾಜರು ತಮ್ಮ ಶಕ್ತಿ ಸಾಮಾರ್ಥ್ಯ ಗಳಿಂದ ಮೇಲಕ್ಕೇರುವುದು, ಅವರ ಶಕ್ತಿ ಮತ್ತು ಮನೋಧರ್ಮಕ್ಕನುಗುಣವಾಗಿ ರಾಜ್ಯದಲ್ಲಿ ಬದಲಾವಣೆಗಳಾಗುವುದು, –ಇವು ಪ್ರಾಚೀನ ರಾಜಕೀಯದಲ್ಲಿ ಕಂಡುಬರುವ ನಿರಂತರ ಕ್ರಿಯೆಗಳು. ಆದರೆ, ಈ ರಾಜಕೀಯದ ಅಸ್ಥಿರತೆ, ಕಚ್ಚಾಟಗಳು ಮತ್ತು ಬದಲಾವಣೆಗಳಿಗನುಣವಾಗಿ ಜನ ಜೀವನವೂ ಬದಲಾಗುವಂತಿಲ್ಲ. ಯಾವ ರಾಜನೆ ಅಧಿಕಾರಕ್ಕೆ ಬರಲಿ, ಯಾವ ವಂಶವೇ ಪದಚ್ಯುತವಾಗಲಿ, ಜನಜೀವನದ ನಿರಂತರ ಪ್ರವಾಹ ಏಕಪ್ರಕಾರವಾಗಿ ವಿಕಾಸಗೊಳ್ಳಬೇಕಾದುದು ಅವಶ್ಯಕ. ಅದಕ್ಕೆ ತಕ್ಕ ಮಾರ್ಗವನ್ನು ಭರತಖಂಡ ಬಹಳ ಪ್ರಾಚೀನ ಕಾಲದಲ್ಲಿಯೇ ಕಂಡುಕೊಂಡಿತ್ತು. ಆದರೆ, ರಾಜವಂಶಗಳ ಪ್ರಭಾವವೇ ಜನಗಳ ಮೇಲೆ ಇಲ್ಲವೆಂದಲ್ಲ. ಪ್ರಬಲನಾದ ಧರ್ಮಿಷ್ಠನಾದ ಸುಸಂಸ್ಕೃತನಾದ ರಾಜ ಬಂದಾಗ ಅದರ ಫಲವಾಗಿ ಪ್ರಜೆಗಳ ಜೀವನ ಹೆಚ್ಚು ನೆಮ್ಮದಿಯಿಂದ ಕೂಡಿ ಕಲಾತ್ಮಕವಾದ ಅನುಭವವನ್ನು ಸವಿಯಲು ಸಾಧ್ಯವಾಗುತ್ತಿದ್ದುದು ನಿಜ. ದುರ್ಬಲ ರಾಜ್ಯಗಳು ಶತ್ರುಗಳ ದಾಳಿಗೆ ಈಡಾದಾಗ, ಪ್ರಜೆಗಳು ದುಃಖಿತರಾಗುತ್ತಿದ್ದುದನ್ನೂ ಇಲ್ಲವೆನ್ನುವಂತಿಲ್ಲ. ಆದರೆ, ಜನಜೀವನದ ಸಾಮಾನ್ಯರೂಪ, ಅವರ ಬಾಳಿನ ಶ್ರದ್ಧೆ, ನಂಬಿಕೆ, ಬೆಳವಣಿಗೆ, ಶಕ್ತಿಗಳು ರಾಜನನ್ನೂ, ರಾಜವಂಶವನ್ನೂ ಪ್ರಧಾನವಾಗಿ ಅವಲಂಬಿಸಿರಲಿಲ್ಲ. ತಾತ್ವಿಕವಾದ ಸಂಸ್ಕೃತಿಯ ತಳಹದಿಯ ಮೇಲೆ ಅವು ರೂಪಿತ ವಾಗಿದ್ದುವು. ಆದುದರಿಂದಲೇ, ರಾಜರ ಏಳುಬೀಳುಗಳ ನಿರಂತರ ಹೋರಾಟದ ಮಧ್ಯದಲ್ಲಿಯೂ, ಜನ ಜೀವನ ಸುದೃಢವಾದ ತಳಹದಿಯ ಮೇಲೆ ಬೆಳೆದು ಬಂದಿತು.

ಸಾಮಾನ್ಯವಾಗಿ ಕರ್ನಾಟಕದಲ್ಲಿ, ಆಡಳಿತ ಪರಂಪರೆಯ ಇತಿಹಾಸವು ಸುಮಾರು ಕ್ರಿ.ಪೂ. 4–3ನೆಯ ಶತಮಾನಗಳ ಹೊತ್ತಿಗೆ ಆರಂಭವಾಯಿತ್ತೆಂದು ಇತಿಹಾಸಕಾರರ ಅಭಿಪ್ರಾಯ. ಅರ್ಥಶಾಸ್ತ್ರ, ಮಹಾಭಾರತ, ಮನುಸ್ಮೃತಿಯಂಥ ಗ್ರಂಥಗಳಲ್ಲಿ ನಿರೂಪಿಸಿದ ತತ್ವ ಹಾಗೂ ಸಿದ್ಧಾಂತಗಳೇ ಕರ್ನಾಟಕದಲ್ಲಿ ರೂಪುಗೊಂಡಿದ್ದ ರಾಜಕೀಯ ಸಂಸ್ಥೆಗಳಿಗೆ ಮತ್ತು ಸರ್ಕಾರಗಳಿಗೆ ಆಧಾರವಾಗಿದ್ದವು ಎಂದು ಪ್ರಾಚೀನ ಶಾಸ್ತ್ರಜ್ಞರು ಹೇಳುತ್ತಾರೆ.

ಇತ್ತೀಚೆಗೆ ಪ್ರಜಾಪ್ರಭುತ್ವ ಸಿದ್ಧಾಂತ ಪಸರಿಸುವವರೆಗೂ ಸರ್ಕಾರಕ್ಕೆ ಸಂಬಂಧಿಸಿದಂತೆ ಈ ದೇಶದಲ್ಲಿದ್ದುದು ಏಕರಾಜಪ್ರಭುತ್ವ, ರಾಜನೇ ದೇಶದ ಸಾರ್ವಭೌಮ. ಆದರೆ, ಭಾರತೀಯ ಪರಂಪರೆಯಲ್ಲಿ ರಾಜರು ನಿರಂಕುಶ ಪ್ರಭುಗಳಾಗಲು ಸಾಧ್ಯವಾಗುತ್ತಿರಲಿಲ್ಲ.

ರಾಜರಾಗಲಿ ಇತರ ಯಾರೇ ವ್ಯಕ್ತಿಗಳಾಗಲಿ, ಧರ್ಮದ ಚೌಕಟ್ಟಿನಲ್ಲಷ್ಟೇ ತಮ್ಮ ಅಧಿಕಾರ ವನ್ನು ಚಲಾಯಿಸುವ ಹಕ್ಕಿರುತ್ತಿತ್ತು. ಶೃತಿ, ಸ್ಮೃತಿಗಳಲ್ಲಿ ಉಕ್ತವಾದ ಧರ್ಮ ರೀತಿಗಳು ಮತ್ತು ಅನೂಚಾನವಾಗಿ ನಡೆದು ಬರುತ್ತಿದ್ದ ಪದ್ಧತಿಗಳು, ರಾಜನೂ ಒಳಗೊಂಡಂತೆ ಎಲ್ಲರ ವ್ಯವಹಾರಗಳ ನಿರ್ದೇಶಕ ಸೂತ್ರಗಳಾಗಿದ್ದುವು. ರಾಜದೇವನಿಗೆ ಸಮಾನ ಅಥವಾ ದೇವಾಂಶ ಅವನಲ್ಲಿದೆ ಎಂಬ ಭಾವನೆಗಳು ಅಲ್ಲಲ್ಲಿ ವ್ಯಕ್ತವಾಗಿದ್ದರೂ, ಅವನು ಧರ್ಮಭ್ರಷ್ಟ ಅಥವಾ ನೀತಿಭ್ರಷ್ಟನಾದಾಗ, ಅವನ ಪಾವಿತ್ರ್ಯಕ್ಕೆ ಕುಂದು ಬರುತ್ತಿತ್ತು. ರಾಜತ್ವ ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ, ಹಿರಿಯ ಮಗನ ಮೂಲಕ ಮುಂದುವರಿಯುತ್ತಿತ್ತು. ಆದರೆ, ಮೇಲಿನ ಧಾರ್ಮಿಕ ನೀತಿಯ ಕಾರಣದಿಂದ ಅಥವಾ ಅಬಲತೆಯಿಂದ, ಹಿರಿಯ ಮಗ ರಾಜ್ಯವನ್ನು ಕಳೆದುಕೊಂಡು, ವಂಶದ ಬೇರೆಯವರು ಅಧಿಕಾರ ವಹಿಸಿಕೊಂಡಿರುವ ಹಲವು ಉದಾಹರಣೆಗಳು ಇತಿಹಾಸದಲ್ಲಿ ದೊರಕುತ್ತವೆ. ರಾಜರು ತಮ್ಮ ಹಿಡಿತದಲ್ಲಿದ್ದ ಪ್ರದೇಶಕ್ಕಷ್ಟೇ ಒಡೆಯರಾಗಿರುತ್ತಿದ್ದರು. ಈ ರಾಜರಲ್ಲಿದ್ದ ಸ್ವಸಾಧನಾಕಾಂಕ್ಷೆ, ಅವರ ಬಲ ಸಮೃದ್ಧಿ ಮುಂತಾದ ಕಾರಣಗಳಿಂದ, ರಾಜರಲ್ಲೇ ಆಗಾಗ್ಗೆ ಪರಸ್ಪರ ಸಂಘರ್ಷಗಳೂ ನಡೆಯುತ್ತಿದ್ದು, ಅವರ ಆಡಳಿತಕ್ಕೆ ಒಳಪಡುವ ಪ್ರದೇಶಗಳ ಹಿಗ್ಗಾಣಿಕೆ, ಕುಗ್ಗಾಣಿಕೆಗಳು ರಾಜ್ಯದ ಹಸ್ತಾಂತರಗಳೂ ಆಗಾಗ್ಗೆ ಸಂಭವಿಸುತ್ತಿದ್ದುವು.

ರಾಜ, ರಾಜ್ಯದ ಮುಖ್ಯ ಸೂತ್ರಧಾರಿ, ಧರ್ಮಶಾಸ್ತ್ರಗಳು ನಿರೂಪಿಸುವಂತೆ ಅವನ ಕರ್ತವ್ಯಗಳು ನಾಲ್ಕು – ದುಷ್ಟ ನಿಗ್ರಹ, ಶಿಷ್ಟಪಾಲನ, ಆತ್ಮರಕ್ಷಣೆ ಮತ್ತು ಧರ್ಮರಕ್ಷಣೆ. ಒಟ್ಟಿನಲ್ಲಿ ಸಮ್ಯಕ್ಪ್ರಜಾ ಪರಿಪಾಲನ. ಈ ಕರ್ತವ್ಯ ಸಾಧನೆಗಾಗಿ ರಾಜ್ಯದ ಆಡಳಿತ ವ್ಯವಸ್ಥಿತವಾಗಿರುತ್ತಿತ್ತು. ರಾಜ ಆತ್ಮರಕ್ಷಣೆ ಹಾಗೂ ದೇಶರಕ್ಷಣೆಗಾಗಿ ಸೈನ್ಯವನ್ನು ಮೊದಲಾಗಿ ರೂಢಿಸಿಕೊಳ್ಳಬೇಕಾಗಿತ್ತು. ಸೈನ್ಯಕ್ಕೆ ಸಂಬಂಧಿಸಿದಂತೆ ವಿವಿಧ ಮಟ್ಟಗಳ ಅಧಿಕಾರಿಗಳಿರುತ್ತಿದ್ದರು. ದುಷ್ಟ ನಿಗ್ರಹ, ಶಿಷ್ಟಪಾಲನವನ್ನು ನಿರ್ವಹಿಸಲು, ದೇಶದ ವಿವಿಧ ಭಾಗಗಳಲ್ಲಿ, ವಿವಿಧ ಅಂತಸ್ತುಗಳಲ್ಲಿ ರಾಜನ ಪ್ರತಿನಿಧಿಗಳು ಅಥವಾ ಅಧಿಕಾರಿಗಳು ಇರುತ್ತಿದ್ದರು. ಸಮ್ಯಕ್ ಪ್ರಜಾಪಾಲನೆಯಲ್ಲಿ ರಾಜ್ಯದ ಆರ್ಥಿಕ ಅಭಿವೃದ್ಧಿ ಹಾಗೂ ನ್ಯಾಯನಿಷ್ಠೆ ಜೀವನಕ್ರಮಗಳನ್ನು ನಿರೂಪಿಸುವುದು, ಪಾಲಿಸುವುದು, ಧರ್ಮರಕ್ಷಣೆಯಲ್ಲಿ ವಿವಿಧ ಜನವರ್ಗಗಳು ತಮ್ಮ ತಮ್ಮ ಧರ್ಮಮಾರ್ಗಗಳನ್ನು ಆಚರಿಸಿಕೊಂಡು ಬರುವಂತೆ ನೋಡಿಕೊಳ್ಳುವುದು, ಅದನ್ನು ಪ್ರೋತ್ಸಾಹಿಸುವುದು ಮೊದಲಾದ ಕಾರ್ಯಕ್ರಮಗಳಿಗಾಗಿಯೂ ಸಹ ಅನೇಕ ಅಧಿಕಾರಿಗಳು ನಿಯಮಿತವಾಗಿರುತ್ತಿದ್ದರು. ಸೈನ್ಯ ಮತ್ತು ಆಡಳಿತ ಸಿಬ್ಬಂದಿಯ ಖರ್ಚಿಗಾಗಿ ರಾಜರು ಹಲವು ಆದಾಯ ಮೂಲಗಳನ್ನು ಅವಲಂಭಿಸುತ್ತಿದ್ದರು. ರಾಜ್ಯವೆಲ್ಲ ರಾಜನಿಗೆ ಸೇರಿದ್ದೆಂಬ ಭಾವನೆಯಿದ್ದರೂ, ಪ್ರಜೆಗಳಿಗೆ ಸಹ ಸ್ವಂತ ಆಸ್ತಿ, ಹಕ್ಕುಗಳು ಇರುತ್ತಿದ್ದವು. ಇದನ್ನು ರಕ್ಷಿಸುವುದೂ ರಾಜನ ಮುಖ್ಯ ಕರ್ತವ್ಯಗಳಲ್ಲೊಂದಾಗಿತ್ತು. ತನ್ನ ಸ್ವಂತ ಭೂಮಿ, ಅರಣ್ಯ, ಖನಿಜ ಉತ್ಪನ್ನಗಳಿಂದ ಬರುವ ಆದಾಯ, ಜನರ ಭೂಮಿ ಮತ್ತು ಉತ್ಪನ್ನಗಳ ಮೇಲೆ ಮತ್ತು ವ್ಯಾಪಾರ ವಹಿವಾಟಿನ ಮೇಲೆ ಹೇರುವ ತೆರಿಗೆ ಮತ್ತು ಸ್ವಲ್ಪ ಮಟ್ಟಿಗೆ ದಂಡಯಾತ್ರೆ ಇತ್ಯಾದಿಗಳಿಂದ ಸಂಗ್ರಹಿಸಿದ ಧನ ಮಾತ್ರ ರಾಜನ ಆದಾಯ ಮೂಲಗಳಾಗಿದ್ದವು. ಈ ಮಾರ್ಗಗಳಿಂದ ಆದಾಯವನ್ನು ರೂಢಿಸಿಕೊಳ್ಳುವಾಗ ಸಹ ರಾಜನಿಗೆ ಕೆಲವು ಮಿತಿಗಳಿರುತ್ತಿದ್ದುವು. ಉದಾಹರಣೆಗೆ ದೇವಸ್ವ, ಬ್ರಹ್ಮಸ್ವಗಳು ತೆರಿಗೆಗಳಿಂದ ಹೊರತಾಗಿರು





ತ್ತಿದ್ದುವು. ಪ್ರಜೆಗಳಿಂದ ಕರವನ್ನು ವಸೂಲಿ ಮಾಡುವಾಗಲೂ ಆತ 'ಮೂಲಕಾರನಂತಿರಬೇಕು, ಇಂಧನಕಾರನಂತಿರಬಾರದು' ಎಂದು ಶಾಸ್ತ್ರಗಳು ವಿಧಿಸುತ್ತವೆ, ಅಂದರೆ ಹೂವಾಡಿಗನಂತೆ ಗಿಡಗಳಿಗೆ ತೊಂದರೆಯಾಗದ ರೀತಿಯಲ್ಲಿ ಹೂಗಳನ್ನು ಸಂಗ್ರಹಿಸಿ ಸಂಪಾದಿಸಬೇಕೇ ಹೊರತು, ಮರಗಳನ್ನು ತರಿದು ಸುಟ್ಟು, ಇದ್ದಲು ಮಾಡಿ ಸಂಪಾದಿಸಬಾರದು ಎಂಬುದು ದೃಷ್ಟಿ. ಬಹುಕಾಲದವರೆಗೆ ಈ ರೀತಿಯ ನೀತಿಗಳು ಪರಿಪಾಲಿತವಾಗುತ್ತಿದ್ದವು. ಹೀಗೆ ಸಂಗ್ರಹಿತವಾದ ರಾಜ್ಯ ಕೋಶವನ್ನು ಮೇಲೆ ಹೇಳಿದ ಚತುರ್ವಿಧ ರಾಜ ಕರ್ತವ್ಯಗಳಿಗಲ್ಲದೆ, ದೀನಾನಾಥರ ಉದ್ಧಾರ, ವಿದ್ಯೆ, ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ, ದೇವಾಲಯ ನಿರ್ವಹಣೆ, ಬಾವಿ ಮತ್ತು ದಾರಿಗಳ ನಿರ್ಮಾಣ ಮೊದಲಾದ ಲೋಕೋಪಕಾರ ಉದ್ದೇಶಗಳಿಗಾಗಿ ವಿನಿಯೋಗಿಸಬೇಕೆಂಬ ಭಾವನೆ ಇತ್ತು.

ಹೀಗೆ ಬಹುಮುಖ ಕಾರ್ಯಗಳನ್ನು ನೆರವೇರಿಸಲು ರಾಜ್ಯಕ್ಕೆ ಉತ್ತಮ ಆಡಳಿತ ವ್ಯವಸ್ಥೆಯ ಅವಶ್ಯಕತೆ ಇದ್ದು, ಅಂಥ ವ್ಯವಸ್ಥೆ ದೇಶ–ಕಾಲಕ್ಕೆ ಅನುಗುಣವಾಗಿ ರೂಪಿತವಾಗಿರುತ್ತಿದ್ದಿತು. ಆಡಳಿತ ಸಾಮಾನ್ಯವಾಗಿ ಕೇಂದ್ರ, ಪ್ರಾದೇಶಿಕ ಮತ್ತು ಸ್ಥಳೀಯ– ಈ ಮೂರು ಘಟ್ಟಗಳಲ್ಲಿ ವ್ಯವಸ್ಥಿತವಾಗಿದ್ದಿತ್ತು. ಕೇಂದ್ರದಲ್ಲಿ ರಾಜನ ಜೊತೆಗೆ, ಸಾಮಾನ್ಯವಾಗಿ, ರಾಜ ಕುಟುಂಬದ ಸದಸ್ಯರೂ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಬುದ್ಧಿವಂತರೂ, ಪ್ರಾಮಾಣಿಕರೂ ಆದ ಮಂತ್ರಿಗಳು ಮತ್ತು ಇತರರು, ರಾಜನಿಗೆ ಸಲಹೆ ನೀಡುತ್ತಿದ್ದರು. ಸೈನ್ಯ, ಕಂದಾಯ, ಧರ್ಮ, ನ್ಯಾಯಪಾಲನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅನೇಕ ಅಧಿಕಾರಿಗಳು ಇರುತ್ತಿದ್ದರು. ರಾಜ್ಯದ ಕೋಶ, ದಾಖಲೆಗಳು, ನಾಣ್ಯಬಾಪಣೆ ಅರಮನೆಯ ವ್ಯವಹಾರ ನೋಡಿಕೊಳ್ಳಲು ಬೇರೆ ಬೇರೆ ಅಧಿಕಾರಿಗಳು ಇರುತ್ತಿದ್ದರು.

ಸಾಮಾನ್ಯವಾಗಿ, ಆಳುಪರ ಕಾಲದ ತುಳುನಾಡಿನಲ್ಲಿ ಕಂಡು ಬರುವ ಆಡಳಿತ ಸಂಸ್ಥೆಗಳು, ನಂತರ ಬಾರಕೂರು ಮತ್ತು ಮಂಗಳೂರು ರಾಜ್ಯದ ರಾಜ್ಯಪಾಲರ ಕಾಲದಲ್ಲಿ ವಿಕಾಸಗೊಂಡು, ಬಲಿಷ್ಠವಾದರೂ ಕೂಡ, ಕರ್ನಾಟಕದ ಉಳಿದ ಭಾಗಗಳಿಗೆ ಹೋಲಿಸಿದಾಗ, ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಭಿನ್ನತೆ ಕಂಡು ಬರುವುದಿಲ್ಲ. ಬೇರೆ ಕಡೆಯಂತೆ ರಾಜನು ಆಡಳಿತ ರಚನೆಯ ಅತ್ಯುನ್ನತ ಸ್ಥಾನವನ್ನು ಅಲಂಕರಿಸುವುದು ಸಂಪ್ರದಾಯವಾಗಿದ್ದು, ಅವನು ಇಡೀ ಸಾಮ್ರಾಜ್ಯದಲ್ಲಿ ಹೆಚ್ಚು ಅಧಿಕಾರವನ್ನು ಅನುಭವಿಸುತ್ತಿದ್ದನು. ಆದರೆ, ಕರ್ನಾಟಕದಾದ್ಯಂತ ಆಳ್ವಿಕೆ ನಡೆಸಿದ ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಳುಕ್ಯರು, ತುಳುನಾಡಿನ ಬಹುಭಾಗದಲ್ಲಿ ತಮ್ಮ ಪ್ರಭುತ್ವವನ್ನು ಸಾಧಿಸಲು ಯಶಸ್ವಿಯಾದರೂ ಕೂಡ, ಯಾವುದೇ ಕಾರಣಕ್ಕೂ ಇಲ್ಲಿ ಅವರದ್ದೇ ಆದ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊರಗಿನಿಂದ ಹೇರಿರಲಿಲ್ಲ. ಪರಿಣಾಮವಾಗಿ, ಚಾಲ್ತಿಯಲ್ಲಿದ್ದ ನಡಾವಳಿಗಳು, ಕಟ್ಟಳೆಗಳು, ಸಾಮಾಜಿಕ ಮತ್ತು ಐತಿಹಾಸಿಕ ಮಾದರಿಗಳು ತಮ್ಮ ಶ್ರೇಷ್ಠತ್ವವನ್ನು ಉಳಿಸಿಕೊಂಡವು ಮತ್ತು ತುಳುನಾಡಿನ ರಾಜ್ಯ ಪದ್ಧತಿಯ ಸತ್ಯಶೀಲತೆಯು ವಿಶೇಷವಾಗಿ ಸ್ಥಳೀಯ ಆಡಳಿತದಲ್ಲಿ ಕಾಣಬಹುದು. ಇಂತಹ ರಾಜಕೀಯ ಸ್ವರೂಪವು, ಇಲ್ಲಿನ ಮಧೋತ್ಸಾರಿ ಶಕ್ತಿಯಿಂದಾಗಿ ನೈಜವಾಗಿ ತನ್ನ ಪ್ರಾದೇಶಿಕತೆ ಮತ್ತು ಪ್ರತ್ಯೇಕತೆಯನ್ನು ಬಲಪಡಿಸಿಕೊಳ್ಳುತ್ತದೆ.

ತುಳುನಾಡು ದಿವ್ಯಪ್ರಯೇಕತ್ವವನ್ನು ನಿರಾಕರಿಸುವ ಹಲವು ಸ್ವತಂತ್ರ ರಾಜಕೀಯ ಅಂಗಗಳನ್ನು ಹಿಂದಿನಿಂದಲೂ ತನ್ನ ಇತಿಹಾಸದಲ್ಲಿ ಪರಸ್ಪರ ಪೋಣಿಸಿಕೊಂಡು ಬಂದಿದೆ. ಇಡೀ ಸಾಮ್ರಾಜ್ಯದಲ್ಲಿ ಆಳುಪರು ಅಸಾಮಾನ್ಯ ದೊರೆಗಳಾಗಿದ್ದು, ಅವರಿಗೆ ಸುಮಾರು 700 ವರ್ಷ ಆಡಳಿತ ನಡೆಸಿದ ಇತಿಹಾಸವಿದೆ. ಹಾಗಿದ್ದು ಕೂಡ, ಅವರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಇಲ್ಲಿನ ಅನೇಕ ಸಾಮಂತ ಅರಸರ ಪ್ರಾಮುಖ್ಯತೆಯನ್ನು ಕಂಡುಕೊಂಡಿದ್ದಲ್ಲದೆ, ಅವರು ಆಳ್ವಿಕೆ ನಡೆಸುತ್ತಿರುವ ಪ್ರಾಂತ್ಯದಲ್ಲಿ ಅವರ ಅಧಿಪತ್ಯವನ್ನು ಗೌರವಿಸುತ್ತಿದ್ದರು. ಪ್ರತಿಯೊಂದು ಸಂಸ್ಥಾನವು (ಪ್ರಾಂತ್ಯ) ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬೆಳೆಯಲು ತನ್ನದೇ ಆದ ಪ್ರತ್ಯೇಕ ಸಂಪ್ರದಾಯ, ರೀತಿ ರಿವಾಜುಗಳನ್ನು ಉಳಿಸಿಕೊಂಡಿದ್ದವು. ತಮ್ಮದೇ ಆದ ಲಾಂಛನ ಮತ್ತು ಬಿರುದುಗಳನ್ನು ಇಟ್ಟುಕೊಂಡಿದ್ದವು. ಶಾಸನಗಳಲ್ಲಿ ಆಳುಪರು ಸಾಮಂತ ಅರಸರಾಗಿ ಆಳ್ವಿಕೆ ನಡೆಸಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಆದ್ದರಿಂದ 7ನೇ ಶತಮಾನದ ಮಧ್ಯ ಭಾಗದಿಂದ 14ನೇ ಶತಮಾನದ ಕೊನೆಯವರೆಗೂ ಆಳಿದ ಈ ವಂಶದ ದೊರೆಗಳು ಸ್ವತಂತ್ರರಾಗಿಯೇ ಇದ್ದರು. ರಾಜನು ಸಿಂಹಾಸನವನ್ನು ಅಲಂಕರಿಸುವ ಸಂದರ್ಭದಲ್ಲಿ ಅದರ ಪ್ರಾಮುಖ್ಯತೆ ಮತ್ತು ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳಲು ವಿಶೇಷ ಮುತುವರ್ಜಿ ವಹಿಸಲಾಗುತ್ತಿತೆಂದು ಪೃಥ್ವಿವಲ್ಲಭನ ಉದ್ಯಾವರದ ಶಾಸನ ತಿಳಿಸುತ್ತದೆ.[1] ಈ ಶಾಸನದಲ್ಲಿ ಸಿಂಹಾಸನಕ್ಕಾಗಿ ಜಗಳವಾಡುವ ಮೊದಲೆ ರಾಜನು ಉದಯಪುರದ ಸಿಂಹಾಸನವನ್ನೇರಿದನು ಎಂದು ಉಲ್ಲೇಖಿಸುತ್ತದೆ.[2]

ತುಳುನಾಡನ್ನು ಆಲೂರ ಮತ್ತು ಆಳುವಖೇಡ-6000 ಎಂದು ಶಾಸನಗಳಲ್ಲಿ ಕರೆದರೂ ಕೂಡ, ಪ್ರಾಚೀನ ಆಳುಪರ ಸಾಮ್ರಾಜ್ಯವನ್ನು ಒಮ್ಮೆಯೂ ಆಳುವ-ಖೇಡ ಎಂದು ಶಾಸನಗಳಲ್ಲಿ ಬರೆಸಿಲ್ಲ. ಒಂದನೇ ಬಂಕಿದೇವ (1020-50) ನ ಬಾರಕೂರು ಶಾಸನದಲ್ಲಿ, ಮೊದಲಿಗೆ ಆಳುಪ ಸಾಮ್ರಾಜ್ಯವನ್ನು ತುಳು-ವಿಷಯವೆಂದು ಹೇಳಲಾಗಿದೆ.[3] ಇದರಿಂದ ಬಾರಕೂರು ತುಳು ವಿಷಯದ ಭಾಗವಾಗಿತ್ತೆಂಬುದು ತಿಳಿಯುತ್ತದೆ.[4] ನಂತರ ವಿಜಯನಗರದ ಅರಸರ ಶಾಸನಗಳಲ್ಲೂ ಬಾರಕೂರು ತುಳು ರಾಜ್ಯವೆಂದು ಕರೆಯಲ್ಪಟ್ಟಿದೆ. ಆದ್ದರಿಂದ, ಇಲ್ಲಿ ಉಲ್ಲೇಖಿಸಿರುವ (ತುಳು) "ವಿಷಯ"ವು ಒಂದು ಪ್ರಾಂತ್ಯ, ಜಿಲ್ಲೆ ಅಥವಾ ಪ್ರಾಂತ್ಯದ ಒಂದು ವಿಭಾಗವಾಗಿದ್ದು, 'ನಾಡು' ಎಂಬ ಆಡಳಿತ ವಿಭಾಗಕ್ಕೆ ಸಾಮ್ಯವಾಗಿರಬೇಕು.[5]

ಲಭ್ಯವಿರುವ ಆಧಾರಗಳನ್ನು ಅವಲಂಭಿಸಿ ಆಳುಪರ ಆಡಳಿತದ ಆರಂಭದ ಹಂತದಲ್ಲಿ, ಇಂತಹದೇ ಆಡಳಿತ ವಿಭಾಗಗಳು ಇದ್ದುವು ಎಂದು ನಿರ್ದಿಷ್ಟವಾಗಿ ಹೇಳಲು ಅಸಾಧ್ಯ. ಶಾಸನಗಳಲ್ಲಿ ಉಲ್ಲೇಖಿಸಿರುವ ಮಾಹಿತಿಯಂತೆ ಪ್ರಾಚೀನ ಆಳುಪರ ಸಾಮ್ರಾಜ್ಯವನ್ನು, ಅನೇಕ ರಾಜಕೀಯ ವಿಭಾಗಗಳನ್ನಾಗಿ ಮಾಡಲಾಗಿದ್ದು, ಅವುಗಳನ್ನು ರಾಜ್ಯ, ವಿಷಯ, ಮಹಾನಾಡು ಮತ್ತು ನಾಡು ಅಥವಾ ನೆಟ್ಟು ಎಂದು ಕರೆಯಲಾಗುತ್ತಿತ್ತು. ಆದರೆ, ನಾಡು ನಾಡೆಂದು ಕರೆಯಿಸಿಕೊಳ್ಳಲು ಅದಕ್ಕಿರುವ ಅರ್ಹತೆಗಳೇನೆಂಬುದನ್ನು ಅವು ತಿಳಿಸುವುದಿಲ್ಲ. ಸಾಮಾನ್ಯವಾಗಿ, ಸಾವಿರ ಹಳ್ಳಿಗಳ ಸಂಖ್ಯೆಯ ವಿಭಾಗಕ್ಕೆ ನಾಡೆನ್ನುವುದನ್ನು ಬಿ.ಎಲ್. ರೈಸ್ ಗುರುತಿಸಿದ್ದಾರಾದರೂ, ಆ ಸಂಖ್ಯೆ ಯಾವಾಗಲೂ ಸಾವಿರವಾಗಿ ಉಳಿದಿರಲಿಲ್ಲವೆಂಬುದನ್ನು ತುಳುನಾಡಿನ ಶಾಸನಗಳು ಸ್ಪಷ್ಟಪಡಿಸಿವೆ. ಉದಾಹರಣೆಗೆ





ಶಾಸನಗಳು ಇವೆಲ್ಲವುಗಳನ್ನೂ 'ನಾಡು'ಗಳೆಂದು ಕರೆದಿವೆ. ಆದ್ದರಿಂದ 'ನಾಡು' ಎಂಬ ಪದವು ದೊಡ್ಡ, ಚಿಕ್ಕ ಮತ್ತು ಅತಿಚಿಕ್ಕ ವಿಭಾಗಗಳ ನಿರ್ದೇಶನಕ್ಕೆ ಅನ್ವಯಿಸದೆ ಸ್ಥೂಲವಾಗಿ 'ಪ್ರದೇಶ' ಎಂಬ ಅರ್ಥವನ್ನು ನಿರ್ದೇಶಿಸಲು ಮಾತ್ರ ಬಳಕೆಯಾಗಿದೆ.

ಬೆಳ್ಮಣ್ಣು ತಾಮ್ರ ಶಾಸನದಲ್ಲಿ 'ಮಹಾನಾಡು' ಸಭೆಯ ಪ್ರಥಮ ಉಲ್ಲೇಖ ದೊರೆಯುತ್ತದೆ. ಈ ಸಭೆಯಲ್ಲಿ ಸ್ವತಃ ರಾಜ 7ನೆಯ ಆಳುವರಸನು ಹಾಜರಿದ್ದು, ಶಿವವಳ್ಳಿ (ಶಿವಳ್ಳಿ) ಸಭೆಗೆ ಅನ್ವಯಿಸುವಂತಹ ಕಟ್ಟುಕಟ್ಟಳೆಗಳ ಮರ್ಯಾದೆಯನ್ನು, ಬೆಳ್ಮಣ್ಣಿನ ಸಭೆಗೂ ಅನ್ವಯಿಸುವಂತಹ ಆಜ್ಞೆ ಹೊರಡಿಸಿದನು. ಕಾನ್ತಾಪುರ (ಕಾಂತಾವರ) ಬೇಳ (ಬೋಳ), ಇವುಗಳೂ ಸಹ, ನಾಡುಗಳಾಗಿ ಸಭೆಗಳನ್ನು ಹೊಂದಿದ್ದವು. ಕಾನ್ತಾಪುರದ ಮಾಣಿದೇವ ಮತ್ತು ಭೇಳದ ನನ್ದರು ಇಲ್ಲಿ ಉದಾಹರಿಸಲ್ಪಟ್ಟಿದ್ದಾರೆ. ಈ ಎರಡು ಸ್ಥಳಗಳೂ ಬೆಳ್ಮಣ್ಣಿನ ಸಮೀಪದಲ್ಲಿವೆ. ಕಾಂತಾವರವು ತನ್ನ ಶಿವ ದೇವಾಲಯದಿಂದ ಪ್ರಸಿದ್ಧಿಯಾಗಿದ್ದು, ಬೋಳದ ನಂದ ಪ್ರಾಯಶಃ ಬೆಳ್ಮಣ್ಣು ಮಹಾನಾಡಿನ ಒಬ್ಬ ಅಧಿಕಾರಿಯಾಗಿದ್ದಿರಬೇಕು. ಮಾಣಿದೇವ ಮತ್ತು ನಂದರಿಗೆ ಈ ಶಾಸನವನ್ನು ಕ್ರಮವಾಗಿ ನಡೆಸಿಕೊಂಡು ಮತ್ತು ರಕ್ಷಿಸಿಕೊಂಡು ಬರುವ ಕೆಲಸ.

ಸಾಮಾನ್ಯವಾಗಿ ಆಡಳಿತ ವಿಭಾಗಗಳನ್ನು ಆಯಾ ವಿಭಾಗಗಳ ಮುಖ್ಯ ಸ್ಥಳಗಳ ಹೆಸರಿನಿಂದಲೇ ಕರೆಯಲಾಗುತ್ತಿತ್ತು. ಕೆಲವೊಮ್ಮೆ, ಆಡಳಿತ ವಿಭಾಗಗಳನ್ನು ಕ್ರಮವಾಗಿ ಪ್ರದೇಶ, ವಂಶ ಮತ್ತು ಗ್ರಾಮಗಳ ಹೆಸರಿನಿಂದಲೂ ನಿರ್ದೇಶಿಸಲಾಗುತ್ತಿತ್ತು. ಆದರೆ, ಬಹಳಷ್ಟು ಸಲ ನೊಳಂಬವಾಡಿ 32,000, ಸಿಂದವಾಡಿ-1000 ಎಂಬ ಆಡಳಿತ ವಿಭಾಗಗಳ ಮುಂದೆ ಸಂಖ್ಯೆಗಳನ್ನು ಹೇಳಲಾಗಿದೆ. ಈ ಸಂಖ್ಯೆ ಏನನ್ನು ಸೂಚಿಸುತ್ತದೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅವು ಆಯಾ ಭಾಗಗಳ ಸಾಗುವಳಿ ಭೂಮಿ, ಇಲ್ಲವೆ ಮನೆತನಗಳ ಮುಖ್ಯಸ್ಥರ ಸಂಖ್ಯೆಯನ್ನು ಸೂಚಿಸುತ್ತವೆ ಎಂಬ ವಿಭಿನ್ನ ಅಭಿಪ್ರಾಯಗಳಿವೆ.[6] ವಿಭಾಗ ಸಂಖ್ಯೆಗಳ ಜೊತೆ ಗ್ರಾಮ ಎಂಬ ಪದ ಬಳಸಿರುವುದರಿಂದ, ಅವು ಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತಿರುವುದು ಸ್ಪಷ್ಟ.

ತುಳುನಾಡಿನಲ್ಲಿ ಪ್ರತಿಯೊಂದು ನಾಡು ಒಬ್ಬ ಅಧಿಕಾರಿಯ ಆಡಳಿತಕ್ಕೆ ಒಳಪಡುತ್ತಿದ್ದು, ಅವನ ಕಾರ್ಯವನ್ನು ನಾಟ್ಟು ಮುಡಿಮೆ ಎಂದು ಕರೆಯಲಾಗುತ್ತಿತ್ತು. ಅಂದರೆ, ಅವನು ಒಂದು ನಾಡುವಿನ ಮುಖಂಡ.[7] ಉಡುಪಿ ಜಿಲ್ಲೆಯ ವಡ್ಡರ್ಸೆಯಲ್ಲಿ ದೊರೆತ 7ನೇ ಶತಮಾನದ ಶಾಸನವು ಶ್ರೀಮಾತು ಆಳುಪರಸರ ರಾಜ್ಯ (ಸಾಮ್ರಾಜ್ಯ)ದ ಕಂದವರ್ಮನ ಸೇವಕನಾದ ಗುಂಡಣ್ಣನ ನಟ್ಟು-ಮುಡಿಮೆ ಆಡಳಿತದ ಬಗ್ಗೆ ವಿವರ ನೀಡುತ್ತದೆ.[8] ಅದೇ ಶಾಸನ ಪಾಡುವಳ್ಳಿಯ-ನಾಡು ಮತ್ತು ನಟ್ಟು ಮುಡಿಮೆ ಎಂದು ಸಹ ಹೇಳುತ್ತದೆ. ಈ ನಾಡು ಪ್ರಾಯಶಃ ಗುಂಡರಸನು ಮುಖಂಡನಾಗಿರುವ ನಾಡೆ ಆಗಿರಬಹುದು.

ಒಂದನೆ ಆಳುಪರಸನ ಕಿಗ್ಗ ಶಾಸನವು, ಕುಂದಮರಸನ ನಾಟ್ಟು-ಮುಡಿಮೆಯ ಬಗ್ಗೆ ಉಲ್ಲೇಖಿಸುತ್ತದೆ.[9] ಇಲ್ಲಿ ನಾಡು ಬಹುಶ: ಶಾಸನವಿರುವ ಕಿಗ್ಗ ಪ್ರದೇಶವಾಗಿರ ಬಹುದು. ಪೃಥ್ವೀಸಾಗರ (810-40)[10] ಮತ್ತು ಮಾರಮ್ಮನ (840-70)[11] ಶಾಸನಗಳು ಕೂಡ, ಅದೇ ಹುದ್ದೆಗಳನ್ನು ಬೊಯ್ಯಗವರ್ಮ ಮತ್ತು ಅರಕೆಲ್ಲ ಅಲಂಕರಿಸಿದ್ದರೆಂದು

ತಿಳಿಸುತ್ತವೆ. ಈ ಶಾಸನಗಳಲ್ಲಿ ಕಂಡುಬರುವ ನಾಡು (ನಟ್ಟು ಮುಡಿಮೆ) ಪ್ರಾಯಶ: ಉಡುಪಿ ಜಿಲ್ಲೆಯ ಉದ್ಯಾವರ ಪ್ರಾಂತ್ಯವನ್ನು ನಿರ್ದೇಶಿಸುತ್ತದೆ.

ವಡ್ಡರ್ಸೆ ಶಾಸನದಲ್ಲಿ ನಾಡು ಪುನಃ ಸಣ್ಣ ರಾಜಕೀಯ ವಿಭಾಗವಾಗಿ ವಿಂಗಡಿಸಿರುವುದು ಕಂಡು ಬರುತ್ತದೆ. ಆ ಶಾಸನವು ಗುಂಡಣ್ಣರಸನ ನಾಟ್ಟು-ಮುಡಿಮೆಯ ವಿಷಯದ ನಂತರ, ಸೆಟ್ಟಿಗಾರಿಯು ಗುಂಡಣ್ಣರಸನ ಅಧಿಕಾರಿಯಾಗಿದ್ದು, ಭಿನ್ನ ಅಥವಾ ಬನ್ನೆಯ ಪಾಡುವಳಿಯ ನಾಡಿನ ಉಪ ವಿಭಾಗವಾಗಿರಬೇಕು.

ಆಶ್ಚರ್ಯವೆಂದರೆ, ನಾಟ್ಟು-ಮುಡಿಮೆ ಮತ್ತು ಮುಡಿಮೆಯು ಮಾರಮ್ಮನ ನಂತರ ಯಾವುದೇ ಶಾಸನಗಳಲ್ಲಿ ಕಂಡುಬರುವುದಿಲ್ಲ. ಈ ಬೆಳವಣಿಗೆ ಯಾವ ಕಾರಣಕ್ಕೆ ಆಗಿರಬಹುದೆಂದು ಹೇಳಲು ಅಸಾಧ್ಯ. ಆದರೆ, ಈ ಕಾಲಕ್ಕೆ ನಾಟ್ಟು-ಮುಡಿಮೆಗಳನ್ನು ಸಾಮಂತ ಅರಸರು ಅವರ ಪ್ರಾಂತಗಳನ್ನಾಗಿ ಪುನರ್ ನಿರ್ಮಿಸಿರಬಹುದು. ಈ ಅಭಿಪ್ರಾಯವನ್ನು ಬಂತ್ರ ಶಾಸನವು[12] ಸಮರ್ಥಿಸುತ್ತದೆ. ಅದರಲ್ಲಿ ಮಾರಮ್ಮಳ ಅಧಿಕಾರಾವಧಿಯಲ್ಲಿ, ನೃಪಬಲ್ಲರಾಜ, ವಿಲಾರಿಟ್ಟಾಲಿಯರಸ ಮತ್ತು ಕದಂಬ ವಂಶದ ರಾಜನ ಬಗ್ಗೆ ಪ್ರಸ್ತಾಪ ಬರುತ್ತದೆ. ಇವರು, ಆಳುಪ ಸಾಮ್ರಾಜ್ಯದೊಳಗೆ ತುಂಡರಸರಾಗಿ ಚಿಕ್ಕ ಪ್ರಾಂತಗಳಲ್ಲಿ ಅಧಿಕಾರದಲ್ಲಿದ್ದರು. ಅಲ್ಲದೆ, ಒಂದನೆಯ ಬಂಕಿದೇವನ ಬಾರಕೂರು ಶಾಸನದಲ್ಲಿ, ಅವನು 120 ಮಾಂಡಲಿಕರು ಮತ್ತು ಮಹಾಮಾಂಡಲಿಕರಿಗೆ ರಾಜನಾಗಿದ್ದನು ಎಂದು ಹೇಳುತ್ತದೆ. ಅವನು ತನ್ನ ಭುಜಬಲದಿಂದ ದಂಡೆತ್ತಿ ಬಂದ ಚೋಳರನ್ನು ಹೊಡೆದೋಡಿಸಿದನೆಂದು ಹೇಳುತ್ತ, ಕೇಮರದಂಡನೂ ಸೇರಿದಂತೆ ನೂರಿಪ್ಪತ್ತು ಮಾಂಡಳಿಕರನ್ನು (ತನ್ನ), ದೊರೆ ಬಂಕಿದೇವನ ಅಧೀನರನ್ನಾಗಿ ಮಾಡಿದ ಹಾಗೂ ತುಳು ವಿಷಯದಲ್ಲಿ ನಿಜಾಜ್ಞೆಯನ್ನು ನಿಲ್ಲಿಸಿದ ಎಂದು ಹೇಳುತ್ತದೆ.[13] ಇಲ್ಲಿ ನಿಜಾಜ್ಞೆಯನ್ನು ನಿಲ್ಲಿಸಿದ ಎಂಬುದನ್ನು, ಅವನ ಸ್ವಂತ ಆಜ್ಞೆಯನ್ನು ಅಥವಾ ಆಡಳಿತವನ್ನು ಸ್ಥಾಪಿಸಿದನೆಂದು ತಿಳಿಯುವುದು ಹೆಚ್ಚು ಸೂಕ್ತವೆಂದು ವಸಂತ ಸೆಟ್ಟಿಯವರ ಅಭಿಪ್ರಾಯ.[14] ಬಾರಕೂರು[15] ಶಾಸನ (1050)ದಲ್ಲಿ, ಪ್ರಪಥಮ ಬಾರಿಗೆ ತುಳು ವಿಷಯದ ಬಗ್ಗೆ ಉಲ್ಲೇಖವಿದೆ. ಇಲ್ಲಿ ವಿಷಯವು ಒಂದು ಪ್ರಾಂತ್ಯ, ಜಿಲ್ಲೆ, ಅಥವಾ ಪ್ರಾಂತ್ಯದ ವಿಭಾಗವೆಂಬ ಅರ್ಥವಿದ್ದರೂ ಕೂಡ, ಅದನ್ನು ನಾಡು ಎಂದು ಕಲ್ಪಿಸಬಹುದು.[16] ಇದರಿಂದ, ಬಾರಕೂರು ತುಳು ವಿಷಯದ ಭಾಗವಾಗಿತ್ತೆಂಬುದೂ ಗಮನಾರ್ಹವಾಗಿದೆ.[17] ನಂತರ ವಿಜಯನಗರದ ಶಾಸನಗಳಲ್ಲೂ ಬಾರಕೂರು ತುಳು ರಾಜ್ಯವೆಂದು ಕರೆಯಲ್ಪಟ್ಟಿದೆ. ಇಲ್ಲಿ ಉಲ್ಲೇಖಿಸಿರುವ (ತುಳು) 'ವಿಷಯ'ವು ಒಂದು ಪ್ರಾಂತ್ಯ, ಜಿಲ್ಲೆ ಅಥವಾ ಪ್ರಾಂತ್ಯದ ಒಂದು ವಿಭಾಗವಾಗಿದ್ದು 'ನಾಡು' ಎಂಬ ಆಡಳಿತ ವಿಭಾಗಕ್ಕೆ ಸಾಮ್ಯವಾಗಿರಬಹುದು.[18]

1281ರ ಮೂರನೇ ವೀರ ಬಲ್ಲಾಳನ ಶಾಸನವು, ಭೂ ದತ್ತಿಯ ಬಗ್ಗೆ ಉಲ್ಲೇಖಿಸಿ, ಆ ದತ್ತಿಯನ್ನು ಎರಡು ಕೋಲ ಬಳಿಗಳು, ನಾಡು ಮತ್ತು ನಖರಗಳ ಅನುಮತಿ ಪಡೆದು ದತ್ತಿಯನ್ನು ನೀಡಲಾಯಿತು ಎಂದು ಹೇಳುತ್ತದೆ.[19] 15ನೇ ಶತಮಾನದಲ್ಲಿ ಪ್ರಚಲಿತವಾದ ಕುಲಾಯಿನಾಡು, ಆಳುಪರ ಕಾಲದ 'ನಾಡು' ಆಡಳಿತ ಪದ್ಧತಿಗೆ ಹೋಲುತ್ತದೆ.[20] ವೀರ-ಕುಲಶೇಖರ ಆಳುಪೇಂದ್ರನು, ತನ್ನ ಸಾಮ್ರಾಜ್ಯದ ಮೊಗರುನಾಡನ್ನು,





ತನ್ನ ಅಳಿಯನಿಗೆ ಬಿಟ್ಟುಕೊಟ್ಟ ಉಲ್ಲೇಖ ಶಾಸನದಲ್ಲಿದೆ.[21] ಆಗ ಅಸ್ತಿತ್ವದಲ್ಲಿದ್ದ ಪದ್ಧತಿಯಂತೆ ಅರಸು, ನಾಡು (ನಾಡಿನ ಸಮಸ್ತರು) ಮತ್ತು ನಖರ (ವ್ಯಾಪಾರಿ ಸಂಘ ಅಥವಾ ಶ್ರೇಣಿ)ದವರ ಉಲ್ಲೇಖಗಳನ್ನು ಗಮನಿಸುವಾಗ, ನಾಡು ಆಳುಪರ ಕಾಲದಲ್ಲಿ ಒಂದು ಆಡಳಿತ ವಿಭಾಗವಾಗಿರುವುದು ಶ್ರುತವಾಗುತ್ತದೆ.[22] ಹಾಗಾಗಿ, ಶಾಸನಗಳ ಆಧಾರದಿಂದ ರಾಜ್ಯ, ವಿಷಯ ಮತ್ತು ನಾಡು ದೊಡ್ಡ ರಾಜಕೀಯ (ಆಡಳಿತ) ವಿಭಾಗಗಳನ್ನು ಪ್ರತಿನಿಧಿಸುತ್ತವೆ.

ತುಳುನಾಡಿನ ಶಾಸನಗಳಲ್ಲಿ ಉಲ್ಲೇಖಗೊಂಡ ರಾಜಧಾನಿ ಮತ್ತು ಉಪವಿಭಾಗದ ಮುಖ್ಯ ಸ್ಥಳಗಳಲ್ಲದೆ, ಇತರ ಕೆಲವು ಸ್ಥಳಗಳೂ ಪಟ್ಟಣಗಳೆನಿಸಿದ್ದವು. ಪ್ರಾಚೀನ ಆಳುಪರ ಕಾಲದಲ್ಲಿ, ಪಟ್ಟಣಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು. ನಗರ, ನಖರ, ಪುರ ಮತ್ತು ಪಟ್ಟಣ ರಾಜಧಾನಿಯನ್ನು ಸಹ ಉದಯಪುರ-ನಗರ ಅಥವಾ ಉದಯಪುರ ನಖರ ಎಂದು ಸಂಭೋದಿಸಲಾಗುತ್ತಿತ್ತು. ಕೋಲಾಲ-ನಖರ ಅಥವಾ ಕೋಲಾಲ ಗಿರಿಯು, ಇನ್ನೊಂದು ಪಟ್ಟಣ. ಮಂಗಳೂರು ಪಟ್ಟಣವನ್ನು ಮಂಗಳಾಪುರ-ಮಹಾನಗರವೆಂದು ಮೇಲ್ವಿಕ್ಕುಡಿ ಪಾಂಡ್ಯ ನೆಡುಂಜದ್ಯೆಯನ್‌ನ ತಾಮ್ರ ಶಾಸನ[23] ಮತ್ತು ವಿಕ್ರಮಾದಿತ್ಯನ ಮೂರುತೂರು ದತ್ತಿ ಶಾಸನದಲ್ಲಿ[24] ಮಂಗಳಾಪುರ ವೆಂದು ಉಲ್ಲೇಖಿಸಲಾಗಿದೆ. ಇನ್ನೂ ಕೆಲವು ಪ್ರಾಚೀನ ಆಳುಪರ ಶಾಸನಗಳಲ್ಲಿ ಪದಿನೆಂಟು (ಹದಿನೆಂಟು) ಪಟ್ಟಣವೆಂದು ಸಹ ಕರೆಯಲಾಗಿದೆ.[25] ಈ ವಿಚಾರವು ಮಾರಮ್ಮಳ ಉದ್ಯಾವರ ಶಾಸನದಲ್ಲಿ ಆಡಳಿತ ವಿಭಾಗಗಳಾದ 18 (ಪದಿನೆಂಟು) ನಗರಗಳು ಎಂದು ತಿಳಿಸಲಾಗಿದೆ.

ಹೆಚ್ಚಿನ ಪಟ್ಟಣಗಳು ನಾಡಿನ ಉಪವಿಭಾಗದ ಮುಖ್ಯ ಸ್ಥಳಗಳಾಗಿರುವುದರಿಂದ, ಆಯಾ ಉಪವಿಭಾಗಗಳ ಆಡಳಿತ ನೋಡಿಕೊಳ್ಳಲು, ಸಾಮಂತ ಮಂಡಳೇಶ್ವರರೊಂದಿಗೆ, ಹಂಜಮಾನರು ಮತ್ತು ಇತರ ಅಧಿಕಾರಿಗಳು ಅಲ್ಲಿ ವಾಸಿಸುತ್ತಿದ್ದರು. ಆದರೂ, ಪ್ರತಿ ಹಳ್ಳಿ-ಪಟ್ಟಣ ಸ್ವಯಂ ಪೂರ್ಣ ಆಡಳಿತ ಘಟಕವಾಗಿ ರಾಜ್ಯಾಡಳಿತದೊಡನೆ ಸಂಬಂಧ ಪಡೆದಿರುತ್ತಿದ್ದವು. ಗ್ರಾಮ ಸ್ವಾಯತ್ತತೆಯ ಈ ಪದ್ಧತಿ, ಕದಂಬರ ಕಾಲಕ್ಕೆ ಪ್ರಾರಂಭ ಗೊಂಡಿದ್ದನ್ನು ಜಿ.ಎಂ. ಮೊರೆಸ್ ಗುರುತಿಸಿದ್ದಾರೆ.[26] ಪ್ರಾಚೀನ ಮಧ್ಯಕಾಲೀನ ತುಳುನಾಡಿನ ಊರಾಡಳಿತದಲ್ಲಿ, ಜನತಾ ಸಭೆಗಳು ಬಹುಮುಖ್ಯ ಪಾತ್ರವಹಿಸಿವೆ. ಪ್ರತಿ ಹಳ್ಳಿ ಪಟ್ಟಣಗಳಲ್ಲಿ ಅಂಥ ಸಭೆಗಳಿದ್ದವೆನ್ನಲು ಆಧಾರಗಳಿವೆ. ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿರುವುದರಿಂದ, ಅಲ್ಲಿನ ಪ್ರತಿ ಚಟುವಟಿಕೆಗಳಲ್ಲಿ ವರ್ತಕರ ಪ್ರಭಾವ ಎದ್ದು ಕಾಣುವುದನ್ನು ಶಾಸನಗಳಿಂದ ಗುರುತಿಸಬಹುದು. ವಿವಿಧ ವೃತ್ತಿ ವ್ಯಾಪಾರಗಳನ್ನು ಕೈಗೊಂಡ ಈ ನಾಡಿನ ಪಟ್ಟಣಗಳ ವರ್ತಕರು, ತಮ್ಮದೇ ಆದ ಸಂಘ ಸಂಸ್ಥೆಗಳನ್ನು ಹೊಂದಿ, ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ವಿವಿಧ ವರ್ಗದ ಇತರರೊಂದಿಗೆ ದಾನ ಮತ್ತು ದಾನ ಪರಿಪಾಲನ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಮಸ್ತ ದೇಸಿಕ ಜನಾಧಕರು, ನಖರದವರು, ಸಾಸಿರ್ವರು, ಪಟ್ಟಣ ಸ್ವಾಮಿಗಳು, ದೇಶಿಗರು, ನಾನಾದೇಶಿಗಳು, ನಾಡುಗಳು, ಸೆಟ್ಟಿ, ವಡ್ಡ ವ್ಯವಹಾರಿಗಳು ಏಕಸ್ತರಾಗಿ ದತ್ತಿ ಬಿಟ್ಟಿರುವುದು ಮತ್ತು ಅವರೆಲ್ಲ ಒಂದೆಡೆ ಸೇರಿ ನಿರ್ಧರಿಸಿದ ಸ್ಥಳ, ದಿನಗಳಲ್ಲಿ ನೆರೆಯುತ್ತಿದ್ದಲ್ಲಿ, ವರ್ತಕರ ಪರಸ್ಪರ ಸಹಕಾರ

ಸಹಬಾಳ್ವೆ ಎದ್ದು ಕಾಣುತ್ತದೆ. ಇವರಲ್ಲಿ ದೊಡ್ಡ ಪ್ರಮಾಣದ ವ್ಯಾಪಾರವನ್ನು ಕೈಗೊಂಡ ಸ್ಥಿತಿವಂತ ವರ್ತಕರು ದೇವಾಲಯಗಳನ್ನು ಕಟ್ಟಿಸಿದ್ದಾರೆ.

ಪಟ್ಟಣ – ನಗರಗಳ ಆಡಳಿತವನ್ನು ಅಲ್ಲಿನ ಮುಖ್ಯಸ್ಥನು ಸಾಮಾನ್ಯವಾಗಿ ವಹಿಸುತ್ತಿದ್ದು, ಅವನನ್ನು 'ನಾಯಕ'ನೆಂದು ಕರೆಯಲಾಗುತ್ತಿತ್ತು. ಪೃಥ್ವಿಸಾಗರ ಉದ್ಯಾವರ ಶಾಸನವು,[27] ಉದಯಪುರ–ನಾಯ್ಗ ಎಂದು ಹೇಳುತ್ತದೆ. ಆಳುಪರ ರಾಜಧಾನಿಯಾದ ಉದಯಪುರದ ನಾಯಕನೆಂದು ತಿಳಿಸುತ್ತದೆ. ಅದೇ ಸ್ಥಳದ ಇನ್ನೊಂದು ಶಾಸನವು[28] ಮಾರಮ್ಮನ ಕಾಲಕ್ಕೆ ಸೇರಿದ್ದು, ಕರಸಿ–ನಾಯ್ಗ (ನಾಯಕ)ನು ಕೋಲಲ–ನಖರದ ಆಡಳಿತಗಾರನೆಂದು ಸೂಚಿಸುತ್ತದೆ.

ಸಂತೆ ಮತ್ತು ಪಟ್ಟಣಗಳ ವ್ಯಾಪಾರಾದಿಗಳ ಮೇಲಿನ ಸುಂಕವನ್ನು ಆಯಾ ಉಪವಿಭಾಗ, ಇಲ್ಲವೇ, ಗ್ರಾಮಗಳ ಸುಂಕದ ಅಧಿಕಾರಿಗಳು ಸಂಗ್ರಹಿಸುತ್ತಿದ್ದರು. ಇವರು ಅಲ್ಲಿನ ವರ್ತಕರೊಂದಿಗೆ ಸೇರಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಸುಂಕದ ಆದಾಯವನ್ನು ಬಿಟ್ಟಿರುವುದು ತಿಳಿದುಬರುತ್ತದೆ.

**ಹೆಗ್ಗಡೆಗಳು:** ಆಳುಪ ಸಾಮ್ರಾಜ್ಯದ ಸ್ಥಳೀಯ ಪ್ರದೇಶಗಳ ಆಡಳಿತದ ಸ್ವರೂಪವನ್ನು ತಿಳಿಯಲು, ಪ್ರಾಚೀನ ಶಾಸನಗಳು ಅಷ್ಟೇನು ಸಹಕಾರಿಯಾಗುವುದಿಲ್ಲ. ಆದರೆ, ಪರೋಕ್ಷವಾಗಿ ಕೆಲವು ಅಂಶಗಳನ್ನು ಗಮನಿಸಬಹುದು. ಮೊದಲನೆ ಚಿತ್ರವಾಹನನ ಕಿಗ್ಗ ಶಾಸನವು,[29] ಕಿಲ್ಲದ ಅಧಿಕಾರಿ ನಾಗಣ್ಣನೆಂದು ಹೇಳುತ್ತದೆ. ಬಂತ್ರದ ಶಾಸನವು, ಒಂದು ಒಪ್ಪಂದದ ಬಗ್ಗೆ ವಿವರ ನೀಡಿ, ಆ ಒಪ್ಪಂದಕ್ಕೆ ಪೆರ್ಗಡೆಗಳು ಸಾಕ್ಷಿಗಳೆಂದು ತಿಳಿಸುತ್ತದೆ. ಈ ಅಧಿಕಾರಿಗಳ ಉಲ್ಲೇಖದ ಸನ್ನಿವೇಶಗಳನ್ನು ಗಮನಿಸಿದರೆ, ಅಧಿಕಾರಿ ಮತ್ತು ಪೆರ್ಗಡೆಯು, ಗ್ರಾಮಾಧಿಕಾರಿಗಳ ಹುದ್ದೆಗಳ ಹೆಸರು ಎಂದು ಹೇಳಬಹುದು. ಬಂತ್ರ ಶಾಸನವು, ಆಡಳಿತದಲ್ಲಿ ಸಾಮಾನ್ಯರು–ಪ್ರಜೆಗಳ ಪಾತ್ರವನ್ನು ಚಿತ್ರಿಸುತ್ತದೆ. ಸ್ಥಳೀಯ ಅರಸರ ನಡುವೆ ಶಾಂತಿ ಮತ್ತು ಸ್ನೇಹ ಸಂಬಂಧದ ಒಪ್ಪಂದವನ್ನು ತಿಳಿಸುತ್ತ, ಸಾದನೂರು ವೈದ್ಯ (ಸಾದನೂರಾ ಮರುದಗಲ್)ರನ್ನು, ದೇವಾಲಯದ ಸಂಗೀತಗಾರರು (ಓಲಗದ ಪಾಲಿಯವರು) ಮತ್ತು ಇನ್ನಿತರ ಸಾಮಾನ್ಯರನ್ನು ಉಲ್ಲೇಖಿಸುತ್ತದೆ. ಬಾರಕೂರಿನ ಕೋಟೆಕೇರಿಯಲ್ಲಿ ದೊರೆಯುವ ಕವಿಯಾಳುಪೇಂದ್ರನ ಶಾಸನವು,[30] ಅವನು ಬಾರಹ ಕನ್ಯಾಪುರ (ಬಾರಕೂರು)ದ ಅರಮನೆಯಿಂದ ರಾಜ್ಯವಾಳುತ್ತಿದ್ದಾಗ, ರಾಣಿ ಪಾಂಡ್ಯ ಮಹಾದೇವಿಯ ಪನ್ನೀರ್ಪಳ್ಳಿ (ಈಗಿನ ಹನೆಹಳ್ಳಿ ಗ್ರಾಮ)ಯ ಆಡಳಿತದ ಉಸ್ತುವಾರಿ ವಹಿಸಿರುವುದನ್ನು ಉಲ್ಲೇಖಿಸಿ, ಅವಳ ಆಡಳಿತದಲ್ಲಿ ಅಧಿಕಾರಿಗಳಾದ ಹೆಗ್ಗಡೆ, ಪ್ರಧಾನ ಮತ್ತು ನಗರ ಸಮೂಹದವರ ಸಕ್ರಿಯ ಪಾಲುಗೊಳ್ಳುವಿಕೆಯನ್ನು ತಿಳಿಸುತ್ತದೆ. ಮೇಲೆ ಹೇಳಿದ ಪೆರ್ಗ್ಗಡೆಯರನ್ನು 'ನಾಯಕ' ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಪೆರ್ಗ್ಗಡೆಗಳು ವಿಭಾಗ ಇಲ್ಲವೆ, ಉಪವಿಭಾಗ ಗಳನ್ನು ಆಳುವ ರಾಜವಂಶೀಯರಂತೆ, ವಂಶಪರಂಪರೆಯಾಗಿ ಮುಂದುವರಿಯದೆ ತಮ್ಮ ದಕ್ಷತೆ, ಶೌರ್ಯ, ಸಾಹಸಗಳಿಂದಾಗಿ ಅದನ್ನು ಪಡೆಯುತ್ತಿದ್ದರು. ಇಂದಿನ ಹೆಗ್ಗಡೆಗಳೇ, ಹಿಂದೆ ಪೆರ್ಗ್ಗಡೆಗಳೆನಿಸಿದ್ದರು. ಅವರಲ್ಲಿ ತಳವೃತ್ತಿ ಹೆಗ್ಗಡೆ, ಸುಂಕವೆರ್ಗ್ಗಡೆ, ಮನೆವೆರ್ಗ್ಗಡೆ– ಮುಂತಾದವರಿದ್ದುದನ್ನು ಶಾಸನಗಳು ಉಲ್ಲೇಖಿಸಿವೆ.





ಉಡುಪಿ ಜಿಲ್ಲೆಯ ಚೇರ್ಕಾಡಿ ಹಳೆಯಂಗಡಿಯಲ್ಲಿ ದೊರೆತ ಕವಿ ಆಳುಪೇಂದ್ರನ (1247–48) ಶಾಸನವು, ಅವನು ಆಡಳಿತ ನಡೆಸುವಲ್ಲಿ, ಅವನಿಗೆ ಮೊಮ್ಮಗಳು ಅಚಲದೇವಿ, ಅಳಿಯ ಬಮ್ಮದೇವಿ ಮತ್ತು ಒಡ್ಡಮಹದೇವ ಇವರುಗಳು ನೆರವಾಗುತ್ತಿದ್ದರೆಂದು ಉಲ್ಲೇಖಿಸುತ್ತದೆ.[31] ಮಯ್ದುನ ಈಶ್ವರದೇವ, ಬಂಕಿವೆರ್ಗ್ಗಡೆ, ಗಜಬಾಹು ಸಂಧಿವಿಗ್ರಹಿ ದೇವಪ್ಪರಸ, ಆನಂದ ಸೇನಭೋವ ಮುಂತಾದವರೂ ಆಸ್ಥಾನದಲ್ಲಿದ್ದು ದಾಗಿಯೂ ಶಾಸನದಲ್ಲಿ ಉಲ್ಲೇಖವಿದೆ. ರಾಜನ ಆಸ್ಥಾನದಲ್ಲಿ ಚೇರ್ಕಾಡಿಗಳು–ಊರಿನ ಪ್ರಮುಖರು ಹಾಜರಿದ್ದು, ಕಟ್ಟಳೆಯೊಂದನ್ನು ಮಾಡಿದ್ದನ್ನು ದಾಖಲಿಸುತ್ತದೆ. ಅಧಿಕಾರಿ, ಅರಸಧಿಕಾರಿ, ಇತ್ಯಾದಿ ಉಲ್ಲೇಖಗಳು ಆಡಳಿತ ಇತಿಹಾಸದ ದೃಷ್ಟಿಯಿಂದ ಗಮನಾರ್ಹ ವಿವರಗಳು.

ಕೋಟದಲ್ಲಿ ದೊರೆತ 1254ರ ವೀರಪಾಂಡ್ಯನ ಪ್ರಥಮ ಶಾಸನವು,[32] ದತ್ತಿಯೊಂದನ್ನು ದಾಖಲಿಸುತ್ತ, 'ಕೋಟದ ಸಾವಿರ' ಮಂದಿ ಮತ್ತು ಮಯ್ದೆರ್ಗಡೆ ಈ ದಾನವನ್ನು ರಾಜ, ಸಮಸ್ತ ಪ್ರಧಾನರು, ಅಳಿಯ ಬಂಕಿದೇವ ಮತ್ತು ಮಯ್ದುನ ಒಡ್ಡಮದೇವ ಬಲ್ಲವೆರ್ಗ್ಗಡೆ–ಇವರು, ಸಮಕ್ಷಮ ನೀಡಿದರೆಂದು ಶಾಸನ ತಿಳಿಸುತ್ತದೆ. ಆಗಿನ ಕೇಂದ್ರ ಮತ್ತು ಗ್ರಾಮಾಡಳಿತದ ಬಗ್ಗೆ ಮಹತ್ವದ ವಿಚಾರವನ್ನು ಈ ಶಾಸನ ಒಳಗೊಂಡಿದೆ.

ಇನ್ನೊಂದು ಶಾಸನವು ಬಾರಹಕನ್ಯಾಪುರದ (ಬಾರಕೂರು) ಅರಮನೆಯಲ್ಲಿ ಪ್ರಧಾನರು, ಪುರೋಹಿತರು, ಅಳಿಯ ಬಂಕಿದೇವ ಮತ್ತು ಮಯ್ದುನ ಒಡ್ಡಮದೇವ ಬಲ್ಲವೆರ್ಗ್ಗಡೆ–ಇವರ ಸಮಕ್ಷಮ, ಬ್ರಹ್ಮಾವರದ 102 ಮಹಾಜನರು, ಅರಸನಿಗೆ 700 ಗದ್ಯಾಣಗಳನ್ನು, ಮೂರು ವರ್ಷಕ್ಕೊಮ್ಮೆ ತೆರುತ್ತಾ ಬರಬೇಕೆಂದು ಶಾಸನದಲ್ಲಿ ಹೇಳಲಾಗಿದೆ.[33] ಬ್ರಹ್ಮಾವರದಲ್ಲಿ ವಿವಿಧ ಮನೆತನಗಳಿಗೆ ಸಂಬಂಧಿಸಿದ 102 ಜನರನ್ನು ಪ್ರತಿನಿಧಿಸುವ 'ಮಹಾಜನರು' ಎಂಬ ಸಭೆ ಇದ್ದಿರುವುದು ತಿಳಿದುಬರುತ್ತದೆ. ಅಲ್ಲದೆ, ತೆರಿಗೆಯನ್ನು ನಿರ್ಧರಿಸುವಾಗ ಹಲವು ಅಧಿಕಾರಿಗಳು ಸೇರಿ ಬಹಳಷ್ಟು ಜಾಗರೂಕತೆಯಿಂದ ತೀರ್ಮಾನ ತೆಗೆದುಕೊಳ್ಳುತ್ತಿದ್ದರೆಂಬುದೂ ಸ್ಪಷ್ಟವಾಗುತ್ತದೆ.

ನೀಲಾವರದಲ್ಲಿ ದೊರೆತಿರುವ ವೀರಪಾಂಡ್ಯನ ಶಾಸನವೂ,[34] ನೀಲಾವರದ 'ಗ್ರಾಮ ಸಭೆ–300' ಪ್ರತಿವರ್ಷವೂ ಸಂಗ್ರಹಿಸ ತಕ್ಕ ತೆರಿಗೆಯ ನಿರ್ದೇಶನವನ್ನು ತಿಳಿಸುತ್ತದೆ. ಸಂಗ್ರಹಿಸಿದ ತೆರಿಗೆಯಲ್ಲಿ 100 ಗದ್ಯಾಣಗಳನ್ನು ರಾಜನಿಗೆ ತೆರಬೇಕೆಂದೂ, 30 ಗದ್ಯಾಣಗಳನ್ನೂ ಅಧಿಕಾರಿ ಮತ್ತು 30 ಗದ್ಯಾಣಗಳನ್ನು ಗ್ರಾಮ ಸಭೆ ಇರಿಸಿಕೊಳ್ಳಬಹುದೆಂದು ನಿರ್ದೇಶಿಸಲಾಗಿದೆ. ಹೀಗೆ, ಸ್ಥಳೀಯವಾಗಿ ಬಳಸಿಕೊಳ್ಳುವ ಅಧಿಕಾರವನ್ನು ಗ್ರಾಮಸಭೆಗೆ ನೀಡಿರುವುದು, ಆಡಳಿತದ ದೃಷ್ಟಿಯಿಂದ ಮಹತ್ವದ ವಿಚಾರವಾಗಿದೆ. ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿವರಣೆಗಳಿಂದ ಗ್ರಾಮ ಸಭೆಯ ಕಾರ್ಯ ನಿರ್ವಹಣೆಯ ಬಗ್ಗೆ ತಿಳಿದುಕೊಳ್ಳಬಹುದು. ನೀಲಾವರದಲ್ಲಿಯೇ ದೊರೆತಿರುವ ಇನ್ನೊಂದು ಪ್ರಮುಖ ಶಾಸನ, ವೀರಪಾಂಡ್ಯನ ನಂತರ ರಾಜ್ಯಾಡಳಿತ ವಹಿಸಿಕೊಂಡ ಅವನ ರಾಣಿ ಬಲ್ಲಮಹಾದೇವಿಯು, ಬಾರಹಕನ್ಯಾಪುರದಿಂದ ಆಳುತ್ತಿದ್ದಾಗ, ಅವಳಿಗೆ ಸಮಸ್ತ ಪ್ರಧಾನರು, 'ದೇಶೀಪುರುಷರು' ಮತ್ತು ಬಾಹತ್ತರ ನಿಯೋಗಿಗಳು ಆಡಳಿತದಲ್ಲಿ ನೆರವಾಗುತ್ತಿದ್ದರೆಂದು ದಾಖಲಿಸುತ್ತದೆ.[35]

1315ರ ಸೋಯಿದೇವನ ಶಾಸನವು, ಅವನು ಬಾರಹ-ಕನ್ಯಾಪುರದ ಅರಮನೆಯಲ್ಲಿ ಉನ್ನತ ಸಿಂಹಾಸನರೂಢನಾಗಿ ಒಡ್ಡೋಲವನ್ನಿತ್ತಿರುವಾಗ, ದತ್ತಾಳ್ವರ ಬಳಿಯ ಬಂಕಿ ದೇವರಸರು, ಸಾಮಂತ ಪ್ರಧಾನರು, ದೇಸೀ ಪುರುಷರು, ಎರಡು ಕೋಲ ಬಳಿಯವರು ಮತ್ತು ಬಾಹತ್ತರ ನಿಯೋಗಿಗಳು ಆಸ್ಥಾನದಲ್ಲಿದ್ದುದಾಗಿ ವಿವರಿಸುತ್ತದೆ.[36] ಕಾಪುವಿನಲ್ಲಿ ದೊರೆತ 1324ರ ಸೋಯಿದೇವನ ಶಾಸನವು,[37] ಅವನು ಬಾರಹಕನ್ಯಾಪುರದಲ್ಲಿ ಆಳುತ್ತಿದ್ದಾಗ, ಅವನಿಗೆ ಮಹಾಪ್ರಧಾನ ಸಿಂಗಣ್ಣ ಸಾಹಣಿ, ಎರಡು ಕೋಲ ಬಳಿ ಮತ್ತು ಬಾಹತ್ತರ ನಿಯೋಗಿಗಳೂ ಆಡಳಿತದಲ್ಲಿ ನೆರವಾಗುತ್ತಿದ್ದುದಾಗಿಯೂ ತಿಳಿಸುತ್ತದೆ. ಮೂಡನಿಡಂಬೂರಿನಲ್ಲಿ ದೊರೆತ ಅವನ ಇನ್ನೊಂದು ಶಾಸನವು, ಅರಸು ಪ್ರಧಾನವಾದ ಸಿಂಗಣ್ಣ ಸಾಹಣಿ ಮತ್ತು ಭೋಪಣ್ಣ ಅಧಿಕಾರಿ ಇವರನ್ನು ಉಲ್ಲೇಖಿಸುತ್ತದೆ. ಗ್ರಾಮಾಡಳಿತದಲ್ಲಿ ಇವರ ಮಹತ್ವ ಅರ್ಥಪೂರ್ಣ.

ವಸಂತ ಸೆಟ್ಟಿಯವರು, ಕೂರಾಡಿಯಲ್ಲಿ ಕಂಡುಹಿಡಿದ 1333ರ ಸೋಯಿದೇವಾಳೇಂದ್ರನ ಶಾಸನದಲ್ಲಿ, ವಯಿಜಪ್ಪ ಸಾಹಣಿ, ಎರಡು ಕೋಲ ಬಳಿ ಮತ್ತು ಸಮಸ್ತ ಪ್ರಧಾನರು, ಅವನ ಆಸ್ತಾನದಲ್ಲಿದ್ದುದಾಗಿ ತಿಳಿಸುತ್ತದೆ.[38] ಕುಲಶೇಖರನ 1334ರ ಶಾಸನದಲ್ಲಿ, ಬಾರಕೂರಿನ ಹಿರಿಯರ ಮನೆಯಿಂದ ಅವನು ಆಳುತ್ತಿದ್ದಾಗ, ಸಮಸ್ತ ಪ್ರಧಾನರು, ನಾರಣ ನಾಯಕರು ಮುಂತಾದವರು ಸೇರಿ ಪರಪಳ್ಳಿ ನಾಯಕರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಆಡಳಿತದ ಒಂದು ಅವಿಭಾಜ್ಯ ಅಂಗವಾಗಿರುವ ರಾಜ್ಯದ ಭೌಗೋಳಿಕ ಸರಹದ್ದನ್ನು, ನಿರ್ದಿಷ್ಟವಾಗಿ ಇಂತಿಷ್ಟು ಪ್ರದೇಶಗಳನ್ನೊಳಗೊಂಡಿದೆ ಎಂದು ವಿಭಜನೆ ಮಾಡಲಾಗಿಲ್ಲವೆಂದು ಆಳುಪರ ಶಾಸನಗಳಿಂದ ತಿಳಿಯಬಹುದು. ಕೆಲವೊಮ್ಮೆ ಅದು ಚಿಕ್ಕದಾದ ವಿಭಾಗವಾಗಿ ಸ್ವತಂತ್ರವಾಗಿದ್ದುದನ್ನು ಶಾಸನಗಳಿಂದ ತಿಳಿಯಬಹುದು. ವೇಣೂರಿನ ಒಂದು ಹಳ್ಳಿಯಲ್ಲಿ ದೊರೆತ 1118ರ ಶಾಸನದಲ್ಲಿ,[39] ಸೇವ್ಯಾಗೆಲ್ಲರಾ ಎಂಬ ಹೆಸರು ಉಲ್ಲೇಖವಾಗಿದ್ದು, ಪೂಂಜಾಲಿಕೆ (ಪೂಜಾಲ್ಕೆ), ಅವನ ರಾಜ್ಯವನ್ನು ಗುರುತಿಸುತ್ತದೆ. ಇದು ಒಂದು ಚಿಕ್ಕ ರಾಜಕೀಯ ವಿಭಾಗವಾಗಿದ್ದು, ಅಲ್ಲಿನ ಅಧಿಕಾರಿ ಆ ರಾಜ್ಯದ ಪಾಳೆಗಾರನಿಗೆ ವಿಧೇಯನಾಗಿರುವುದನ್ನು ಸೂಚಿಸುತ್ತದೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರದ ತಲಕಾಡ್‌ನ ಶಾಸನವು,[40] ಆಳುಪರ ವಂಶಸ್ಥನಾದ ಭಂಕಿಯಣ್ಣ-ಅರಸನು ನೂರುಂಬಾಡ-(ನೂರು ಹಳ್ಳಿಗಳನ್ನೊಳಗೊಂಡ ರಾಜ್ಯ) ವಿಭಾಗವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸುತ್ತದೆ. 1296ರ ಉಡುಪಿ ಜಿಲ್ಲೆಯ ವಡ್ಡರ್ಸೇ ಶಾಸನವು, ವಡ್ಡರ್ಸೆ ರಾಜ್ಯದಲ್ಲಿ ವಡ್ಡಮಾರಾಯ ಪೃಥ್ವೀ ವಲ್ಲಭನ ಆಡಳಿತದ ಬಗ್ಗೆ ವಿವರಣೆ ನೀಡುತ್ತದೆ.[41] ಈ ರಾಜ್ಯವು ಖಂಡಿತವಾಗಿಯೂ ತುಳುನಾಡಿನ ಚಿಕ್ಕ ರಾಜಕೀಯ ವಿಭಾಗವಾಗಿದ್ದು, ಹಲವು ಗ್ರಾಮಗಳ ಸಮ್ಮಿಲನವೆಂದು ಹೇಳಬಹುದು.

ಗ್ರಾಮ ಮತ್ತು ಊರು, ಆಡಳಿತದ ಅಂಗ ಸಂಸ್ಥೆಗಳು. ಈ ಒಂದು ಅರ್ಥದಲ್ಲಿ ಆಳುಪ ಕಾಲದ ಇಡೀ ತುಳುನಾಡನ್ನು, ಹಲವು ನಾಡುಗಳನ್ನಾಗಿ ವಿಭಜಿಸಿ, ಅದೇ ನಾಡುಗಳನ್ನು ಗ್ರಾಮಗಳನ್ನಾಗಿ, ಊರುಗಳಾಗಿ, ಆಡಳಿತಾತ್ಮಕ ಕಾರಣಕ್ಕಾಗಿ ಪುನರ್ವಿಂಗಡಿಸಲಾಗಿತ್ತು. ಆ ಗ್ರಾಮಗಳನ್ನು ಮತ್ತು ಊರುಗಳನ್ನು ದೊಡ್ಡ ರಾಜಕೀಯ ವಿಭಾಗವಾಗಿ ಮಾಡುವ ಪದ್ಧತಿಯನ್ನು, ಶಾಸನಗಳಲ್ಲಿ ಉಲ್ಲೇಖವಾಗಿರುವ ಹೆಸರು ಗಳಿಂದಲೇ





ಅರ್ಥಮಾಡಿಕೊಳ್ಳಬಹುದು. ಉದಾ: ಮೂರು ಗ್ರಾಮ, ನಾಲ್ಕೂರು, ಐದೂರು, ಪನ್ನೀರ್ ಪಳ್ಳಿ ಎಂಬ ಹೆಸರು 1155ರ ಬಾರಕೂರು ಶಾಸನದಲ್ಲಿ ಕಾಣಬಹುದು. ಈ ಹಳ್ಳಿಯ ಹೆಸರು ಹನೆಹಳ್ಳಿ.[42] ಈ ಪದ್ಧತಿಯು ವಿಜಯ ನಗರ ಕಾಲದಲ್ಲಿ ಸಾಕಷ್ಟು ವಿಸ್ತಾರಗೊಂಡಿತು. ಗ್ರಾಮಗಳು ಮತ್ತು ಊರುಗಳು ಬಹಳ ಪ್ರಾಮುಖ್ಯವಾಗಿದ್ದು, ಸ್ಥಳೀಯ ಆಡಳಿತದಲ್ಲಿ ಅವುಗಳು ಹೆಚ್ಚಿನ ಅಧಿಕಾರವನ್ನು ಹೊಂದಿರುವುದನ್ನು ಅನೇಕ ಶಾಸನಗಳಿಂದ ರುಜುವಾತು ಮಾಡಬಹುದು.

**ನಾಡಿನ ಆಡಳಿತ ವ್ಯವಸ್ಥೆ**

ಆಡಳಿತದ ಸಮರ್ಥ ನಿರ್ವಹಣೆಗಾಗಿ ಪ್ರಾಚೀನ ಕರ್ನಾಟಕದಲ್ಲಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದ್ದರು. ಈಗಿನಂತೆ ಅದು ಕೇಂದ್ರಾಡಳಿತ, ನಾಡಾಡಳಿತ ಮತ್ತು ಊರಾಡಳಿತ ಎಂದು ಸ್ಥೂಲವಾಗಿ ಮೂರು ತೆರನಾಗಿದ್ದುದನ್ನು ನಾವು ಶಾಸನಗಳಲ್ಲಿ ಕಾಣುತ್ತೇವೆ. ಇಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇಲ್ಲವಾದರೂ, ಅಧ್ಯಯನದ ಅನುಕೂಲಕ್ಕಾಗಿ ಹಾಗೂ ಆಡಳಿತದಲ್ಲಿನ ಭಿನ್ನತೆ ಮತ್ತು ವೈವಿಧ್ಯಕ್ಕಾಗಿ ಈ ವಿಭಜನೆ ಅಗತ್ಯವೆನಿಸಿದೆ.

**ಕೇಂದ್ರಾಡಳಿತ:** ಕೇಂದ್ರಾಡಳಿತದಲ್ಲಿ ಸಾರ್ವಭೌಮರಾದ ಚಕ್ರವರ್ತಿಗಳು; ಅವರ ಕೆಳಗಿನ ನಾಡಾಡಳಿತದಲ್ಲಿ ಮಹಾಮಂಡಲೇಶ್ವರರು-ಮಹಾಸಾಮಂತರು; ಅವರ ಕೆಳಗೆ ಊರಾಡಳಿತದಲ್ಲಿ ಪಟ್ಟಣಗಳಾದರೆ ವರ್ತಕ ಶ್ರೇಣಿಗಳು; ಅಗ್ರಹಾರಗಳಾದರೆ ಮಹಾಜನರು; ಗ್ರಾಮಗಳಾದರೆ ಪ್ರಭು ಗಾವುಂಡರು; ಗಾವುಂಡರು ಆಳ್ವಿಕೆ ನಡೆಸುತ್ತಿದ್ದರು. ಇವರೊಂದಿಗೆ ನಾಡಾಡಳಿತ ಮೇಲ್ವಿಚಾರಣೆ, ಕೇಂದ್ರದಿಂದ ನಿಯಮಿಸಲ್ಪಟ್ಟ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಹೆಸರಿನ ಅಧಿಕಾರಿಗಳು, ರಾಜಕುಮಾರರು ನೇಮಕಗೊಳ್ಳುತ್ತಿದ್ದರು. ಇದರಿಂದ, ನಾಡುಗಳು ಕೇಂದ್ರದ ಅಧೀನದಲ್ಲಿ ಉಳಿಯುವುದರೊಂದಿಗೆ ಅದರ ನೇರ ಸಂಬಂಧವನ್ನು ಪಡೆದಿರುತ್ತಿದ್ದವು. ಹೀಗಾಗಿ, ರಾಜ್ಯದ ತುಂಬ ಒಂದು ಬಗೆಯ ಜೋಡು ಆಡಳಿತ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದಿತೆಂದು ಹೇಳಬಹುದು.

ಕೇಂದ್ರಾಡಳಿತದಲ್ಲಿ, ರಾಜ ಮತ್ತು ಅವನ ಮಂತ್ರಿ ಮಂಡಲ ಮುಖ್ಯವಾದರೂ, ರಾಜನ ಕೈಯಲ್ಲಿಯೇ ರಾಜ್ಯದ ಸಮಸ್ತ ಸೂತ್ರಗಳಿರುತ್ತಿದ್ದವು. ಅವನ ಮನೋಬಲಗಳ ಮೇಲೆ ದೇಶದ ಕಾರ್ಯಗಳು ರೂಪು ತಳೆಯುತ್ತಿದ್ದವು. ರಾಜನಿಗಾಗಿ ನಮ್ಮ ನಾಡಿನ ಜನ ತೆತ್ತ ಬೆಲೆ ಅಪೂರ್ವವಾದುದಾಗಿದ್ದು, ಅದು ಮಳೆಬೆಳೆಗಿಂತ ದೊಡ್ಡದಾಗಿದೆ.[43] ಆದ್ದರಿಂದಲೇ 'ರಾಜನು ಪ್ರತ್ಯಕ್ಷ ದೇವತೆ ಎನಿಸಿಕೊಂಡನಲ್ಲದೆ, ಅವನ ಚರಿತ್ರೆಯೇ ದೇಶದ ಚರಿತ್ರೆಯಾಯಿತು. ಇದರಿಂದಾಗಿ 'ರಾಜಾಕಾಲಸ್ಯ ಕಾರಣ', 'ದೊರೆಯಂತೆ ಧರೆ' ಮೊದಲಾದ ಆದರ್ಶಸೂಕ್ತಿಗಳು ಹುಟ್ಟಿಕೊಂಡವು. ಇದನ್ನು ಸಾಬೀತುಪಡಿಸಲೋ ಏನೊ, ಅವರೆಲ್ಲ ತಮ್ಮನ್ನು ದೈವೀಪುರುಷರೆಂದು ಕರೆದುಕೊಂಡಿದ್ದಾರಲ್ಲದೆ-ತಮ್ಮ ವಂಶವನ್ನು ಪೌರಾಣಿಕ ಹಿನ್ನೆಲೆಯಲ್ಲಿ ಹೇಳಿಕೊಂಡಿದ್ದಾರೆ. ಉದಾ: ಕದಂಬರು, ಚಾಲುಕ್ಯರು. ಆಳುಪ ರಾಜರು ಹೆಚ್ಚು ಅಧಿಕಾರವನ್ನು ಅನುಭವಿಸುತ್ತಿದ್ದು, ಎತ್ತರದ ಬಿರುದು ಗಳಿಸಿದ ತಮ್ಮ ಪ್ರಭುತ್ವವನ್ನು ಮೆರೆದಿರುವುದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಒಂದನೆ ಆಳುವರಸ, ಒಂದನೆ ಚಿತ್ರವಾಹನ ಮತ್ತು ಮಾರಮ್ಮರನ್ನು ಹೊರತುಪಡಿಸಿ, ಉಳಿದ ಆರಂಭದ

ಕಾಲದ ಅರಸರು ಯಾವುದೇ ಬಿರುದುಗಳನ್ನು ಇಟ್ಟುಕೊಂಡಿರಲಿಲ್ಲ (ಶ್ರೀ ಮತ್ತು ಶ್ರೀಮತು ಎಂಬ ಬಿರುದುಗಳನ್ನು ಬಿಟ್ಟರೆ). ಒಂದನೆ ಆಳುವರಸನು (ಮೂರು ತೂರು ದತ್ತಿ ಶಾಸನದಲ್ಲಿ) ಮಹಾರಾಜ ಬಿರುದನ್ನು, ಒಂದನೆ ಚಿತ್ರವಾಹನನು (ಚಾಲುಕ್ಯ ವಿನಯಾದಿತ್ಯ ಸೊರಬ ದತ್ತಿ ಶಾಸನದಲ್ಲಿ ಉಲ್ಲೇಖ ವಾಗಿದೆ) ಅದೇ ಬಿರುದನ್ನು ಇಟ್ಟುಕೊಂಡಿದ್ದನು. ಮಾರಮ್ಮನು ಅವನ ಶಾಸನಗಳಲ್ಲಿ ಪರಮೋಚ್ಚ ಬಿರುದುಗಳಾದ ಪರಮೇಶ್ವರ ಮತ್ತು ಆದಿರಾಜರಾಜ ಎಂಬ ಬಿರುದುಗಳನ್ನು ಇಟ್ಟುಕೊಂಡಿದ್ದನು. ಆದರೆ, ಮಧ್ಯಯುಗ ಮತ್ತು ಆನಂತರದ ಆಳುಪರು ಸಾರ್ವಬೌಮತ್ವ ಮತ್ತು ಸಾಮ್ರಾಜ್ಯತ್ವ ಬಿರುದುಗಳಾದ ಪಾಂಡ್ಯ– ಮಹಾರಾಜಾಧಿರಾಜ ಮತ್ತು ಪರಮ ಭಟ್ಟಾರಕ ಬಿರುದುಗಳನ್ನು ಇಟ್ಟಿದ್ದರು. ಪ್ರತಿಷ್ಠೆಯ ಬಿರುದುಗಳಾದ ಪಾಂಡ್ಯ ಚಕ್ರವರ್ತಿ, ಮಧ್ಯಯುಗ ಮತ್ತು ನಂತರದ ಆಳುಪರಿಗೆ ವಂಶತ್ವದ ಗುರುತುಗಳಾದವು. ಕವಿ ಆಳುಪೇಂದ್ರನು 'ಪಾಂಡ್ಯಚಕ್ರವರ್ತಿ' ಮತ್ತು ಭುಜಬಲ ಎಂಬ ಬಿರುದನ್ನು ಇಟ್ಟುಕೊಂಡಿದ್ದದು, 1154ರ ಶಾಸನ ಹೇಳುತ್ತದೆ.[44] ನಂತರ ಅವನು ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ ಪರಮಭಟ್ಟಾರಕ, ಪಾಂಡ್ಯ ಚಕ್ರವರ್ತಿ ಮತ್ತು ಭುಜಬಲ[45] ಎಂಬಿತ್ಯಾದಿ ಬಿರುದುಗಳನ್ನು ಇಟ್ಟುಕೊಂಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಈ ಪ್ರದೇಶದಲ್ಲಿ ಹೊಯ್ಸಳ ಮತ್ತು ವಿಜಯನಗರ ಅರಸರ ಆಡಳಿತ ಹೇರಿದರೂ, ಆಳುಪ ರಾಜರು ಇಂತಹ ಸ್ವತಂತ್ರ ಬಿರುದುಗಳನ್ನು ಧರಿಸುವ ಪ್ರವೃತ್ತಿಯನ್ನು ಮುಂದುವರಿಸಿದ್ದರು. ರಾಜನು ಅತ್ಯಂತ ಹೆಚ್ಚು ಪ್ರಭುತ್ವವನ್ನು ಅನುಭವಿಸುತ್ತಿದ್ದು, ಯುದ್ಧದ ಸಮಯದಲ್ಲಿ ಸ್ವತ: ಸೈನ್ಯವನ್ನು ಮುನ್ನಡೆಸುತ್ತಿದ್ದನು.[46] ಆದರೆ, ಜನವಿರೋಧಿ ಸರಕಾರ ರಚಿಸಲು, ಅವನಿಗೆ ಯಾವುದೇ ಅವಕಾಶವಿರಲಿಲ್ಲ. ಜೊತೆಗೆ, ಪ್ರಚಲಿತದಲ್ಲಿರುವ ಪ್ರಭಾವಿ ಸಂಪ್ರದಾಯ, ಕಟ್ಟುಪಾಡುಗಳನ್ನು ನಿರ್ಮೂಲನ ಮಾಡುವುದಕ್ಕೆ ಅವಕಾಶವಿರಲಿಲ್ಲ. ಬದಲಾಗಿ, ಇದ್ದ ಪದ್ದತಿ ಮತ್ತು ಸಂಪ್ರದಾಯಗಳನ್ನು ಹೊಸ ನೀತಿಗಳನ್ನಳವಡಿಸಿ ರಕ್ಷಿಸಬೇಕಿತ್ತು. ಇದು ರಾಜನೊಬ್ಬನ ಕಾರ್ಯವಾಗಿರದೆ, ಉಳಿದ ಆಡಳಿತ ವಿಭಾಗದಲ್ಲಿ ಸಮಾನವಾದ ಹೊಣೆಯಾಗಿತ್ತು. 3ನೇ ಶತಮಾನದ ದತ್ತಾಳುಪೇಂದ್ರ ಶ್ರೀ ಮಾರ್ ವಡ್ಡಮದೇವನ ಮೂಡುಕೇರಿ ಶಾಸನದಲ್ಲಿ ಧರ್ಮವನ್ನು, ಅರಸನು, ನಾಡು ಮತ್ತು ನಖರದವರು ರಕ್ಷಿಸಬೇಕೆಂದು ದಾಖಲಿಸಿದೆ.[47]

ಆಳುಪ ರಾಜರು ಧರಿಸಿರುವ ಬಿರುದುಗಳು ಅವರ ಚಾರಿತ್ರ್ಯ ಮತ್ತು ಆದರ್ಶಗಳನ್ನು ಪ್ರತಿಬಿಂಬಿಸುತ್ತವೆ. ಅವನು 'ರಾಜಗುಣ ಸಂಭೂತನೂ, ಪ್ರಜಾಶೀಲನೂ ಹಾಗೂ ನೀತಿಯುತನೂ ಆಗಿದ್ದನು. ಜನರ ಯೋಗಕ್ಷೇಮವನ್ನು ಪ್ರತ್ಯಕ್ಷವಾಗಿ ವಿಚಾರಿಸಲು, ಅವನು ತನ್ನ ರಾಜ್ಯದಲ್ಲಿ ಆಗಾಗ್ಗೆ ಸಂಚರಿಸಬೇಕೆಂದು ನೀತಿ ಗ್ರಂಥಗಳು ವಿಧಿಸುತ್ತವೆ.[48] ಅರಸ ತನ್ನ ಸಾಮ್ರಾಜ್ಯದ ಹಲವಾರು ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಪ್ರಜೆಗಳೊಂದಿಗೆ ಬೆರೆಯುತ್ತಿದ್ದನು. ಇದರಿಂದ ಜನಸಾಮಾನ್ಯರಿಗೂ ಅವನ ದರ್ಶನ ದೊರೆಯುತ್ತಿತ್ತು. ಸಾಮಾನ್ಯವಾಗಿ, ಅರಸನ ಆಳ್ವಿಕೆಯು ಅನುವಂಶಿಕವಾಗಿದ್ದರೂ, ಕೆಲವು ಸಂದರ್ಭಗಳಲ್ಲಿ ಅದು ಬಲಾಬಲ ವನ್ನವಲಂಬಿಸಿರುವುದಕ್ಕೆ ಉದಾಹರಣೆಗಳಿವೆ. ರಾಜ್ಯದ ಉನ್ನತಿ, ಅವನತಿಗಳಿಗೆ ಚಕ್ರವರ್ತಿಯೇ ಕಾರಣನಾಗಿದ್ದರೂ, ಅವನ ಅರ್ಹತೆಯ ಬಗ್ಗೆ ಎಲ್ಲಿಯೂ ಪ್ರಸ್ತಾಪಗೊಂಡಿಲ್ಲ.





**ಯುವರಾಜ :** ಚಕ್ರವರ್ತಿಯ ನಂತರ ಪ್ರಭುವರ್ಗದಲ್ಲಿ ಕಾಣಿಸಿಕೊಳ್ಳುವ ಮತ್ತೊಬ್ಬ ಉನ್ನತ ವ್ಯಕ್ತಿ ಯುವರಾಜ. ರಾಜನ ಹಿರಿಯ ಮಗನನ್ನು ಸಾಮಾನ್ಯವಾಗಿ, ಯುವರಾಜ ನನ್ನಾಗಿ ಮಾಡಲಾಗುತ್ತಿತ್ತು. ರಾಜನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದಾಗ, ಈ ಸ್ಥಾನವು ಹಿರಿಯ ತಮ್ಮನಿಗೆ ದೊರಕುತ್ತಿತ್ತು. ಮುಂದೆ ರಾಜನ ಹಿರಿಯ ಮಗನು ಪ್ರಾಪ್ತ ವಯಸ್ಕನಾದಾಗ, ತಮ್ಮನನ್ನು ಪಟ್ಟದಿಂದ ಕೆಳಗಿಳಿಸಿ, ಅವನಿಗೆ ಅಧಿಕಾರ ನೀಡಲಾಗುತ್ತಿತ್ತು. ರಾಜನ ಪಟ್ಟಾಭಿಷೇಕದಂತೆ ಯುವರಾಜನ ಪಟ್ಟಾಭಿಷೇಕವೂ ನಡೆಯುತ್ತಿತ್ತು. ಹೀಗೆ ಚಕ್ರವರ್ತಿಯ ಹಿರಿಯ ಮಗ ಅಥವಾ ತಮ್ಮ ಯುವರಾಜ ಪಟ್ಟವನ್ನು ಹೊಂದಬೇಕಾದರೆ ಅವನು ಸಕಲಶಸ್ತ್ರ ಶಾಸ್ತ್ರಗಳಲ್ಲಿ ಪಾರಂಗತನಾಗಿರಬೇಕಾಗಿತ್ತು.

ಚಕ್ರವರ್ತಿಯ ಅಧಿಕಾರಿಯಾದ ಯುವರಾಜನು, ಸಾಮ್ರಾಜ್ಯದ ಬೇರೆ ಬೇರೆ ಭಾಗಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು, ಇವನ ಕೆಳಗೆ ಮಹಾಮಂಡಳೇಶ್ವರರು, ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಶ್ರೇಣಿಯ ಅಧಿಕಾರಿಗಳು ಇರುತ್ತಿದ್ದರು. ಯುವರಾಜರು ತಮ್ಮ ವಿಭಾಗಗಳ ಮಹಾಮಂಡಳೇಶ್ವರ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿರುತ್ತಿದ್ದರಲ್ಲದೆ, ಅವರನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡಿರುತ್ತಿದ್ದರು. ಚಕ್ರವರ್ತಿಯು ವೈರಿಗಳ ವಿರುದ್ಧ ಯುದ್ಧ ಮಾಡಬೇಕಾದ ಪ್ರಸಂಗ ಬಂದರೆ, ಒಮ್ಮೊಮ್ಮೆ ಯುವರಾಜನೊಬ್ಬನೇ ಇಡೀ ಸೈನ್ಯದ ಮುಖಂಡತ್ವವನ್ನು ವಹಿಸುತ್ತಿದ್ದನು.

**ರಾಜಕುಮಾರರು:** ರಾಜರು ಬಹುವಲ್ಲಭರಾಗಿದ್ದರು. ಹೀಗಾಗಿ, ಅನೇಕ ಪುತ್ರರನ್ನು ಪಡೆದಿರುತ್ತಿದ್ದರು. ಪಟ್ಟದ ರಾಣಿಯ ಹಿರಿಯ ಮಗ ಯುವರಾಜನಾದರೆ, ಇತರರು 'ಕುಮಾರ ವೃತ್ತಿ'ಯಿಂದ ಆಳುತ್ತಿದ್ದರು. ರಾಜನು ಇವರಿಗೆ ಸಾಮ್ರಾಜ್ಯದ ಆಯಕಟ್ಟಿನ ಕೆಲವು ಭಾಗಗಳ ಒಡೆತನವನ್ನು ಕೊಡುತ್ತಿದ್ದನು. ಹೀಗೆ ರಾಜಕುಮಾರರಾಗಿ ಆಳುತ್ತಿರುವುದಕ್ಕೆ 'ಕುಮಾರ ವೃತ್ತಿ' ಎಂದು ಕರೆಯಲಾಗುತ್ತಿತ್ತು.

ಹೀಗೆ ರಾಜನ ಮಕ್ಕಳು ರಾಜ್ಯದ ವಿವಿಧ ವಿಭಾಗಗಳಲ್ಲಿ ಆಳುತ್ತಿದ್ದರು. ಅವರಲ್ಲಿ ಕೆಲವರು ಮಹಾಮಂಡಳೇಶ್ವರ, ಮಹಾಸಾಮಂತಾಧಿಪತಿ, ಮಹಾಸಾಮಂತ ಪದವಿಯನ್ನು ಪಡೆದು ರಾಜ್ಯಬಾರ ಮಾಡುತ್ತಿದ್ದರು. ಅವರಿಗೂ ಇತರ ಮಹಾಮಂಡಳೇಶ್ವರರಿಗೂ ವ್ಯತ್ಯಾಸವಿದ್ದಿತು. ಇವರು ರಾಜನ ಮಕ್ಕಳಾದ್ದರಿಂದ ಅವರಿಗಿಂತಲೂ ಇವರ ಸ್ಥಾನಮಾನಗಳು ಉನ್ನತವಾಗಿದ್ದವು.

**ರಾಣಿಯರು:** ರಾಜ ಬಹುಪತ್ನಿಯರನ್ನು ಹೊಂದಿರುವುದು ವೈಭವದ ಸಂಕೇತ ವಾಗಿತ್ತು. ರಾಜಕೀಯ ಭದ್ರತೆಗಾಗಿಯೂ ಚಕ್ರವರ್ತಿಯು, ಇತರ ಸಾಮಂತರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಿದ್ದನು. ರಾಜನು ವಿಧಿಪೂರ್ವಕವಾಗಿಯೋ, ಒತ್ತಾಯ ಪೂರ್ವಕವಾಗಿಯೋ, ಹಲವಾರು ರಾಣಿಯರನ್ನು ಪಡೆಯುತ್ತಿದ್ದನಾದರೂ, ಅವರಿಗೆಲ್ಲ ಸಮಾನ ಹಕ್ಕು ಬಾಧ್ಯತೆಗಳಿರಲಿಲ್ಲ. ರಾಣಿಯರಲ್ಲಿ ಪಿರಿಯರಸಿ, ಪಟ್ಟಮಹಾದೇವಿ ಮತ್ತು ರಾಣಿಯರೆಂಬ ಮೂರು ಗುಂಪುಗಳಿದ್ದುದನ್ನು ಕಾಣುತ್ತೇವೆ. ಪಿರಿಯರಸಿಯು ಹಿರಿಯ ರಾಣಿಯಾಗಿದ್ದು, ಇವಳಿಗೆ, ಮಕ್ಕಳಾದರೆ ಪಿರಿಯರಸಿ ಪಟ್ಟಮಹಾದೇವಿಯೆನಿಸುತ್ತಾಳೆ. ಒಂದು ವೇಳೆ ಮಕ್ಕಳಾಗದಿದ್ದರೆ, ಕೇವಲ ಪಿರಿಯರಸಿಯಾಗಿ ಉಳಿದು, ಮಕ್ಕಳಿದ್ದ ಮುಂದಿನ

ರಾಣಿಯು, ಪಟ್ಟಮಹಾದೇವಿ ಯೆನಿಸಿಕೊಳ್ಳುತ್ತಿದ್ದರು. 'ಪಟ್ಟದ ರಾಣಿ' ಎಂಬುದು ಒಂದು ಪದವಿಯಾಗಿದ್ದು, ಅವಳ ಸ್ಥಾನ ಇತರ ರಾಣಿಯರಿಗಿಂತ ಹಿರಿದಾಗಿತ್ತು. ಅವಳು ರಾಜನೊಂದಿಗೆ ಎಲ್ಲ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದಳು. ಉಳಿದವರು ವೈಭವದ ಜೀವನ ನಡೆಸುತ್ತ ರಾಣಿವಾಸದಲ್ಲಿರುತ್ತಿದ್ದರು. ಕೆಲವರು ಆಡಳಿತ ಕ್ಷೇತ್ರದಲ್ಲಿ ಮಿಂಚಿರುವುದಕ್ಕೆ ಆಧಾರಗಳಿವೆ.

ಆಳುಪ ರಾಜರ ಸಂಬಂಧಿಕರಲ್ಲಿ ಮಹಾರಾಣಿಯ ತಾಯಿ, ಪಟ್ಟದರಸಿ, ಅವನ ಸೋದರಳಿಯಂದಿರು ಮತ್ತು ಮೈದುನರು ಮುಖ್ಯವಾದವರೆಂದು ಶಾಸನಗಳಲ್ಲಿ ದಾಖಲಾಗಿವೆ.[49] ವೀರಪಾಂಡ್ಯ ದೇವ ಆಳುಪೇಂದ್ರನ ಕೊನೆಯ ಕಾಲದಲ್ಲಿ (1250–75), ಅವನ ರಾಣಿ ಬಲ್ಲಮಹಾದೇವಿ, ಆಡಳಿತದಲ್ಲಿ ಭಾಗವಹಿಸಿ ವೀರಪಾಂಡ್ಯನ ಮರಣ ನಂತರ (1275–92) ಉದಯಾದಿತ್ಯರಸ (ಕುಮಾರ) ಕವಿ ಆಳುಪೇಂದ್ರನ ಉದ್ಯಾವರದ ಶಾಸನದಲ್ಲಿ ರಾಜಕುಮಾರನೆಂದು ಉಲ್ಲೇಖಿಸುತ್ತದೆ.[50] ಅವಳೆ ಮಹಾರಾಣಿ ಯಾಗಿ ರಾಜ ಮತ್ತು ಅಧಿಕಾರಿಗಳೊಂದಿಗೆ ಆಸ್ಥಾನದ ಸಭೆಯಲ್ಲಿ ಹಾಜರಾಗುತ್ತಿದ್ದಳು. ಇದರಿಂದ ಅವಳು ಪರಿಣತ ಆಡಳಿತಾಧಿಕಾರಿ ಎಂಬುದು ತಿಳಿಯುತ್ತದೆ. ಅವನದ್ದೇ ಕೋಟೆಕೇರಿ ಶಾಸನ[51] ಮತ್ತು ಹಾಳಾದ ಕದಿರೆ ಶಾಸನವು,[52] ಪಾಂಡ್ಯ ಮಹಾದೇವಿಯು ಪನ್ನೀರ್‌ಪಳ್ಳಿ ಎಂಬ ಗ್ರಾಮದಲ್ಲಿ ಆಡಳಿತ ನಡೆಸುತ್ತಿದ್ದಳೆಂದು ತಿಳಿಸುತ್ತವೆ. ರಾಣಿ ಚಿಕ್ಕಾಯಿ ತಾಯಿ ಸಹ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತ ಜನಹಿತ ಕಾರ್ಯಗಳನ್ನು ಪ್ರೋತ್ಸಾಹಿಸುತ್ತ ಆಡಳಿತ ನಡೆಸಿದ್ದಳು. ಅವಳ ಕಾಲದಲ್ಲಿ ಬಾರಕೂರು ಮತ್ತು ಬೆಣ್ಣೆಕುದ್ರು ನಡುವೆ ಸಂಪರ್ಕ ಏರ್ಪಡಿಸುವ ದೃಷ್ಟಿಯಿಂದ ಸೇತುವೆ ಕಟ್ಟಿದ್ದಳು. ಕೆಲವು ರಾಜಕುಮಾರಿ ಯರು ಸಹ ಬಾರಕೂರಿನ ಆಡಳಿತ ಪ್ರಾಂತಗಳಲ್ಲಿ ಅಧಿಕಾರ ವಹಿಸಿರುವುದು ಬೆಳಕಿಗೆ ಬಂದಿವೆ. ಒಂದನೇ ಕುಲಶೇಖರ (1160–1220)ನ ಮಂಗಳೂರು ಶಾಸನದಲ್ಲಿ,[53] ರಾಜನು ತನ್ನ ಸೋದರಳಿಯನಾದ ಬಂಕಿದೇವನಿಗೆ ಮುಗರು–ನಾಡುವಿನ ಆಡಳಿತ ವಹಿಸಿಕೊಟ್ಟಿದ್ದನು. 1254ರಲ್ಲಿ ವೀರ ಪಾಂಡ್ಯದೇವ–ಆಳುಪೇಂದ್ರನು ಆಳುವಾಗ ಮತ್ತು ಪುನಃ 1281ರಲ್ಲಿ ಅವನ ರಾಣಿ ಬಲ್ಲಮಹಾದೇವಿ ಸಿಂಹಾಸನದಲ್ಲಿದ್ದಾಗ, ಆಳುಪೇಂದ್ರನ ಸೋದರಳಿಯ ಬಂಕಿದೇವ (1285–1315ರಲ್ಲಿ ಅವನೇ ಸ್ವತಂತ್ರವಾಗಿ ಆಳಿದ್ದನು)ನು ಮಂತ್ರಿ ಮಂಡಲದ ಮಂತ್ರಿಗಳೊಂದಿಗೆ ಆಸ್ಥಾನದ ಸಭೆಯಲ್ಲಿ ಹಾಜರಿರುತ್ತಿದ್ದನು. 1261ರ ವೀರಪಾಂಡ್ಯದೇವನ ಶಾಸನ ಹೀಗೆ ದಾಖಲಿಸುತ್ತದೆ.

> **ಸ್ವಸ್ತಿ ಶ್ರೀಮತ್ ಪಿರಿಯರಸಿ ಪಟ್ಟಾ ಮಹಾದೇವಿಯರುಂ,**
> **ಸ್ವಸ್ತಿ ಶ್ರೀಮತ್ ಪಾಂಡ್ಯ ಚಕ್ರವರ್ತಿ, ಅರಿರಾಯ ಗಜಕೇಶರಿ**
> **ವೀರಪಾಂಡ್ಯ ದೇವಾಲ್‌ಪೇಂದ್ರ..... ರಾಜಧಾನಿ ಬಾರಹಕನ್ಯಾ**
> **ಪುರದರಮನೆಯಲು ಸ್ಥಿರ ಸಿಂಹಾಸನ ರೂಢರಾಗಿ ಪೊಡ್ಡೋಲಗಂ**
> **ಗೊತ್ತಿರೆ.....**

ಬಿಟ್ಟಿದೇವಾಳುಪೇಂದ್ರದೇವನ ಚೇರ್ಕಾಡಿ ಶಾಸನದಲ್ಲಿ, ಅವನ ದೊಡ್ಡ ಮಗಳು ರಾಜನೊಂದಿಗೆ ಆಳುತ್ತಿದ್ದಳೆಂದು ಉಲ್ಲೇಖಿಸಿದೆ.[54] ಆಡಳಿತದಲ್ಲಿ ಈ ಎಲ್ಲಾ ವ್ಯಕ್ತಿಗಳ ಭಾಗವಹಿಸುವಿಕೆಯನ್ನು ಪ್ರಸ್ತಾಪಿಸುವಾಗ, ಕೆಲವರು ಸುಮ್ಮನೆ ರಾಜನ ಆಸ್ಥಾನದಲ್ಲಿ





ಹಾಜರಿದ್ದರೆಂದು (ಶ್ರೀ ಪಾದ ಸನ್ನಿದಾನದಲ್ಲೂ), ಇನ್ನು ಕೆಲವರು ಸಿಂಹಾಸನವನ್ನೂ (ಸಹಿತ ಸಿಂಹಾಸನರೂಡರಾಗಿ) ಅಲಂಕರಿಸುತ್ತಿದ್ದರು. ಇದರಿಂದ, ರಾಜನ ಸಂಬಂಧಿಕರು ಆಡಳಿತದಲ್ಲಿ ಸಕ್ರಿಯವಾಗಿ ಪ್ರಮುಖವಾದ ಪಾತ್ರವಹಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

**ಮಂತ್ರಿಮಂಡಲ:** ರಾಜನು ತನ್ನ ವಿಶಾಲವಾದ ಸಾಮ್ರಾಜ್ಯದ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ಮಂತ್ರಿಗಳನ್ನು ನೇಮಿಸಿಕೊಳ್ಳುತ್ತಿದ್ದನು. ಭಾರತದ ಪ್ರಾಚೀನ ನೀತಿಶಾಸ್ತ್ರಜ್ಞರಾದ ಕೌಟಿಲ್ಯ, ಶುಕ್ರ ಮುಂತಾದವರು ಮಂತ್ರಿಗಳ ಮಹತ್ವವನ್ನು ವಿವರಿಸಿದ್ದಾರೆ. ಆದರೆ, ಮಂತ್ರಿಗಳ ಸಂಖ್ಯೆಯಲ್ಲಿ ಯಾವುದೇ ಕಟ್ಟುನಿಟ್ಟಾಗಲಿ, ಏಕಾಭಿಪ್ರಾಯವಾಗಲಿ ಇರಲಿಲ್ಲ. ಮಂತ್ರಿ ಪದವಿಯು, ವಂಶಪರಂಪರೆಯಾಗಿ ಕೊಡಲ್ಪಡುತ್ತಿದ್ದರೂ, ಅರ್ಹತೆ ಯನ್ನು ರಾಜನು ಗಮನಿಸುತ್ತಿದ್ದನು. ಆಳುಪರ ಶಾಸನಗಳಲ್ಲಿಯೂ, ಮಂತ್ರಿ ಮಂಡಲದ ಹುದ್ದೆಯಲ್ಲಿರುವ ಮಂತ್ರಿಗಳು, ಸಾಮ್ರಾಜ್ಯದ ಆಡಳಿತದ ವಿಚಾರವಾಗಿ, ಅರಸನಿಗೆ ಸಹಕರಿಸುವುದರ ಬಗ್ಗೆಯೂ ವಿವರಣೆಗಳಿವೆ. ಈ ಎಲ್ಲಾ ಮಂತ್ರಿಗಳನ್ನು ಶಾಸನಗಳಲ್ಲಿ ಪ್ರಧಾನರೆಂದು ಸಂಭೋದಿಸಲಾಗಿದೆ. ಆದರೆ, ಮಂತ್ರಿ ಮಂಡಲವು ಎಷ್ಟು ಮಂತ್ರಿಗಳಿಂದ ತುಂಬಿತ್ತು ಎಂದು ಹೇಳಲು ಆಧಾರಗಳು ಅಲಭ್ಯ. ಟಿ.ವಿ. ಮಹಾಲಿಂಗಂರವರ ಅಭಿಪ್ರಾಯದಂತೆ, ಅನಾದಿಕಾಲದಿಂದಲೂ ದಕ್ಷಿಣ ಭಾರತದುದ್ದಗಲಕ್ಕೂ ಮಂತ್ರಿ ಮಂಡಲದ ಇರುವಿಕೆಯು ನಿರಾತಂಕವಾಗಿದ್ದರೂ, ಅದು ಇಂತಿಷ್ಟೆ ಮಂತ್ರಿಗಳಿಂದ ಕೂಡಿತ್ತು, ಪ್ರತಿಯೊಬ್ಬ ಮಂತ್ರಿಯು ಆಡಳಿತದಲ್ಲಿ ಇಂತಹದೆ ಹುದ್ದೆಯನ್ನು ಅಲಂಕರಿಸಿದ್ದನು, ಅಥವಾ ಒಂದು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದನೋ, ಇಲ್ಲಾ ಕೆಲವು ವಿಭಾಗಗಳಿಗೆ ಮೇಲ್ವಿಚಾರಕ ನಾಗಿದ್ದನೊ ಎಂಬುದನ್ನು ಸರಳೀಕರಿಸಿ ಹೇಳುವುದು ಅಸಾಧ್ಯ.[55]

ಆಳುಪರ ಶಾಸನಗಳಲ್ಲಿ ಕೇಂದ್ರ ಆಡಳಿತದ ಅಧಿಕಾರಿ ವರ್ಗ ಮತ್ತು ರಾಜನೊಂದಿಗೆ ಆಸ್ಥಾನ ಸಭೆಯಲ್ಲಿ ಪಾಲ್ಗೊಳ್ಳುವ ವಿಶೇಷ ಅಧಿಕಾರಿಗಳ ಹೆಸರನ್ನು ದಾಖಲಿಸಲಾಗಿವೆ. ಈ ಎಲ್ಲಾ ಅಧಿಕಾರಿಗಳ ಅಧಿಕಾರ ಮತ್ತು ಅವರ ಮಿತಿಯನ್ನು ನಿರ್ದಿಷ್ಟವಾಗಿ ಹೇಳಲು ಅಸಾಧ್ಯ. ಸಾಮಾನ್ಯವಾಗಿ, ರಾಜನು ಸ್ವ–ಇಚ್ಛೆಯಿಂದ ಎಲ್ಲಾ ಸಭೆಗಳನ್ನು ತನ್ನ ಮಂತ್ರಿತ್ರಯ ರೊಂದಿಗೆ ಹಾಜರಾಗುತ್ತಿದ್ದನೆಂದು ಶಾಸನಗಳು ಉಲ್ಲೇಖಿಸುತ್ತವೆ. ರಾಜ, ಮಹಾಪ್ರಧಾನ, ಪ್ರಧಾನ, ದಂಡನಾಯಕ, ಸಾಮಂತ ಪ್ರಧಾನರು, ಅಧಿಕಾರಿಗಳು, ಹೆಗ್ಗಡೆಯರು, ಪುರೋಹಿತರು ಮತ್ತು ಬಾಹತ್ತರ ನಿಯೋಗಿಗಳು–ಒಟ್ಟಾಗಿ ಕೇಂದ್ರಾಡಳಿತದ ಮುಖ್ಯ ಸೂತ್ರದಾರಿಗಳು. ಅವರ ಕಾರ್ಯ ವೈಖರಿಗಳು ದಕ್ಷಿಣ ಭಾರತದ ಉಳಿದ ಭಾಗದಲ್ಲಿರುವ ಹಾಗೆ, ಹೆಚ್ಚು ಕಡಿಮೆ ಒಂದೇ ಇರುವುದರಿಂದ, ಅದಕ್ಕೆ ಹೆಚ್ಚು ಒತ್ತು ಕೊಡುವ ಅಗತ್ಯವಿಲ್ಲ. ಮಂತ್ರಿಮಂಡಲದ ಉನ್ನತ ಸ್ಥಾನವನ್ನು ಮಂತ್ರಿಗಳು ಅಲಂಕರಿಸುತ್ತಿದ್ದು, ಅವರನ್ನು ಪ್ರಧಾನರು ಎಂದು ಕರೆಯಲಾಗುತ್ತಿತ್ತು. ಅವರಲ್ಲೊಬ್ಬ ಮಹಾಪ್ರಧಾನ. ಹೆಸರೇ ಸೂಚಿಸುವಂತೆ, ಅವನು ಮಂತ್ರಿ ಮಂಡಲಕ್ಕೆ ಮುಖ್ಯ ಮಂತ್ರಿಯಾಗಿರುತ್ತಾನೆ. ಸಭೆಯಲ್ಲಿ ಹಾಜರಿರುವ ಮಂತ್ರಿಗಳನ್ನು ಸಮಸ್ತ (ಸಕಲ) ಪ್ರಧಾನರು ಎಂದು ಕರೆಯಲಾಗುತ್ತಿತ್ತು. ಮಂತ್ರಿಗಳ ಸಂಖ್ಯೆಯು ಸಾಂಪ್ರದಾಯಿಕವಾಗಿ ಅಥವಾ ರಾಜನ ನಿರ್ಧಾರದಂತೆ ನಿರ್ಧರಿಸುತ್ತಿದ್ದರೆ[56] ಎನ್ನುವುದು ಸ್ಪಷ್ಟವಾಗಿಲ್ಲದಿದ್ದರೂ, 1288ರ ಬಲ್ಲಮಾದೇವಿಯ ಕಚ್ಚೂರು ಶಾಸನವು, ಮಂತ್ರಿ ಮಂಡಲದ ವಿಚಾರವನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ನಿಡುಂಬುರಾಯನು,

ಶಂಕರಭಟ್ಟನಿಗೆ ತೋಟವನ್ನು ದಾನ ಮಾಡಿ, ಅದರಿಂದ ಬರುವ ಆದಾಯದಲ್ಲಿ 5 ಹಾನೆ ಅಕ್ಕಿಯನ್ನು ಸಂಕ್ರಮಣ ಮಾಸದಂದು, ಶಂಕರಭಟ್ಟನು ಮಾರ್ಕಾಡೇಶ್ವರ ದೇವರಿಗೆ ಕೊಡಲು ಅನುಕೂಲ ಮಾಡಿಕೊಟ್ಟ ದತ್ತಿಯನ್ನು ರಾಣಿಯು ಗೌರವಿಸುವುದನ್ನು ಹೇಳುತ್ತದೆ. ಅಲ್ಲದೆ, ಬಾರಹಕನ್ಯಾಪುರದಲ್ಲಿ, ರಾಣಿಯು ಈ ದತ್ತಿಗೆ, ಅನುಮತಿ ನೀಡುವಾಗ 5 ಪ್ರಧಾನರು ಹಾಜರಿದ್ದರು ಎಂದು ಶಾಸನ ತಿಳಿಸುತ್ತದೆ. ಇದರಿಂದ, ರಾಣಿಯ ಮಂತ್ರಿ ಮಂಡಲವು 5 ಪ್ರಧಾನರುಗಳಿಂದ ಕೂಡಿತ್ತು ಎಂದು ಹೇಳಬಹುದು. ಸೋಯಿ ದೇವರಸನ 1331ರ ಶಿರಾಲಿ ಶಾಸನವು,[57] ವೈಜಪ್ಪ ಸಾಹನಿಯ ಮಂತ್ರಿ ಮಂಡಲ ಮತ್ತು ಅಜನ್ನ ಆಡಳಿತದ ಬಗ್ಗೆ ತಿಳಿಸುತ್ತದೆ. 1334ರ ಶಾಸನವು, ಅಜನ್ನ ಸಾಹನಿಯ ಮಂತ್ರಿ ಮಂಡಲ ಮತ್ತು ಅಜನ್ನ ಆಡಳಿತದ ಬಗ್ಗೆ ತಿಳಿಸುತ್ತದೆ. 1334ರ ಶಾಸನವು[58] ಕೂಡ, ಅಜನ್ನ-ಸಾಹನಿಯ ಮಂತ್ರಿ ಮಂಡಲದ ಬಗ್ಗೆ ಹೇಳುತ್ತದೆ. ಮೇಲೆ ಹೇಳಿದ ಈ ಎಲ್ಲಾ ನಿದರ್ಶನಗಳು, ವಿಧಿ ಪ್ರಕಾರವಾದ ಮಂತ್ರಿಮಂಡಲ ಇಡೀ ಸಾಮ್ರಾಜ್ಯದಲ್ಲಿ ಇರುವುದನ್ನು ಸೂಚಿಸುವುದಲ್ಲದೆ, ಮಹಾಪ್ರಧಾನ ಮತ್ತು ಅಧಿಕಾರಿಗಳು ಆಡಳಿತದ ಮುಖ್ಯ ಸೂತ್ರದಾರರು ಎಂಬುದಕ್ಕೆ ಸಂದೇಹವೇ ಇಲ್ಲ. ಅದರಲ್ಲಿ ಪಂಚ ಪ್ರಧಾನರು ಅಥವಾ ಐದು ಮಂತ್ರಿ ಮಂಡಲದ ಮುಖ್ಯಮಂತ್ರಿಗೆ ಅನ್ವಯಿಸುತ್ತಿದ್ದು, ಈ ಅಧಿಕಾರಿಗಳು, ಮಧ್ಯಯುಗ ಮತ್ತು ಆನಂತರದ ಶಾಸನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ.

ರಾಜನ ನಂತರ ಆಸ್ಥಾನದಲ್ಲಿ ಮಹಾಪ್ರಧಾನ, ಗೌರವದ ಸ್ಥಾನವನ್ನು ಅಲಂಕರಿಸುತ್ತಾನೆ. ಹಲವಾರು ಶಾಸನಗಳು, ಈ ಅಧಿಕಾರಿಯ ಬಗ್ಗೆ ಉಲ್ಲೇಖಿಸುತ್ತವೆ. ಕಟ್ಟುಪಾಡಿ ಬಂಕಿದೇವ ಆಳುಪನ ಶಾಸನವು, ಮಹಾಪ್ರಧಾನ ನರಸಿಂಹ ಹೆಗ್ಗಡೆಯ ಬಗ್ಗೆ ವಿವರಣೆ ನೀಡುತ್ತದೆ.[59] ಕಾರ್ಕಳ ತಾಲೂಕಿನ ಬೆಳುವಾಯಿಯಲ್ಲಿ ದೊರೆತ 12ನೇ ಶತಮಾನದ ಶಾಸನ, ಕಾಂತೇಶ್ವರ ದೇವರಿಗೆ ಪಾಂಡ್ಯದೇವನ ಆಳ್ವಿಕೆಯ ಕಾಲದಲ್ಲಿ, ಮಹಾಪ್ರಧಾನ ಅರಸ-ಹೆಗ್ಗಡೆ ಬಿಟ್ಟುಕೊಟ್ಟ ದಾನದ ಬಗ್ಗೆ ತಿಳಿಸುತ್ತದೆ.[60] ಚಿಕ್ಕಾಯಿ ತಾಯಿಯ ಆಳ್ವಿಕೆಯ ಕಾಲದಲ್ಲಿ ವೈಜಪ್ಪನು ಮಹಾಪ್ರಧಾನನಾಗಿಯೂ, ದಂಡನಾಯಕನಾಗಿಯೂ (ದಣ್ಣಾಯಕ) ಕಾರ್ಯನಿರ್ವಹಿಸುತ್ತಿದ್ದನು.[61] ಸಾಮಾನ್ಯ ವಾಗಿ, ಮಹಾಪ್ರಧಾನನು ಮಂತ್ರಿಮಂಡಲಕ್ಕೆ ಪ್ರಧಾನನಾಗಿರುತ್ತಾನೆ. ಜೊತೆಗೆ, ಇಡೀ ರಾಜ್ಯದ ಅಧಿಕಾರಿ ವರ್ಗ ಶಾಸನ ಸಭೆಯ ಮುಖ್ಯಸ್ಥನಾಗಿದ್ದನೆಂದರೂ ತಪ್ಪಾಗದು. ಇದಕ್ಕೆ ಪೂರಕವಾಗಿ, 1281ರ ಬಲ್ಲಮಹಾದೇವಿಯ ಶಾಸನವು, ಇಬ್ಬರು ಮಹಾಪ್ರಧಾನಿ ಗಳು ಆಸ್ಥಾನದಲ್ಲಿರುವುದನ್ನು ತಿಳಿಸುತ್ತದೆ.[62] ಅವರು – ಮಹಾಪ್ರಧಾನ ಸೋಮಣ್ಣ ಸೇನಬೋವ ಮತ್ತು ಮಹಾಪ್ರಧಾನ ಪೆರುಣ ಸೇನಭೋವ. ಇನ್ನೊಂದು ಶಾಸನದಲ್ಲಿ[63] ಮಹಾಪ್ರಧಾನನು ಪ್ರಧಾನಮಂತ್ರಿ ಮತ್ತು ಮಹಾಪ್ರಧಾನಿಯ ಕರ್ತವ್ಯವನ್ನು ಪ್ರತ್ಯೇಕವಾಗಿ ಹೆಸರಿಸುತ್ತದೆ.

ಆಸ್ಥಾನ ಸಭೆಯಲ್ಲಿ ರಾಜನ ಇರುವಿಕೆಯನ್ನು ಒಡ್ಡೋಲಗ[64] ಎಂದು ಕರೆಯಲಾಗುತ್ತಿತ್ತು (ಬಾರಹ ಕನ್ಯಾಪುರದ ಮನೆಯಲೂ ಸ್ಥಿರ ಸಿಂಹಾಸನರೂಢರಾಗಿ ಒಡ್ಡೋಲಗಂಗೊತ್ತಿರಲೂ). ಶಾಸನಗಳಲ್ಲಿ, ಬಾರಕೂರು ಸಿಂಹಾಸನದ ಬಗ್ಗೆ ಉಲ್ಲೇಖಿಸುವಾಗ, ಸ್ಥಿರಸಿಂಹಾಸನ-ಶಾಶ್ವತ ಅರಮನೆ ಎಂದು ದಾಖಲಾಗುತ್ತಿತ್ತು.[65] ಇದರಿಂದ, ಬಾರಕೂರಿನ





ಅರಮನೆಯಿಂದ ಆಳುತ್ತಿದ್ದ ಆಳುಪ ರಾಜರೊಂದಿಗೆ, ಮಂಗಳಾಪುರದಲ್ಲೂ ರಾಜ್ಯಾಂಗದ ರಾಜಕೀಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರೂ ಕೂಡ, ಬಾರಕೂರು ಪ್ರಾಯಶ: ಶಾಶ್ವತ ಆಡಳಿತ ಕೇಂದ್ರವಾಗಿದ್ದಿರಬೇಕು. ಆದ್ದರಿಂದ, ಬಾರಕೂರಿನಲ್ಲಿ ಕೇಂದ್ರ ಸರಕಾರದ ರಚನೆಯನ್ನು ತಿಳಿದುಕೊಳ್ಳುವುದರಿಂದ, ಅರಸೊತ್ತಿಗೆ ವ್ಯವಸ್ಥೆ ಇದ್ದರೂ ಕೂಡ, ಆಡಳಿತವು ಒಂದು ನಿರ್ದಿಷ್ಟ ಅಧಿಪತಿಯ ನಿರ್ಧಾರದ ಮೇಲೆ ನಿಂತಿರುವುದಿಲ್ಲ ಎಂದು ತಿಳಿದು ಬರುತ್ತದೆ. ಆಡಳಿತ ವ್ಯವಹಾರದಲ್ಲಿ ರಾಜನಿಗೆ ಅನೇಕ ಅಧಿಕಾರಿಗಳು ಸಹಕರಿಸುವುದರ ಜೊತೆಗೆ, ಸಲಹೆ ನೀಡುತ್ತಿದ್ದರು. ಕೇಂದ್ರಾಡಳಿತ ಅಧಿಕಾರಿಗಳಲ್ಲದೆ, ಪುರಸಭೆಯ ಸದಸ್ಯರನ್ನು ರಾಜನು ಕೆಲವು ಬಾರಿ ಭೇಟಿ ಮಾಡಿ ಆಡಳಿತದ ವಿಚಾರ ಸಲಹೆಯನ್ನು ನಿರೀಕ್ಷಿಸುತ್ತಿದ್ದನು. ಉದಾಹರಣೆ: ದತ್ತಾಳುಪೇಂದ್ರ ಶ್ರೀಮಾರವಡ್ಡಮದೇವನು ಒಂದು ದತ್ತಿಯನ್ನು ನೀಡುವಾಗ, ರಾಜನು ಹಲರು ಮತ್ತು ನಖರರನ್ನೊಡಗೂಡಿ ನಿರ್ಣಯ ತೆಗೆದುಕೊಂಡನು.[66]

ರಾಜನ ಆಸ್ಥಾನವನ್ನು ಮೊಗಸಾಲೆ ಎಂದು ಕರೆಯುತ್ತಿದ್ದು, ರಾಜ್ಯದ ಎಲ್ಲಾ ಪ್ರಾಂತಗಳಿಂದಲೂ ಮಂತ್ರಿಗಳನ್ನು ಒಳಗೊಂಡಿತ್ತು. ಅವರನ್ನು ಸಾಮಂತ ಪ್ರಧಾನರು ಮತ್ತು ನಾಡ-ಸಮಸ್ತ-ಪ್ರಧಾನರು ಎಂದು ನಾಮಾಂಕಿಸಲಾಗಿತ್ತು. ಸಾಮಂತ ಪ್ರಧಾನರು ಆಯಾಯ ಭಾಗಗಳಿಗೆ ತಾವೇ ಅರಸರಾಗಿದ್ದು, ಆಳುಪ ನ್ಯಾಯಾಲಯದಲ್ಲಿ ಅವರು ಅವರವರ ರಾಜ್ಯವನ್ನು ಪ್ರತಿನಿಧಿಸುತ್ತಿದ್ದರು (ಸಾಮಂತ-ವಿಧೇಯ ರಾಜ ಪ್ರತಿನಿಧಿ). ಅವರನ್ನು ಹೆಗ್ಗಡೆಯರು (ಪೆರ್ಗಡೆ), ಬಲ್ಲಾಳರು, ಅಧಿಕಾರಿಗಳು, ಮಧ್ಯಸ್ಥರು, ಸೇನಭೋವರು, ಇನ್ನಿತರ ನಾಡ ಸಮಸ್ತ ಪ್ರಧಾನರು ಎಂದು ಹೆಸರಿಸಲಾಗಿತ್ತು.

ರಾಜನ ಆಸ್ಥಾನದಲ್ಲಿ ಹಾಜರಿರುವ ಒಂದು ಮುಖ್ಯವಾದ ಮಂತ್ರಿ ವರ್ಗವನ್ನು, ದೇಶೀ ಪುರುಷರೆಂದು ಕರೆಯುತ್ತಾರೆ. 'ದೇಶೀ' ಅಂದರೆ-ಸಲಹೆ, 'ಮಾರ್ಗದರ್ಶನ' ಮತ್ತು 'ದೇಶೀಕ' ಎಂದರೆ 'ಆಧ್ಯಾತ್ಮಿಕ' ಅಥವಾ 'ಧಾರ್ಮಿಕ ಗುರು' ಎಂದರ್ಥ. ಆದ್ದರಿಂದ, ಶಾಸನಗಳಲ್ಲಿರುವ 'ದೇಶೀಪುರುಷರು' ಧಾರ್ಮಿಕ ಗುರುಗಳಾಗಿದ್ದು, ಆಡಳಿತದ ವಿಚಾರವಾಗಿ, ರಾಜರಿಗೆ ಕಾಲಕಾಲಕ್ಕೆ ಸಲಹೆ ನೀಡುವವರಾಗಿರುತ್ತಿದ್ದರು. ಸಾಂಪ್ರದಾಯಿಕ ಅರಮನೆಯ 70 ವಿಭಾಗಗಳನ್ನು ಶಾಸನಗಳಲ್ಲಿ, ಬಾಹತ್ತರ ನಿಯೋಗಿಗಳೆಂದೂ ಕರೆಯಲಾಗಿದೆ. ನಿಯೋಗಿ ಎಂಬ ಪದ ದೂತ ಎನ್ನುವ ಅರ್ಥದಲ್ಲಿ ಶಾಸನಗಳಲ್ಲಿರುವುದರಿಂದ, ಇದು ಅಂಥ ಎಪ್ಪತ್ತೆರಡು ನಿಯೋಗಿಗಳ ನಿಯಂತ್ರಣಾಧಿಕಾರ ಹೊಂದಿದ ಶಾಖೆಯಾಗಿರಬೇಕೆಂದು ತಿಳಿಯಬಹುದು. 'ಶಾಸನ ಶಬ್ಧಕೋಶಮು' ಬಾಹತ್ತರ ನಿಯೋಗದ ಎಪ್ಪತ್ತೆರಡು ಜನರನ್ನು ಪಟ್ಟಿ ಮಾಡಿದೆ.[67] ಆ ಪಟ್ಟಿಯು ಗುರು, ಪ್ರಧಾನ, ಸಾಮಂತರಂತಹ ಉನ್ನತಾಧಿಕಾರಿಗಳಿಂದ ಹಿಡಿದು ಕಲೆಗಾರರು, ರಾಜನ ಸೇವಕರು ಮುಂತಾದವರನ್ನೆಲ್ಲಾ ಒಳಗೊಂಡಿದೆ. ಇತಿಹಾಸಕಾರರಾದ ಸಾಲೆತ್ತೂರ್, ಡೆರೆಟ್, ಎ.ವಿ. ನರಸಿಂಹಮೂರ್ತಿ, ಕೆ.ವಿ. ರಮೇಶ ಮೊದಲಾದವರು ಉನ್ನತ ಅಧಿಕಾರ ಶಾಖೆಯಾದ ಬಾಹತ್ತರ ನಿಯೋಗವನ್ನು ಹೆಚ್ಚಿನ ಅಧಿಕಾರ, ಬಹಳ ಅಧಿಕಾರ ಎಂಬರ್ಥದಲ್ಲಿ ಗ್ರಹಿಸಿದ್ದಾರೆ.[68] (ಈ ಅಭಿಪ್ರಾಯವನ್ನು ಶಾಸನಗಳೂ ಬಲವಾಗಿ ಶ್ರುತಪಡಿಸುತ್ತವೆ). ಆಸ್ಥಾನದ ಸಭೆಯಲ್ಲಿ ಹಾಜರಿರುವ ಇನ್ನುಳಿದವರು (ಆಸ್ಥಾನದ) ನ್ಯಾಯಾಂಗ ಪುರೋಹಿತರು (ಪುರೋಹಿತರು) ಮತ್ತು ಋಷಿಗಳು.

ವೀರ–ಪಾಂಡ್ಯ ದೇವ ಆಳುಪೇಂದ್ರನ ಆಸ್ಥಾನವು ಅಳಿಯ ಭಂಕಿದೇವ, ಮೈದುನ ಒಡ್ಡ ಮಾದೇವ, ಬಲವರ್ಗಡೆ, ಮಂತ್ರಿಗಳು ಮತ್ತು ಪುರೋಹಿತರನ್ನೊಳ ಗೊಂಡಿತ್ತು.[69] ಇನ್ನೊಂದು ಶಾಸನದಲ್ಲಿ ಸೋಯಿದೇವ ಆಳುಪೇಂದ್ರನ ಆಸ್ಥಾನವು–ದತ್ತಾಳುವರ ಬಳಿಯ ಬಂಕಿದೇವರಸ, ಸಾಮಂತ–ಪ್ರಧಾನರು, ದೇಶೀಪುರುಷರು, ಎರಡು ಕೋಲ ಬಳಿಗಳು, ಬಾಹತ್ತರ–ನಿಯೋಗಿಗಳು ಮತ್ತು ಇನ್ನಿತರರನ್ನು ಒಳಗೊಂಡಿತ್ತು ಎಂದು ತಿಳಿಸುತ್ತದೆ.[70] ಬಲ್ಲಮಹಾದೇವಿಯ ಆಸ್ಥಾನ ಸಭೆಯು, ಕೆಲವು ಮುಖ್ಯ ವ್ಯಕ್ತಿಗಳನ್ನು ಒಳಗೊಂಡಿತ್ತು–ದತ್ತಾಳುವರ ಬಳಿಯ ಬಂಕಿದೇವ, ಉಡುಪರ (ಉದುವರ–ಉದ್ಯಾವರ?)–ಬಳಿಯ ನರಸಿಂಹ ಹೆಗ್ಗಡೆ, ಮಹಾಪ್ರಧಾನ ಸೋಮಣ್ಣ ಸೇನಭೋವ, ಬಮ್ಮು–ಸೇನಭೋವ, ಕುಮಾರ ಬಿಜ್ಜಮನ–ಅರಸ, ಮಹಾಪ್ರಧಾನ ಪೆರುಣ–ಸೇನಭೋವ, ದೇಶೀ ಪುರುಷರು ಇತ್ಯಾದಿ.[71] ಪುರೋಹಿತರ ಇರುವಿಕೆಯಲ್ಲಿ, ಆಡಳಿತಕ್ಕೆ ಧರ್ಮ ಸಂಬಂಧವನ್ನು ಕಲ್ಪಿಸಲಾಗುತ್ತಿತ್ತು. ಆದರೆ, ರಾಜನು ಎಲ್ಲಾ ಧರ್ಮಗಳಿಗೂ, ಪಂಥಗಳಿಗೂ ಏಕಪ್ರಕಾರ ಪ್ರೋತ್ಸಾಹ ನೀಡುತ್ತಿದ್ದನು.

ಸಾಕಷ್ಟು ಪ್ರಚಾರ ಪಡೆದು ಸಕ್ರಿಯವಾಗಿ ಆಡಳಿತದಲ್ಲಿ ತೊಡಗಿಸಿಕೊಂಡಿರುವ ಇನ್ನೊಂದು ಹುದ್ದೆ ಅಧಿಕಾರಿ. ಅವನು ಆಡಳಿತದ ಒಂದು ವಿಭಾಗದ ಹೊಣೆಯನ್ನು ಹೊತ್ತುಕೊಳ್ಳುತ್ತಿದ್ದನು. ಆಳುಪ ಶಾಸನಗಳು ಈ ಬಗ್ಗೆ, ಆಗಾಗ್ಗೆ ಆಸ್ಥಾನ ಸಭೆಯನ್ನು ಅಲಂಕರಿಸುವ ಎರಡು ಮುಖ್ಯ ವಿಭಾಗಗಳ ಬಗ್ಗೆ ಪ್ರಸ್ತಾಪಿಸುತ್ತವೆ. ಅವುಗಳು ಕೋಲಬಳಿಗಳು (ಎರಡು ಕೋಲಬಳಿ)[72] ಮತ್ತು 72 ನಿಯೋಗಿಗಳು (ಬಾಹತ್ತರ ನಿಯೋಗಿಗಳು).[73] ಕೋಲ ಬಳಿಗಳು ಎರಡು ವಿಭಾಗಗಳ ಸೈನಿಕ ದಳವನ್ನು ಪ್ರತಿನಿಧಿಸುತ್ತವೆ. ಅವರು ಕೋಲುಗಳನ್ನು ಹಿಡಿದು, ಯುದ್ಧರಂಗದಲ್ಲಿ ಸೆಣಸಾಡಲು ಪ್ರಾವೀಣ್ಯತೆಯನ್ನು ಪಡೆದಿರುತ್ತಾರೆ. ಮಧ್ಯಯುಗದ ಆಳುಪರ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ಎರಡು–ಕೋಲ ಬಳಿಯವರು ರಾಜನ ಆಸ್ಥಾನ ಸಭೆಯಲ್ಲಿ ಭಾಗವಹಿಸುತ್ತಿರುವುದು ತಿಳಿದುಬರುತ್ತದೆ. 1324–25ರ ವೀರಸೋಯಿದೇವ ಆಳುಪೇಂದ್ರನ ಪಾದೇಬೆಟ್ಟು ಶಾಸನವು,[74] ಹತ್ತು ಕೋಲಬಳಿಯ ಹಲರು ಎಂದು ಹೇಳುತ್ತದೆ. ಕೋಲು ಎಂದರೆ ಬಾಣ[75] ಮತ್ತು ಸೈನಿಕರಿಗೆ ಸಂಬಂಧಿಸಿದ ಒಂದು ವ್ಯಾಯಾಮ.[76] ಬಳಿ ಎಂದರೆ 'ವಂಶ', ಸಮೂಹ, ರಕ್ತಸಂಬಂಧ, (Lineage) ಇತ್ಯಾದಿ. ಕೋಲಬಳಿ ಎಂದರೆ, ಸೈನಿಕ ವಿಭಾಗ ಅಥವಾ ಸೈನ್ಯದ ಒಂದು ತುಕ್ಕಡಿ ಎಂದರ್ಥ. ಎರಡು ಮತ್ತು ಹತ್ತು ಸೈನ್ಯ ತುಕ್ಕಡಿಯ ಸಂಖ್ಯೆ ಇರಬಹುದು. ಅಥವಾ ಸೈನ್ಯದ ಮುಖಂಡರ ಸಂಖ್ಯೆಯಾಗಿದ್ದು, ಅವರೆ ಮಾಡಿಕೊಂಡ ಸೈನಿಕ ಮಂಡಳಿಯಾಗಿದ್ದು, ಅದರ ಸದಸ್ಯರು ರಾಜನ ಸಭೆಗೆ ಹಾಜರಾಗುವವರಾಗಿರಬಹುದು. ಸೈನಿಕ ಸಂಘಟನೆ ಯೊಂದಿಗೆ ಕೋಲಬಳಿ ಸಂಘಟನೆಯ ಸಂಬಂಧವನ್ನು, ತಮ್ಮ ಸಮಸ್ತ ಎರಡು–ಕೋಲ–ಬಳಿ ವೀರ ಪರಿವಾರ ಸಹವಾಗಿ ದಂಡೆತ್ತಿ ಹೋದಲ್ಲಿ' ಎಂಬ ಉಕ್ತಿಗಳು ನಗಿರೆ ಮತ್ತು ಹಾಡುವಳ್ಳಿ ರಾಜರ ಶಾಸನಗಳಲ್ಲಿ ಕಂಡು ಬಂದಿರುವುದು ಮತ್ತಷ್ಟು ಶ್ರುತಪಡಿಸುತ್ತದೆ. ಬಹತ್ತರ ನಿಯೋಗಿಗಳು ಪ್ರಾಯಶಃ 70 ವರ್ಗದ ಜನರನ್ನು ಪ್ರತಿನಿಧಿಸುವ ಸೈನ್ಯವಾಗಿದ್ದಿರಬಹುದು. ಆದರೆ, ಶಾಸನಗಳಲ್ಲಿ ಉಲ್ಲೇಖಿಸುವ ಈ ಸಂಖ್ಯೆಗಳು ನಿಜವಾಗಿ ಪ್ರಚಲಿತದಲ್ಲಿದ್ದವೋ, ಅಥವಾ ರಿವಾಜಿಗಾಗಿ ಮಾತ್ರ ಸೇವೆ ಯಲ್ಲಿದ್ದವೊ ಎಂಬುದು





ಅಸ್ಪಷ್ಟ (ಕರ್ನಾಟಕದ ಉಳಿದ ಭಾಗಗಳ ಶಾಸನಗಳಲ್ಲಿ ಈ ಬಹತ್ತರ ನಿಯೋಗಿಗಳ ಬಗ್ಗೆ ದಾಖಲೆಗಳಿವೆ). ಬಾಹುಬಲಿಯ ಧರ್ಮನಾಥ ಪುರಾಣದಲ್ಲಿ, ಬಹತ್ತರ ನಿಯೋಗಿ ಪದದ ಪೂರ್ಣ ಅರ್ಥ ಲಭ್ಯವಿದೆ. ಅಲ್ಲಿರುವ ಕಥೆಯ ಪ್ರಕಾರ ರಾಜನ ಮಗಳನ್ನು ಮದುವೆ ಮಾಡಿ, ಗಂಡನ ಮನೆಗೆ ಕಳುಹಿಸುವಾಗ ಬಹತ್ತರ–ನಿಯೋಗಿಗಳಾದ ಬೀಸಣಿಗೆ ಹಿಡಿಯುವವರು (ಬಿಸಣಿಕೆಕಾರರು), ವೀಳ್ಯದೆಲೆ ತಟ್ಟೆ ಹಿಡಿಯುವವರು, ಕೈಗನ್ನಡಿಯನ್ನು ಹಿಡಿಯುವವರು ಇತ್ಯಾದಿಯವರನ್ನು ರಾಜ ನೇಮಿಸಿ ಮಗಳೊಂದಿಗೆ ಬಳುವಳಿಯಾಗಿ ಕಳುಹಿಸಿದನು ಎಂದು ಕಥೆ ಹೇಳುತ್ತದೆ. ಆಳುಪರ ಆಸ್ಥಾನದ ಕಾರ್ಯಭಾರದಲ್ಲಿ ಈ ಎಲ್ಲಾ ಅಧಿಕಾರಿಗಳು ಸಕ್ರೀಯವಾಗಿರುವುದನ್ನು ಸ್ಪಷ್ಟವಾಗಿ ಹೇಳುತ್ತದೆ.

ಶಾಸನಗಳಲ್ಲಿ ಕಂಡು ಬರುವ ಅಧಿಕಾರಿ ವರ್ಗವಲ್ಲದೆ, ಕೆಳವರ್ಗದ ಅಧಿಕಾರಿಗಳು ಸಹ ರಾಜನ ಆಸ್ಥಾನ ಸಭೆಯಲ್ಲಿ ಭಾಗವಹಿಸುತ್ತಿದ್ದರು–ಅಧಿಕಾರಿ (ಅತಿಕಾರಿ), ಒಡೆಯ, ಗ್ರಾಮಿಣಿ, ಸೇನಭೋವ, ಊರಾಳುವವ, ಹೆಗ್ಗಡೆ, ಹಡಪ, ಶ್ರೀಕರಣ, ಸಾಹಾನಿ ಮತ್ತು ಬೇಹಾರಿ. ಈ ಅಧಿಕಾರಿಗಳ ಕರ್ತವ್ಯಗಳನ್ನು ಶಾಸನಗಳಲ್ಲಿ, ಕಾಣಬಹುದು. ಅವುಗಳಲ್ಲಿ ಅಧಿಕಾರಿ (ಅತಿಕಾರಿ)ಯು ಸಾಮ್ರಾಜ್ಯದ ಒಂದು ವಿಭಾಗವಾದ 'ನಾಡು'ವಿನ ಆಡಳಿತಾಧಿಕಾರಿ. 1324ರ ಶಾಸನವು, ಸೋಯಿದೇವ (1315–1335)ನ ಅಡಿಯಲ್ಲಿ, ಲೊಕ್ಕಿಯದಾಹನು ಅಧಿಕಾರಿಯಾಗಿ ಬೈಂದೂರು ನಾಡನ್ನು ಆಳುತ್ತಿದ್ದನೆಂದು ಹೇಳುತ್ತದೆ. ಆನಂತರದ ಆಳುಪರ ಶಾಸನಗಳು ಅಧಿಕಾರಿ ಎಂಬ ಪದವನ್ನು, ಆ ಹುದ್ದೆಯನ್ನೂ ಅಲಂಕರಿಸುವ ವ್ಯಕ್ತಿಗಳು ಉಪನಾಮವಾಗಿ ಬಳಸುತ್ತಿದ್ದರೆಂದು ಹೇಳುತ್ತವೆ. ಕಂದಾಯ ವಸೂಲಿ ಅಥವಾ ಗ್ರಾಮದ ಆಡಳಿತಾಧಿಕಾರಿಯನ್ನು ಸಹ ಅಧಿಕಾರಿಗಳೆಂದು ಕರೆಯುವ ವಾಡಿಕೆಯಿತ್ತು.

ಗ್ರಾಮದ ಮುಖಂಡನನ್ನು ಒಡೆಯ ಎಂದು ಕರೆಯಲಾಗುತ್ತಿತ್ತು. ಉಡುಪಿ ತಾಲೂಕಿನ ಪುತ್ತಿಗೆಯ 1267ರ ಶಾಸನವು, ಪುತ್ತಿಗೆ ಗ್ರಾಮಒಡೆಯ ಎಂದು ಉಲ್ಲೇಖಿಸುತ್ತದೆ.[77] 1315ರ ಬಾರಕೂರು ಶಾಸನವು,[78] ಐದೂರು ಮತ್ತು ಇತರ ಗ್ರಾಮಗಳ ಒಡೆಯರು ಎಂದು ಹೇಳುತ್ತದೆ.

ಗ್ರಾಮಿಣಿಯ ಕರ್ತವ್ಯಗಳನ್ನು ಆಳುಪ ಶಾಸನಗಳು ಹೇಳುವುದಿಲ್ಲ. ಆದರೆ, ಹೆಸರು ಸೂಚಿಸುವಂತೆ ಗ್ರಾಮಿಣಿಯು ಗ್ರಾಮಾಡಳಿತದ ಹೊಣೆಗಾರಿಕೆಯನ್ನು ರಾಜ (ಅರಸು), ಮಂತ್ರಿ (ಪ್ರಧಾನ)ಗಳೊಂದಿಗೆ ನಿರ್ವಹಿಸುತ್ತಿದ್ದನು. ಜೊತೆಗೆ ಆಯಾಯ ಗ್ರಾಮಗಳಲ್ಲಿ ಕೊಟ್ಟ ದತ್ತಿಯ ಸಂರಕ್ಷಕನಾಗಿರುತ್ತಿದ್ದನು ಎಂಬುದನ್ನು ಬೇರೆ ಬೇರೆ ಶಾಸನಗಳು ಉಲ್ಲೇಖಿಸುತ್ತವೆ.

**ಸೇನಭೋವ:** ಅಧಿಕಾರಿಯ ಹೆಸರು ಬಳಸಿದ ಸಂದರ್ಭವನ್ನು ಗಮನಿಸಿದಾಗ, ಪ್ರಾಯಶಃ ಸೇನಭೋವ ಗ್ರಾಮದ ಗುಮಾಸ್ತನಾಗಿರಬಹುದು. ಹೆಚ್ಚಿನ ಶಾಸನಗಳ ಕೊನೆಯ ಭಾಗವು, ಈ ಅಧಿಕಾರಿಯನ್ನು ಉಲ್ಲೇಖಿಸಿ ಅವನು ಆ ಶಾಸನವನ್ನು ಬರೆಸಿದನು ಎಂದು ಹೇಳುತ್ತವೆ. ಒಂದನೆ ಕುಲಶೇಖರನ ಮಂಗಳೂರು ಶಾಸನದಲ್ಲಿ (1204), ಬಂಕೇಶ್ವರ ದೇವಾಲಯದ ದೈನಂದಿನ ಚಟುವಟಿಕೆಗಳನ್ನು ಲಿಖಿತವಾಗಿ ಬರೆದಿರುವ ಕರ್ತವ್ಯವನ್ನು ಸೇನಭೋವ ಮಾಡುತ್ತಿದ್ದನೆಂದು ತಿಳಿಸುತ್ತದೆ. ಕೆಲವೊಮ್ಮೆ, ರಾಜನು

ಬಿಟ್ಟುಕೊಟ್ಟ ಭೂ ಕೊಡುಗೆ, ಅಥವಾ ಇನ್ನಿತರ ದತ್ತಿಯ ಆಡಳಿತವನ್ನು ಸೇನಭೋವನಿಗೆ ವಹಿಸುತ್ತಿದ್ದನೆಂದು ಹೇಳುತ್ತವೆ. ಅಧಿಕಾರಿ ಹುದ್ದೆಯಂತೆ, ಸೇನಭೋವ ಮಧ್ಯಯುಗ ಆಳುಪರ ಕಾಲದ ಶಾಸನಗಳಲ್ಲಿ ಹೆಚ್ಚಾಗಿ, ಉಪನಾಮಾಂಕಿತ ಹುದ್ದೆಯಾಗಿ ಕಂಡುಬರುತ್ತವೆ.

ಊರಾಳುವ ಎಂಬ ಹುದ್ದೆಯು (ಉರ್=ಗ್ರಾಮ; ಆಳ್=ಆಡಳಿತ ನಡೆಸುವವ) ಆಡಳಿತಾಧಿಕಾರಿ ಅಥವಾ ಒಂದು ನಿರ್ದಿಷ್ಟ ಗ್ರಾಮದ ರಾಜ. ಆಳುಪರ ಶಾಸನಗಳಲ್ಲಿ ಈ ಹುದ್ದೆ ಬಹಳ ವಿರಳವಾಗಿವೆ.

ಹೆಗ್ಗಡೆ ಹುದ್ದೆಯು ಹಿಂದಿನ ಕಾಲದ ಮುಡಿಮೆಗೆ ವಿರುದ್ಧವಾಗಿರುತ್ತದೆ–ಗ್ರಾಮದ ಮುಖಂಡತ್ವ. ಬಿಳಿಯೂರ ಹೆಗ್ಗಡೆ ಎಂಬ ಶಾಸನಗಳ ಉಲ್ಲೇಖ ಅಥವಾ ವರ್ಗಡೆ ಎಂಬ ಪದಗಳು ಉಪನಾಮವನ್ನು ಸೂಚಿಸುತ್ತವೆ.

ಹಡಪ ಎಂಬುದು ವೀಳ್ಯದೆಲೆ ಮತ್ತು ತಾಂಬೂಲಕ್ಕೆ ಸಂಬಂಧಿಸಿದ ವಸ್ತುಗಳನ್ನು ಸರಬರಾಜು ಮಾಡುವ ಕೆಲಸದಾಳು. ಹಡಪ ಎಂಬ ಪದಕ್ಕೆ ಕ್ಷೌರಿಕನೆಂಬ ಅರ್ಥವು ಇದೆ.

**ಶ್ರೀಕರಣ:** ಅರಮನೆಯಲ್ಲಿ ದಾಖಲೆಗಳನ್ನು ಬರೆಯುವವನಾಗಿದ್ದು, ಅದನ್ನು ರಕ್ಷಿಸುವ ಹೊಣೆಯು ಅವನದಾಗಿತ್ತು. ವೀರ ಪಾಂಡ್ಯದೇವ–ಆಳುಪೇಂದ್ರನ 1261ರ ಕೋಟೇಶ್ವರ ಶಾಸನವು[79] ಶ್ರೀಕರಣ ಮಾಚಯ್ಯ ಸೇನಭೋವನು ಬರೆಸಿದನೆಂದು ಹೇಳುತ್ತದೆ.

ಸಾಹನಿ, ಸಂಸ್ಕೃತದ ಸಾಧಾನಿಕ–ಅಶ್ವದಳದ ಮುಖಂಡನು. ಹಿಂದೆ ಪ್ರಸ್ತಾಪಿಸಿದ ಮಹಾಮಂಡಳೇಶ್ವರ ರಾಯ–ಶಾಂತರದೇವನ ಹಾಳಾದ ಉದ್ಯಾವರ ಶಾಸನ[80] (1058)ದಲ್ಲಿ, ದಂಡಸಾಹನಿ ಎಂದು ಬಳಕೆಯಾಗಿದ್ದು, ಯುದ್ದಕ್ಕೆ ಬಳಸುವ ಕುದುರೆಗಳ ಮೇಲ್ವಿಚಾರಕನೆಂದು ತಿಳಿಸುತ್ತದೆ. ನಂತರದ ಶಾಸನಗಳಲ್ಲಿ, ಸಾಹನಿ ಬಳಕೆಯಾಗಿದ್ದು, ಹೆಚ್ಚಾಗಿ ಉಪನಾಮವಾಗಿದೆ.

ಬೇಹಾರಿ–ಕನ್ನಡ ಪದವಾಗಿದ್ದು, ಸಂಸ್ಕೃತದಲ್ಲಿ ವ್ಯವಹಾರಿನ್=ವರ್ತಕ, ವ್ಯಾಪಾರಿ. ಈ ಅಧಿಕಾರಿಯು ರಾಜ ಮನೆತನದ ಆಸಕ್ತಿಗಳನ್ನು ರಕ್ಷಿಸಿ ವಾಣಿಜ್ಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು.

ಆಳುಪ ಸಾಮ್ರಾಜ್ಯವನ್ನು ಆರಂಭದಿಂದಲೂ 'ನಾಡು'ಗಳೆಂದು ವಿಭಜನೆ ಮಾಡಲಾಗಿತ್ತು. ಕುಂದಾಪುರ ತಾಲೂಕಿನ ಬೈಂದೂರು ಪ್ರಾಂತವನ್ನು ಬೈಂದೂರು–ನಾಡು; ಮುಗುರು ನಾಡು (ಮಂಗಳೂರಿನಲ್ಲಿ), ಅಲ್ಲದೆ, ಸಣ್ಣ ಪ್ರದೇಶಗಳು ಸಾಮಂತ ಅರಸರ ಆಡಳಿತಕ್ಕೆ ಒಳಪಟ್ಟಿದ್ದವು. ಅವರಲ್ಲಿ ಮಹಾಮಂಡಳೇಶ್ವರ ಸೆವ್ಯಾಗೆಲ್ಲರಸನು ಕಾರ್ಕಳ ಮತ್ತು ಮಂಗಳೂರು ತಾಲೂಕಿನ ಎರಡು ಪ್ರದೇಶಗಳಾದ ಪೂಂಜಲ್ಕೆ ಮತ್ತು ಚಾಲೂಲ್ಕೆಗಳ ಆಡಳಿತವನ್ನು ಕವಿ ಆಳುಪೇಂದ್ರನ ಕಾಲದಲ್ಲಿ (1118–19) ನೋಡಿಕೊಳ್ಳುತ್ತಿದ್ದನು.

ವರ್ತಕ ಶ್ರೇಣಿಗಳು ಮತ್ತು ಸಂಘಟನೆಗಳು, ಈ ಕಾಲದ ಶಾಸನಗಳಲ್ಲಿ ಉಲ್ಲೇಖವಾಗಿವೆ. ಕೆಲವು ದಾಖಲೆಗಳಲ್ಲಿ ಇಡೀ ಗ್ರಾಮ (ಊರವರು, ಗ್ರಾಮ)ವು ದತ್ತಿಯನ್ನು ನೀಡುವಾಗ





ಭಾಗವಹಿಸಿತ್ತು. ಶಾಸನಗಳಲ್ಲಿ, ನಿರ್ದಿಷ್ಟ ಗ್ರಾಮದ ಕಂದಾಯ ನೀತಿಯನ್ನು ಇಡೀ ಗ್ರಾಮದ = (ಊರವರಿಗೆ–ಗ್ರಾಮದವರಿಗೆ ಕೊಟ್ಟ ಶಾಸನ) ಜನರಿಗೆ ಅನ್ವಯಿಸುವಂತೆ ಜಾರಿಗೊಳಿಸಲಾಗುತ್ತಿತ್ತು. ಇನ್ನು, ಉಳಿದ ಶಾಸನಗಳಲ್ಲಿ ಕೊಟ್ಟ ದತ್ತಿಯನ್ನು ರಕ್ಷಿಸುವಲ್ಲಿ ಊರಿನವರು ಹೊಣೆಗಾರರು.

ಆಡಳಿತದ ಅನುಕೂಲಕ್ಕಾಗಿ ಗ್ರಾಮಾಡಳಿತವು, ಪ್ರಜಾ ಪ್ರತಿನಿಧಿಗಳ ಸಭೆಯನ್ನು ರಚಿಸಿಕೊಳ್ಳುತ್ತಿತ್ತು. ದ್ವಿತೀಯ ಆಳುವರಸನ ಉದ್ಯಾವರದ ಶಾಸನದಲ್ಲಿ ಶಿವಳ್ಳಿ–1000 (ಶಿವಳ್ಳಿಯ–ಸಾಸೀರ್ವರು) ಎಂದು ದಾಖಲಿಸಿದೆ. ಮಧ್ಯಯುಗ ಮತ್ತು ನಂತರದ ಆಳುಪರ ಶಾಸನಗಳಲ್ಲಿ ಹಂದಾಡಿ ಮತ್ತು ಕೋಟ ಸಾವಿರ, ನೀರುವರ ಮತ್ತು ಕುಡಿಕೂರು 300; ಮತ್ತು ಬ್ರಹ್ಮಾವರ 100 ಮತ್ತು ಶಿವಪುರ 200 ಎಂದು ಉಲ್ಲೇಖವಿದೆ. ವೀರಪಾಂಡ್ಯದೇವ–ಆಳುಪೇಂದ್ರನ 1254ರ ಬ್ರಹ್ಮಾವರದ ಶಾಸನದಲ್ಲಿ,[81] ಬ್ರಹಾವರ 100 ಮತ್ತು 200 ಎಂದು ಉಲ್ಲೇಖವಾಗಿರುವುದು ಬ್ರಹ್ಮಾವರದ ಮಹಾಜನ ಸಭೆಯನ್ನೇ ಆಗಿರಬಹುದು. ಇಂತಹ ಸಭೆಗಳನ್ನು ನಡೆಸುವ ನೀತಿಗಳು, ಧೋರಣೆಗಳು ಶಾಸನಗಳಲ್ಲಿ ಲಭ್ಯವಿಲ್ಲ. ಬದಲಾಗಿ, ಈ ಸಭೆಗಳು, ದಾನಿಗಳಾಗಿ, ದತ್ತಿಗಳ ರಕ್ಷಕರಾಗಿ, ಗ್ರಾಮದವರಿಂದ ವಸೂಲಿಯಾಗುವ ಕಂದಾಯದ ಪ್ರಮಾಣವನ್ನು ನಿರ್ಧರಿಸುವ ಹಕ್ಕುಗಳನ್ನು ಚಲಾಯಿಸುವ ಸಭೆಗಳಾಗಿ ಉಲ್ಲೇಖವಾಗಿವೆ.

ಹೆಸರಾದ ಪಟ್ಟಣಗಳು–ಬಾರಕೂರು, ಬಸರೂರು ಮತ್ತು ಮೂಡಬಿದಿರೆಗಳಲ್ಲಿ, ಸ್ವತಂತ್ರ ವ್ಯಾಪಾರಿ ಅಥವಾ ವರ್ತಕ ಶ್ರೇಣಿಗಳಿದ್ದು, ಅವುಗಳನ್ನು ನಖರ (ಅಥವಾ ನಗರ, ಸಮಸ್ತ–ನಖರ, ನಗರ– ಸಮೂಹ ಇತ್ಯಾದಿ), ಸೆಟ್ಟಿಕಾರ ಮತ್ತು ಹಂಜಮಾನ (ನಖರ ಹಂಜಮಾನದವ)ರೆಂದೂ ಕರೆಯುತ್ತಾರೆ. 'ನಖರ'ವು ಸಂಸ್ಕೃತ ಶಬ್ದ, 'ನಗರ'ವು ವರ್ತಕ ಸಮುದಾಯ ಅಥವಾ ವರ್ತಕಶ್ರೇಣಿ ಅಥವಾ ವರ್ತಕರ ಪಟ್ಟಣಗಳೊಂದಿಗೆ ಸಂಬಂಧಿಸಿದವುಗಳು. 'ನಗರ' ಪದವು ತಮಿಳು ಶಾಸನಗಳಲ್ಲೂ ಕಾಣಸಿಗುತ್ತವೆ.[82]

**ಸೆಟ್ಟಿಕಾರ:** ಅದೇ ವರ್ಗಕ್ಕೆ ಸೇರಿದ್ದು, ಸೆಟ್ಟಿ ಎಂಬ ಪದದಿಂದ ಹುಟ್ಟಿಕೊಂಡಿದ್ದು, ವರ್ತಕ ಅಥವಾ ವ್ಯಾಪಾರಿ ಎಂದು ಅರ್ಥ. ನಖರ ಮತ್ತು ಸೆಟ್ಟಿಕಾರರ ನಡುವಿನ ನಿಜವಾದ ಹೋಲಿಕೆಗಳು ತಿಳಿಯದಿದ್ದರೂ, ಹಂಜಮಾನದವರಿಗೆ ಹೋಲಿಸಿದರೆ, ಸೆಟ್ಟಿಕಾರರು ಸ್ಥಳೀಯ ವರ್ತಕರ ಸಂಘಟನೆಯಾಗಿದ್ದು, ಸ್ಥಳೀಯ ವಸ್ತುಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು.[83]

**ನಖರ–** ಸ್ಥಳೀಯ ವರ್ತಕರ ಶ್ರೇಣಿಯಾಗಿದ್ದು, ಬಾಹ್ಯ ವ್ಯಾಪಾರವನ್ನು ನೋಡಿಕೊಳ್ಳುತ್ತಿದ್ದರು. ಹಂಜಮಾನ–ಪರ್ಶಿಯನ್ ಭಾಷೆ ಅಂಜುಮಾನ್, ಪಾರ್ಸಿಗಳ ನೆಲೆಗಳನ್ನು ಸೂಚಿಸುತ್ತದೆ. ಇತಿಹಾಸಜ್ಞ ಮತ್ತು ಪ್ರಾಚ್ಯಶಾಸ್ತ್ರಜ್ಞರಾದ ಡಿ.ಸಿ. ಸರ್ಕಾರ್‌ರವರು ಪಾರ್ಸಿಗಳ ನೆಲೆಗಳು, ದಕ್ಷಿಣ ಕನ್ನಡದಲ್ಲಿ ಇರುವ ಸಾಧ್ಯತೆ ತೀರ ಕಡಿಮೆ ಇರುವುದರಿಂದ ಮತ್ತು ತಮಿಳಿನ ಅಂಜುವಾನ್ನಂ (ಸಂಸ್ಕೃತ ಪಂಚವನ್ನ) ಅರ್ಥವನ್ನು ಹೋಲುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಅಂದರೆ, ಐದು ಕರಕುಶಲ ವರ್ಗಗಳು – Goldsmiths,

blacksmiths, brasiers, carpenter and stone masons.[84] ಈ ಐದು ವರ್ಗಗಳ ಒಂದುಗೂಡುವಿಕೆಗೆ ಅಂಜುವನ್ನಂ ಬಹಳ ಹತ್ತಿರವಾಗಿದ್ದು, ಶಾಸನಗಳಲ್ಲಿ ಅದೇ ಸಮೂಹಗಳನ್ನುದ್ದೇಶಿಸಿ ಹೇಳಿರಬೇಕು. ಆದರೆ, ಹಂಜಮಾನರು ವರ್ತಕರೆ ಆಗಿರಬಹುದು ಎಂಬುದಕ್ಕೆ ಇಲ್ಲಿನ ಭೌಗೋಳಿಕ ಲಕ್ಷಣಗಳು ಸಾಕು. ಉದ್ದದ ಕರಾವಳಿ ತೀರ, ಅರಬ್ಬಿ ಸಮುದ್ರ, ಪರ್ಶಿಯಾದ ಕರಾವಳಿ. ಜೊತೆಗೆ, ಹಿಂದಿನಿಂದಲೂ ಈ ಪ್ರದೇಶ ವಿದೇಶೀಯರನ್ನು ಆಕರ್ಷಿಸಿತ್ತು.[85]

ಮೇಲೆ ಹೇಳಿದ ಐತಿಹಾಸಿಕ ಚಿತ್ರಣವು ಅರಬ್ ಮತ್ತು ಪರ್ಶಿಯಾ ದೇಶದ ವರ್ತಕರು ಆಳುಪರ ಕರಾವಳಿ ಸಾಮ್ರಾಜ್ಯದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿರುವುದನ್ನು ಧೃಢೀಕರಿಸುತ್ತದೆ. ವಿಜಯನಗರ ಸಾಮ್ರಾಟರು, ಹೆಚ್ಚು ಹೆಚ್ಚು ಕುದುರೆಗಳನ್ನು, ಅರೇಬಿಯಾ ದೇಶದಿಂದಲೇ ಆಮದು ಮಾಡುತ್ತಿದ್ದರು. ಜೊತೆಗೆ, ದಕ್ಷಿಣ ಕನ್ನಡ ಶಾಸನಗಳು, ಹೆಚ್ಚಾಗಿ ಹಂಜಮಾನ ಮತ್ತು ನಖರ-ಹಂಜಮಾನ ವರ್ತಕ ಶ್ರೇಣಿಗಳನ್ನು ಉಲ್ಲೇಖಿಸುತ್ತವೆ. ಈ ಸಂದರ್ಭದಲ್ಲಿ ಹಂಜಮಾನ-ಮುಖ್ಯ (ಹಂಜಮಾನರ ಮುಖಂಡ), ಎಂಬ ಉಲ್ಲೇಖವು ಪ್ರಾಮುಖ್ಯತೆ ಪಡೆಯುತ್ತದೆ. ನಾಡ ಉಮ್ಮರ ಮರಕಾಲನ ಹೆಸರು ಕಾಯ್ಕಿಣಿ ಶಾಸನದಲ್ಲಿ[86] (1427) ಉಲ್ಲೇಖವಾಗಿದ್ದು, ಅದು ತಿಮ್ಮಣ್ಣ ಒಡೆಯನು ಒಂದನೇ ದೇವರಾಯ ಮತ್ತು ಅವನ ಸಾಮಂತ ನಗಿರೆ ಸಂಗೀರಾಯನ ಕಾಲದಲ್ಲಿ ಉಮ್ಮರ ಪರ್ಶಿಯಾ ಹೆಸರಾದ ಉಮರ್ ಮತ್ತು ಮರಕಾಲ ಅಂದರೆ ನಾವಿಕ. ಈ ಶಾಸನದ ವಿವರಗಳಿಂದ ಹಂಜಮಾನ-ಅರೇಬಿಯಾ ಮತ್ತು ಪರ್ಶಿಯಾ ದೇಶದ ವರ್ತಕರು, ಪಶ್ಚಿಮ ಕರಾವಳಿಯಲ್ಲಿ ನೆಲೆ ನಿಂತಿರುವುದನ್ನು ಶ್ರುತಪಡಿಸುತ್ತದೆ. ನಖರರು, ಆಳುಪ ಸಾಮ್ರಾಜ್ಯದ ಧಾರ್ಮಿಕ ಉದ್ದೇಶಗಳನ್ನು ಹೊಂದಿದ್ದು, ಅವರು ಕಟ್ಟಿಸಿದ ಶಿವನ ದೇವಾಲಯವನ್ನು ನಖರೇಶ್ವರ ಎಂದೂ ಕರೆಯಲಾಗುತ್ತಿತ್ತು. ಅಂತಹ ಒಂದು ದೇವಾಲಯ ಬಸ್ರೂರಿನಲ್ಲಿ ಕಟ್ಟಲಾಗಿದೆ.

ಕಾನೂನು ಮತ್ತು ನ್ಯಾಯಾಂಗ ಆಡಳಿತದ ಬಗ್ಗೆ ಆರಂಭಿಕ ಆಳುಪರ ಶಾಸನ ಸಹಕಾರಿಯಾಗದಿದ್ದರೂ, ಒಂದನೆ ಆಳುವರಸನ ಕಿಗ್ಗ ಶಾಸನವು ದೇವಪ್ಪ ದಂಡ (ದೇವರ ಶಿಕ್ಷೆ) ಮತ್ತು ರಾಜತ್ವ ದಂಡ (ರಾಜನ ಶಿಕ್ಷೆ)ದ ನಂಬಿಕೆಯನ್ನು ಉಲ್ಲೇಖಿಸುತ್ತದೆ. ಲಭ್ಯವಿರುವ ಆಧಾರಗಳು 'ಗಡಿಪಾರು' ಸಾಮಾನ್ಯವಾಗಿ ಪ್ರಚಲಿತದಲ್ಲಿರುವ ಶಿಕ್ಷೆಯಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅದೇ ರೀತಿಯ ಶಿಕ್ಷೆಯು ತಪ್ಪು ಮಾಡಿದವರಿಗೆ ಜಾತಿಯ ಆಧಾರದಲ್ಲಿತ್ತು. ಮಂಗಳೂರು ಶಾಸನವು[87] 1204ರ ಒಂದನೇ ಕುಲಶೇಖರನ ಶಾಸನವು, ಒಬ್ಬ ಬ್ರಾಹ್ಮಣನು ದತ್ತಿ ದಾಖಲೆಯನ್ನು ನಾಶಪಡಿಸಿದರೆ, ಅವನನ್ನು ನಾಲ್ಕು ಜಾತಿಯಿಂದ ಬಹಿಷ್ಕರಿಸಲಾಗುತ್ತಿತ್ತು ಎಂದು ಉಲ್ಲೇಖಿಸುತ್ತದೆ. (ನಾಲ್ಕು-ಜಾತಿಯಂ ಪೊರಗು); ವರ್ತಕ ಸಮೂದಾಯದ ಸೆಟ್ಟಿ ತಪ್ಪು ಮಾಡಿದರೆ, ಅವನನ್ನು ವರ್ತಕ ಜಾತಿಯಿಂದಲೇ ಹೊರಗೆ ಹಾಕಲಾಗುತ್ತಿತ್ತು (ಸರ್ವಸ್ವ ಬಲಂಜದಿಂದ ಪೊರದು); ದತ್ತಿ ದಾಖಲೆಯನ್ನು ಕೃಷಿಕ ವರ್ಗದವನು ಕೆಡವಿದರೆ, ಒಂದೊಂದು ವ್ಯಕ್ತಿಗೆ 1000 ಪೊನ್ನನ್ನು ವಿಶೇಷ ಶುಲ್ಕವಾಗಿ ನೀಡಬೇಕು (ಒಕ್ಕಲು ಮಕ್ಕಳು ಮಾಡಿದರೆ ಒಂದು ತಲೆ ಸಾವಿರ ಹೊನ್ನು).





ಸೈನಿಕ ಆಡಳಿತದ ಬಗ್ಗೆ ಸಿಗುವ ಶಾಸನಾಧಾರಗಳು ಬಹು ವಿರಳವಾಗಿದ್ದರೂ, ಆರಂಭದ ಆಳುಪರಿಗೆ ಸೈನಿಕ ಕಲೆಯನ್ನು ಉತ್ತಮಪಡಿಸಲು ವಿಪುಲ ಅವಕಾಶಗಳಿದ್ದವು. ವಿಜಯಾದಿತ್ಯನ ಸೈನಿಕ ಪ್ರತಿಭೆಯನ್ನು ತಾಮ್ರ ಪಟ್ಟಿಯಲ್ಲಿ[88] ದೊರೆಯುವ ದಾಖಲೆಯ ಪ್ರಥಮ ಚಿತ್ರವಾಹನನ ಸೈನಿಕ ಪ್ರೌಢಿಮೆಯನ್ನು ತೋರಿಸುತ್ತದೆ, ಮತ್ತು ಆಳುಪರು ನಿರಂತರವಾಗಿ ಯುದ್ಧದಲ್ಲಿ ಸಕ್ರೀಯವಾಗಿ ಭಾಗವಹಿಸಿರುವುದು, ಅವರ ಸೈನಿಕ ಶಕ್ತಿ ಉತ್ತಮವಾಗಿರುವುದಕ್ಕೆ ಸಾಕ್ಷಿ ಆಗಿರುತ್ತದೆ. ದ್ವಿತೀಯ ಚಿತ್ರವಾಹನನು ಕೂಡ, ರಾಷ್ಟ್ರಕೂಟ ಸೈನ್ಯದ ವಿರುದ್ಧ ಪೆರ್‌ಗುಂಜಿಯಲ್ಲಿ ಧೈರ್ಯದಿಂದ ಸದೆಬಡಿದಿರುವುದನ್ನು ರಾಷ್ಟ್ರಕೂಟ ದ್ವಿತೀಯ ಗೋವಿಂದನ ಶಾಸನ[89] ದಾಖಲಿಸಿ ಅವರ ಸೈನಿಕ ಬಲವನ್ನು ಒತ್ತಿ ಹೇಳುತ್ತದೆ.

ಸೈನಿಕ ಚಾಣಾಕ್ಷತನವನ್ನು ವೃದ್ಧಿಗೊಳಿಸಿರುವುದರ ಬಗ್ಗೆ ಶಾಸನಗಳು ಮೌನವಾಗಿವೆ. ಆನೆಗಳು, ಕುದುರೆಗಳು, ರಥಗಳ ಬಗ್ಗೆ ದಾಖಲೆಗಳಿಲ್ಲ. ತುಳುನಾಡಿನಲ್ಲಿ ರಥದ ಬಗ್ಗೆ ಒಂದೇ ಬಾರಿ (ಪ್ರಾಚೀನ ಆಳುಪರ ಕಾಲ) ಉಲ್ಲೇಖವಿರುವುದು. ನೆಡುಂಜಡೈಯನ್ ದತ್ತಿಯನ್ನು ದಾಖಲಿಸುವ ವೇಲ್‌ವಿಕ್ಕುಡಿ ತಾಮ್ರ ಶಾಸನದಲ್ಲಿ ಪಾಂಡ್ಯರಾಜರು ಕುದುರೆ ರಥದಲ್ಲಿ ಬಂದು (ಮಹಾರಥಾರ್) ಮಂಗಳಾಪುರವನ್ನು ದಾಳಿ ಮಾಡಿದರು ಎಂದು ದಾಖಲಾಗಿದೆ.[90]

ಕೆಲವೊಮ್ಮೆ ನುರಿತ ಕುದುರೆ ಸವಾರರನ್ನು ಯುದ್ಧ ರಂಗಕ್ಕೆ ಕಳುಹಿಸುವ ಸಂಪ್ರದಾಯವು ರಣಸಾಗರ ಮತ್ತು ಮಯ್ಗೇಶನ ಉದ್ಯಾವರದ ಶಾಸನದಿಂದ ತಿಳಿಯುತ್ತದೆ. ರಾಷ್ಟ್ರಕೂಟ ದೊರೆ ಮೂರನೇ ಗೋವಿಂದನ ಮಾವಳಿ ಶಾಸನವು ಕೂಡ, ಪೆರ್ಗುಂಜಿ ಯುದ್ಧದಲ್ಲಿ ರಾಷ್ಟ್ರಕೂಟರು ಮತ್ತು ಆಳುಪ ಅರಸ ಎರಡನೇ ಚಿತ್ರವಾಹನನ ಅಶ್ವದಳದೊಂದಿಗೆ ನಡೆದ ಸೆಣಸಾಟವನ್ನು ತಿಳಿಸುತ್ತದೆ. ಉದ್ಯಾವರದ ವೀರಗಲ್ಲಿನಲ್ಲಿ ಪಾದತಿ ಎಂಬ ಉಲ್ಲೇಖವಿದ್ದು, ಅದು ಕಾಲ್ದಳದ ಬಗ್ಗೆಯಾಗಿದೆ.

ಆರಂಭಿಕ ಕಾಲದಲ್ಲಿ ಆಳುಪರು ಯುದ್ಧಕ್ಕಾಗಿ ಪಳಗಿಸುವ ಸೈನಿಕ ಸಂಘಟನೆಯ ನಿಯಮಗಳು ಬದಲಾಗಿದ್ದವು. ಮಾವಳಿ ಶಾಸನವು ಆಳುಪ ಅರಸರ ಸೈನ್ಯದಲ್ಲಿ, ಎಡ ಮತ್ತು ಬಲ ಪಂಗಡಗಳಿದ್ದವು ಎಂದು ಸೂಚಿಸುತ್ತದೆ. ಉದ್ಯಾವರದ ಒಂದು ವೀರಗಲ್ಲು ಶಾಸನವು ಯುದ್ಧರಂಗದಲ್ಲಿ ಮಡಿದ ಸೈನಿಕನ ಪ್ರೌಢಿಮೆಯನ್ನು ಹೊಗಳಿ, ಚಕ್ರವ್ಯೂಹವನ್ನು ಭೇದಿಸಲು ನುರಿತವನೆಂದು[91] (ಸಾಹಸದ - ಅರಿ - ಚಕ್ರವ್ಯೂಹವನ್ನು - ಒಡೆವೋನ್), ಯುದ್ಧದಲ್ಲಿ ಉಪಯೋಗಿಸಿದ ಆಯುಧಗಳು (ಅಂಬು), ಬಿಲ್ಲು, ಖಡ್ಗ (ವಾಲ್, ನಿಷ್ತ್ರೀಮ) ಬಾಣ, ಕತ್ತಿ, ಗುರಾಣಿ ಮತ್ತು ಪಾಲಗೆ ಇನ್ನಿತರ ಸಲಕರಣೆಗಳು ಶಾಸನಗಳಲ್ಲಿ ಉಲ್ಲೇಖಿಸಿವೆ. ಕದನದಲ್ಲಿ ವೀರಾವೇಶದಿಂದ ಹೋರಾಡಿ, ಕೊನೆಗೆ ಸಾವನ್ನಪ್ಪುವ ಕಲಿವೀರರಿಗೆ ರಾಜೋಚಿತ ಸಂಸ್ಕಾರ ಮತ್ತು ಸ್ಮಾರಕಗಳನ್ನು ಇರಿಸುವ ಪದ್ಧತಿ ಇತ್ತು. ಬೇರೆ ಬೇರೆ ರಂಗದಲ್ಲಿ ಪಳಗಿದವರ ಪ್ರಜೆಗಳ ಪ್ರತಿನಿಧಿಗಳ ಸಂಘಟನೆಗಳು, ತುಳುನಾಡಿನಲ್ಲಿ ಕಂಡುಬರುವುದು ವಿಶೇಷ ಲಕ್ಷಣವಾಗಿದ್ದು, ಮಧ್ಯಕಾಲೀನ ಆಳುಪರ ಕಾಲದಲ್ಲಿ ಹೆಚ್ಚು ಕಂಡು ಬರುತ್ತವೆ. ಹದಿನೆಂಟು ಪಟ್ಟಣದ ಶ್ರೇಣಿಗಳ ಬಗ್ಗೆ ಈ ಹಿಂದೆ ಹೇಳಲಾಗಿದೆ. ಕೃಷಿಯನ್ನೇ ಅವಲಂಬಿಸಿದ ತುಳುನಾಡಿನಲ್ಲಿ, ವ್ಯವಸಾಯಗಾರರು ಹಿಂದಿನಿಂದಲೂ ತಮ್ಮದೇ ಸಂಘಟನೆಯನ್ನು

ಹೊಂದಿದ್ದರು. ಎರಡನೇ ಆಳುವರಸನ ಉದ್ಯಾವರ ಶಾಸನವು[92] ಉದಯಪುರದ ನಖರದ 70 ಒಕ್ಕಲು ಶ್ರೇಣಿಯನ್ನು ಉಲ್ಲೇಖಿಸುತ್ತದೆ. ಅದೇ ಶಾಸನವು, ಮಹಾಜನ ಸಭೆಯನ್ನು ಶಿವಳ್ಳಿಯ 1000-ಶಿವಳ್ಳಿಯ ಸಾಸಿರಬರ್ ಭೂಮಿಯ ಒಡೆತನವನ್ನು ರಾಜ ಮತ್ತು ಪ್ರಜೆಗಳು ಅನುಭವಿಸುತ್ತಿದ್ದರು. ಒಂದನೇ ಆಳುವರಸನ ವಡ್ಡರ್ಸೆ ಶಾಸನವು, ವಡ್ಡರ್ಸೆಯ ಕೃಷಿ ಭೂಮಿಯಲ್ಲಿ ವ್ಯವಸಾಯ ಮಾಡುವ ಹಕ್ಕನ್ನು ಅಡಕಪ್ಪನು ಹೊಂದಿದ್ದನು ಎಂದು ತಿಳಿಸುತ್ತದೆ. ಅದೇ ಶಾಸನವು, ಆಡಳಿತಾಧಿಕಾರಿಗಳ ವಿವರ ನೀಡಿರುವುದರಿಂದ ಆ ಭೂಮಿಯ ಒಡೆತನವು ರಾಜನದ್ದಾಗಿತ್ತು.

ಖಜಾನೆಗೆ ಭೂ ಕಂದಾಯ ಮತ್ತು ನೀರು ತೆರಿಗೆಯು ಉತ್ತಮ ಆದಾಯವಾಗಿತ್ತು. ದೊಡ್ಡ ಪಟ್ಟಣಗಳಾದ ಉದಯಪುರ, ಕೋಲಾಲ-ನಗರ ಮತ್ತು ಪೊಂಬುಚ್ಚ ಸಹ, ಹೆಚ್ಚು ಕಂದಾಯವನ್ನು ಖಜಾನೆಗೆ ಒದಗಿಸುತ್ತಿದ್ದವು. ಭೂ ಕಂದಾಯ ಮತ್ತು ನೀರು ತೆರಿಗೆಗಳನ್ನು, ಶಾಸನಗಳಲ್ಲಿ ಜಲದುಲಂ ಸ್ಥಳದುಲಂ ಸುಂಕ (ನೀರು ಮತ್ತು ಭೂಮಿಯ ಮೇಲಿನ ತೆರಿಗೆಗಳು) ಎಂದು ಮಾರಮ್ಮನ ಉದ್ಯಾವರ ಶಾಸನ ಹೇಳುತ್ತದೆ.[93] ಶಾಸನಗಳು, ಕೃಷಿ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿಯನ್ನು ಉಲ್ಲೇಖಿಸುತ್ತವೆ. ನೀರು ತೆರಿಗೆ, ನಿಜ ಅರ್ಥದಲ್ಲಿ ಜಲ ಮಾರ್ಗ ಮತ್ತು ನದಿ ಮಾರ್ಗ ವ್ಯಾಪಾರಕ್ಕಾಗಿ.

***(ಮುಂದುವರೆಯುವುದು)***

**ಕೊನೆಟಿಪ್ಪಣಿ**

1. ಎಪಿಗ್ರಾಫಿಯಾ ಇಂಡಿಕಾ, ಸಂಪುಟ. 9, ಪುಟಗಳು. 19-20, ಸಂಖ್ಯೆ. 4.
2. ಅದೇ, *ಪ್ರಿಥಿವಿ ಸಾಗರ ನ್ಪಟ್ಟಂ ಗಟ್ಟಿಸಿ.*
3. ಎಸ್‌ಐಐ, ಸಂಪುಟ. 3, ಸಂಖ್ಯೆಗಳು. 327 ಮತ್ತು 328; ವಸಂತಶೆಟ್ಟಿ, *ಉಡುಪಿ ತಾಲೂಕಿನ ಶಾಸನಗಳು.* ಬ್ರಹ್ಮಾವರ, 1995.
4. ವಸಂತಶೆಟ್ಟಿ, *ಬಾರಕೂರು-ಎ ಮೆಟ್ರೊಪಾಲಿಟನ್ ಸಿಟಿ ಆಪ್ ಎಂಟಿಕ್ವಿಟಿ: ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್* (ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ. ಮಹಾಪ್ರಬಂಧ, 1984), ಪು. 99-101.
5. ಬಿ.ಎ. ಸಾಲೆತ್ತೂರ್, *ಸೋಸಿಯಲ್ ಎಂಡ್ ಪಾಲಿಟಿಕಲ್ ಲೈಪ್ ಆಪ್ ವಿಜಯನಗರ ಎಂಪೈರ್*, ಸಂಪುಟ-2, ಪುಟ. 466.
6. ವಿವರಗಳಿಗೆ ನೋಡಿ; ಜಿ.ಎಸ್. ದೀಕ್ಷಿತ್, *ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮಿಡೀವಲ್ ಕರ್ನಾಟಕ*, ಪುಟಗಳು. 24-28; *ಕರ್ನಾಟಕ ಭಾರತಿ*, ಸಂಪುಟ-1, ಪುಟ-81.
7. ಎಪಿಗ್ರಾಫಿಯ ಇಂಡಿಕಾ, ಸಂಪುಟ-9, ಪುಟ.21, ಅಡಿಟಿಪ್ಪಣಿ-3.
8. ಎಆರ್‌ಎಸ್‌ಐಇ, ಸಂಖ್ಯೆ. 296, 1931-32. ಲಿಪಿಗಳನ್ನು ಗಮನಿಸಿದಾಗ ಇದು 7ನೇ ಶತಮಾನದ ಶಾಸನವಾಗಿ ಕಾಣುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ಆಳ್ವರಸ, ಕಂದವರ್ಮ (ಗುರುರಾಜ ಭಟ್ಟರು) ಕ್ರಿ.ಶ. 675ರ ಕೊಪ್ಪಳ ಶಾಸನದಲ್ಲಿ ಬರುವ ಹೆಸರುಗಳೇ ಆಗಿರಬೇಕು ಎಂದು ಅಭಿಪ್ರಾಯ -ಆಳ್ವರಸ ಗುಣಸಾಗರ ದ್ವಿತೀಯ ನಾಮದೇಯನ್, ಎಪಿಗ್ರಾಫ್ರಿಯಾ *ಕರ್ನಾಟಕ*, ಸಂಪುಟ-6, ಕೊಪ್ಪ.38
9. ಎಪಿಗ್ರಾಫ್ರಿಕಾ *ಕರ್ನಾಟಕ*, ಸಂಪುಟ-6, ಕೆಪಿ. 38.
10. ಅದೇ, ಸಂಪುಟ. 9 ಪುಟ.21, ಸಂಖ್ಯೆ. 4
11. ಅದೇ, ಪುಟ. 23,





12. ಎಆರ್‌ಎಸ್‌ಐಇ, 1930-31, ಸಂಖ್ಯೆ, 351.
13. ಎಸ್‌ಐಐ, ಸಂಪುಟ. 7, ಸಂಖ್ಯೆ. 314
14. ವಸಂತಶೆಟ್ಟಿ, *ಉಡುಪಿ ಶಾಸನಗಳು.*
15. ಎಸ್‌ಐಐ, ಸಂಪುಟ. 7, ಸಂಖ್ಯೆ. 314.
16. ಬಿ.ಎ. ಸಾಲೇತ್ತೂರ್, *ಸೋಸಿಯಲ್ ಎಂಡ್ ಪಾಲಿಟಿಕಲ್ ಲೈಪ್ ಆಪ್* ವಿಜಯನಗರ ಎಂಪೈರ್, ಸಂಪುಟ-2, ಪುಟ. 466.
17. ವಸಂತಶೆಟ್ಟಿ, *ಬಾರಕೂರು-ಎ ಮೆಟ್ರೊಪಾಲಿಟನ್ ಸಿಟಿ ಆಪ್ ಎಂಟಿಕ್ವಿಟಿ: ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್*. ಪುಟಗಳು. 99-101.
18. ಬಿ.ಎ. ಸಾಲೇತ್ತೂರ್, ಮೇಲಿನದೆ,
19. ಎಸ್‌ಐಐ, ಸಂಪುಟ. 7, ಸಂಖ್ಯೆ. 213.
20. ಅದೇ, ಸಂಖ್ಯೆ. 185.
21. ಅದೇ, ಸಂಖ್ಯೆ. 185.
22. ಅದೇ, ಸಂಖ್ಯೆ. 314.
23. ಎಪಿಗ್ರಾಫಿಕಾ ಇಂಡಿಕಾ, ಸಂಪುಟ. 17, ಪುಟ 301.
24. *ಆಂದ್ರ ಪ್ರದೇಶ್ ಗವರ್ನಮೆಂಟ್ ಆರ್ಕಿಯಾಲಜಿಕಲ್ ಸೀರೀಸ್*, ಸಂಖ್ಯೆ.6 ಪುಟ. 37.
25. ಕೆ.ವಿ. ರಮೇಶ್, *ಹಿಸ್ಟರ್ ಆಪ್ ಸೌತ್ ಕೆನರಾ*, ಪುಟ 85.
26. ಮೋರೇಸ್, *ಕದಂಬ ಕುಲ*, 1936, ಬಾಂಬೆ, ಪುಟ 273.
27. ಎಪಿಗ್ರಾಫಿಕಾ *ಕರ್ನಾಟಕ*, ಸಂಪುಟ. 6, ಕೆಪಿ. 37.
28. ಎಸ್‌ಐಐ, ಸಂಪುಟ.7, ಸಂಖ್ಯೆ. 286.
29. ಎಪಿಗ್ರಾಫಿಕಾ *ಕರ್ನಾಟಕ*, ಸಂಪುಟ. 6, ಕೆಪಿ. 37.
30. ಎಸ್‌ಐಐ, ಸಂಪುಟ.7, ಸಂಖ್ಯೆ. 376, ರಮೇಶ್, ಮೇಲಿನದೆ, ಪುಟ.113, ವಸಂತಶೆಟ್ಟಿ, ಪಿ.ಎಚ್.ಡಿ ಮಹಾಪ್ರಬಂಧ, ಪುಟಗಳು. 107-109.
31. ವಸಂತ ಶೆಟ್ಟಿ, ಎನ್., *ಆಳುಪ ಇನ್ಸ್‌ಕ್ರಿಪ್ಷನ್ ಪ್ರಾಂ ಚೇರ್ಕಾಡಿ*, ಪುಟಗಳು, 19-21.
32. ಎಆರ್‌ಎಸ್‌ಐಇ, 1928-29, ಸಂಖ್ಯೆ. 509, ರಮೇಶ್ ಮೇಲಿನದೆ, ಪುಟ. 121
33. ಎಆರ್‌ಎಸ್‌ಐಇ, 1928-29, ಸಂಖ್ಯೆ. 485; ರಮೇಶ್ ಮೇಲಿನದೆ, ಪುಟ. 121; ವಸಂತ ಶೆಟ್ಟಿ, *ಬ್ರಹ್ಮಾವರದ ಇತಿಹಾಸ*, 1988, ಬ್ರಹ್ಮಾವರ, ಪುಟಗಳು. 6-7.
34. ಎಆರ್‌ಎಸ್‌ಐಇ, 1928-29, ಸಂಖ್ಯೆ. 491.
35. ಅದೇ, 1931-32, ಸಂಖ್ಯೆ. 336.
36. ಎಸ್‌ಐಐ, ಸಂಪುಟ. 7, ಸಂಖ್ಯೆ. 354.
37. ಅದೇ, ಸಂಖ್ಯೆ. 274
38. ವಸಂತಶೆಟ್ಟಿ, ಪಿ.ಎಚ್.ಡಿ ಮಹಾಪ್ರಬಂಧ, ಪುಟ .130.
39. ಎಸ್‌ಐಐ, ಸಂಪುಟ. 7, ಸಂಖ್ಯೆ. 258
40. *ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್*, ಸಂಪುಟ. 3, ಸಂಖ್ಯೆ. 43.
41. ಎಆರ್‌ಎಸ್‌ಐಇ, ಸಂಖ್ಯೆ. 295, 1931-32.
42. ಎಸ್‌ಐಐ, ಸಂಪುಟ. 7, ಸಂಖ್ಯೆ. 376.
43. ಆರಯ್ಯ ಸರ್ವಭೂತಾಧಾರಂ ಮಳೆಯಂ ನೃಪೇಂದ್ರನುಂ ಮಳೆಗಾಲಂ। ಬಾರದೊಡಂ ನಿರ್ವಹಿಸುವವರಾರುಂ ನೃಪನಲ್ಲದಂದು ನಿರ್ವಹಿಸುವರೆ॥ ಕಾವ್ಯಾವಲೋಕನ, ಪುಟ. 313.
44. ಎಸ್‌ಐಐ, ಸಂಪುಟ. 9, ಭಾಗ-1, ಸಂಖ್ಯೆ 393
45. ಅದೇ, ಸಂಪುಟ-7, ಸಂಖ್ಯೆ 376.

46. ಕೆ.ವಿ. ರಮೇಶ್, ಮೇಲಿನದೇ, ಪುಟಗಳು. 244–45.
47. ಎಸ್‌ಐಐ, ಸಂಪುಟ. 7, ಸಂಖ್ಯೆ. 314; ರಮೇಶ್ ಮತ್ತು ಶರ್ಮಾ, ತುಳುನಾಡಿನ ಶಾಸನಗಳು, ಪುಟ.81
48. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, ಪುಟ. 81.
49. ಎಸ್‌ಐಐ, ಸಂಪುಟ. 8, ಭಾಗ–1, ಸಂಖ್ಯೆ. 396 ಮತ್ತು ಬಿಟ್ಟಿದೇವಾಳುಪೇಂದ್ರನ ಶಾಸನ, ಬಿ. ವಸಂತ ಶೆಟ್ಟಿ, ಯಾನ್ ಆಳುಪ ಇನ್ಸ್‌ಕ್ರಿಪ್ಷನ್ ಪ್ರಾಂ ಚೇರ್ಕಾಡಿ, ದಿ ಜರ್ನಲ್ ಆಫ್ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಸಂಪುಟ. 1, ಸಂಖ್ಯೆ–1, 1978.
50. ಎಸ್‌ಐಐ, ಸಂಪುಟ. 7, ಸಂಖ್ಯೆ. 290.
51. ಅದೇ, ಸಂಖ್ಯೆ. 376
52. ಎಆರ್‌ಎಸ್‌ಐಇ, 1964–65, ಎಪೆಂಡೆಕ್ಸ್. ಬಿ. ಸಂಖ್ಯೆ, 438.
53. ಎಸ್‌ಐಐ, ಸಂಪುಟ. 7, ಸಂಖ್ಯೆ. 185
54. ಅದೇ.
55. ಟಿ.ವಿ. ಮಹಾಲಿಂಗಂ, ಸೌತ್ ಇಂಡಿಯನ್ ಪಾಲಿಟಿ, ಪುಟ, 108.
56. ಎಆರ್‌ಎಸ್‌ಐಇ, ಸಂಖ್ಯೆ. 257, 1931–32.
57. ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್, ಸಂಪುಟ. 3, ಭಾಗ –1 ಸಂಖ್ಯೆ. 44, ವೈಜಪ ಸಾಹನಿಯ ಪ್ರಧಾನಿಕೆಯಲ್ಲಿ ಅಜನ್ನ ಅಧಿಕಾರದಲೂ.
58. ಎಸ್‌ಐಐ, ಸಂಪುಟ.7, ಸಂಖ್ಯೆ. 312.
59. ಎಆರ್‌ಎಸ್‌ಐಇ, ಸಂಖ್ಯೆ, 336, 1931–32.
60. ಎಸ್‌ಐಐ, ಸಂಪುಟ.7, ಸಂಖ್ಯೆ. 237.
61. ಕೆ.ಐ, ಸಂಪುಟ. 3, ಭಾಗ. 1, ಸಂಖ್ಯೆಗಳು 45, 46.
62. ಎಆರ್‌ಎಸ್‌ಐಇ, ಸಂಖ್ಯೆ. 336, 1931–32.
63. ಎಸ್‌ಐಐ, ಸಂಪುಟ. 7, ಭಾಗ–1, ಸಂಖ್ಯೆ 312.
64. ಎಸ್‌ಐಐ, ಸಂಪುಟ. 9, ಭಾಗ–1, ಸಂಖ್ಯೆಗಳು 395 ಮತ್ತು 396.
65. ವಸಂತ ಶೆಟ್ಟಿ, ಮೇಲಿನದೆ
66. ಎಸ್‌ಐಐ, ಸಂಪುಟ. 7, ಸಂಖ್ಯೆ 314.
67. ಶಾಸನ ಶಬ್ದಕೋಶಮು, ಪೀಠಿಕೆ, ಪುಟಗಳು. 14–27.
68. ಬಿ.ಎ. ಸಾಲೆತ್ತೂರ್, ಎನ್ಸಿಯಂಟ್ ಕರ್ನಾಟಕ, ಪುಟ. 184; ಜೆ.ಡಿ.ಎಂ. ಡಿರೆಟ್, ದಿ ಹೊಯ್ಸಳ ಡೈನಾಸ್ಟಿ, ಲಂಡನ್, 1957, ಪುಟ. 191; ಎ.ವಿ. ನರಸಿಂಹಮೂರ್ತಿ, ದಿ ಸೇವುಣಾಸ್ ಆಫ್ ದೇವಗಿರಿ, ಪುಟ. 149; ಕೆ.ವಿ. ರಮೇಶ್, ಎ ಹಿಸ್ಟರಿ ಆಫ್ ಸೌತ್ ಕೆನರಾ, ಪುಟ. 248
69. ಎಆರ್‌ಎಸ್‌ಐಇ, ಸಂಖ್ಯೆ. 480, 1928–29, ಕ್ರಿ.ಶ. 1255
70. ಎಸ್‌ಐಐ, ಸಂಪುಟ. 3, ಸಂಖ್ಯೆ 354.
71. ಎಆರ್‌ಎಸ್‌ಐಇ, ಸಂಖ್ಯೆ. 336, 1931–32
72. ಎಸ್‌ಐಐ, ಸಂಪುಟ. 7, ಸಂಖ್ಯೆಗಳು 185, 213, 274 ಮತ್ತು 354.
73. ಅದೇ, ಸಂಖ್ಯೆಗಳು. 274, 354
74. ಅದೇ, 1930–31, ಸಂಖ್ಯೆ. 374.
75. ಕಿಟ್ಟೆಲ್, ಕನ್ನಡ ಇಂಗ್ಲೀಷ್ ಡಿಕ್ಷನೆರಿ
76. ಕರ್ನಾಟಕ ಇನ್ಸ್ ಕ್ರಿಪ್ಷನ್ಸ್, ಸಂಪುಟ.1 , ಸಂಖ್ಯೆ. 46, 47; ಸಂಪುಟ–3, ಪಾರ್ಟ್–1, ಸಂಖ್ಯೆ.8
77. ಎಆರ್‌ಎಸ್‌ಐಇ, 1928–29, ಸಂಖ್ಯೆ. 500.
78. ಎಸ್‌ಐಐ, ಸಂಪುಟ. 7, ಸಂಖ್ಯೆ. 354.





79. ಎಸ್‌ಐಐ, ಸಂಪುಟ 9, ಭಾಗ–1, ಸಂಖ್ಯೆ. 395
80. ಎಸ್‌ಐಐ, ಸಂಪುಟ 7, ಸಂಖ್ಯೆ. 278.
81. ಎಆರ್‌ಎಸ್‌ಐಇ, 1928–29, ಸಂಖ್ಯೆ. 509
82. ಟಿ.ಎನ್. ಸುಬ್ರಮಣ್ಯಂ, ಸೌತ್ ಇಂಡಿಯನ್ ಟೆಂಪಲ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ. 3, ಭಾಗ–2, ಗ್ಲೊಸರಿ. ಪುಟ 12
83. ಇಂಡಿಯನ್ ಆ್ಯಂಟಿಕ್ವೇರಿ, ಸಂಪುಟ–51, ಪುಟಗಳು. 173–76
84. ಎಪಿಗ್ರಾಫಿಕಾ ಇಂಡಿಕಾ, ಸಂಪುಟ–35, ಪುಟಗಳು 291–92
85. ಕೆ.ಎಂ. ಪಣಿಕ್ಕರ್, ಜಿಯಾಗ್ರಾಫಿಕಲ್ ಫ್ಯಾಕ್ಟರ್ಸ್ ಇನ್ ಇಂಡಿಯನ್ ಹಿಸ್ಟರಿ, ಪು. 59. ನೋಡಿ ಕೆ.ವಿ. ರಮೇಶ್, ಮೇಲಿನದೆ, ಪುಟ. 253.
86. ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್, ಸಂಪುಟ.1, ಸಂಖ್ಯೆ–48.
87. ಎಸ್‌ಐಐ, ಸಂಪುಟ–7, ಪುಟ. 185.
88. ಎಪಿಗ್ರಾಫಿಕಾ ಇಂಡಿಕಾ, ಸಂಪುಟ 32, ಪುಟ. 322.
89. ಎಪಿಗ್ರಾಫಿಕಾ ಕರ್ನಾಟಕ, ಸಂಪುಟ. 8, ಎಸ್ ಬಿ 10.
90. ಅದೇ, ಸಂಖ್ಯೆ. 251 ಮತ್ತು 281.
91. ಎಪಿಗ್ರಾಫಿಕಾ ಇಂಡಿಕಾ, ಸಂಪುಟ 9, ಪುಟಗಳು, 17–18.
92. ಎಸ್‌ಐಐ, ಸಂಪುಟ–7, ಸಂಖ್ಯೆ. 279.
93. ಎಪಿಗ್ರಾಫಿಕಾ ಇಂಡಿಕಾ, ಸಂಪುಟ 9, ಪುಟ – 21

■

# ಅಣ್ಣಿಗೇರಿಯ ಶಾಸನಗಳೋಕ್ತ ಗಾವುಂಡರು

❑ ಸಂಜಯ ಎನ್. ಹಂಜೆ
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಭಾರತದ ಇತಿಹಾಸ
ಮತ್ತು ಶಾಸನವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–580 003
ಮೊ: 9886592927

## 1. ಪೀಠಿಕೆ

ಕನ್ನಡನಾಡನ್ನಾಳಿದ ಬಹುತೇಕ ಆಳರಸರು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಹಲವು ವಿಭಾಗಗಳಲ್ಲಿ ವಿಂಗಡಿಸಿದ್ದರು. ಈ ವಿಭಾಗಗಳ ಆಡಳಿತವನ್ನು 'ಮಹಾಮಂಡಳೇಶ್ವರರು' ನೋಡಿಕೊಳ್ಳುತ್ತಿದ್ದರು.[1] ಆಳರಸರು ಅಥವಾ ಮಹಾಮಂಡಳೇಶ್ವರರು ದೊಡ್ಡ ದೊಡ್ಡ ವಿಭಾಗಗಳನ್ನು ಉಪವಿಭಾಗಗಳಲ್ಲಿ ವಿಂಗಡಿಸಿ, ಇವುಗಳ ಆಡಳಿತವನ್ನು 'ಮಹಾಸಾಮಂತ'ರಿಗೆ ಒಪ್ಪಿಸಿದ್ದರು.[2] ಉಪವಿಭಾಗದ ಕೆಲವು ಗ್ರಾಮಗಳನ್ನೊಳಗೊಂಡ ಒಂದು ಸಮೂಹವನ್ನು 'ಪ್ರಭುಗಾವುಂಡರು' ಆಳುತ್ತಿದ್ದರು.[3] ಪ್ರಭುಗಾವುಂಡರ ಅಧೀನದಲ್ಲಿ ಗ್ರಾಮಗಳ ಆಡಳಿತವನ್ನು 'ಗಾವುಂಡರು' ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಒಬ್ಬ ಗಾವುಂಡ ಇರುತ್ತಿದ್ದನು. ಕೆಲವು ಗ್ರಾಮಗಳಲ್ಲಿ ಹಲವು ಗಾವುಂಡರಿದ್ದು, ಇವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು.[4] ಗಾವುಂಡತನ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಇವರು ಗ್ರಾಮದ ಆಡಳಿತ, ರಕ್ಷಣೆ, ತೆರಿಗೆ ಸಂಗ್ರಹಣೆ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಇದರೊಂದಿಗೆ ಗ್ರಾಮಕ್ಕೆ ಕೊಳ್ಳೆಯ ಬಾಧೆ ಮೊದಲಾದ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡುತ್ತಿದ್ದರು.[5] ಕೆಲವು ಗಾವುಂಡರು ಏಕಭೋಗದಿಂದ ಆಳುತ್ತಿದ್ದರು. ವ್ಯಕ್ತಿಯು ತಾನು ಜೀವಂತವಾಗಿರುವರೆಗೆ ಮಾತ್ರ ಆಡಳಿತ ನಡೆಸುವುದು ಏಕಭೋಗವಾಗಿದೆ. ಈ ಅಧಿಕಾರ ಆತನ ವಂಶಸ್ಥರಿಗೆ





ಮುಂದುವರಿಯುವುದಿಲ್ಲ. ಮತ್ತೆ ಕೆಲವರು ತ್ರಿಭೋಗದಿಂದ ಆಳುತ್ತಿದ್ದರು. ಮೂರು ತಲೆಮಾರುಗಳವರೆಗೆ ಒಂದೇ ವಂಶಸ್ಥರು ಆಡಳಿತವನ್ನು ನಡೆಸುವುದು ತ್ರಿಭೋಗವಾಗಿದೆ.

## 2. ಅಣ್ಣಿಗೇರಿ ಶಾಸನಗಳೋಕ್ತ ಗಾವುಂಡರು

ಅಣ್ಣಿಗೇರಿಯ ಶಾಸನಗಳಲ್ಲಿ ಹಲವು ಗಾವುಂಡರ ಪ್ರಸ್ತಾಪಗಳಿವೆ. ಅವರು ತಮ್ಮ ಕಾರ್ಯನಿರ್ವಹಣೆಯ ಜೊತೆಗೆ ಕೆಲವು ಸಾಂಸ್ಕೃತಿಕ ಚಟುವಟಿಕೆಗಳನ್ನೂ ಕೈಗೊಂಡಿದ್ದಾರೆ. ಆ ವಿವರಗಳು ಈ ಕೆಳಗಿನಂತಿವೆ.

### 2.1. ಕಲಿಯಮ್ಮ

ಕ್ರಿ.ಶ. 751–52ರ ಶಾಸನದಲ್ಲಿ ಕಲಿಯಮ್ಮ ಗಾವುಂಡನ ನಿರೂಪಣೆಯಿದೆ.[6] ಈತನು ಬಾದಾಮಿ ಚಲುಕ್ಯರ ಇಮ್ಮಡಿ ಕೀರ್ತಿವರ್ಮನ (ಕ್ರಿ.ಶ. 744–757) ಆಳ್ವಿಕೆಯ ಕಾಲಾವಧಿಯಲ್ಲಿ ಜೇಬುಳಗೇರಿಯಲ್ಲಿ ಗಾವುಂಡಗೈಯುತ್ತಿದ್ದನು. ಆ ಸಂದರ್ಭದಲ್ಲಿ ಚೇದಿಯನ್ನು (ಚೈತ್ಯ > ಚೈತ್ಯಾಲಯ > ಬಸದಿ) ಮಾಡಿಸಿದ್ದಾನೆ. ಜೇಬುಳಗೇರಿ ಅಣ್ಣಿಗೇರಿಯ ಇಂದಿನ ಜಾಡಗೇರಿ ಓಣಿಯ ಪರಿಸರವಾಗಿರುವಂತೆ ತೋರುತ್ತದೆ.

### 2.2. ಚವುಂಡಗಾವುಂಡ

ಕ್ರಿ.ಶ. 1071–72ರ ಶಾಸನದಲ್ಲಿ ಚವುಂಡಗಾವುಂಡನ ಪ್ರಸ್ತಾಪವಿದೆ.[7] ಈತನು ಮತ್ತು ಹೆಗ್ಗಡೆ ಸಹಿತ ಮೂವತ್ತು ಜನ ದಾನಿಗಳು ಕೂಡಿಕೊಂಡು–

> **ಶ್ರೀಮದ್ರಾಜಧಾನಿ ಬಟ್ಟಣ ಮಣ್ಣಿಗೆಱೆಯ ಮಹಾಸ್ಥಾನಂ**
> **ಶ್ರೀಮದ್ ಗಂಗಪೆರ್ಮ್ಮಾಡಿಯ ಬಸದಿಗಾಳ್ವ ಗ್ರಾಮಾದಿ ವಾಡದಲು**
> **ಯಾಚಾರ್ಯ್ಯರುಂ ಚವುಂಡಗಾವುಂಡ ಮುಖ್ಯವಾಗಿ ಹೆಗ್ಗಡೆ ಸಹಿತ**
> **ಮೂವತ್ತು ಮನುಷ್ಯದೇವ ಪುತ್ರರ್ಗ್ಗೆ ಕೊಟ್ಟ ವ್ರಿತ್ತಿಯ ಕ್ರಮ ॥**

ಅಣ್ಣಿಗೇರಿಯ ಗಂಗಪೆರ್ಮಾಡಿ ಜಿನಾಲಯಕ್ಕೆ ಬಳತ್ಕಾರಗಣ ಪರಂಪರೆಯ ಉದಯಚಂದ್ರಸಿದ್ಧಾಂತದೇವನ ಶಿಷ್ಯ ಸಕಳಚಂದ್ರದೇವನ ಸನ್ನಿಧಿಯಲ್ಲಿ ಮುನಿಗಳ ಆಹಾರದಾನಕ್ಕೆ, ಪೂಜಾಕಾರ್ಯವನ್ನು ಮಾಡುವವರಿಗೆ ದಾನ ಮಾಡಿದ್ದಾರೆ. ಪ್ರಸ್ತುತ ಶಾಸನದಲ್ಲಿ ಆ ಮೂವತ್ತು ಜನ ದಾನಿಗಳ ಹೆಸರನ್ನು ಅಡ್ಡಹೆಸರು ಸಹಿತ ಪಟ್ಟಿಮಾಡಿ ಕೊಡಲಾಗಿದೆ.

### 2.3. ಕೇತಗಾವುಂಡ

ಕ್ರಿ.ಶ. 1071–72ರ ಶಾಸನದಲ್ಲಿ ಚವುಂಡಗಾವುಂಡನ ಪ್ರಸ್ತಾಪವಿದೆ.[8] ಈತನು–

> **ಕೇತಗಾವುಂಡ ಯಾಚಾರ್ಯ್ಯರ್ಗ್ಗೆ ಪಾದಪೂಜೆಯಂ ಕೊಟ್ಟು**
> **ತಮ್ಮ ಸೇನಗಣದ ಬಸದಿಗೆ ಹೂಲಿಗೊಳದ ಸೀಮೆವಿಡಿದು**
> **ಕುಳುಪಳ್ಳದಿಂ ಪಡುವಲು ಮತ್ತರೆಂಟು ಯಱುವಣಂ ಗದ್ಯಾಣಂ**
> **ನಾಲ್ಕಱಿಂದಧಿಕ ಕೊಂಡವರ್ಬ್ಬಂಡಾಳರು ॥**

ತನ್ನ ಮನೆದೇವರಾದ ಸೇನಗಣ ಪರಂಪರೆಯ ಜಿನಾಲಯಕ್ಕೆ, ಆ ಜಿನಾಲಯದ ಸ್ಥಾನಾಚಾರ್ಯರ ಪಾದಗಳನ್ನು ತೊಳೆದು ಎಂಟು ಮತ್ತರು ಭೂಮಿ ಮತ್ತು ಅರುವಣ ಗದ್ಯಾಣವನ್ನು ದಾನ ಮಾಡಿದ್ದಾನೆ.

**2.4. ಗಾವುಂಡವರ್ಗ**

ಕ್ರಿ.ಶ. 1157ರ, 1162ರ, 1170ರ, 1173ರ, 1186–87ರ, 1187–88ರ, 1190ರ, 1202ರ, ಕ್ರಿ.ಶ. ಸುಮಾರು 13ನೆಯ ಶತಮಾನದ (ಕ್ರಿ.ಶ. 1205) ಶಾಸನಗಳಲ್ಲಿ ಗಾವುಂಡವರ್ಗದ ಪ್ರಸ್ತಾಪಗಳಿವೆ.[9] ಇವರು ಕಲ್ಯಾಣದ ಕಲಚೂರಿಗಳು, ದೇವಗಿರಿ ಸೇವುಣರು, ದೋರಸಮುದ್ರದ ಹೊಯ್ಸಳರ ಕಾಲಾವಧಿಯಲ್ಲಿ ಅಣ್ಣಿಗೇರಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಪ್ರಸ್ತುತ ಶಾಸನಗಳು ಈ ಗಾವುಂಡವರ್ಗ ಮತ್ತು ಇವರ ಜೊತೆಯಲ್ಲಿ ದಾನ–ಧರ್ಮಗಳ ಕಾರ್ಯಗಳಲ್ಲಿ ನಿರತರಾಗಿದ್ದ ದೇವವರ್ಗ, ಪುರವರ್ಗಗಳ ಹಿರಿಮೆಯನ್ನು–

**ಗಾವುಣ್ಡವರ್ಗ್ಗಂ ವಿಧೃತಬಹುಕಳಾನೀಕ ಭೂದೇವವರ್ಗ್ಗಂ ಪು**
**ರವರ್ಗ್ಗಂ ಮತ್ತಮುರ್ವ್ವೀಸ್ತುತನಗರಮುಮುದ್ಯದ್ಗುಣರ್ತ್ತಂ**
**ತುವಾಯ......ಶೌರ್ಯ್ಯಧುರ್ಯ್ಯಪ್ರ್ವರ ಮಹಿತರೆನಲ್ತೇಜಪುಣ್ಯಪ್ರ**
**ಭಾವೋದ್ಧುರತೇಜಃಪುಂಜ ................... ಮಾಗಾತ್ರಿವರ್ಗ್ಗಂ ॥**

**ಗಾವುಂಡವರ್ಗ್ಗಂ ಕ್ಷಿತಿದೇವವರ್ಗ್ಗಂ**
**ದೇವಬ್ರಜೋದ್ಯತ್ಪುರವರ್ಗ್ಗ ಮೆಂದಿಂತಾವೀಃಕೃತಶ್ರೀ ವಿಳಸ**
**ತ್ರಿವರ್ಗ್ಗಂ ಭೂವಂದ್ಯಮಿನ್ತನ್ಯತಟಾಕಮೇಕಂ ॥**

**ಪುಸಿಯದುದಾರವೃತ್ತಿ ಪೊಣರ್ದ್ದೆಜದೆ ಸಾಹಸವೃತ್ತಿ ಪಾಪದ**
**ತ್ತ ಸಗದ ಶೌಚ ವೃತ್ತಿ ಚಲಮಲ್ಲದ ಸುಸ್ಥಿರವೃತ್ತಿ ನೈಜದಿಂ**
**ದೆಸೆಯೆ ಗುಣಾಢ್ಯವರ್ಗ್ಗ ಮನಿಳಾತಳದೊಳ್ದಿಟದಿನ್ದೆ ಕೂರ್ತ್ತು ಕೀ**
**ರ್ತ್ತಿಸದನಾವನಣ್ಣಿಗೆಱೆಯ ಪ್ರಥಿತಪ್ರಬಳತ್ರಿವರ್ಗ್ಗಮಂ ॥**

**ಕ್ಷಿತಿ ತಡ ಸಂಸ್ತುತಮಾದುದು**
**ಸತತಂ ಗಾವುಣ್ಡವರ್ಗ್ಗವಾದ್ವಿಜವರ್ಗ್ಗಂ**
**ನುತ ನಾನಾ ಸ್ಥಾನಾಚಾ**
**ರ್ಯ್ಯ ತಪೋಧನವರ್ಗ್ಗ ಮಿತ್ರವರ್ಗ್ಗಮತರ್ಕ್ಯ ॥**

**ಅದರೊಳ್ಪೊಗಯಿಸು**
**ವುದು ಗುಣಸದನಂ ಗಾವುಣ್ಡವರ್ಗ್ಗವಾದ್ವಿಜವರ್ಗ್ಗಂ**
**ವಿದಿತ ವಣಿಕವರ್ಗ್ಗಂ**
**ಸದಭೀಷ್ಟುತವೀ ತ್ರಿವರ್ಗ್ಗವಮಳಿನಮಾರ್ಗ್ಗಂ ॥**

**ಖ್ಯಾ ............ಭಾಮಿನಿ ಭಾಸುರ..............ಕರಂ ತನ್ಮಹಾಪತ್ತನಂ**
**ತಜ್ಜಾತಂ ಶೋಭಿಪ್ಪುದುದ್ಯದ್ಗುಣಗಣರಚಿತಾನನ್ತ ಗಾವುಂಡವರ್ಗ್ಗಂ**
**ನೂತಾ........................ ವರವಿಳಸದ್ವರ್ಗ್ಗಮತ್ಯುದ್ಗೆಜಗಮಾಕೂರ**
**ಶ್ರೀಮನ್ಮುನೀಂದ್ರಸ್ಥಗಿತನುತಪುರೀವರ್ಗ್ಗವನ್ತು ತ್ರಿವರ್ಗ್ಗಂ...ಯವೆನ್ತೆನೆ ॥**





**ಶರಣಗ್ಗೂರ್ಜ್ಜಿತಸೌಖ್ಯವೀವಸಮಯಂ ಪ್ರತ್ಯರ್ತ್ಥಿ ವರ್ಗ್ಗಕ್ಕೆ ಚ**
**ಚ್ಚರದಿಂ ಭೀತಿಯ ಮಾ......................ವಿದ್ವಜ್ಜನಗ್ಗಿಷ್ಟಮಂ**
**ಚಿರಕಾಲಂ ಪರಿಪೂರಿಪಿಪ್ಪ ಸಮಯಂ ತಾನೆಂದು ವಿಖ್ಯಾತವೀ**
**ಸುರಭೂಜೋಪಮ ....... ಯಂ ಲೋಕೈಕಸಂಸೇವ್ಯವು ॥**

**ಭೂದೇವಶ್ರೇಣಿಗಂ ನಿಜಕರಾವರ್ಜ್ಜದಿಂ ಜೀವಕಂ ಭೂಭೃದ್ವರ್ಗ್ಗೇಸಂ**
**ಗಧಿಕವ.................... ಪೆರ್ಮೆಯಂ ಉದ್ಧಮಾ ಧಾರಿಗೆ ವಿಘಟಕಂ**
**ತೇಜದಿಂ ಧಮ್ಮಕರ್ಮ್ಮನಿದ್ರಗ್ಗೆಲ್ಲಂ ಪಡವಳವೃಕ್ಷಾಭಿಖ್ಯ**
**..................... ನಃ ಸದಾಚಾರಕಳೇವರಾ ॥**

**ನಿರುತಂ ಗಾವುಣ್ಡವರ್ಗ್ಗಂ ವಿನುತಗುಣಗಣಾಂಬೋಧಿ ಭೂದೇವವರ್ಗ್ಗಂ**
**ಪುರವರ್ಗ್ಗಂ ತದ್ಭವಶ್ರೀವನಿತಗೆ ನಗರಂ ಸಾಲಿಗನ್ರ್ನೂತ್ನರತ್ನಾ**
**ಭರಣಬ್ರಾತಂ ಸಮನ್ತೆಂಬಿನ............ಮಳವಚೋಲಕ್ಷ್ಮಿಗುದ್ಯಂನಿವಾಸಂ**
**ಪಿರಿದುಂ ಕಣ್ಗೆಡ್ಡಮಾದಂತತುಳಿತವಿಳಸತ್ಪುಣ್ಯಮಾರ್ಗ್ಗಂ ತ್ರಿವರ್ಗ್ಗಂ ॥**

**ಇವರಿಂ ಲೋಕದ ವೀರವರ್ಗ್ಗವೆನಿಪೊಂದಾಖ್ಯಾನಮಂ ತೀರ್ಪ್ಪವೊಲ್**
**ಜವನಂ ಜಕ್ಕುಲಿಪರ್ ಕಡಂಗು ವಿಭದೊಳು ಕಯ್ಯಿಕ್ಕುವರ್ಬ್ಬೀಮ ಭೈ**
**ರವನಬಗ್ಗಿಪರಟ್ಟಿಪೊಯ್ವಸಿಡಿಲಂ ಮಾರ್ಪ್ಪೊಯ್ವರಾಳರ್ದ್ದಸಿಂಗಮನಾರ್ದ್ದ**
**ಪ್ಪುವರೆಂದೊಡೀ ಸಮಯಸಾಸಿರ್ವ್ವರ್ಗ್ಗೆ ಮಾಱಾಂಪರಾರ್ ॥**

**ವರವಿದ್ಯಂ ವಿಶ್ವಪೂಜ್ಯ ವಿಮಳಗುಣಗಣಾಳಂಕೃತಂ ವಿಪ್ರವರ್ಗ್ಗಂ**
**ನಿರವದ್ಯಂ ನೀತಿಹೃದ್ಯಂ ನಿರುಪಮಮಹಿಮಾಂಬೋಧಿ ಗಾವುಂಡವರ್ಗ್ಗಂ**
**ಹರಪಾದಾಂಭೋಜಪೂಜಾಪರಿಣತೆ ಯತಿವರ್ಗ್ಗಂ ಲಸದ್ಧರ್ಮ್ಮಮಾರ್ಗ್ಗಂ**
**ಪರಮಾರ್ತ್ಥಂ ನೋರ್ಪ್ಪಡಣ್ಣಿಂಗೆಱೆಯೊಳೆಸವು....ತಾದ್ಯವರ್ಗ್ಗಂ ತ್ರಿವರ್ಗ್ಗಂ ॥**

ಎಂದೆಲ್ಲ ಸವಿಸ್ತಾರವಾಗಿ ವರ್ಣಿಸಿವೆ. ಆಳರಸರಾದಿ ಅಧಿಕಾರಿಗಳು ಅಣ್ಣಿಗೇರಿಯ ದೇವಾಲಯಗಳ ವಿವಿಧ ಕಾರ್ಯಗಳಿಗೆ ಕೊಡಮಾಡುತ್ತಿದ್ದ ದಾನ–ದತ್ತಿಗಳನ್ನು ಈ ಗಾವುಂಡವರ್ಗಕ್ಕೆ ಪ್ರತಿಪಾಳಿಸಲು ಸೂಚಿಸಿರುವುದು ಕೆಲವು ಶಾಸನಗಳಲ್ಲಿ ದಾಖಲಾಗಿದೆ.[10]

**2.5. ಬಿಜ್ಜಗಾವುಂಡ ಮತ್ತು ಎರೆಯಮ್ಮ ಗಾವುಂಡ**

ಕ್ರಿ.ಶ. 1161ರ ಶಾಸನದಲ್ಲಿ ಬಿಜ್ಜಗಾವುಂಡ ಮತ್ತು ಆತನ ಅಳಿಯನಾದ ಎರೆಯಮ್ಮ ಗಾವುಂಡನ ಪ್ರಸ್ತಾಪಗಳಿವೆ.[11] ಇವರಿಬ್ಬರೂ ಕಲ್ಯಾಣದ ಕಲಚೂರಿಗಳ ಇಮ್ಮಡಿ ಬಿಜ್ಜಳದೇವ ಆಳ್ವಿಕೆಯ ಕಾಲಾವಧಿಯಲ್ಲಿ ಅಣ್ಣಿಗೇರಿಯಲ್ಲಿ ಗಾವುಂಡಗೈಯುತ್ತಿದ್ದರು. ಇವರ ಕಾರ್ಯಚಟುವಟಿಕೆಗಳ ಕುರಿತು ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ. ಬೆಳ್ವೊಲನಾಡಿನ ಮಹಾಪ್ರಧಾನ ದಂಡನಾಯಕ ಹೆಗ್ಗಡೆ ಶ್ರೀಧರಯ್ಯನು–

**ಬಿಜ್ಜಗಾವುಣ್ಡನಳಿಯ ನೆಱೆಯಂಮಗಾವುಣ್ಡನ ಸ್ಥಳದೊಳಗೆ**
**ಯಣ್ಣಿಗೆಱೆಯ ಗಡಿಂ.......ಳಯಲ್ಲಿದ........ತ.....ಬಿಜ್ಜಗಾವುಣ್ಡ**
**ನಳಿಯ ನೆಱೆಯಮಗಾವುಣ್ಡನ ಕಯ್ಯಲು ದ್ರ...........ರಸ್ಪರಂ**
**ಧಾರಾಪೂರ್ವ್ವಕವಾಗಿ ಪಂಚೋತ್ತರ ಸಹಿತ ಮಾಱುಗೊಂಡು**
**ದಿವ್ಯತಿಥಿಯೊಳು .................... ದಕ್ಷಿಣವಾರಣಾಸಿ ದಿವ್ಯತೀರ್ತ್ಥ**

ದಮೃತೇಶ್ವರದೇವರ್ಗ್ಗೆ ವ್ಯತೀಪಾತದಲು ರಂಗಪೂಜೆಗೆ ಧಾರಾ
ಪೂ...ಳು ಪಂಚೋತ್ತರಸಹಿತಂ ಮಾಱುಗೊಂಡು ಬಿಟ್ಟ ಮತ್ತರು
ಹಂನೆರಡು ..................................

ರಾಜಧಾನಿಪಟ್ಟಣ ಅಣ್ಣಿಗೇರಿಯಲ್ಲಿ ಬಿಜ್ಜಗಾವುಂಡನ ಅಳಿಯನಾದ ನೆರೆಯಮ ಗಾವುಂಡನಿಂದ ಅಣ್ಣಿಗೇರಿಯ ಗಡಿಂಬದಿಂದ (ಅಳತೆ ಕೋಲು) ಭೂಮಿಯನ್ನು ಪಂಚೋತ್ತರಸಹಿತ (ಪಂಚರ ಸಮ್ಮುಖದಲ್ಲಿ) ಖರೀದಿಸಿ, ಅಮೃತೇಶ್ವರ ದೇವಾಲಯದ ರಂಗಪೂಜೆಗೆ ದಾನ ಮಾಡಿದ್ದಾನೆ.

### 2.6. ಗಾವುಂಡ

ಅಣ್ಣಿಗೇರಿಯ ಕ್ರಿ.ಶ. 1173ರ ಶಾಸನದಲ್ಲಿ ಗಾವುಂಡನ ನಿರೂಪಣೆಯಿದೆ.[12] ಶಾಸನದ ಅಕ್ಷರಗಳು ಸವೆದಿರುವುದರಿಂದ ಈತನ ಹೆಸರು ಸ್ಪಷ್ಟವಿಲ್ಲ. ಈತನು ಅಣ್ಣಿಗೇರಿಯಲ್ಲಿ ಗಾವುಂಡಗೈಯುತ್ತಿದ್ದನು.

### 2.7. ಶೋಭನಗಾವುಂಡ

ಕ್ರಿ.ಶ. 1173ರ ಶಾಸನದಲ್ಲಿ ಶೋಭನಗಾವುಂಡನ ನಿರೂಪಣೆಯಿದೆ.[13] ಈತನು ಈ ಮೇಲಿನ ಗಾವುಂಡನ ಮಗನಾಗಿದ್ದಾನೆ. ಅಣ್ಣಿಗೇರಿಯಲ್ಲಿ ಗಾವುಂಡಗೈಯುತ್ತಿದ್ದನು. ಈತನ ಕಾರ್ಯಚಟುವಟಿಕೆಗಳ ಕುರಿತು ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

### 2.8. ಬಮ್ಮಗಾವುಂಡ

ಕ್ರಿ.ಶ. 1173ರ ಶಾಸನದಲ್ಲಿ ಈ ಮೇಲಿನ ಶೋಭನಗಾವುಂಡನ ಮಗ ಬಮ್ಮಗಾವುಂಡನ ಪ್ರಸ್ತಾಪವಿದೆ.[14] ಈತನು ಈ ಮೇಲಿನ ಶೋಭನಗಾವುಂಡನ ಮಗನಾಗಿದ್ದಾನೆ. ಅಣ್ಣಿಗೇರಿಯಲ್ಲಿ ಗಾವುಂಡಗೈಯುತ್ತಿದ್ದನು. ಈತನ ಕಾರ್ಯಚಟುವಟಿಕೆಗಳ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

### 2.9. ಮೂಕಯ್ಯಗಾವುಂಡ

ಕ್ರಿ.ಶ. 1173ರ ಶಾಸನದಲ್ಲಿ ಈ ಮೇಲಿನ ಬಮ್ಮಗಾವುಂಡನ ಮಗ ಮೂಕಯ್ಯಗಾವುಂಡನ ಉಲ್ಲೇಖವಿದೆ.[15] ಈತನು ಈ ಮೇಲಿನ ಬಮ್ಮಗಾವುಂಡನ ಮಗನಾಗಿದ್ದಾನೆ. ಪ್ರಸ್ತುತ ಶಾಸನವು ಈತನನ್ನು–

ಕಡುವೀರ ಶ್ರೀ......ಯ ಗಾವುಂಡನ ಪುತ್ರಂ ಶೋಭನಗಾವುಣ್ಡ
ನಾತನ ಪುತ್ರಂ ಬಮ್ಮಗಾವುಂಡನ ತತುಸೂನು ಪಟ್ಟಣಪ್ರಭು
ಮಹಾಪಸಾಯಿತಂ ಕರಣಾಧಿಷ್ಟಾಧಿನಾಯಕಂ ಮೂಕಯ್ಯ
ಗಾವುಂಡನಾತನ ಮಹಿಮೆಯಂತೆಂದೆಡೆ
...........ರಱಿಯಲುಕೆ ನೆಗಳ್ದನ...ಯಗುಣಂ ಮೂಕಗಾವುಣ್ಡನಲ್ಲಿಂ
ಬಳಿಕ ಶ್ರೀಯೊಡೆಯನಾತನಳಿಯ.....ಗಾವುಂಡನೊಳ್ಪಂತಳೆದನಾತನ
ತನೆಯಂ ಭುವನಪರೀತಯಶಂ ...ಜ್ಜಗೌಡನಾವಿಭುವಿನ ಜಾಮಾತ್ರಿ
ಬುಧನಿಕರ....... ನೆಗರ್ದನಱಕೆಯಱಮಗೌಡಂ ॥





ಎಂದೆಲ್ಲ ಕೊಂಡಾಡಿದೆ. ಈತನನ್ನು 'ಪಟ್ಟಣಪ್ರಭು ಮಹಾಪಸಾಯಿತಂ ಕರಣಾಧಿಷ್ಟಾಧಿ ನಾಯಕಂ' ಎಂದು ಕರೆಯಲಾಗಿದೆ. ಈ ಹಿನ್ನೆಲೆಯಲ್ಲಿ ಈತನು ಅಣ್ಣಿಗೇರಿ ಪಟ್ಟಣದ ಆಡಳಿತದ ಮುಖ್ಯಾಧಿಕಾರಿಯಾಗಿ ಮತ್ತು ಲೆಕ್ಕಪತ್ರಗಳ ಖಾತೆಯ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು ಎಂಬುದು ಸ್ಪಷ್ಟವಾಗುತ್ತದೆ.

### 2.10. ಎರೆಯಮ್ಮ ಗಾವುಂಡ

ಕ್ರಿ.ಶ. 1173ರ, 1179 ಶಾಸನಗಳಲ್ಲಿ ಈ ಮೇಲಿನ ಮೂಕಯ್ಯಗಾವುಂಡನ ಅಳಿಯನಾದ ಎರೆಯಮ್ಮ ಗಾವುಂಡನ ಪ್ರಸ್ತಾಪಗಳಿವೆ.[16] ಈತನ ಕಾರ್ಯಚಟುವಟಿಕೆಗಳ ಕುರಿತು ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

### 2.11. ನಾಗಗಾವುಂಡ

ಕ್ರಿ.ಶ. 1173ರ, 1179ರ ಶಾಸನಗಳಲ್ಲಿ ಈ ಮೇಲಿನ ಎರೆಯಮಗಾವುಂಡನ ಮಗ ನಾಗಗಾವುಂಡನ ನಿರೂಪಣೆಗಳಿವೆ.[17] ಕ್ರಿ.ಶ. 1173ರ ಶಾಸನವು ಈತನ ತಂದೆತಾಯಿ, ಹಿರಿಮೆ, ದಾನಧರ್ಮಗಳು–

ಈ ವಸುಮತಿಯೊಳಗೆಱಿಯಮ ಗಾವುಂಡನ ಸತಿ ...ಶಿಷ್ಟಕುಲವತಿ
ಗುಣಭೂಶಾವತಿ ವಿವೇಕಸತಿ ಮಳೆಯವತಿ ನೆಗರ್ದೆಳಬಳಾರತುನ ॥

ಅವರಿರ್ವ್ವರ್ಗ್ಗೆ ಪುಟ್ಟಿದ
ನವದಾತ್ತ ಯಶಂ ಸಮಸ್ತಗುಣಗಣ ಲೀಳಾ
ಭವನಂ ಸ್ವಾಶ್ರಿತ ರಕ್ಷಣ
ನಿವಿಷ್ಟಮತಿ ನಾಗಗಾವುಣ್ಡನಾಹವಶೌಣ್ಡಂ ॥

ಗುಣದೊಳುಗಾಂಭೀರ್ಯ್ಯದೊಳು ಧೈರ್ಯ್ಯದೊಳಮಳಿನಚಾರಿತ್ರದೊಳುಬನ್ಧುಸಂರ
ಕ್ಷಣದೊಳ್ದಾಕ್ಷಿಣ್ಯದೊಳು ಪುಣ್ಯದೊಳಭವಲಸದ್ಭಕ್ತಿಯೊಳ್ಸೂಕ್ತಿಯೊಳ್ಮಾ
ರ್ಗ್ಗಣವಾಂಛ್ಚಾ..........ಳ್ದಾನದೊಳವನಿಯೊಳೀ ನಾಗಗಾವುಣ್ಡನೊಳ್ಪೊ
ಳಣೆಯಾವಂ ನೋಳ್ಪಡಂದೆಂದಖಿಳಬುಧಜನಂ ಬಣ್ನಿಕುಂ ಪ್ರೀತಿಯಿಂದಂ ॥

ಯೆನೆನೆಗಳ್ದ ನಾಗಗಾವು
ಣ್ಡನನಿಂದ್ಯಂ ಭಕ್ತಿಯಿಂದ ನಾಗೇಶ್ವರದೇ
ವನಿವಾಸ ಮನಣ್ನಿಗೆಱಿಗೆ
ವಿನೂತ ತಿಳಕಾಯಮಾನಮಂ ಮಾಡಿಸಿದ ॥

ಅನನ್ತರಂ ಶ್ರೀಮತು ಕಳಚುರ್ಯ್ಯ ಚಕ್ರವರ್ತ್ತಿ ರಾಯಮುರಾರಿ
ಸೋವಿದೇವನ ಬೆಸದಿಂ ಶ್ರೀಮದ್ದಣ್ಡನಾಯಕಂ ಧನ್ನುಗಿದೇವ
ಪ್ರಮುಖ ಸಮಸ್ತ ಕರಣಂಗಳುಂ ತ್ರಿವರ್ಗ್ಗ ಸಮಯಸಾಸಿರ್ವ್ವರುಂ
ಪುರಪಟ್ಟಣದ ಸನ್ನಿಧಾನದಲು ಶ್ರೀಮನ್ನಾಗೇಶ್ವರ ದೇವಾಲ್ಯದ
ಮಾಟಕೂಟ ಪ್ರಾಸಾದಕ್ಕಂ ಅಂಗಭೋಗ ರಂಗಭೋಗಕ್ಕಂ
ತಪೋಧನರಾಹಾರದಾನ ವಿದ್ಯಾದಾನಕ್ಕಂ ಗೀತವಾದ್ಯನ್ರಿತ್ಯ
ಮನ್ನದಾನಮಿನಿತರ್ಕ್ಕಂ ಸರ್ವ್ವನಮಸ್ಯ ಸರ್ಬಾಬಾಧ

**ಪರಿಹಾರವಾಗಿ ಸುವರ್ಣ್ನಪುರಸ್ಸರ ಧಾರಾಪೂರ್ವ್ವಕಂ ಮಾಡಿ**
**ಪಡೆದು ಸಕವರ್ಷ 1095ನೆಯ ನನ್ದನ ಸಂವತ್ಸರ ಪುಶ್ಯಷುದ್ಧ**
**5 ಸೋಮವಾರ ವುತ್ತರಾಯಣ ಸಂಕ್ರಾನ್ತಿ ವ್ಯತೀಪಾತ ಪುಣ್ಯತಿಥಿ**
**ಯೊಳು ಶ್ರೀಮನ್ನಾಗೇಶ್ವರ ದೇವರಿಗೆ ಧಾರಾಪೂರ್ವ್ವಕಂ ಮಾಡಿ**
**ನಾಗಗಾವುಣ್ಡಂ ತನ್ನ ಗಾವುಣ್ಡ ವೊಲದೊಳಗೆ ಪಂಚೋತ್ತರ**
**ಮೆನಿಳಿಪಿಕೊಟ್ಟ ಮತ್ತರು ನಾನ್ನೂಱಯ್ವತ್ತರ ........................**

ಎಂದೆಲ್ಲ ಕೊಂಡಾಡಿದೆ. ಈತನು ಅಣ್ಣಿಗೇರಿಯಲ್ಲಿ ನಾಗೇಶ್ವರ ದೇವಾಲಯವನ್ನು ಮಾಡಿಸಿ, ರಾಯಮುರಾರಿ ಸೋವಿದೇವನ ಆಜ್ಞೆಯ ಮೇರೆಗೆ ದಂಡನಾಯಕ ಧನ್ನುಗಿದೇವ, ಸಮಸ್ತ ಕರಣಿಕರು, ತ್ರಿವರ್ಗ್ಗ ಸಮಯಸಾಸಿರ್ವ್ವರಿಂದ ನಾಗೇಶ್ವರ ದೇವಾಲಯದ ಜೀರ್ಣೋದ್ಧಾರ, ಅಂಗಭೋಗ, ರಂಗಭೋಗ, ತಪೋಧನರ ಆಹಾರದಾನ, ವಿದ್ಯಾದಾನ, ಗೀತವಾದ್ಯ ಮೊದಲಾದವುಗಳಿಗೆ ನಾನೂರೈವತ್ತು ಮತ್ತರು ಭೂಮಿಯನ್ನು ಪಡೆದು ಧಾರಾಪೂರ್ವಕವಾಗಿ ದಾನ ಮಾಡಿದ್ದಾನೆ. ಹಾಗೆಯೇ ಕಲಚೂರಿಗಳ ನಿಸ್ಸಂಕಮಲ್ಲ ಸಂಕಮದೇವನ ಆಳ್ವಿಕೆಯ ಕಾಲದಲ್ಲಿ ಹುಲಿಗೆರೆನಾಡಿನ (ಪುಲಿಗೆರೆ–300) ಹೆಗ್ಗಡೆ ಪ್ರತಾಪ ದಂಡನಾಯಕರು ರಾಜಧಾನಿ ಪಟ್ಟಣ ಅಣ್ಣಿಗೇರಿಯ ಸ್ವಯಂಭು ಅಮೃತೇಶ್ವರ ದೇವರ ಧಾರ್ಮಿಕ ಕಾರ್ಯಗಳಿಗೆ ತಳಾರ (ತಳವಾರ) ಬಾಚಯ್ಯ ನಾಯಕನು ತ್ರಿವರ್ಗ್ಗದ ಸಮಕ್ಷಮದಲ್ಲಿ ನಾಗಗಾವುಂಡನಿಂದ ಧಾರಾಪೂರ್ವಕವಾಗಿ ಭೂಮಿಯನ್ನು ಮಾರುಗೊಂಡು ದಾನ ಮಾಡಿದ್ದಾರೆ.

### 2.12. ಪಂಚರು (ಪಟ್ಟಣದ ಹಿರಿಯರು)

ಕ್ರಿ.ಶ. 1173ರಕ್ರಿ.ಶ. 1173ರ ಶಾಸನಗಳಲ್ಲಿ ಪಂಚರ ಪ್ರಸ್ತಾಪಗಳಿವೆ.[18] ಇವರು ಅಣ್ಣಿಗೇರಿಯ ಹಿರಿಯರಾಗಿದ್ದರು. ಪಂಚರ ಸಮ್ಮುಖದಲ್ಲಿ ಕೆಲವು ಆಳರಸರಾದಿ ಅಧಿಕಾರಿಗಳು ಇಲ್ಲಿಯ ದೇವಾಲಯಗಳಾದಿ ವಿವಿಧ ಕಾರ್ಯಗಳಿಗೆ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ. ಇವರು ಆ ದಾನ–ದತ್ತಿಗಳನ್ನು ಪ್ರತಿಪಾಳಿಸುತ್ತಿದ್ದರು.[19]

### ಕೊನೆಟಿಪ್ಪಣಿ

1. ನಾಗಯ್ಯ ಜೆ.ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ* (1992), ಪು. 151–155.
2. ಅದೇ, ಪು. 130–132.
3. ಅದೇ, ಪು. 249.
4. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (1979), ಪು. 356–357.
5. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 253.
6. ಪಾಡಿಗಾರ ಶ್ರೀನಿವಾಸ ವಿ. (ಸಂ.), *ಇನ್ಸ್‌ಕ್ರಿಪ್ಷನ್ಸ್ ಆಫ್ ದಿ ಚಲುಕ್ಯಾಸ್ ಆಫ್ ಬಾದಾಮಿ* (2010), ಶಾ.ಸಂ. 139.
7. ಇ.ಆಯ್. ಸಂ. XV, ಶಾ.ಸಂ. 23/ಬಿ.
8. ಅದೇ.





9. ಎಸ್.ಆಯ್.ಆಯ್. ಸಂ. XV, ಶಾ.ಸಂ. 59, 72, 96, 102, 122, 149, 213, 216, 224. ಗೋಗಿ ಹನುಮಾಕ್ಷಿ, "ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು", ಅನುಶಾಸನ (2002), ಪು. 171–176.
10. ಎಸ್.ಆಯ್.ಆಯ್. ಸಂ. XV, ಶಾ.ಸಂ. 59, 102, 149, 213, 216. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. 176–179.
11. ಎಸ್.ಆಯ್.ಆಯ್. ಸಂ. XV, ಶಾ.ಸಂ. 100.
12. ಅದೇ, ಶಾ.ಸಂ. 122.
13. ಅದೇ, ಶಾ.ಸಂ. 122.
14. ಅದೇ, ಶಾ.ಸಂ. 122.
15. ಅದೇ, ಶಾ.ಸಂ. 122.
16. ಅದೇ, ಶಾ.ಸಂ. 122. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
17. ಅದೇ. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
18. ಅದೇ, ಶಾ.ಸಂ. 100, 102, 122.
19. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನಗಳು.

■

# ಹೊಯ್ಸಳರ ಕಾಲದ ಜೈನ ಶಾಸನ ಸಾಹಿತ್ಯ ಮತ್ತು ಕವಿಗಳು


- **ಲೋಕೇಶ**
  ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
  ಪ್ರಾಚೀನ ಭಾರತದ ಇತಿಹಾಸ
  ಮತ್ತು ಶಾಸನವಿಜ್ಞಾನ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ,
  ಧಾರವಾಡ–580 003.
  ದೂ.: 9742916338


## 1. ಪೀಠಿಕೆ

**ಒಂ**ದು ನಾಡಿನ ಸಂಸ್ಕೃತಿಯ ವಿವಿಧ ಆಯಾಮಗಳ ಅಧ್ಯಯನಕ್ಕೆ ಶಾಸನಗಳ ಕೊಡುಗೆ ಅಪಾರವಾಗಿದೆ. ಇತಿಹಾಸದ ಪುನಾರಚನೆಗೆ ಅಧಿಕೃತ ದಾಖಲೆಗಳಾದ ಶಾಸನಗಳು ಪುರಾತತ್ತ್ವೀಯ ಆಧಾರವಾಗಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ವಾಸ್ತು, ಶಿಲ್ಪ ಮೊದಲಾದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕ ಸಾಮಗ್ರಿಯಾಗಿವೆ. ಈ ವಿಚಾರಗಳಿಗೆ ಹೊಯ್ಸಳರ ಕಾಲದ ಜೈನ ಶಾಸನಗಳೂ ಸಹ ಹೊರತಾಗಿಲ್ಲ. ಹೊಯ್ಸಳರ ಕಾಲಕ್ಕೆ ಸಂಬಂಧಿಸಿದಂತೆ ಈಗಾಗಲೇ ಬೆಳಕಿಗೆ ಬಂದಿರುವ 200ಕ್ಕೂ ಹೆಚ್ಚು ಜೈನ ಶಾಸನಗಳಲ್ಲಿ ಸಮಕಾಲೀನ ಸಾಂಸ್ಕೃತಿಕ ಚಟುವಟಿಕೆಗಳು ಸೊಗಸಾಗಿ ಮೂಡಿಬಂದಿವೆ. ಈ ಶಾಸನಗಳಲ್ಲಿ ಕೆಲವು ತುಂಬಾ ತ್ರುಟಿತವಾಗಿರುವುದರಿಂದ ಹಲವು ವಿಷಯಗಳು ಅಸ್ಪಷ್ಟವಾಗಿವೆ. ಈ ಎಲ್ಲ ಶಾಸನಗಳ ಹಿನ್ನೆಲೆಯಲ್ಲಿ ಹೊಯ್ಸಳರ ಕಾಲದಲ್ಲಿ ಜೈನಧರ್ಮದ ಪ್ರಸಾರ, ಬಸದಿಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನೆಗೆ ಪ್ರೇರಣೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಫೂರ್ತಿ–ಪ್ರೇರಕರಾದ ಜೈನ ಮುನಿಗಳ ಕುರಿತು ಗಮನಿಸುವುದು ಈ ಲೇಖನದ ಆಶಯವಾಗಿದೆ.

## 2. ಹೊಯ್ಸಳರ ಕಾಲದ ಜೈನ ಶಾಸನ ಸಾಹಿತ್ಯ ಮತ್ತು ಕವಿಗಳು





ಹೊಯ್ಸಳರ ಕಾಲಾವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ವೃಕ್ಷವು ಎತ್ತರವಾಗಿ ಬೆಳೆಯಿತು. ಆ ಕಾಲದ ದೇಶಪ್ರೇಮ, ರಾಜನಿಷ್ಠೆ, ಧಾರ್ಮಿಕ ಶ್ರದ್ಧೆ, ಆತ್ಮಬಲಿದಾನ ಮುಂತಾದ ವೈಶಿಷ್ಟ್ಯಗಳು ಸಮಕಾಲೀನ ಶಾಸನಗಳಾದಿ ಕೃತಿ–ಕಾವ್ಯಗಳಲ್ಲಿ ಪ್ರತಿಬಿಂಬಿತವಾಗಿದೆ. 'ಕಂತಿ ಹಂಪರ ಸಮಸ್ಯೆಗಳು' ಎಂಬ ಗ್ರಂಥವನ್ನು ರಚಿಸಿದ ಕನ್ನಡದ ಪ್ರಥಮ ಕವಿಯಿತ್ರಿ ಕಂತಿಯು ಹೊಯ್ಸಳ ರಾಜ್ಯದಲ್ಲಿ ಜನ್ಮವೆತ್ತಿದ್ದಳೆಂಬುದು ಉಲ್ಲೇಖನಾರ್ಹವಾಗಿದೆ.[1] ಹೊಯ್ಸಳರ ಕಾಲಾವಧಿಯ ಸಾಹಿತ್ಯ ರಚನೆಯಲ್ಲಿ ಜೈನ ಕವಿಗಳ ಪಾತ್ರವು ಅಮೋಘವಾಗಿದೆ. ಇವರ ಕೃತಿ–ಕಾವ್ಯಗಳನ್ನು ಅವಲೋಕಿಸಿರುವ ರಂ.ಶ್ರೀ. ಮುಗಳಿ ಅವರು "ಜೈನ ಕವಿಗಳು ಸಮರ್ಥವಾಗಿ ಮುಂದುವರಿದ ಕಾಲ" ಎಂದಿರುತ್ತಾರೆ. ಈ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಯೇ ಜೈನ ಕೃತಿ–ಕಾವ್ಯಗಳು ರಚನೆಯಾಗಿರುವುದನ್ನು ಗಮನಿಸಿದಾಗ, ಈ ಕಾಲದ ಕವಿಗಳು ಪ್ರಸಿದ್ಧ ಕವಿಗಳಾಗಿದ್ದರೆಂದು ಮನದಟ್ಟಾಗುತ್ತದೆ. ಹೊಯ್ಸಳರ ಕಾಲದಲ್ಲಿ ಜೈನ ಕವಿಗಳು ರಚಿಸಿರುವ ಕೃತಿ–ಕಾವ್ಯಗಳಲ್ಲಿ ಕೆಲವು ತೀರ್ಥಂಕರರ ಪುರಾಣಗಳಾದರೆ, ಮತ್ತೆ ಕೆಲವು ಸಾಮಾಜಿಕ ನಿಯಮಗಳ ಕಥೆಗಳಾಗಿವೆ. ಈ ಕೃತಿ–ಕಾವ್ಯಗಳು ಜೈನ ಧರ್ಮಕ್ಕೆ ತತ್ಕಾಲೀನ ಆಳರಸರಾದಿ ಅಧಿಕಾರಿಗಳ ಆಶ್ರಯ–ಪ್ರೋತ್ಸಾಹ, ಶ್ರಾವಕರು, ಮುನಿಪರಂಪರೆ, ಅವರ ಆಚಾರ–ವಿಚಾರಗಳು, ಸಮಾಜದಲ್ಲಿ ಅವರು ಅನುಸರಿಸಿದ್ದ ಆಧ್ಯಾತ್ಮಿಕ–ತಾತ್ವಿಕ ಚಿಂತನೆಗಳು, ಜೈನ ಆಚರಣೆಗಳು, ಪೂಜೆಗಳು, ಪರ್ವಗಳು, ಸಂಘ, ಗಣ, ಗಚ್ಛ, ಅನ್ವಯ, ಬಳಿ ಮುಂತಾದವುಗಳನ್ನು ತಿಳಿಸುವಲ್ಲಿ ಬಹಳಷ್ಟು ಸಹಕಾರಿಯಾಗಿವೆ.

ಹೊಯ್ಸಳರ ಕಾಲದ ಜೈನ ಶಾಸನಗಳು ವಿಶಿಷ್ಟವಾದ ಸಾಹಿತ್ಯ ಶೈಲಿ ಮತ್ತು ಭಾಷೆಯಲ್ಲಿ ರಚನೆಗೊಂಡಿವೆ. ಅಲ್ಲದೇ ಈ ಶಾಸನಗಳಲ್ಲಿ ಉಲ್ಲಿಖಿತವಾಗಿರುವ ಮುನಿಗಳು, ಆಚಾರ್ಯರು, ಪಂಡಿತರು ಪ್ರಸಿದ್ಧ ಕವಿಗಳೂ, ಕಾವ್ಯವಾಗ್ಮಿಗಳೂ ಆಗಿದ್ದರು. ಜೊತೆಗೆ ಜೈನ ಶಾಸ್ತ್ರ, ಪುರಾಣ ಪಂಡಿತರಾಗಿದ್ದರು. ಹೊಯ್ಸಳರ ಅರಸರು, ರಾಣಿಯರು, ಮಂತ್ರಿಗಳು, ದಂಡನಾಯಕರು ಸಾಹಿತ್ಯ ಕಲೆಯಲ್ಲಿ ಆಸಕ್ತಿ ಹೊಂದಿದ್ದರು. ಹೊಯ್ಸಳರ ಕಾಲಾವಧಿಯಲ್ಲಿ ಹಲವು ಜೈನ ಕವಿಗಳು ಆಸ್ಥಾನ ಕವಿಗಳಾಗಿದ್ದರು. ಅಂದು ವಿದ್ವತ್ತಿಗೆ ಅಪಾರ ಪ್ರೋತ್ಸಾಹ ದೊರೆತಿದ್ದರಿಂದ ಅನೇಕ ಗುರುಕುಲಗಳು, ಅಗ್ರಹಾರಗಳ ಅಭಿವೃದ್ಧಿ ಅಷ್ಟೇ ಅಲ್ಲದೇ ಹೊಸ ಶಿಕ್ಷಣ ಕೇಂದ್ರಗಳು ಸ್ಥಾಪಿತವಾಗಿವೆ. ವಿದ್ವಾಂಸರಲ್ಲಿ ಕಂಡುಬರುತ್ತಿದ್ದ ಹೊಸ ಚಿಂತನೆಗಳು ಮತ್ತು ಸ್ಪರ್ಧಾಮನೋಭಾವದಿಂದಲೇ ಆ ಕಾಲದ ಸಾಹಿತ್ಯ ಕ್ಷೇತ್ರ ಸಾಕಷ್ಟು ವಿಸ್ತಾರತೆಯನ್ನು ಕಂಡುಕೊಂಡಿತು.

### 2.1. ಸಾಹಿತ್ಯದ ಭಾಷೆ ಮತ್ತು ಶೈಲಿ

ಕ್ರಿ.ಶ. ಸುಮಾರು 10–11ನೆಯ ಶತಮಾನದ ಕವಿಗಳು ರಾಜಾಶ್ರಯ ಪಡೆದವರೂ, ಉಭಯ ಭಾಷಾಪಂಡಿತರೂ ಆಗಿದ್ದು, ಸಂಸ್ಕೃತ ಸಾಹಿತ್ಯದಲ್ಲಿರುವ ಕಥೆಗಳನ್ನಾಧರಿಸಿ ಕಾವ್ಯ ರಚನೆ ಮಾಡಿದ್ದರು. ಇವರ ಕೃತಿಗಳಲ್ಲಿ ಸಂಸ್ಕೃತ ಭೂಯಿಷ್ಠವಾದ ಭಾಷೆಯಂತೆ, ಸಂಸ್ಕೃತ, ಛಂದಸ್ಸುಗಳ ಬಳಕೆಯೂ ಆಗಿದೆ. ಇದರ ಪರಿಣಾಮವಾಗಿ ಕ್ರಿ.ಶ. ಸುಮಾರು

11ನೆಯ ಶತಮಾನದವರೆಗೂ ಸಾಹಿತ್ಯವೂ ಚಂಪೂ ಶೈಲಿಯದ್ದಾಗಿತ್ತು. ಹೊಯ್ಸಳರ ಆರಂಭ ಕಾಲದಲ್ಲಿದ್ದ ಜೈನ ಕವಿಗಳು ಮೊದಲಿಗೆ ಸಂಸ್ಕೃತದ ಮಡಿವಂತಿಕೆಯ ಮೂಲಕ ತಮ್ಮ ಶ್ರೇಷ್ಠತೆಯನ್ನು ಸಾಧಿಸಲು ಯತ್ನಿಸಿದ್ದು, ಚಂಪೂ ಶೈಲಿಯಲ್ಲಿ ಕಾವ್ಯ ರಚನೆ ಮಾಡಿರುತ್ತಾರೆ. ಆದರೆ ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಮೂಡಿಬಂದಿರುವ ಚಂಪೂ ಕೃತಿಗಳಲ್ಲಿ ಹಲವು ಬದಲಾವಣೆಗಳನ್ನು ಗುರುತಿಸಬಹುದು. ಈ ಶತಮಾನದ ಕವಿಗಳು, ಜನಸಾಮಾನ್ಯರಿಗಾಗಿ ಸಾಹಿತ್ಯ ರಚನೆ ಮಾಡಿದ್ದು, "ಅಚ್ಚಗನ್ನಡದಿಂ ಪೊಸದಾಗಿ ಪೇಳ್ವೆ" ಎಂದು ಹೇಳಿಕೊಂಡಿದ್ದಾರೆ. ತಮ್ಮ ಕಾವ್ಯದಲ್ಲಿ ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂತೆ ಆಡುಭಾಷೆಯಲ್ಲಿ ನಿತ್ಯಜೀವನದ ಉದಾಹರಣೆಗಳನ್ನು ಕೊಟ್ಟಿರುವ ಮುಳಗುಂದದ ನಯಸೇನನು ಜಾನಪದ ಸೊಗಡನ್ನೇ ಕಾವ್ಯದ ರಸವನ್ನಾಗಿಸಿದ್ದಾನೆ. ನಯಸೇನನ 'ಧರ್ಮಾಮೃತ' ಕಾವ್ಯವನ್ನು (ಕ್ರಿ.ಶ. 1112) ಜನಪದ ಜೈನ ಪುರಾಣವೆಂದು ಕರೆಯಲಾಗಿದೆ.[2] ಹೊಯ್ಸಳರ ಜೈನ ಶಾಸನಗಳಲ್ಲಿಯೂ ಸಾಹಿತ್ಯದ ವೈಶಿಷ್ಟ್ಯತೆಯನ್ನು ಕಾಣಬಹುದು.

ಕ್ರಿ.ಶ. ಸುಮಾರು 12ನೆಯ ಶತಮಾನದ ಜೈನ ಶಾಸನಗಳನ್ನು ಹೆಚ್ಚು ಆಳವಾಗಿ ಕೊರೆದಿಲ್ಲ. ಈ ಶಾಸನಗಳಲ್ಲಿ ಅಕ್ಷರಗಳ ವಿನ್ಯಾಸವೂ ಸುಂದರವಾಗಿದ್ದು, ಹೆಚ್ಚು ಸ್ಫುಟವಾಗಿ ಅಕ್ಷರಗಳ ಜೋಡಣೆ ಸರಿಯಾಗಿದೆ. ಇಲ್ಲಿ ಹೊಯ್ಸಳರ ಅರಸರ ವಂಶಾವಳಿ, ಬಿರುದುಗಳು, ದಿಗ್ವಿಜಯಗಳನ್ನು ಹೊಗಳುವ ಕಾವ್ಯದ ರೂಪದ ಸಾಹಿತ್ಯ ಕಂಡುಬರುತ್ತವೆ. ಮುನಿಯ ವಂಶಾವಳಿಗಳು, ಮುನಿಗಳ ಸ್ಥಾನಮಾನಗಳ ವರ್ಣನೆಯೂ ಕಾವ್ಯದ ರೂಪದಲ್ಲಿ ಕಂಡುಬರುತ್ತವೆ. ಈ ಕಾಲದ ಸಾಹಿತ್ಯ ಕ್ಷೇತ್ರವು ಇಷ್ಟೊಂದು ಪ್ರಖ್ಯಾತಿಯನ್ನು ಪಡೆದಿದ್ದುಕ್ಕೆ ಕಾರಣ ಆ ಕಾಲದ ಪ್ರಸಿದ್ಧ ಕವಿಗಳು, ಪಂಡಿತರು ಸಾಹಿತ್ಯವನ್ನು ಎತ್ತರವಾಗಿ ಬೆಳೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

**2.2. ನಾಗಚಂದ್ರ**

ನಾಗಚಂದ್ರನು 1ನೆಯ ಬಲ್ಲಾಳನ ಆಸ್ಥಾನ ಕವಿಯಾಗಿದ್ದು, *ರಾಮಚಂದ್ರ ಚರಿತ ಪುರಾಣ (ಜೈನ ರಾಮಾಯಣ)* ಮತ್ತು ಮಲ್ಲಿನಾಥ ಪುರಾಣಗಳನ್ನು ರಚಿಸಿದ್ದಾನೆ. ಈತನಿಗೆ 'ಅಭಿನವ ಪಂಪ' ಮತ್ತು 'ಕವಿತಾ ಮನೋಹರ' ಎಂಬ ಬಿರುದುಗಳಿದ್ದವು. ಇವನ ಸಮಕಾಲೀನ ಕಂತಿಯೊಬ್ಬಳು ಬಲ್ಲಾಳನ ಆಸ್ಥಾನದಲ್ಲಿದ್ದಳು.

**2.3. ಜನ್ನ**

ಹೊಯ್ಸಳರ ಕಾಲಾವಧಿಯ ಪ್ರಸಿದ್ಧ ಕವಿಯಾದ ಜನ್ನನು ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧನಾಗಿದ್ದನು. ಈತನು ಸಮಕಾಲೀನ ಜೈನ ಕವಿಗಳಲ್ಲಿಯೇ ಪ್ರಸಿದ್ಧನಾಗಿದ್ದಾನೆ. ಈತನು ರಚಿಸಿದ *ಯಶೋಧರ ಚರಿತೆ* ಮತ್ತು *ಅನಂತನಾಥ ಪುರಾಣ* ಶ್ರೇಷ್ಠ ಕೃತಿಗಳಾಗಿವೆ. ಈತನು 3ನೆಯ ನರಸಿಂಹನ ಕಾಲದಲ್ಲಿ ಪ್ರಧಾನ ಮಂತ್ರಿಯೂ, ಸೇನಾಪತಿಯೂ ಆಗಿದ್ದನು.





**2.4. ಬೂಚಿರಾಜ**

ಹಾಸನ ಜಿಲ್ಲೆಯ ಮರ್ಕುಳಿ ಗ್ರಾಮದ ಕ್ರಿ.ಶ. 1173ರ ಶಾಸನದಲ್ಲಿ ಬೂಚಿರಾಜನ ನಿರೂಪಣೆಯಿದೆ. ಈತನು ಸಂಧಿವಿಗ್ರಹಿಯಾಗಿದ್ದನು. ಕನ್ನಡದಲ್ಲಿಯೂ, ಸಂಸ್ಕೃತದಲ್ಲಿಯೂ ಪೊನ್ನನಿಗೆ ಸಮಾನವಾದ ಪ್ರೌಢಕವಿಯಾಗಿದ್ದನೆಂದು ಹೇಳಲಾಗಿದೆ. ವೀರಬಲ್ಲಾಳದೇವನಿಗೆ ಮಂತ್ರಿಯಾಗಿದ್ದನು. ಶ್ರೀಪಾಲತ್ರೈವಿದ್ಯದೇವನಿಂದ ಶಾಸ್ತ್ರಗಳನ್ನು ಕಲಿತನು. ಈತನ ತಾಯಿ ಸುಗ್ಗವ್ವೆ, ಹೆಂಡತಿ ಶಾಂತಲೆ. ತನ್ನ ಐಶ್ವರ್ಯವನ್ನು ಜಿನಪೂಜೆಗೂ, ಆಹಾರದಾನಕ್ಕೂ ವಿಶೇಷವಾಗಿ ವ್ಯಯ ಮಾಡಿದಂತೆ ಹೇಳಿದೆ.[3]

**2.5. ಬಾಳಚಂದ್ರಸಿದ್ಧಾಂತದೇವ**

ಬಾಳಚಂದ್ರಸಿದ್ಧಾಂತದೇವನು ಮೇಘನಂದಿ ಭಟ್ಟಾರಕನ ಶಿಷ್ಯನಾಗಿದ್ದನು. ಈತನ ದಿವ್ಯವಾಣಿಯನ್ನು ಮೆಚ್ಚಿ ಲೋಕದ ಕವಿಗಳೆಲ್ಲ ಈತನನ್ನು ಪರಮಾದರದಿಂದ ಕಾಣುತ್ತಿದ್ದರು. ಈತನನ್ನು ಕವಿಕಂದರ್ಪ ಎಂದು ಕರೆಯಲಾಗಿದೆ.

**2.6. ಮಲ್ಲಿಷೇಣ ಮಲಧಾರಿ**

ಮಲ್ಲಿಷೇಣ ಮಲಧಾರಿಯನ್ನು ಕಲಿಯುಗದ ಗಣಧರರೂ, ದುರ್ಧರತಪೋವಿಭೂತಿ ಚಾರಿತ್ರ ಚಕ್ರವರ್ತಿಗಳೂ ಎಂದೆಲ್ಲ ಕರೆಯಲಾಗಿದೆ. ಈತನು ಒಮ್ಮೆಯಾದರೂ ಮರೆತು ಲೌಕಿಕ ವಿಚಾರಗಳ ಕುರಿತು ಮಾತನಾಡದ, ರಾತ್ರಿಯಾದ ಮೇಲೆ ಹೊರಗೆ ಹೋಗದ, ಒಮ್ಮೆಯೂ ಮೈಯನ್ನು ತುರಿಸದ, ಕುಕ್ಕುಟಾಸನಕ್ಕೆ ಬೇಸರಿಸದ ಗಂಡವಿಮುಕ್ತವೃತ್ತಿಯನ್ನು ಮರೆಯದ ಅತ್ಯಂತ ನಿಷ್ಠುರ ವ್ರತವನ್ನು ನಿರಂತರವಾಗಿ ಆಚರಿಸಿದ ಮಹಾತ್ಮರೆಂದು ಶಾಸನಕವಿ ನೇಮಿಚಂದ್ರರು ಮನಸಾರೆ ಬಣ್ಣಿಸಿದ್ದಾನೆ. ಈತನು *ನಾಗಕುಮಾರ ಕಾವ್ಯ, ಮಹಾಪುರಾಣ, ಭೈರವ ಪದ್ಮಾವತೀಕಲ್ಪ, ಜ್ವಾಲಿನೀಕಲ್ಪ* ಮತ್ತು *ಸರಸ್ವತಿ ಮಂತ್ರ ಕಲ್ಪ*ವನ್ನು ರಚಿಸಿದ್ದಾನೆ.[4]

**2.7. ಪ್ರಭಾಚಂದ್ರಾಚಾರ್ಯ**

ಪ್ರಭಾಚಂದ್ರಾಚಾರ್ಯನನ್ನು ಕವಿ, ಗಮಕಿ, ವಾದಿ, ವಾಗ್ಮಿ, ಪರಸಮಯತಿಮಿರ ದಿನಕರ ಎಂದೆಲ್ಲ ಕರೆಯಲಾಗಿದೆ. ಈತನು ಶಾಂತಲಾದೇವಿಯ ಗುರುವಾಗಿದ್ದನು.[5]

**2.8. ಬೊಪ್ಪಣ ಕವಿ**

ಶ್ರವಣಬೆಳಗೊಳದ ಇಂದ್ರಗಿರಿಯ (ದೊಡ್ಡ ಬೆಟ್ಟ) ಮೇಲ್ಭಾಗದಲ್ಲಿರುವ *ಗೊಮ್ಮಟಸ್ತುತಿ*ಯ ಶಾಸನವನ್ನು ಬೊಪ್ಪಣನು ಬಾಳಚಂದ್ರ ಮುನಿಯ ಸಹಾಯದಿಂದ ರಚಿಸಿದ್ದಾನೆಂದು ಶ್ರವಣಬೆಳಗೊಳದ ಕ್ರಿ.ಶ. 1180ರ ಶಾಸನದಲ್ಲಿ ದಾಖಲಾಗಿದೆ.[6] ಈತನು *ನಿರ್ವಾಣ ಲಕ್ಷ್ಮೀಪತಿ ನಕ್ಷತ್ರ ಮಾಲಿಕೆ*ಯನ್ನು ರಚಿಸಿದ್ದಾನೆ. ಈತನನ್ನು ಆಚಣ್ಣನು *ವರ್ಧಮಾನ ಪುರಾಣ*, ಪಾರ್ಶ್ವಪಂಡಿತನು *ಪಾರ್ಶ್ವನಾಥ ಪುರಾಣ*, ಕೇಶಿರಾಜನು *ಶಬ್ದಮಣಿ ದರ್ಪಣ*ದಲ್ಲಿ ಬೊಪ್ಪಣನನ್ನು ನೆನೆದಿದ್ದಾರೆ.

### 2.9. ಕುಮುದಚಂದ್ರ ಭಟ್ಟಾರಕದೇವ

ಕುಮುದಚಂದ್ರ ಭಟ್ಟಾರಕದೇವನು ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಅವುಗಳಲ್ಲಿ *ಭೇದಾಭೇದ ರತ್ನತ್ರಯ ಸಿದ್ಧಾಂತಸಾರ, ಶ್ರಾವಕಾಚಾರಸಾರ, ಪದಾರ್ಥಸಾರ, ಶಾಸ್ತ್ರಸಾರ* ಪ್ರಮುಖವಾಗಿವೆ. ಈ ಎಲ್ಲ ಗ್ರಂಥಗಳನ್ನು ಕೂಡಿಸಿ *"ಸಮುಚ್ಚಾಯಾವಿದಾನಾಬಿನಸಾರ ಚತುಷ್ಟಯ"* ಎಂಬ ಬೃಹತ ಗ್ರಂಥವನ್ನು ರಚಿಸಿದನು. ಈತನು ಅಂದಿನ ಎಲ್ಲ ವರ್ಣಗಳಿಗೂ ದೇವರಂತಿದ್ದನು.[7]

### 2.10. ರುದ್ರಭಟ್ಟ

ರುದ್ರಭಟ್ಟನು ವೀರಬಲ್ಲಾಳದೇವನ ಮಂತ್ರಿ ಚಂದ್ರಮೌಳಿಯ ಆಶ್ರಯದಲ್ಲಿದ್ದನು. ರಾಜಶೇಖರ ವಿಳಾಸ ಮೊದಲಾದ ಗ್ರಂಥಗಳನ್ನು ಬರೆದು ಪ್ರಸಿದ್ಧನಾಗಿದ್ದನು. ಈತನು ಷಡಕ್ಷರಿಯನ್ನು ತನ್ನ ಕವಿಚಾತುರ್ಯದಿಂದ ಮೀರಬೇಕೆಂದು ಉದ್ದೇಶಿಸಿ ಕ್ರಿ.ಶ. 1186ರಲ್ಲಿ ಜಗನ್ನಾಥ ವಿಜಯವನ್ನು ಬರೆದನು. ಈತನ ಗ್ರಂಥಗಳನ್ನು ನೋಡಿ ಇದು *ರಾಜಶೇಖರ ವಿಳಾಸಕ್ಕೆ* ಸಮವಾಗಿರುವುದು ಎಂದು ಉಳಿದವರು ಗೇಲಿ ಮಾಡುತ್ತಿದ್ದರು. ಬಳಿಕ ರುದ್ರಭಟ್ಟನ ಸ್ನೇಹಿತನಾದ ಲಕ್ಷ್ಮೀಶನು ಬ್ರಾಹ್ಮಣರಿಗೆ ಉಂಟಾದ ಅಭಿಮಾನವನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಕ್ರಿ.ಶ. 1219ರಲ್ಲಿ ಜೈಮಿನಿ ಭಾರತವನ್ನು ಬರೆದು ಬಿರುದನ್ನು ಪಡೆದನು.

### 2.11. ಕಂತಿ

ಕಂತಿ ಬಲ್ಲಾಳದೇವನ ಆಸ್ಥಾನದಲ್ಲಿ ಕವಯಿತ್ರಿಯಾಗಿ ಮತ್ತು ಪಂಡಿತೆಯಾಗಿ ಮೆರೆದಿದ್ದಾಳೆ. ಇವಳು ಕನ್ನಡದ ಮೊಟ್ಟ ಮೊದಲ ಕವಯತ್ರಿ ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಜೈನಳಾದ ಈಕೆ ಕನ್ನಡದಲ್ಲಿ ಮತ್ತು ಸಂಸ್ಕೃತದಲ್ಲಿ ಅಗಾಧ ಜ್ಞಾನವನ್ನು ಹೊಂದಿದ್ದಳು. ಕನ್ನಡ ಛಂದಸ್ಸಿನಲ್ಲಿಯೂ ಈಕೆಗೆ ತಿಳುವಳಿಕೆಯಿತ್ತು. ಕ್ರಿ.ಶ. ಸುಮಾರು 16ನೆಯ ಶತಮಾನದ ಬಾಹುಬಲಿ ಕವಿಯು ತನ್ನ ನಾಗಕುಮಾರ *ಚರಿತೆ* ಎಂಬ ಕಾವ್ಯದಲ್ಲಿ ಇವಳನ್ನು ಕೊಂಡಾಡಿದ್ದಾನೆ.

### 2.12. ಮಾಘನಂದಿಸಿದ್ಧಾಂತದೇವ

3ನೆಯ ಬಲ್ಲಾಳನ ಗುರುವಾರ ಮಾಘನಂದಿಸಿದ್ಧಾಂತದೇವನು *ಸಿದ್ಧಾಂತಸಾರ, ಶ್ರಾವಕಾಚಾರ್ಯ, ಪದಾರ್ಥಸಾರ, ಶಾಸ್ತ್ರಸಾರ ಸಮುಚ್ಛಯ* ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ.

### 2.13. ನೇಮಿಚಂದ್ರ

ಹೊಯ್ಸಳರ ಆಶ್ರಯದಲ್ಲಿದ್ದ ಕವಿ ನೇಮಿಚಂದ್ರನು ದೋರಸಮುದ್ರದಲ್ಲಿ ಅರ್ಧನೇಮಿ ಪುರಾಣವನ್ನು ರಚಿಸಿರುವನು.





### 2.14. ದೇವಭದ್ರಮುನಿ

ಚಿಕ್ಕನಾಯಕನಹಳ್ಳಿ ತಾಲೂಕಿನ ಹೆಗ್ಗರೆಯ ಶಾಸನವನ್ನು ಕನ್ನಡ ಮತ್ತು ಸಂಸ್ಕೃತದ ಉಭಯ ಕವಿಯಾದ ದೇವಭದ್ರಮುನಿ ರಚಿಸಿದ್ದಾನೆ. ಈ ಶಾಸನದಲ್ಲಿ ಹೊಯ್ಸಳರ ನರಸಿಂಹನ ಸಾಮಂತನಾದ ಬಿಟ್ಟಿದೇವನು ಕ್ರಿ.ಶ. 1161ರಲ್ಲಿ ಹೆಗ್ಗೆರೆಯ ಚೆನ್ನಪಾರ್ಶ್ವದೇವರ ಬಸದಿಗೆ ಸವಣಗೆರೆಯನ್ನು ದತ್ತಿ ಬಿಟ್ಟಿದ್ದನ್ನು ಹಾಗೂ ಭೂದಾನ ಮಾಡಿದ್ದನು ದಾಖಲಿಸಿದೆ. ಹೆಗ್ಗೆರೆ ಮತ್ತು ಶ್ರವಣಬೆಳಗೊಳದ ಶಾಸನಗಳ ಹೋಲಿಕೆ ಒಂದೇ ಇರುವುದರಿಂದ ದೇವಭದ್ರಮುನಿಯೇ ಶ್ರವಣಬೆಳಗೊಳದ ಶಾಸನವನ್ನು ರಚಿಸಿದ್ದಾನೆ. ಇದರಲ್ಲಿ ಸಾಮಂತ ಬಿಟ್ಟಿದೇವ, ಸಾಮಂತ ಚಟ್ಟನ ಸತಿ, ನಾಟ್ಯರಾಣಿ ಶಾಂತಲೆಯ ಬಗ್ಗೆ ಪದ್ಯಗಳಿವೆ.[8]

### 2.15. ಸಿಂಗದೇವ

ಸಾಗರ ತಾಲೂಕಿನ ಉದ್ದರೆಯ ಕ್ರಿ.ಶ. 1197ರ ಶಾಸನದಲ್ಲಿ ಕೋಳಾಲಪುರ ದೊಡೆಯನಾದ ಎಕ್ಕಲನ ಮಂತ್ರಿ ಮಹದೇವನು ಎರಗ ಜಿನಾಲಯಕ್ಕೆ ದತ್ತಿಗಳನ್ನು ಬಿಟ್ಟ ವಿವರವಿದೆ. ಇದು ವೀರಬಲ್ಲಾಳದೇವನಿಗೆ ಸಂಬಂಧಿಸಿದ ಶಾಸನವಾಗಿದೆ. ಶಾಸನಕವಿ ಸಿಂಗದೇವ ಅಥವಾ ನರಸಿಂಹನು ಎರಗನ ಮನೆತನದಲ್ಲಿ ಕವಿಯಾಗಿದ್ದನು. ಅವನು ಸರಸೋದಾರ ಕವಿತ್ವತತ್ವ ಚತುರಾಸ್ಯನಾಗಿದ್ದನೆಂದು ತಿಳಿಯುತ್ತದೆ.[9]

### 2.16. ನಯಕೀರ್ತಿದೇವ

ಹೆರಗು ಗ್ರಾಮದ ಶಾಸನದಲ್ಲಿ ನಯಕೀರ್ತಿದೇವನ ವರ್ಣನೆಯಿದೆ. ಈತನು ವಸ್ತುಕವಿತ್ವದಲ್ಲಿ ಪ್ರವೀಣನಾಗಿದ್ದನೆಂದು ತೋರುತ್ತದೆ. ವ್ಯಾಕರಣ, ಶಬ್ದ, ಶಾಸ್ತ್ರ, ಸಿದ್ಧಾಂತಗಳಲ್ಲಿಯೂ ನಿಷ್ಣಾತನಾಗಿದ್ದನು.[10]

### 2.17. ಪದ್ಮಕವಿ

ಹಳೇಬೀಡಿನಲ್ಲಿರುವ ಒಂದು ಸಮಾಧಿ ಮಂಟಪದ ಮೇಲೆ ಪದ್ಮಕವಿ ದೋರಸಮುದ್ರದ ಸಮಸ್ತ ಭವ್ಯಜನಗಳ ಗುರುಗಳಾದ ವರ್ಧಮಾನ ಮಲಧಾರಿ ನಿಶಿಧಿಯನ್ನು ಮಾಡಿಸಿದ್ದಾನೆ. ಕವಿ ಪದ್ಮನು ವರಕವಿಯಾಗಿದ್ದನೆಂದು ಈ ನಿಶಿಧಿ ಶಾಸನದಿಂದ ತಿಳಿದುಬರುತ್ತದೆ.[11]

### 2.18. ಅಭಯಚಂದ್ರಸಿದ್ಧಾಂತ ಚಕ್ರವರ್ತಿ

ಅಭಯಚಂದ್ರಸಿದ್ಧಾಂತ ಚಕ್ರವರ್ತಿ ಛಂದಸ್ಸು, ನ್ಯಾಯ, ನಿಘಂಟು, ಶಬ್ದಸಮಯ, ಅಲಂಕಾರ, ಭೂಚಕ್ರ, ಪ್ರಮಾಣಶಾಸ್ತ್ರ ಮೊದಲಾದ ವಿಷಯಗಳಲ್ಲಿ ವಿದ್ವಾಂಸನಾಗಿದ್ದನೆಂದು ಹಳೇಬೀಡಿನ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. 1313ರ ಶ್ರವಣಬೆಳಗೊಳದ ಶಾಸನವು ಈತನನ್ನು ಮಾಘನಂದಿಯ ಶಿಷ್ಯ ಎಂದು ದಾಖಲಿಸಿದೆ. ಈತನು 'ಸಿದ್ಧಾಂತಂಬೋದಿ ಶೀತದ್ಯುತಿ' ಆಗಿದ್ದನೆಂದು ವರ್ಣನೆಯಿದೆ. ಈತನು *ಮಂದಪ್ರಭೋದಿಕಾ ಟೀಕೆ* ಎಂಬ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾನೆ.

### 2.19. ಅಜಿತಸೇನ

ಅಜಿತಸೇನನು ಹೊಯ್ಸಳರ ಕಾಲದ ಓರ್ವ ಪ್ರಸಿದ್ಧ ಜೈನ ಕವಿ. ಈತನ ಗ್ರಂಥ *ಅಲಂಕಾರ ಚಿಂತಾಮಣಿ.* ಈತನು ಇದರಲ್ಲಿ ಪರೋಕ್ಷವಾಗಿ ತನ್ನ ವಿವರಗಳನ್ನು ಹೇಳಿಕೊಂಡಿದ್ದಾನೆ. ಈತನು ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂಗಾಡಿಯಲ್ಲಿ ಕಾಮಿರಾಜ ಬಂಗರಸನ ಆಶ್ರಯದಲ್ಲಿದ್ದನು. ಈತನ ಇನ್ನೊಂದು ಕೃತಿ *ಶೃಂಗಾರ ಮಂಜರಿ.*

### 2.20. ಚಾರುಕೀರ್ತಿ

ಪ್ರಸಿದ್ಧ ಜೈನ ಸಂಸ್ಕೃತ ಕಾವ್ಯ ಗೀತವೀತರಾಗ ಕರ್ತೃ ಭಟ್ಟಾರಕ ಚಾರುಕೀರ್ತಿ ಶ್ರವಣಬೆಳಗೊಳದ ಪ್ರತಿಷ್ಠಿತ ಜೈನಮಠದ ಗುರುಪೀಠಾಧೀಶನಾಗಿದ್ದನು. ಹೊಯ್ಸಳರ ಕಾಲದ ಓರ್ವ ಶ್ರೇಷ್ಠ ಜೈನ ಕವಿಯಾಗಿದ್ದಾನೆ. ಈತನ ಜನ್ಮಸ್ಥಳ ಸಿಂಹಪುರವಾಗಿತ್ತು. ಈತನಿಗೆ ಹೊಯ್ಸಳರ ರಾಯರಾಜಗುರು ಭೂಮಂಡಲಾಚಾರ್ಯ, ಮಹಾವಾದಿ, ವಾದೀಶ್ವರ ಮೊದಲಾದ ಪಟ್ಟಪರಾಂಪರಾಗತ ಉಪಾಧಿಗಳಲ್ಲದೇ ಬಲ್ಲಾಳ ಜೀವ ರಕ್ಷಕ ಎಂಬ ಬಿರುದು ಇತ್ತು. ಹಸ್ತಿಮಲ್ಲ, ವಿಜಯವರ್ಣಿ, ಜಯಕೀರ್ತಿ, ಬ್ರಹ್ಮಸೂರಿ, ತ್ರೈವರ್ಣಿಕಾಚಾರ ಮುಂತಾದವರು ಹೊಯ್ಸಳರ ಕಾಲದಲ್ಲಿ ಜೈನ ಕವಿಗಳಾಗಿದ್ದರೆಂದು ತಿಳಿದು ಬರುತ್ತದೆ.[12]

### 3. ಸಮಾರೋಪ

ಹೀಗೆ ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಸ್ವಲ್ಪ ಕಳೆಗುಂದಿದ ಜೈನ ಸಾಹಿತ್ಯ ವೃಕ್ಷಕ್ಕೆ ಕ್ರಿ.ಶ. ಸುಮಾರು 13ನೆಯ ಶತಮಾನದ ಹೊಯ್ಸಳರ ರಾಜವಂಶದ ಎಲ್ಲ ಅರಸರು ಉದಾರವಾಗಿ ಆಶ್ರಯ ಕೊಡಮಾಡಿ ಮತ್ತೇ ಹೊಸ ಚಿಗುರೊಡೆಯುವಂತೆ ಮಾಡಿದರು. ಹೊಯ್ಸಳರ ಕಾಲದ ಜೈನ ಶಾಸನಗಳಲ್ಲಿ ಕಂಡುಬರುವ ಸಾಹಿತ್ಯವನ್ನು ನೋಡಿದಾಗ ಹೊಯ್ಸಳರು ಜೈನಧರ್ಮ ಹಾಗೂ ಸಾಹಿತ್ಯಾಭಿವೃದ್ಧಿಗೆ ತಮ್ಮ ಸಹಾಯಹಸ್ತವನ್ನು ನೀಡಿ ಸಮೃದ್ಧವನ್ನಾಗಿಸಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಕಾಲಾವಧಿಯ ಸಾಹಿತ್ಯ ಮತ್ತು ಕವಿಗಳ ಕುರಿತು ಅಧ್ಯಯನಿಸಲೂ ಪ್ರತ್ಯಕ್ಷವಾದ ಯಾವುದೇ ಆಧಾರಗಳು ಸಿಗುವುದಿಲ್ಲ. ಪರೋಕ್ಷವಾದ ಪುರಾವೆಗಳು ಮುನಿಗಳ ವರ್ಣನೆಯಲ್ಲಿ ಅವರ ವಿದ್ವತ್ತಿನ ಕುರಿತು ತಿಳಿಸುವಾಗ ಸಾಹಿತ್ಯ ಮತ್ತು ಕವಿಗಳ ಕುರಿತು ಅಲ್ಪ ಸ್ವಲ್ಪ ಮಾಹಿತಿ ನಮಗೆ ದೊರಕುವುದಕ್ಕೆ ಜೈನ ಶಾಸನಗಳು ಪೂರಕವಾಗಿವೆ.

### ಕೊನೆಟಿಪ್ಪಣಿ

1. ಕಮಲಾ ಹಂಪನಾ, 'ಕವಯತ್ರಿ ಕಂತಿ', *ಬೊಗಸೆ (ಮಹಿಳೆ ಸುತ್ತ-ಮುತ್ತ : 2003)*, ಪು. 155–160, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
2. ವಸಂತಲಕ್ಷ್ಮೀ ಕೆ., *ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು* (2006), ಪು. 160, ಸುಮುಖ ಪ್ರಕಾಶನ, ಬೆಂಗಳೂರು.





3. ಎ.ಕ. ಸಂ. VIII, ಶಾ.ಸಂ. 174.
4. ಅದೇ, ಸಂ. II, ಶಾ.ಸಂ. 67.
5. ಅದೇ, ಸಂ. VIII, ಶಾ.ಸಂ.138.
6. ಅದೇ, ಸಂ. II, ಶಾ.ಸಂ. 336.
7. ಅದೇ, ಸಂ. IX, ಶಾ.ಸಂ. 321.
8. ಲೋಕಾಪುರ ಬಾಳಾಸಾಹೇಬ, *ಕನ್ನಡದ ಕೆಲವು ಜೈನ ಶಾಸನ ಕವಿಗಳು* (2004), ಪು. 31, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
9. ಎ.ಕ. ಸಂ. VIII, ಭಾಗ–1.
10. ಅದೇ, VIII, ಶಾ.ಸಂ. 57.
11. ಅದೇ, ಸಂ. IX, ಶಾ.ಸಂ. 322.
12. ವಿಘ್ನರಾಜ ಎಸ್.ಆರ್., *ಕರ್ನಾಟಕದ ಸಂಸ್ಕೃತ ಜೈನ ಕವಿಗಳು* (2008), ಪು. 159–161, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

■

# ಬೋರನಕಣಿವೆ ಜಲಾಶಯ ನೀರಾವರಿ, ಮೈಸೂರು ಸಂಸ್ಥಾನದ ಭೂಕಂದಾಯ ನೀತಿ ಮತ್ತು ರೈತರು : ಬಿಕ್ಕಟ್ಟಿನ ಆಯಾಮಗಳು


❑ ತಿಮ್ಮನಹಳ್ಳಿ ವೇಣುಗೋಪಾಲ್
ಇತಿಹಾಸ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ.
ಮೊ.ನಂ: 9741242225


ಮೈಸೂರು ರಾಜ್ಯದ ಹುಳಿಯಾರು ಉಪ ತಾಲ್ಲೂಕಿನಲ್ಲಿ ಮೇ 1888ರಲ್ಲಿ ಆರಂಭವಾಗಿ ಅಕ್ಟೋಬರ್ 1892ರಲ್ಲಿ ಪೂರ್ಣಗೊಂಡ ಬೋರನ ಕಣಿವೆ ಜಲಾಶಯ ಕ್ಷಾಮಪರಿಹಾರದ ಕಾರ್ಯ ಯೋಜನೆಯಾಗಿ ಕೈಗೆತ್ತಿಕೊಂಡ ಕಾಮಗಾರಿ.[1] 2,79,527 ರೂ.ಗಳ ವೆಚ್ಚದಲ್ಲಿ[2] ನಿರ್ಮಾಣವಾದ ಇದು ಮಹಾರಾಜ ಚಾಮರಾಜೇಂದ್ರ ಒಡೆಯರ್, ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್ ಅವರ ಆಡಳಿತಾವಧಿಯಲ್ಲಿ ನಿರ್ಮಾಣವಾಯಿತು. ಮೈಸೂರಿನ ಮುಖ್ಯ ಇಂಜಿನಿಯರ್ ಆಗಿದ್ದ ಕರ್ನಲ್. ಸಿ. ಬವನ್ ತಳೆದ ವೈಯಕ್ತಿಕ ಆಸಕ್ತಿಯು ಇದಕ್ಕೆ ಪೂರಕ ವಾಯಿತು.[3] ಗುಣಮಟ್ಟದಿಂದಾಗಿ ಪ್ರಶಂಸಿತವಾಗಿರುವ ಇದರ ನಿರ್ಮಾಣದ ಹೊಣೆಯನ್ನು ಅಸಿಸ್ಟೆಂಟ್ ಇಂಜಿನಿಯರ್ ಬಿ. ಪಿ. ರಾಘವಲು ನಾಯ್ಡು ಸಮರ್ಥವಾಗಿ ನಿರ್ವಹಿಸಿದ್ದು, ಅದರ ಯಶಸ್ಸಿನ ಬಹುಪಾಲು ಅವರಿಗೆ ಸಲ್ಲಬೇಕು. ಸುವರ್ಣಮುಖಿ ನದಿಗೆ ಅಡ್ಡಲಾಗಿ ನಿರ್ಮಾಣವಾದ ಇದು 80 ಅಡಿ ಎತ್ತರ ಮತ್ತು 130 ಅಡಿ ಉದ್ದ ಇದ್ದು ನಿಸರ್ಗದತ್ತವಾದ ಎರಡು ಗುಡ್ಡಗಳ ಇರುವಿಕೆಯಿಂದಾಗಿ ಕಡಿಮೆ ವೆಚ್ಚದೊಂದಿಗೆ 3682 ಯೂನಿಟ್ ನೀರು ಸಂಗ್ರಹ ಸಾಮರ್ಥ್ಯ ಹೊಂದಲು ಸಾಧ್ಯವಾಯಿತು. ಮತ್ತು ಈ ಮೂಲಕ 8000 ಎಕರೆಗಳನ್ನು ನೀರಾವರಿ ಗೊಳಪಡಿಸುವ ಸಾಮರ್ಥ್ಯ ಪಡೆಯಿತು.[4] ಇದು





ಆರಂಭವಾದುದು ಬೆಳ್ಳಾರ ಯೋಜನೆ ಎಂದು.[5] ಆದರೆ ಬೆಳ್ಳಾರ ಗ್ರಾಮದ ಪಶ್ಚಿಮಕ್ಕಿರುವ ಪದಹಳ್ಳಿ ಎಂಬ ಪೂರ್ವಾಶ್ರಮದ ಹೆಸರಿನ ಬೋರನಕಣಿವೆ ಗ್ರಾಮಕ್ಕೆ ಹೊಂದಿಕೊಂಡಂತೆ ಜಲಾಶಯ ನಿರ್ಮಾಣಗೊಂಡುದರಿಂದ ಮುಂದೆ ಆ ಹೆಸರಿನಿಂದ ಕರೆಯುವುದು ರೂಢಿಗೆ ಬಂದಿತು.[6]

16 ಮೈಲು ಉದ್ದ ಇದ್ದರೂ 12 ಮೈಲುಗಳವರೆಗೆ ಮಾತ್ರ ನೀರುಣಿಸುವ ಎಡದಂಡೆ ನಾಲೆ ಹೊಂದಿರುವ ಈ ಜಲಾಶಯ ಬಲದಂಡೆ ನಾಲೆ ನಿರ್ಮಾಣದ ಉದ್ದೇಶ ಹೊಂದಿತ್ತಾದರೂ ಅದನ್ನು ಸರ್ಕಾರ ಕೈಗೆತ್ತಿಕೊಳ್ಳಲಿಲ್ಲ. ಎಡನಾಲೆಯ ವ್ಯಾಪ್ತಿಗೆ 7 ಗ್ರಾಮಗಳು ಫಲಾನುಭವಿಗಳಾಗಿ ಒಳಪಟ್ಟವು.

| ಕ್ರ.ಸಂ. | ಗ್ರಾಮಗಳ ಹೆಸರು | ನೀರಾವರಿಗೊಳಪಟ್ಟ ಭೂ ವಿಸ್ತೀರ್ಣ | | ಕೃಷಿಗೊಳ್ಳುತ್ತಿದ್ದ ಪ್ರದೇಶ 1894–95ಕ್ಕೆ ಮುನ್ನ ಹಳೆ ಜಮೀನುಗಳು | | 1894–95ರಿಂದ ಉಳುಮೆಗೆ ಕೈಗೆತ್ತಿ ಕೊಂಡ ಭೂಮಿ | |
|---|---|---|---|---|---|---|---|
| | | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ |
| 1. | ಬೋರನಕಣಿವೆ | 240 | 39 | 169 | 14 | 62 | 19 |
| 2 | ಬೆಳ್ಳಾರ | 159 | 31 | 53 | 5 | 24 | 8 |
| 3 | ಮುತ್ತುಗದಹಳ್ಳಿ | 141 | 38 | 41 | 37 | 71 | 38 |
| 4. | ಅಂಬಾರಪುರ | 148 | 3 | – | – | 136 | – |
| 5. | ಹೊಯ್ಸಲಕಟ್ಟೆ | 118 | 32 | 97 | 18 | 13 | 14 |
| 6 | ದಬಗುಂಟೆ | 482 | 30 | 204 | 38 | 159 | 23 |
| 7 | ಮರೆನಡು | 710 | 18 | 278 | 10 | 12 | 6 |
| | **ಒಟ್ಟು** | **2002** | **31** | **845** | **2** | **480** | **11** |

[Source: LR 35 of 1898]

ಜೂನ್ 1894ರಲ್ಲಿ ಮೊದಲ ಬಾರಿಗೆ ಕಾರ್ತಿಕ ಬೆಳೆಗೆ ಹರಿಸಲ್ಪಟ್ಟ ನೀರು ಈ ಭಾಗದ ರೈತರ ಪಾಲಿಗೆ ಭರವಸೆಯಾಗಿ ಮೂಡಿತು ಎಂಬುದು ಸಮಾಧಾನದ ಮಾತು. ಆದರೆ ವಾಸ್ತವವಾಗಿ ಅದು ಪಡೆದ ತಿರುವುಗಳೇ ಬೇರೆ. ಆರಂಭದಲ್ಲಿ ನೀರಾವರಿಗೊಳಪಟ್ಟ ಅಚ್ಚುಕಟ್ಟು ಪ್ರದೇಶ 2002 ಎಕರೆಗಳು ಅದರಲ್ಲಿ ಈಗಾಗಲೇ ಕೃಷಿಗೊಳ್ಳುತ್ತಿದ್ದ ಮತ್ತು ಕೈಗೆತ್ತಿಕೊಳ್ಳಲು ಸಿದ್ಧವಾಗಿದ್ದ ಒಟ್ಟು ವಿಸ್ತೀರ್ಣ 1325 ಎಕರೆಗಳು. 1898–99ರವರೆಗೂ ನೀರಾವರಿ ಕೃಷಿಗೊಂಡಿದ್ದು ಕೇವಲ 480 ಎಕರೆಗಳು. ಅದು ಒಟ್ಟು ಭೂಪ್ರದೇಶದ ಭಾಗವಾಗಿತ್ತು. ಅಂದರೆ ಕೃಷಿಗೊಳ್ಳಲು ಸಿದ್ಧವಿದ್ದ ಭೂ ವಿಸ್ತೀರ್ಣದಲ್ಲಿ 677 ಎಕರೆಗಳು ಬೀಳು ಬಿದ್ದಿದ್ದು ರೈತರ ನಿರಾಶಾದಾಯಕ ಪ್ರತಿಕ್ರಿಯೆಯನ್ನು ತೋರಿಸಿತು.[7] 1901–02ರ ಅಂಕಿ–ಅಂಶಗಳು ಹೇಳುವಂತೆ 643 ಎಕರೆಗಳ ರೈತರು ನೀರಾವರಿಯ ಫಲ ಅನುಭವಿಸಲು ನಿರುತ್ಸಾಹ ತೋರಲು ಸರ್ಕಾರದ ಕಠಿಣ ನೀರಾವರಿ ನೀತಿ ಕಾರಣವಾಯಿತು.[8] ಇನ್ನೊಂದಿಷ್ಟು ವಿಸ್ತರಿಸಿ ಹೇಳುವುದಾದರೆ ಜಲಾಶಯಕ್ಕೆ ಮುನ್ನ ಇದ್ದ 845 ಎಕರೆ ಭೂ ವಿಸ್ತೀರ್ಣದಲ್ಲಿ

ಕೇವಲ 387 ಎಕರೆಗಳನ್ನು ಮಾತ್ರ ರೈತರು ತರೀ ನೀರಾವರಿಗೊಳಪಡಿಸಲು ಸಮ್ಮತಿಸಿದರು. 458 ಎಕರೆಗಳ ರೈತರು ಸರ್ಕಾರಕ್ಕೆ ಮುಚ್ಚಳಿಕೆ ನೀಡಲು ನಿರಾಕರಿಸಿ ಖುಷ್ಕಿ ಭೂಕಂದಾಯದ ವ್ಯಾಪ್ತಿಯಲ್ಲೆ ಉಳಿಯಲು ನಿರ್ಧರಿಸಿದರು. ಐದಾರು ವರ್ಷಗಳಿಂದ ಕಾಲುವೆ ನೀರು ತಮ್ಮ ಜಮೀನುಗಳ ಪಕ್ಕದಲ್ಲೆ ಹರಿಯುತ್ತಿದ್ದರೂ ಬಳಸಿಕೊಳ್ಳಲು ಉತ್ಸಾಹ ತೋರಲಿಲ್ಲ. ಸರ್ಕಾರವು ತರೀಗೊಂಡಿದ್ದ ಜಮೀನುಗಳಿಗೆ ಮುಂದಿನ ಸರ್ವೇ ಸೆಟ್ಲ್‌ಮೆಂಟ್‌ವರೆಗೆ ಎಕರೆವಾರು ತಾತ್ಕಾಲಿಕ ವಾಟರ್ ರೇಟ್ ರೂಪಾಯಿ 3–0–0ನ್ನೂ ಜೊತೆಗೆ ಈಗಾಗಲೇ ಇದ್ದ ಖುಷ್ಕಿ ಭೂಕಂದಾಯವನ್ನೂ ಹಾಗೂ ರೂಪಾಯಿ 4/– ಕಂಟ್ರಿಬ್ಯೂಷನ್‌ನ್ನು ವಿಧಿಸಿ ತನ್ನ ರೆವಿನ್ಯೂ ಹೆಚ್ಚಿಸಿಕೊಳ್ಳುವ ಮುತುವರ್ಜಿ ತೋರಿತೇ ಹೊರತು ಉಳಿದಾವ ಸಂಗತಿಗಳನ್ನು ಲೆಕ್ಕಿಸಲಿಲ್ಲ.[9] ಸರ್ಕಾರ ಜಲಾಶಯ ನಿರ್ಮಾಣಕ್ಕೆ ವ್ಯಯಿಸಿದ್ದ ಒಟ್ಟು ಹಣ ರೂಪಾಯಿ 2,79,527. ಇದಕ್ಕನುಗುಣವಾಗಿ ಸರ್ಕಾರ ಸಂಗ್ರಹಿಸಲು ಸಾಧ್ಯವಾದ ಭೂಕಂದಾಯ ಶೇಕಡ 0.73 ಮಾತ್ರ. ಇದರಿಂದ ಸಮಾಧಾನಗೊಳ್ಳದ ಸರ್ಕಾರ ತರೀ ಭೂಮಿಯಾಗಿ ಪರಿವರ್ತಿಸಿಕೊಳ್ಳಲು ಇಚ್ಛಿಸದ ರೈತರಿಗೆ ನೋಟಿಸನ್ನು ನೀಡಿ ಬಲವಂತವಾಗಿ ವಾಟರ್ ರೇಟ್ ವಿಧಿಸುವ ಕಟು ತೀರ್ಮಾನಕ್ಕೆ ಬಂದಿತು.

ಆಶ್ಚರ್ಯವೆಂದರೆ ನಾಲೆಯಲ್ಲಿ ನೀರು ಹರಿಸಲು ಆರಂಭಿಸಿದಾಗ ತರೀ ವ್ಯಾಪ್ತಿಗೆ ಒಳಪಟ್ಟಿದ್ದ 480 ಎಕರೆಗಳಲ್ಲಿ ರೈತರು ಬೆಳೆ ತೆಗೆಯಲು ಉತ್ಸಾಹ ತೋರಿದ್ದು ಕೇವಲ 78 ಎಕರೆಗಳಲ್ಲಷ್ಟೆ. ವಾಟರ್ ರೇಟ್ ಮತ್ತು ಖುಷ್ಕಿ ಭೂಕಂದಾಯ ಸೇರಿ ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗಿದ್ದು ರೂಪಾಯಿ 269–3–0 ಮಾತ್ರ. ಉಳಿದ 402 ಎಕರೆಗಳು ಖುಷ್ಕಿ ಭೂಕಂದಾಯ ತೆರಲಷ್ಟೆ ಸೀಮಿತಗೊಂಡಿದ್ದವು. ವಾಟರ್ ರೇಟ್ ದುಬಾರಿಯಿದ್ದ ಕಾರಣದಿಂದ ರೈತರು ಮುಚ್ಚಳಿಕೆ ನೀಡಲು ನಿಧಾನ ಮಾಡಿದರು. ಆದರೆ ರೈತರು ನೀರನ್ನು ಬಳಸಿಕೊಳ್ಳಲಿ ಅಥವಾ ಬಿಡಲಿ ಕಂದಾಯವನ್ನು ತೆರಲೇಬೇಕೆಂದು ಕಠಿಣ ನಿಲುವು ತಳೆದ ಸರ್ಕಾರ 1899–1900ರ ನಂತರ ವಾಟರ್ ರೇಟ್ ಮತ್ತು ಕಂಟ್ರಿಬ್ಯೂಷನ್ ವಿಧಿಸಲು ಮುಂದಾಯಿತು.

ಮೈಸೂರು ಭೂಕಂದಾಯ ಕಾಯಿದೆ ಸೆಕ್ಷನ್ 53ರ ರೀತ್ಯಾ ಸರ್ಕಾರವು ಭೂಕಂದಾಯ ವಿಧಿಸುವ ಅಧಿಕಾರ ಹೊಂದಿದ್ದುದು ಮಾತ್ರವಲ್ಲ, ರೈತನು ನೀರನ್ನು ಬಳಸಿಕೊಳ್ಳಲು ನಿರಾಕರಿಸಿದರೂ ತರೀ ಕಂದಾಯ ದರ ವಿಧಿಸಲು ಸೆಕ್ಷನ್ 58ರಲ್ಲಿ ದತ್ತವಾದ ಅಧಿಕಾರ ಚಲಾಯಿಸಲು ತೀರ್ಮಾನಿಸಿತು.[10]

ಸರ್ಕಾರದ ಭೂಕಂದಾಯ ನೀತಿಯ ಇಂತಹ ಉದಾರವಾದಿಯಲ್ಲದ ಧೋರಣೆಯಿಂದಾಗಿ ಅಧಿಕ ವಿಸ್ತೀರ್ಣದ ಜಮೀನುಗಳು ತರೀಯಾಗಿ ಪರಿವರ್ತನೆಗೊಳ್ಳದೆ ಉಳಿದವು. ಅಲ್ಲದೆ ಎಡನಾಲೆ ವ್ಯಾಪ್ತಿಯ ಬಹುಭಾಗದ ಭೂಮಿಯ ಗುಣಮಟ್ಟ ಕಳಪೆಯದಾಗಿತ್ತು ಮಾತ್ರವಲ್ಲ ತರೀ ಕೃಷಿಗಾಗಿ ಜಮೀನು ಸಿದ್ದಪಡಿಸಲು ಅಧಿಕ ಹಣದ ಅಗತ್ಯವಿದ್ದು ಅದನ್ನು ಭರಿಸಲು ರೈತರಿಗೆ ಕಷ್ಟದಾಯಕವಾಗಿತ್ತು.[11] ಈ ಜಲಾಶಯ





ನಿರ್ಮಾಣವಾಗಿದ್ದು ಕ್ಷಾಮ ಪರಿಹಾರ ಕಾಮಗಾರಿಯಾಗಿ. ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ವರ್ತಕ ಧೋರಣೆಯಿಂದ ಸರ್ಕಾರ ವರ್ತಿಸಿತು.

ಈ ಬಿಕ್ಕಟ್ಟಿನಲ್ಲಿ ಹೆಣೆದುಕೊಂಡಿದ್ದ ಇನ್ನೊಂದು ಕುತೂಹಲದ ಸಂಗತಿಯೆಂದರೆ ಜಲಾಶಯದಿಂದ ಜಮೀನುಗಳಿಗೆ ನೀರು ಒದಗಿಸುವ ಮುನ್ನ ಡಿಸೆಂಬರ್ 1893ರಲ್ಲಿ ಸರ್ಕಾರ 1178 ಎಕರೆ ಜಮೀನನ್ನು ಮಾರುವ ಪ್ರಕಟಣೆ ಹೊರಡಿಸಿ ಹರಾಜು ಮಾಡಲು ಯತ್ನಿಸಿತಾದರೂ ಕೃಷಿಕರ ಆಸಕ್ತಿ ಹುಟ್ಟುಸುವಲ್ಲಿ ವಿಫಲವಾಯಿತು. 123 ಎಕರೆಯನ್ನು ಮಾತ್ರವೇ ಕೊಳ್ಳಲು ರೈತರು ಉತ್ಸಾಹ ತೋರಿದರು. ಜಲಾಶಯದಿಂದ ನೀರೊದಗಿಸಲು ಆರಂಭಿಸಿದಾಗ ಈ ಭಾಗದಲ್ಲಿ ಭೂಮಿಯ ಮಾರುಕಟ್ಟೆ ಮೌಲ್ಯ ಖುಷ್ಕಿ ಜಮೀನಿಗೆ ಎಕರೆಯೊಂದಕ್ಕೆ ರೂಪಾಯಿ 5 ರಿಂದ 25 ಇದ್ದರೆ, ತರೀ ಜಮೀನು ರೂಪಾಯಿ 20 ರಿಂದ 50 ರೂ.ಗಳವರೆಗೂ ಇದ್ದುದನ್ನು ಗಮನಿಸಬಹುದು.[12]

ಸರ್ಕಾರ ಮತ್ತು ರೈತರ ನಡುವಿನ ಬಿಗುವಿನ ಸಂಬಂಧ ಇಲ್ಲಿಗೆ ಮುಕ್ತಾಯವಾಗದೆ ಅದು ಮುಂದಿನ ದಿನಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ವ್ಯಕ್ತವಾಗತೊಡಗಿತು. 1903ರಲ್ಲಿ ಎಡನಾಲೆಯ ಹೂಳನ್ನು ತೆಗೆಯುವ ಸಂಬಂಧ ಸರ್ಕಾರ ವಿಧಿಸಿದ ಕಂಟ್ರಿಬ್ಯೂಷನ್‌ಗೆ ಅಸಮಾಧಾನ ಕೃಷಿಕರಿಂದ ವ್ಯಕ್ತಗೊಂಡಿತು. ಕೆರೆ ಕಾಲುವೆಗಳ ಹೂಳು ತೆಗೆಯುವುದು, ದುರಸ್ಥಿಗೊಳಿಸುವುದು ರೈತರ ಮೇಲಿರುವ ಸಂಪ್ರದಾಯಿಕ ಕಟ್ಟುಪಾಡು ಎಂದು ಬಗೆದ ಸರ್ಕಾರ ತಗಲುವ ವೆಚ್ಚಕ್ಕೆ ಸಂಬಂಧಿಸಿದಂತೆ ರೈತರು ತಮ್ಮ ಪಾಲನ್ನು ಶ್ರಮಧಾನದ ಮೂಲಕ ಇಲ್ಲವೆ ನೀರಾವರಿ ಮೇಲುಕರವಾಗಿ ಕಂಟ್ರಬ್ಯೂಷನ್ ತೆರುವ ನಿಯಮವನ್ನು ಹೇರಿತು.

ರೈತರ ದೂರು ಇದ್ದುದು 16 ಮೈಲು ಉದ್ದ ನಾಲೆಯಿದ್ದು 3000 ಎಕರೆಗಳು ನೀರಾವರಿ ವ್ಯಾಪ್ತಿಗೊಳಪಟ್ಟಿದೆ. ನಾವು ಕೇವಲ 800 ಎಕರೆ ಮಾತ್ರ ಜಮೀನು ಹೊಂದಿದ್ದು, ಆ ನಾಲೆಯ ಪೂರ್ಣಭಾಗದ ಹೂಳು ತೆಗೆಯಲು ಸಾಧ್ಯವಿಲ್ಲ. ಅದು ನಮಗೆ ಅತಿ ಹೊರೆಯಾಗಿದೆ ಎಂಬುದಾಗಿತ್ತು. ಅಷ್ಟು ಮಾತ್ರವಲ್ಲ ಸರಿಯಾದ ಸಮಯಕ್ಕೆ ನಿಗದಿತವಾಗಿ ತಮ್ಮ ಜಮೀನುಗಳಿಗೆ ನೀರು ಪೂರೈಕೆಯಾಗುತ್ತಿಲ್ಲ. ಈಗಾಗಲೇ ನಾಲೆಗಾಗಿ ತಮ್ಮ ಜಮೀನುಗಳನ್ನು ವಶಪಡಿಸಿಕೊಂಡಿದ್ದು ಅದಕ್ಕೆ ಪರಿಹಾರ ಇದುವರೆಗೂ ಸಿಕ್ಕಿಲ್ಲ ಎಂದು ಆರೋಪಿಸತೊಡಗಿದರು.[13]

ಅಂತಿಮವಾಗಿ ಈ ಮುಚ್ಚಳಿಕೆ ಪಡೆಯಲು ಯತ್ನಿಸಿದ ಸರ್ಕಾರ ಕೇವಲ 451 ಎಕರೆ ಜಮೀನು ಹೊಂದಿದ್ದ 93 ಜನ ರೈತರಿಂದ ಎಕರೆವಾರು 8 ಆಣೆ ಕಂಟ್ರಿಬ್ಯೂಷನ್ ತೆರುವ ಒಪ್ಪಿಗೆ ಪಡೆಯಿತು. ಉಳಿದ 140 ಎಕರೆ ಹೊಂದಿದ್ದ 20 ಜನ ರೈತರು ಹಾಗೆ ನೀಡಲು ನಿರಾಕರಿಸಿದರು.[14] ಇಲಾಖೆಯಿಂದ ಕಾರ್ಯವನ್ನು ಕೈಗೆತ್ತಿಕೊಂಡ ಸರ್ಕಾರ ಸಮ್ಮತಿಸದ ರೈತರಿಂದ ಕಾನೂನಿನಂತೆ ಅವರ ಪಾಲಿನ ವೆಚ್ಚವನ್ನು ವಸೂಲಿ ಮಾಡಲು ಕ್ರಮಕ್ಕೆ ಮುಂದಾಯಿತು.[15]

ರೆವಿನ್ಯೂ ಇಲಾಖೆಯ ಅಂಕಿ-ಅಂಶದಂತೆ 1934-35ರ ಹೊತ್ತಿಗೆ ತರೀ ಮತ್ತು ಬಾಗಾಯ್ತು ಕೃಷಿಗೆ ಒಳಪಟ್ಟಿದ್ದು 1218 ಎಕರೆಗಳು. 3000 ಎಕರೆಗಳಿಗಿಂತ ಹೆಚ್ಚು ವಿಸ್ತೀರ್ಣದ ಜಮೀನು ನೀರಾವರಿಗೆ ಒಳಪಡಲು ಸಾಧ್ಯವಿದ್ದರೂ ಬೀಳು ಬಿದ್ದಿತ್ತು. ಇದನ್ನು ಮಾರಾಟ ಮಾಡಲು ಸರ್ಕಾರ ಕ್ರಮ ಕೈಗೊಂಡಿತಾದರೂ ಹೆಚ್ಚಿನ ಬೆಲೆ ನಿಗದಿಪಡಿಸಿದ್ದರಿಂದಾಗಿ ಸ್ಥಳೀಯ ರೈತರ ಕೊಳ್ಳುವ ಸಾಮರ್ಥ್ಯಕ್ಕೆ ಇದು ಮೀರಿದ್ದಾಗಿತ್ತು. ಹಾಗಾಗಿ ತನ್ನ ಎಣಿಕೆಯಲ್ಲಿ ವಿಫಲವಾಯಿತು. ಇಷ್ಟೊಂದು ವಿಸ್ತೀರ್ಣದ ಭೂಮಿ ಉತ್ಪನ್ನಗೊಳ್ಳದೆ ಬೀಳು ಬಿದ್ದಿರುವುದಕ್ಕಿಂತ ರಿಯಾಯಿತಿ ದರದಲ್ಲಿ ರೂಪಾಯಿ 5 ಮತ್ತು 10ರ ನಡುವೆ ಮಾರಾಟ ಮಾಡಬೇಕೆನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿತು.[16] ಅದಕ್ಕಾಗಿ ಸ್ಥಳೀಯರಲ್ಲದ ಕೃಷಿಕರನ್ನು ಕರೆತಂದು ನೆಲೆಸುವಂತೆ ಮಾಡಲು ಸಿರಾ, ಗುಬ್ಬಿ ಮತ್ತಿತರ ತಾಲ್ಲೂಕುಗಳಲ್ಲಿ ವ್ಯಾಪಕ ಪ್ರಚಾರ ಕಾರ್ಯ ಹಾಕಿಕೊಳ್ಳಲಾಯಿತಾದರೂ ಪ್ರತಿಫಲ ಮಾತ್ರ ನಿರಾಶಾದಾಯಕವಾಗಿಯೇ ಉಳಿಯಿತು.

ಹೀಗೆ ಮೈಸೂರು ರಾಜ್ಯದ ಮಹತ್ವಾಕಾಂಕ್ಷೆಯ ಜಲಾಶಯವೊಂದರ ನಾಲಾ ನೀರಾವರಿಯು ನಿರೀಕ್ಷಿತ ವೇಗದಲ್ಲಿ ಪ್ರಗತಿಕಾಣದೆ ಕುಂಠಿತಗೊಳ್ಳಲು ಸರ್ಕಾರದ ಭೂಕಂದಾಯ ನೀತಿಯ ಅವೈಜ್ಞಾನಿಕ, ಅತಾರ್ಕಿಕ ನಿಲುವು ಕಾರಣವಾಯಿತು.

### ಕೊನೆಟಿಪ್ಪಣಿ

1. *ತುಮಕೂರ್ ಡಿಸ್ಟ್ರಿಕ್ಟ್ ಗೆಜೆಟಿಯರ್*, 1969, ಪುಟ-113.
2. *ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್*, 1895-96
3. *ದಿ ಸೆಂಟೆನರಿಯಿನ್ ದ ಸ್ಟೆಕ್ಟ್ರಮ್, ಡೆಕನ್ ಹೆರಾಲ್ಡ್ ಪತ್ರಿಕೆ*, 07-04-2007. 1887ರಲ್ಲಿ ಬೋರನಕಣಿವೆ ಸಮೀಪದ ಬೆಳ್ಳಾರ ಸುತ್ತಮುತ್ತಲಭಾಗ ತೀವ್ರ ಬರಕ್ಕೆ ತುತ್ತಾದಾಗ ಬೆಳ್ಳಾರದ ಸಮೀಪದಲ್ಲಿ ತಂಗಿದ್ದ ಮೈಸೂರಿನ ಮುಖ್ಯ ಇಂಜಿನಿಯರ್ ಕರ್ನಲ್ ಸಿ ಬವನ್ ರನ್ನು ಸ್ಥಳೀಯ ಜನರು ಮಾಡಿದ ಮನವಿಗೆ ಸ್ಪಂದಿಸಿ ಸರ್ವೆ ಕಾರ್ಯ ಕೈಗೆತ್ತಿಕೊಳ್ಳಲು ಕಾರಣವಾಯಿತು.
4. *ಲ್ಯಾಂಡ್ ರೆವಿನ್ಯೂ ಫೈಲ್* 134-1934, 15-17 ಕೆ.ಎಸ್.ಎ. ಬೆಂಗಳೂರು
5. *ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್*, 1891-92
6. *ದ ಸೆಂಟನೇರಿಯನ್*, ಅದೇ.
7. ಎಲ್.ಆರ್.35 / 1898, 1-3 ಕೆ.ಎಸ್.ಎ.
8. ಆರ್.ಎಂ. 238/ 1903-04

17 ಜುಲೈ 1903 ರಂದು ತುಮಕೂರು ಎಕ್ಸಿಕ್ಯುಟೀವ್ ಇಂಜಿನಿಯರ್ ಈಸ್ಟನ್ ಬ್ಲಾಕ್‌ನ ಸೂಪರಿಂಟೆಂಡೆಂಟ್ ಇಂಜಿನಿಯರ್‌ಗೆ ಬರೆದ ಪತ್ರ.

9. ಎಲ್.ಆರ್.35/1898, ಅದೇ..





10. ಎಲ್.ಆರ್.41/1900, ಕ್ರ.ಸಂ. 1-2

    27-3-1902ರಂದು ಸರ್ಕಾರದ ಹೊರಡಿಸಿದ ಆದೇಶ.
11. ಎಲ್.ಆರ್.ಮೇಲಿನದೆ, ಸರ್ವೆ ಸೂಪರಿಂಟೆಂಡೆಂಟ್ ಜಿ.ಪಿ. ಗ್ರಾಂಟ್ ಅವರು ಕೃಷ್ಣಮೂರ್ತಿಗೆ ಬರೆದ ಪತ್ರ
12. ಎಲ್.ಆರ್. 50/1894, ಕ್ರ.ಸಂ. 1-3

    22 ನವೆಂಬರ್ 1895 ರಂದು ತುಮಕೂರು ಜಿಲ್ಲಾಧಿಕಾರಿ ರೆವಿನ್ಯೂ ಸೆಕ್ರೆಟರಿಗೆ ಬರೆದ ಪತ್ರ.
13. ಆರ್.ಎಂ. 238/1903-04
14. ಆರ್.ಎಂ. ಮೇಲಿನದೆ.
15. ಅದೇ..
16. ಎಲ್.ಆರ್. 134/1934, 15-17.

■

**ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಪುಸ್ತಕ ಕಳುಹಿಸುವ ಲೇಖಕರು ಮತ್ತು ಪ್ರಕಾಶಕರಲ್ಲಿ ಮನವಿ**

- ಸಾದರ ಸ್ವೀಕಾರ ಮತ್ತು ವಿಮರ್ಶೆಗೆ ಕಳುಹಿಸುವ ಕೃತಿಗಳು ಇತಿಹಾಸ, ಪುರಾತತ್ವ, ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ, ನಾಣ್ಯಶಾಸ್ತ್ರಗಳಿಗೆ ಸಂಬಂಧಿಸಿರಬೇಕು.
- ಕೃತಿಯ ಒಂದು ಪ್ರತಿ ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರಕ್ಕೆ ಎಂತಲು, ಎರಡು ಪ್ರತಿಗಳನ್ನು ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಎಂತಲೂ ಪರಿಗಣಿಸಲಾಗುವುದು.
- ಕೃತಿಗಳನ್ನು ವಿಮರ್ಶೆಗೆ ಆದ್ಯತಾನುಸಾರ ಪರಿಗಣಿಸಲಾಗುವುದು.

**ಪ್ರತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ:**

**ಸಂಪಾದಕರು, 'ಇತಿಹಾಸ ದರ್ಪಣ',**
# 33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ,
ಬೆಂಗಳೂರು-560091.
**ಮೊ: 7829404063.**

# ಗತ ಮತ್ತು ವರ್ತಮಾನವನ್ನು ಜೋಡಿಸುತ್ತಾ


❑ ಇಂಗ್ಲಿಷ್ ಮೂಲ:
**ರಣ್‌ಬೀರ್ ಚಕ್ರವರ್ತಿ**
ಪ್ರೊಫೆಸರ್, ಜವಾಹರ್ ಲಾಲ್ ನೆಹರು ಯುನಿವರ್ಸಿಟಿ,
ನವದೆಹಲಿ.
ranbirchakravarthy@mail.jnu.ac.in

ಕನ್ನಡಕ್ಕೆ:
**ಪ್ರದೀಪ ಕುಮಾರ್ ಶೆಟ್ಟಿ**
ಕೆಂಚನೂರು
ಸರಕಾರಿ ಪದವಿಪೂರ್ವ ಕಾಲೇಜು, ಬೈಂದೂರು.
ಕುಂದಾಪುರ – ತಾ.
ಉಡುಪಿ – ಜಿಲ್ಲೆ.
pradeephistory@gmail.com


*(ಹಿಂದಿನ ಸಂಚಿಕೆಯಿಂದ)*

## ಭಾಗ–2

## ವೈವಿಧ್ಯತೆಯ ನಿರಾಕರಣೆ

**ರಣ್‌ಬೀರ್ ಚಕ್ರವರ್ತಿ : ನಾವೀಗ ಬಹು ಮುಖ್ಯವಾದ ವಿಷಯವನ್ನು ಚರ್ಚಿಸಬೇಕಾಗಿದೆ. ಸಾರ್ವಜನಿಕರು ಮತ್ತು ಸಾರ್ವಜನಿಕವಾಗಿರುವ ಒಂದು ಲೋಕ ಯಾವಾಗಲೂ ಕೂಡಾ ಚರಿತ್ರೆ ಅಧ್ಯಯನದಲ್ಲಿ ತರಬೇತಿಯನ್ನು ಹೊಂದದೇ ಚರಿತ್ರೆಯ ಅಪಾಯಕಾರಿ ಮತ್ತು ತಪ್ಪು ಅರ್ಥೈಸಿಕೊಳ್ಳುವಿಕೆಯನ್ನೇ ಕರಗತ ಮಾಡಿಕೊಂಡಿವೆ. ಅಂತಹ ವಿದ್ಯಮಾನವು ಕೆಲವು ಧಾರ್ಮಿಕ ಮೂಲಭೂತ ವಾದೀ ಗುಂಪುಗಳ ಕಾರಣದಿಂದ, ವಿದ್ಯಮಾನಗಳಿಂದ ಮತ್ತು ಜನಾಂಗೀಯ ಅಸ್ಮಿತೆಗಳ ಕಾರಣದಿಂದ ಏಕರೂಪೀ ಗುರುತಾಗಿ ಕಾಣಿಸುತ್ತಿದೆ ಕೂಡಾ. ಆದರೆ ನಾವು ತಿಳಿದ ಹಾಗೆ, ಗತವೆನ್ನುವುದು ಘಟನೆಗಳ ಏಕರೂಪೀ ಪ್ರತಿನಿಧೀಕರಣವಲ್ಲ. ನೀವು ಹೇಳಿದಂತೆ, ಋಗ್ವೇದವೂ ಕೂಡಾ ಬರಿಯ ಇಂಡೋ–ಆರ್ಯನ್ ಅಭಿವ್ಯಕ್ತಿ ಮಾತ್ರವಷ್ಟೇ ಅಲ್ಲ, ಅದು ಒಂದೇ ಭಾಷೆಯಲ್ಲಿ ರಚಿತವಾದುದಲ್ಲ, ಅದು ಹಲವು ಭಾಷೆಗಳಲ್ಲಿ ರಚಿತವಾಗಿದೆ ಮತ್ತು ಹಲವು ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತದೆ ಕೂಡಾ.**

**ರೊಮಿಲಾ ಥಾಪರ್ :** ಸಾರ್ವಜನಿಕ ವಲಯ ಅಥವಾ ಆ ನೆಲೆಯಲ್ಲಿ ನಡೆಯುತ್ತಿರುವ ವಾದ–ಚರ್ಚೆಗಳ ಬಗ್ಗೆ ನಾನು ತೀರಾ ಆಳವಾಗಿ ಪ್ರವೇಶಿಸುವುದಿಲ್ಲ. ಪುನಃ ಇದು ಭಾರತದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಕಾಲರ್‌ಶಿಪ್ ಅಥವಾ ವಿದ್ವಾಂಸಿಕೆಯ ನಡುವಿನ ವ್ಯತ್ಯಾಸವನ್ನು





ತೋರಿಸುತ್ತದೆ. ಭಾರತದಲ್ಲಿ ಪ್ರಾಚೀನ ಭಾರತದ ಮೇಲೆ ಕೆಲಸ ಮಾಡಿರುವ ವಿದ್ವಾಂಸರುಗಳು ಆರ್ಯನ್ ಭಾಷೆ ಬಹುಶಃ ಇರಾನ್ ಮೂಲಕ ಸೆಂಟ್ರಲ್ ಏಷ್ಯಾದಿಂದ ಬಂದಿರಬಹುದೆಂದೇ ನಂಬಿದ್ದಾರೆ. ಆದರೆ ಭಾರತದಲ್ಲಿ ಹಲವು ಜನರು ಇಂದು ಪ್ರತಿಪಾದಿಸುತ್ತಿರುವುದೇನೆಂದರೆ ಆರ್ಯನ್ ಭಾಷೆಯನ್ನು ಮಾತನಾಡುವವರು ದೇಶೀಯ ನಿವಾಸಿಗಳೆಂದು. ಕೆಲವರಂತೂ, ಹರಪ್ಪಾ ನಾಗರೀಕತೆಯ ಜನರೇ ಆರ್ಯನ್ನರೆಂದೂ ವಾದಿಸುತ್ತಿದ್ದಾರೆ. ಸಿಂಧೂ ನಾಗರೀಕತೆಯ ಮೂಲ ಮತ್ತು ಉಗಮದಲ್ಲಿ ಆರ್ಯೇತರ ಅಂಶವೇ ಇಲ್ಲವೆನ್ನುತ್ತಿದ್ದಾರೆ ಕೂಡಾ. ಇದೊಂದು ವಾದ ಮತ್ತು ನಾನಿದನ್ನು ಅನೇಕ ಕಾರಣಗಳಿಂದ ಒಪ್ಪಲಾರೆ.

## ನಿರ್ಮಲೀಕೃತ (ಸ್ಯಾನಿಟೈಸ್‌ಡ್)

ಸ್ಯಾನಿಟೈಸ್‌ಡ್ ಆರ್ಯನಿಸಂ, ಇಲ್ಲಿ ಎಲ್ಲವನ್ನೂ ಸರಳೀಕೃತಗೊಳಿಸಲಾಗುತ್ತದೆ ಮತ್ತು ಅದು ಒಂದೇ ಒಂದು ಮೂಲವನ್ನೂ ಹೊಂದಿರುತ್ತದೆ. ಸಮಸ್ಯೆಯ ಸಂಕೀರ್ಣತೆಯನ್ನು ಅಲ್ಲಿ ಉಪೇಕ್ಷಿಸಲಾಗಿರುತ್ತದೆ. ಸ್ಪಷ್ಟವಾಗಿ ಅಂತಹ ಸಂದರ್ಭಗಳಲ್ಲಿ ಅಭಿಪ್ರಾಯಕ್ಕೂ ಮತ್ತು ಅದರ ಆಧಾರರೂಪಿಯಾಗಿ ವ್ಯಕ್ತಪಡಿಸಿದ ಆಧಾರಗಳಿಗೂ ಬಲವಾದ ವ್ಯತ್ಯಾಸ ವಿರುತ್ತದೆ ಮತ್ತು ಅವುಗಳು ಅಸಮವಾಗಿರುತ್ತವೆ. ನಮಗೆ ಇಲ್ಲಿ ಗೋಚರಿಸುವುದೇನೆಂದರೆ ಭಾಷಾಶಾಸ್ತ್ರೀಯವಾಗಿ ಮತ್ತು ಆರ್ಕಿಯಾಲಾಜಿಕಲ್ ನೆಲೆ ಮತ್ತು ಕೋನಗಳಿಂದ ಅಂತಹ ವಾದಗಳು ಹೊಂದದಿರುವುದು ಅಥವಾ ಒಗ್ಗದಿರುವುದಾಗಿದೆ. ನಾವು ವಾದಿಸುವುದೇನೆಂದರೆ ಕಾಲಾನುಕ್ರಮಣಿಕೆ ಅಥವಾ ಕ್ರೊನಾಲಜಿಯಲ್ಲಿ ಋಗ್ವೇದವು ಹರಪ್ಪೋತ್ತರ ಸಂದರ್ಭದ್ದೆಂದು. ಈ ಕಾರಣದಿಂದ ಸಹಜವಾಗಿ ಋಗ್ವೇದವು ಹರಪ್ಪಾದ ಕಾಲವನ್ನು ಪ್ರತಿಫಲಿಸುವುದಿಲ್ಲ. ಹರಪ್ಪಾ ಸಂಸ್ಕೃತಿಯು ಓಮನ್ ಮತ್ತು ಮೆಸಪೊಟೇಮಿಯಾ ಜತೆ ಸಂಪರ್ಕವನ್ನು ಹೊಂದಿತ್ತು, ಆದರೆ ಅಂತಹ ಯಾವ ಸಾಧ್ಯತೆಯನ್ನೂ ಕೂಡಾ ಋಗ್ವೇದ ಪ್ರತಿಪಾದಿಸುವುದಿಲ್ಲ. ಸುಮಾರು ಮೂರು ಮತ್ತು ಎರಡನೆಯ ಕ್ರಿಸ್ತಶಕದ ಆರಂಭದಲ್ಲಿ ಹರಪ್ಪನ್ ಸಂಸ್ಕೃತಿಯು ಅದರ ಪರಿಧಿಯಲ್ಲಿದ್ದ ಸಮಕಾಲೀನ ಸಂದರ್ಭದ ಅನೇಕ ಸಂಸ್ಕೃತಿಗಳ ಜತೆ ಅಸ್ತಿತ್ವದಲ್ಲಿತ್ತು. ಕ್ರಿಸ್ತಶಕ ಒಂದರ ಮಧ್ಯ ಅವಧಿ ಮತ್ತು ಕೊನೆಯ ಅವಧಿಯ ಹೊತ್ತಿಗೆ; ಋಗ್ವೇದ ರಚಿತವಾದ ಕಾಲವೆಂದು ತಿಳಿಯುವ ಅವಧಿಯಲ್ಲೇ ವಿಭಿನ್ನವಾದ ಚಿತ್ರಿತ ಬೂದು ಬಣ್ಣದ ಮಡಕೆ (ಪೈಂಟೆಡ್ ಗ್ರೇವೇರ್ – ಪಿ.ಜಿ.ಡಬ್ಲ್ಯೂ), ಕಪ್ಪು ಮತ್ತು ಕೆಂಪು ದ್ವಿವರ್ಣದ ಮಡಕೆಗಳ ಸಂಸ್ಕೃತಿ (ಬ್ಲಾಕ್ ಅಂಡ್ ರೆಡ್‌ವೇರ್ ಕಲ್ಚರ್ – ಬಿ.ಆರ್.ಡಬ್ಲ್ಯೂ) ಮೆಗಾಲಿತಿಕ್ (ಬೃಹತ್ ಶಿಲಾಯುಗ) ಸಂಸ್ಕೃತಿ ಮುಂತಾದವುಗಳು ಅಸ್ತಿತ್ವದಲ್ಲಿದ್ದುವು. ಇವುಗಳು ವೈವಿಧ್ಯವಾದವುಗಳು. ಇವುಗಳು ಏಕಾಕೃತಿಯ ಮತ್ತು ಒಂದೇ ಆದ ಸಂಸ್ಕೃತಿಯಲ್ಲ. ಇವುಗಳ ಪ್ರಸಾರದಲ್ಲಿ, ಅಂತಹ ಸಂದರ್ಭದಲ್ಲಿ ಆರ್ಯನ್ ಭಾಷಿಕರು ಇಂತಹ ವೈವಿಧ್ಯದ ಸಂಸ್ಕೃತಿಗಳನ್ನು ಸಂಧಿಸಿದ್ದಿರಬಹುದು ಮತ್ತು ಅವುಗಳಡೆಯಲ್ಲಿ ವಾಸ ಮಾಡಿದ್ದಿರಲೂಬಹುದು.

ಆದಾಗ್ಯೂ ಹರಪ್ಪನ್ ಸಂಸ್ಕೃತಿ ಮತ್ತು ಋಗ್ವೇದದ ನಡುವಿನ ವ್ಯತ್ಯಾಸವನ್ನು ನಾವು ಮರೆಯಬಾರದು. ಮುಖ್ಯವಾಗಿ ಹರಪ್ಪನ್ ನಗರಗಳು ನುರಿತ, ವರ್ಧಿತ, ಸುಸಜ್ಜಿತ ನಗರ ಸಂಸ್ಕೃತಿಯನ್ನು ಹೊಂದಿ ಬರವಣಿಗೆಯನ್ನು ತಿಳಿದವರಾಗಿದ್ದರು. ಆದರೆ ಋಗ್ವೇದದ ಸಮಾಜವು ಕೃಷಿ–ಪಶುಪಾಲಕ ಸಮಾಜವಾಗಿತ್ತು. ಮತ್ತು ನಗರ, ನಾಗರೀಕತೆ ಮತ್ತು ಬರವಣಿಗೆಗೆ ಅಪರಿಚಿತವಾಗಿತ್ತು.

**ರಣ್‌ಬೀರ್ ಚಕ್ರವರ್ತಿ: ಋಗ್ವೇದ ಪಠ್ಯಗಳಲ್ಲಿ ಸಮಕಾಲೀನ ಸಂದರ್ಭದಲ್ಲಿ ಘಟಿಸುತ್ತಿದ್ದ ಮೆಗಾಲಿತಿಕ್ ಸಂಸ್ಕೃತಿ ಕೂಡಾ ಹೆಚ್ಚು ಪ್ರತಿಫಲಿತಗೊಂಡಂತಿಲ್ಲ.**

**ರೊಮಿಲಾ ಥಾಪರ್:** ಹೌದು, ಮೆಗಾಲಿತಿಕ್ ಸಂಸ್ಕೃತಿಯು ಈ ಪಠ್ಯಗಳಲ್ಲಿ ದಾಖಲಾಗಿಲ್ಲ. ಆದರೆ ಈ ಪಠ್ಯಗಳಲ್ಲೇ ವಿವಿಧ ರೀತಿಯ ಅನ್ಯ ಗುಂಪುಗಳ ಬಗೆಗೆ ಚರ್ಚಿಸಲಾಗಿದೆ. ಮುಖ್ಯವಾಗಿ ಅವರೆಂದರೆ ಅಸುರರು, ದಾಸರು ಮತ್ತು ದಸ್ಯುಗಳು. ಈ ಪಠ್ಯಗಳನ್ನು ನಾವು ಹೆಚ್ಚು ವಾಸ್ತವಿಕ ನೆಲೆಯಿಂದ ನೋಡೋಣ. ಋಗ್ವೇದವು ಎರಡು ವರ್ಣಗಳನ್ನು, ಅಂದರೆ ಆರ್ಯ ಮತ್ತು ದಾಸರೆಂಬುದನ್ನು ಉಲ್ಲೇಖಿಸುತ್ತದೆ. ಈ ದಾಸರೆಂದರೆ ಯಾರು? ಋಗ್ವೇದದಲ್ಲಿ ದಾಸರನ್ನು, ವಿಭಿನ್ನ ಕ್ರಿಯಾವಿಧಿ, ಸಂಪ್ರದಾಯ ಮತ್ತು ರೂಢಿಯನ್ನು ಆಚರಿಸುತ್ತಿದ್ದವರಾಗಿ, ವಿಭಿನ್ನವಾದ ದೇವರನ್ನು ಪೂಜಿಸುತ್ತಿದ್ದವರಾಗಿ ಮತ್ತು ಅವರು ಋಗ್ವೇದವನ್ನು ರಚಿಸಿದ ಅಥವಾ ರಚಯಿತರು ಆಡುತ್ತಿದ್ದ ಭಾಷೆಯನ್ನು ಆಡದಿದ್ದ ಜನರಾಗಿ ಕಾಣಬರುತ್ತಾರೆ. ಋಗ್ವೇದದ ಜನರು ಅಪಾರ ಪಶುಸಂಪತ್ತನ್ನು ಹೊಂದಿ, ಅವುಗಳಿಗೋಸ್ಕರ ಹಗೆ ಸಾಧಿಸುತ್ತಾ ಪ್ರತ್ಯೇಕ ಸ್ಥಳ–ನಿವೇಶನಗಳಲ್ಲಿ ವಾಸಮಾಡುತ್ತಿದ್ದರು. ಈ ಕಾರಣದಿಂದ ಕೆಲವು ವಿದ್ವಾಂಸರು ಹೇಳುವ ಹಾಗೆ ಅವರು ಭಿನ್ನವಾದ ಸಂಸ್ಕೃತಿಯನ್ನು ಹೊಂದಿದವರಾಗಿದ್ದರು. ಆದ್ದರಿಂದ ನಾವು ಕೇಳಬೇಕು, ಯಾರವರು? ಎಂದು ಮತ್ತು ಯಾವ ಕಾರಣಕ್ಕಾಗಿ ಅವರು ಮಿಥಕೀಕರಣಕ್ಕೊಳಪಟ್ಟರು? ಎಂಬುದಾಗಿ.

ಇದಲ್ಲದೆ ಈ ಅವಧಿಯಲ್ಲಿ ದಾಸೀ ಪುತ್ರ ಬ್ರಾಹ್ಮಣರಿದ್ದರು. ಇವರು ಮೊದಲು ಸಮಾಜದಿಂದ ಸ್ವೀಕಾರಾರ್ಹವಾಗಿಲ್ಲವಾಗಿದ್ದರು, ಆದರೆ ಅವರು ತಮ್ಮ ಶಕ್ತಿಯನ್ನು ಅಧಿಕಾರವನ್ನು ಪ್ರಕಟಪಡಿಸಿದಾಗ ಬ್ರಾಹ್ಮಣರಾಗಿ ಸ್ವೀಕೃತರಾದರು. ಈ ದಾಸೀಪುತ್ರ ಎನ್ನುವ ಶಬ್ದವೇ ವಿರೋದಾರ್ಥಗಳನ್ನು ನೀಡುವಂತಹ ಶಬ್ದ ಸಂಯುಗ್ಮವಾಗಿದೆ. ಒಂದು ನೆಲೆಯಲ್ಲಿ ಅದು ದಾಸೀಪುತ್ರನೆನ್ನುವ ಗುಲಾಮ ಮಹಿಳೆಯ ಮಗ ಅಥವಾ ಕನಿಷ್ಠ ಸ್ಥಾನಮಾನ ಮತ್ತು ಸಂಸ್ಕೃತಿಯನ್ನು ಸೂಚಿಸುತ್ತದೆ. ಆದರೆ ಇನ್ನೊಂದು ನೆಲೆಯಲ್ಲಿ ಬ್ರಾಹ್ಮಣನ ಸ್ಥಾನಮಾನದ ಹತ್ತಿರ ಸುಳಿಯುತ್ತಾ ವೈರುಧ್ಯದ ಅರ್ಥ ಮತ್ತು ಅನುಭವವಾಗಿ ಕಾಣುತ್ತದೆ. ವೈದಿಕ ಪಠ್ಯಗಳು ಯಾವಾಗಲೂ ಕೂಡಾ ಈ ದೇವ ಮತ್ತು ಅಸುರರ ನಡುವಿನ ಸಂಘರ್ಷವನ್ನು ದಾಖಲಿಸುತ್ತವೆ. ಹೌದು, ಒಂದು ನೆಲೆಯಲ್ಲಿ ಇದು ಮೈಥಾಲಜಿ, ಆದರೆ ಇಲ್ಲಿ ಮೈಥಾಲಜಿಯು ಸಂಪೂರ್ಣವಾಗಿ ಸಾಮಾಜಿಕ ಕಲ್ಪನೆಯ ಕ್ರಮಗಳಿಂದ ಕೂಡಾ ದೂರ ಸರಿದಿಲ್ಲ. ಮೈಥಾಲಜಿಯು ಸರ್ವ ಸಂಪೂರ್ಣ ನೈಜತೆಯನ್ನು ಪ್ರಕಟಪಡಿಸಿಯೂ ಇಲ್ಲ. ಅವರ ಬಗೆಗಿನ ಗ್ರಹಿಕೆಗಳೇ ಸಾಮಾನ್ಯವಾಗಿ ಅವರು ಸೃಷ್ಟಿಸುವ ಮಿಥ್ ಅಥವಾ ಮಿಥ್ಯೆಯಲ್ಲಿ ಅಡಗುತ್ತದೆ. ಈ ಕಾರಣದಿಂದ ಅಲ್ಲಿ ಒಂದು ರೀತಿಯ, 'ನಮಗೆ' ಮತ್ತು 'ಅವರಿಗೆ' ಎನ್ನುವ ನೆಲೆಗಳು ಗೋಚರವಾಗುತ್ತವೆ. ಈ ಕಾರಣದಿಂದ ಅತ್ಯಂತ ಸ್ಪಷ್ಟವಾಗಿ ಅಲ್ಲಿ ಸಂಸ್ಕೃತಿಯ ಒಂದೇ ನೆಲೆಗಳಿಗಿಂತ ಬಹು ಸಂಸ್ಕೃತಿಯು ಇರುವುದನ್ನೂ ಗಮನಿಸಬಹುದಾಗಿದೆ. ಹೀಗಾಗಿ ಚರಿತ್ರಕಾರರು, ವೈದಿಕ ಸಾಹಿತ್ಯವು ಸಿಂಧೂಕಣಿವೆ ನಾಗರೀಕತೆಯ ನಂತರದ ಅವಧಿಯ ಮತ್ತು ಕ್ರಿಸ್ತಪೂರ್ವ ಐದನೇ ಶತಮಾನದ ಹೊತ್ತಿನ ಚರಿತ್ರೆ ಆರಂಭದ ಚಾರಿತ್ರಿಕ ನಗರಗಳು ಮತ್ತು ನಗರ ಸಂಸ್ಕೃತಿಯ ಅವಧಿಯದೆಂದು





ವಾದಿಸುವುದು. ಇವುಗಳನ್ನು ಸಂಸ್ಕೃತಿಗಳ ವಿವಿಧ ನೆಲೆಯ ಮುಖಾಮುಖಿ ಹಾಗೂ ಸಂವಹನದ ನೆಲೆಯಿಂದ ಗಮನಿಸುವುದಾದರೆ, ಅದು ಸಮುದಾಯ–ಸಮಾಜಗಳ ಸಂವಹನದ ಹತ್ತು ಹಲವು ಸಾಧ್ಯತೆಗಳನ್ನು ಸೃಷ್ಟಿಸುತ್ತದೆ ಮತ್ತು ಮುಖ್ಯವಾಗಿ ಇದಿಲ್ಲದಿದ್ದರೆ ಅಥವಾ ಸಂವಹನವನ್ನು ಹೊರತುಪಡಿಸಿದರೆ ಅದು ಒಂದೇ ಒಂದು ಸಂಸ್ಕೃತಿಯ ಕುರಿತು ಬೆಳಕು ಹರಿಸುತ್ತದೆ. ಈ ನೆಲೆಯಲ್ಲಿ ಉದಾಹರಣೆಗೆ ಗಮನಿಸುವುದಾದರೆ, ವೈದಿಕ ಸಾಹಿತ್ಯದ ಪಠ್ಯಗಳು, ಹಲವು ಸಂಸ್ಕೃತಿಗಳ ಸಂಯೋಗದಿಂದ ಒಂದೇ ಸಂಪ್ರದಾಯವಾಗಿ ರೂಪುಗೊಂಡ ಕ್ರಮವೆಂದೇ ವಾದಿಸಬಹುದಾಗಿದೆ. ಈಗಲೂ ಕೂಡಾ ಸುಮಾರು ಐದು ಸಾವಿರ ವರ್ಷದ ಚಾರಿತ್ರಿಕ ಚಟುವಟಿಕೆ ಹೊರತಾಗಿಯೂ, ನಾವು ವೈವಿಧ್ಯದ ಸಂಸ್ಕೃತಿಗಳನ್ನು ಹೊಂದಿದ್ದೇವೆ.

**ರಣ್‌ಬೀರ್ ಚಕ್ರವರ್ತಿ : ನಾವಿಲ್ಲಿ ಹೊಂದಿರುವುದು ಒಂದು ಅಥವಾ ಏಕಶಿಲೀಯ ಸಂಸ್ಕೃತಿಯನ್ನಲ್ಲ, ಬದಲು ಬಹು ಆವೃತ್ತಿ ಮತ್ತು ವಿಧದ ಸಂಸ್ಕೃತಿಗಳನ್ನು. ನೀವು ಈ ಆರ್ಕಿಯಾಲಜಿ ಮತ್ತು ವೈದಿಕ ಪಠ್ಯಗಳನ್ನು ಮತ್ತವುಗಳ ಚರ್ಚೆಯನ್ನು ಎತ್ತಿದ ಕಾರಣ, ನಾನು ಸುಮಾರು ಐದು ಅಥವಾ ಆರು ವರ್ಷಗಳ ಹಿಂದೆ ನಡೆಸಿದ ಶೋಧವೊಂದನ್ನು ನೆನಪಿಸುತ್ತಿದ್ದೇನೆ. ಅದು 'ಸಿಂತಷ್ತ' ಎನ್ನುವಂತಹ ರಷ್ಯಾದ ಚೆಲ್ಯಾಬಿನ್ಸ್ಕ ಒಬ್ಲಾಸ್ಟ್ ಪ್ರದೇಶದ ಆರ್ಕಿಯಾಲಜಿಕಲ್ ಸೈಟ್‌ನ ಬಗೆಗಿನದು. ನನಗೆ ಇದರ ಉತ್ಖನನವನ್ನು ನಡೆಸಿದ ಸಂಶೋಧಕ ಡೇವಿಡ್ ಆ್ಯಂಟನಿಯವರನ್ನು ಮುಖಾಮುಖಿಯಾಗುವ, ಸಂವಾದ ಸಾಧಿಸುವ ಸುಯೋಗವೊದಗಿತ್ತು. ಅವರ ಪ್ರಕಾರ 'ಸಿಂತಷ್ತ'ವೊಂದು ಕಂಚಿನ ಯುಗದ ಸಂಸ್ಕೃತಿಯಾಗಿತ್ತು. ಸುಮಾರು ಕ್ರಿಸ್ತಪೂರ್ವ 2500 ಇದರ ಸರಿಸುಮಾರು ಕಾಲಮಾನ. ಇಲ್ಲಿನ ನಿವಾಸಿಗಳು ಕಂಚಿನ ವಸ್ತುಗಳನ್ನು ಉತ್ಪಾದಿಸುತ್ತಿದ್ದರು, ಆದರೆ ಅವರು ಸಂಪೂರ್ಣ ಒಂದೇ ಪ್ರದೇಶದಲ್ಲಿ ನೆಲೆನಿಂತವರಾಗಿರಲಿಲ್ಲ. ಈ ನಿವೇಶನದ ತುಂಬಾ ಮುಖ್ಯವಾದ ಲಕ್ಷಣವೇನೆಂದರೆ, ಮನುಷ್ಯನ ಸಮಾಧಿಯ ಜತೆಗೆ ಹೂತ ಕ್ರಿಯಾವಿಧೀಯ ನೆಲೆಯಲ್ಲಿ ಬಳಸಿದ ಕುದುರೆಯ ಮೂಳೆಗಳು ಪತ್ತೆಯಾಗಿರುವುದು. ಅದರಲ್ಲೂ ಗಮನಾರ್ಹವಾದುದೇ ನೆಂದರೆ ಕುದುರೆಯ ಅಸ್ತಿಪಂಜರವು ಕತ್ತಿಯ ಕಡಿತದ ಹಲವಾರು ಚಿಹ್ನೆಗಳನ್ನು, ಗುರುತುಗಳನ್ನು ಹೊಂದಿರುವುದಾಗಿದೆ, ಅದೂ ಕೂಡಾ ಕದುರೆಯ ಅಂಗರಚನೆಯ ಪರಿಜ್ಞಾನವನ್ನು ಹೊಂದಿದ್ದ ಸಮುದಾಯವೊಂದು ಒಂದು ರೀತಿಯಲ್ಲಿ ಸುಮಾರು ಕ್ರಿಸ್ತಪೂರ್ವ ಮೂರನೇ ಶತಮಾನದ ಹೊತ್ತಿಗೆ ಸೆಂಟ್ರಲ್ ಏಶ್ಯಾದಲ್ಲಿ ನಡೆಸಿದ್ದ ಕ್ರಿಯಾವಿಧಿಯನ್ನು ಸೂಚಿಸಿ ನೆನಪಿಸುತ್ತದೆ. ಭಾರತದಿಂದ ಅನತಿ ದೂರದಲ್ಲಿರುವ ಈ ಪ್ರದೇಶದಲ್ಲಿ ಕೂಡಾ ಕುದುರೆ ಬಲಿಯ ಕ್ರಿಯಾವಿಧಿಯಿತ್ತು! ನಾನಿದನ್ನು ಅಶ್ವಮೇಧವೆಂದು ಹೇಳಲಾರೆ, ಆದರೆ ಕುದುರೆಯನ್ನು ಬಲಿ ನೀಡುವ ಜತೆಗೆ ಸಾರಥಿಯನ್ನೂ ಬಲಿಯಿತ್ತು ಸಮಾಧಿ ಮಾಡುವ ಕ್ರಿಯಾವಿಧಿಯಾಗಿತ್ತದು. ಬಹುಶ: ಇದು ಉತ್ತರ ವೈದಿಕ ಸಾಹಿತ್ಯದಲ್ಲಿ ಪ್ರತಿಫಲನವಾಗಿದ್ದಿರಬಹುದು. ಹೀಗೆ ಯಾರೂ ಕೂಡಾ, ಇಂದು ಎಲ್ಲವೂ ಇಂಡೋಸೆಂಟ್ರಿಕ್ ಅಥವಾ ವೈದಿಕ ಅಥವಾ ಇಂಡೋ–ಯುರೋಪಿಯನ್ ಮೂಲದಿಂದ ಮಾತ್ರ ಸಂಸ್ಕೃತಿಯು ಉಗಮಗೊಳ್ಳುತ್ತದೆ ಎಂದು ಹೇಳುವ ಹಾಗಿಲ್ಲ ಮತ್ತು ಅಂತಹ ಏಕರೂಪೀಕರಣ ಗೊಳಿಸುವುದೂ ಕೂಡಾ ಸಾಧ್ಯವಿಲ್ಲ. ಅಂತಹ ಸಾಧ್ಯತೆ ಕೂಡಾ ಒಂದು ರೀತಿಯ ಚೌವಿನಿಸ್ಟಿಕ್ ಮನೋಭಾವವನ್ನು ಉತ್ಪಾದಿಸುತ್ತದೆ.**

**ರೊಮಿಲಾ ಥಾಪರ್** : ಅದು ಅದರ ಉದ್ದೇಶ

**ರಣ್‌ಬೀರ್ ಚಕ್ರವರ್ತಿ: ಅದೆಂದರೆ, ನಾವು ಶ್ರೇಷ್ಠವಾದ ನಾಗರೀಕತೆಯ ವಾರಸುದಾರರೆನ್ನುವುದು.**

**ರೊಮಿಲಾ ಥಾಪರ್** : ಹೌದು, ಅದೊಂದು ಪ್ರಸಿದ್ಧ ವಾದವಾಗಿದೆ. ಆರ್ಯರು ದೇಶೀ ಮೂಲದವರು ಮತ್ತು ಭಾರತದಿಂದ ಹೊರಗಿನ ಭೂಭಾಗಗಳಿಗೆ ಸಂಚರಿಸಿ ನಾಗರಿಕತೆಯನ್ನು ಯುರೋಪಿಗೆ ತೆಗೆದುಕೊಂಡು ಹೋದರು ಎಂಬುದಾಗಿ. ಈ ವಾದವನ್ನು ಹತ್ತೊಂಬತ್ತನೆಯ ಶತಮಾನದಲ್ಲಿ ಶೋಧಿಸಲಾಗಿದೆ ಮತ್ತು ಅದು ಅತ್ಯಂತ ಜನಪ್ರಿಯವೂ ಆಯಿತು. ಈಗಲೂ ಈ ವಾದ ಚಾಲ್ತಿಯಲ್ಲಿದೆ. ಈ ವಾದವನ್ನು ಮೊತ್ತಮೊದಲಿಗೆ ಚರ್ಚೆಗೆ ತಂದವರು ಥಿಯಾಸಾಫಿಸ್ಟ್ ಆಗಿದ್ದ ಅಮೆರಿಕಾದ ಕರ್ನಲ್ ಹೆನ್ರಿ ಸ್ಟೀಲ್ ವೊಲ್ಕಾಟ್ ಮತ್ತು ಇದನ್ನು ಥಿಯಾಸಾಫಿಸ್ಟ್‌ಗಳು ಅನ್ವಯವನ್ನು ಮಾಡಿಕೊಂಡರು. ಈ ಥಿಯಾಸಾಫಿಸ್ಟ್‌ಗಳು ಆರ್ಯ ಸಮಾಜಕ್ಕೆ ಹತ್ತಿರವಾಗಿದ್ದಾಗ್ಯೂ ಕೂಡಾ ಆರ್ಯ ಸಮಾಜದ ಸ್ಥಾಪಕ ದಯಾನಂದ ಸರಸ್ವತಿಯವರು ಆರ್ಯರು ಟಿಬೆಟಿನಿಂದ ಬಂದುದ್ದೆಂದು ನಂಬಿದ್ದರು.

ಈ ವಾದಗಳು ಮುಖ್ಯವಾಗಿ ಭಾರತದ ಆರಂಭದ ಗತದ ಬಗೆಗಿನ ಚರ್ಚೆಯು ಸಂದರ್ಭ ಮೂಡಿದ ಮೂಲಗಳಿಂದ ಉಂಟಾದುವು. ಅವುಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭವಾದುವು. ಈ ವಾದಗಳು ಇದರಿಂದ ಹೊರಳುವುದು ಸಾಧ್ಯವಾಗಲಿಲ್ಲ. ನಾವು ಈ ಸಂದರ್ಭ ನೆನಪಿಡಬೇಕಾದ ಒಂದು ಸಂಗತಿಯೆಂದರೆ ಈ ವಾದವೂ ಸೃಷ್ಟಿಯಾದ ಕಾಲ–ದೇಶದ ಸಂದರ್ಭದಲ್ಲಿ ಯುರೋಪಿನ ಶ್ರೇಷ್ಠತೆ ಮತ್ತು ಯಾಜಮಾನ್ಯತೆಯೂ ತನ್ನ ಮೂಲವನ್ನು ಆರ್ಯನ್ ಮೂಲಗಳಿಗೆ ಜೋಡಿಸುವ ಪ್ರಯತ್ನವನ್ನು ಮಾಡಿತು. ಯುರೋಪ್, ಆರ್ಯನ್ ಜನಾಂಗದ ವಾದವನ್ನು ಜನಾಂಗ ವಿಜ್ಞಾನ ಅಥವಾ ರೇಸ್ ಸೈನ್ಸ್ ಎನ್ನುವ ವಿಭಾಗದಲ್ಲಿ ಅಧ್ಯಯನ ವಸ್ತುವನ್ನಾಗಿ ಚರ್ಚಿಸಿತ್ತು. ಇದರ ಕೆಲವು ವಾದಗಳು 20ನೇ ಶತಕವನ್ನು ಆರ್ಯನ್ ಜನಾಂಗವಾದವು ಯುರೋಪನ್ನು ಕೆಲವು ದುರಂತಮಯ ದಿಕ್ಕುಗಳಿಗೆ ತೆಗೆದುಕೊಂಡು ಹೋಯಿತು. ಚಾರಿತ್ರಿಕ ಸಿದ್ಧಾಂತಗಳು ಉಗ್ರರಾಷ್ಟ್ರೀಯತೆ ಮತ್ತು ಅಸ್ಮಿತೆಯ ರಾಜಕಾರಣದೊಂದಿಗೆ ಸಾಗಿ ಗಂಭೀರ ತೀವ್ರ ಪರಿಣಾಮಗಳನ್ನು ಉಂಟುಮಾಡಿತು. ಈ ಕಾರಣಕ್ಕಾಗಿ ಇಂತಹ ವಾದಗಳನ್ನು ಚರ್ಚಿಸುವುದು ಪ್ರಮುಖವಾಯಿತು. ಇಲ್ಲಿರುವ ಮುಖ್ಯ ಪ್ರಶ್ನೆ ಎಂದರೆ ಚಾರಿತ್ರಿಕವಾಗಿ ಚರ್ಚೆಗೆ ಒಳಪಡುವ ಪ್ರಶ್ನೆಗಳನ್ನು ಹೇಗೆ ಪರಿಗಣಿಸಬೇಕೆಂದರೆ, ವಿದ್ವಾಂಸರು ಹೊಂದಿರುವ ವೈವಿಧ್ಯದ ದೃಷ್ಟಿಕೋನಗಳನ್ನು ಮತ್ತು ಪ್ರತಿಯೊಂದು ದೃಷ್ಟಿಕೋನಗಳನ್ನು ಸಾಕ್ಷಿಗಳ ಆಧಾರದಲ್ಲಿ ಅಳೆಯುವ ಮೂಲಕ. ದುರದೃಷ್ಟವಶಾತ್ ಭಾರತದಲ್ಲಿ ಈ ಆರ್ಯನ್ ಎನ್ನುವ ವಿದ್ಯಮಾನ ತೀರ ರಾಜಕೀಕೃತಗೊಂಡಿದೆ ಮತ್ತು ಯಾರು ಆರ್ಯರ ಭಾರತೀಯ ಮೂಲದ ಅಥವಾ ದೇಶೀಯತೆಯನ್ನು ಪ್ರಶ್ನಿಸುತ್ತಾರೋ ಅವರನ್ನು ಮತ್ತು ಅದರ ಸಂವಾದಿಯಾದ ಆರ್ಯನ್ ಸಂಸ್ಕೃತಿಯ ಪಾರಮ್ಯತೆಯನ್ನು ಪ್ರಶ್ನಿಸುತ್ತಾರೋ ಅವರನ್ನು ಹಿಂಸಾಪೂರ್ವಕವಾಗಿ ಅವರ ವಿದ್ವತ್ತು ಮತ್ತು ಪ್ರಕಾಶನಗಳನ್ನು ಪರಿಗಣಿಸದೇ ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಅಂತರ್ಜಾಲಗಳಲ್ಲಿ ನಿಂದಿಸಲಾಗುತ್ತಿದೆ. ಇದು ಚಾರಿತ್ರಿಕ ಸಂವಾದಗಳನ್ನು ಕಡಿಮೆಗೊಳಿಸುತ್ತದೆ.





**ರಣ್‌ಬೀರ್ ಚಕ್ರವರ್ತಿ : ಇದಕ್ಕಾಗಿ ನಾವು ಸಾರ್ವಜನಿಕವಾಗಿ ಸಾಕಷ್ಟು ಪ್ರತಿಭಟನೆಯನ್ನು ಹೊಂದ ಬೇಕಾಗುತ್ತದೆ. ನಾವು ಯಾವಾಗ ಈ ರೀತಿಯ ಚೌವಿನಿಸ್ಟ್ ಹೇಳಿಕೆಗಳನ್ನು ಗಮನಿಸಿದಾಗ ಇದು ಗತವನ್ನು ಒಂದು ಏಕರೂಪಿಯಾದ ಕ್ರಮದಲ್ಲಿ ಮತ್ತು ಒಂದು ಮುರಿಯದ ಪ್ರಕ್ರಮದಲ್ಲಿ ನಿರೂಪಿಸುವ ಪ್ರಯತ್ನವಾಗಿ ಕಾಣಿಸುತ್ತದೆ. ಇಲ್ಲಿ ವ್ಯತ್ಯಾಸಗಳನ್ನು ಎದುರುಗೊಳ್ಳುವ ಭಯವೂ ಕಾಣಿಸುತ್ತದೆ. ನೀವು ಇದನ್ನು ಏಕಾಕೃತಿಯಲ್ಲಿ ನೋಡುವ ಕ್ರಮ ಮತ್ತದು ವೈವಿಧ್ಯತೆಯನ್ನು ನಿರಾಕರಿಸುವ ಸಾಧ್ಯತೆಗಳ ಒಂದು ರೂಪದ ಹೆಚ್ಚುತ್ತಿರುವ ರಾಜಕೀಯ ಪ್ರಕ್ರಿಯೆಯ ರೂಪದಲ್ಲಿ ಗೃಹಿಸುತ್ತಿದ್ದಾರಾ?**

**ರೊಮಿಲಾ ಥಾಪರ್** : ನನ್ನ ಯೋಚನೆಗಳ ಪ್ರಕಾರ ಗತವನ್ನು ವಿಭಿನ್ನವಾಗಿ ನೋಡುವಲ್ಲಿನ ಭಯವೆಂದರೆ ವಿಭಿನ್ನ ಸಂಸ್ಕೃತಿಗಳನ್ನು ಮತ್ತೆ ಅವುಗಳ ಸಂಕೀರ್ಣ ಮುಖಾಮುಖಿಗಳನ್ನು ನೋಡುವ ಕ್ರಮಕ್ಕೆ ಪರ್ಯಾಯವಾಗಿದೆ. ಇದು ಸರಳೀಕೃತವಾದ ಮತ್ತು ಪ್ರಬಲವಾದ ಯಾವುದೋ ಒಂದು ಸಂಸ್ಕೃತಿಯ ಭಯದಿಂದಾಗಿ. ಇದರ ಜೊತೆಗೆ ನಾನು ಹೇಳುವುದೇನೆಂದರೆ ನಮ್ಮ ಸಂಸ್ಕೃತಿಗಳನ್ನು ಜಗತ್ತಿನ ಎಲ್ಲ ಸಂಸ್ಕೃತಿಗಳ ಹಾಗೆ ಬಹು ವೈವಿಧ್ಯಮಯ ವಿಭಿನ್ನ ಮೂಲಗಳು ಮತ್ತು ಒಂದು ದೀರ್ಘವಾದ ಚಾರಿತ್ರಿಕ ಪ್ರಕ್ರಿಯೆಗಳ ಮೂಲಕ ವಿಕಾಸವಾದವುಗಳೆಂದು ಮತ್ತು ಅವುಗಳು ಇಂದೂ ಕೂಡಾ ಮುಂದುವರಿಯುತ್ತಿವೆ ಎಂದು ಒಪ್ಪಲೂ ಮತ್ತು ಸ್ವೀಕರಿಸಲೂ ವಿಶ್ವಾಸ ಹೊಂದದಿರುವುದು ಕೂಡಾ ಇದಕ್ಕೆ ಕಾರಣ. ಚರಿತ್ರೆಯ ಪ್ರತಿ ಅವಧಿಯೂ ಒಂದು ನಿರ್ದಿಷ್ಟವಾದ ಸಂಸ್ಕೃತಿಗಳ ವಿಕಾಸವನ್ನು ಕಂಡಿದೆ ಮತ್ತು ಪ್ರತಿ ಅವಧಿಯಲ್ಲೂ ಕೂಡಾ ಒಂದಕ್ಕಿಂತ ಹೆಚ್ಚಿನ ಸಂಸ್ಕೃತಿಯೂ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಕಾರಣದಿಂದ ನಾವು ಸಂಸ್ಕೃತಿಗಳ ನಡುವಿನ ಸಂವಾದ ಮುಖಾಮುಖಿಗಳನ್ನು ಅವುಗಳ ನಡುವಿನ ವಿಕಾಸ, ವ್ಯತ್ಯಾಸ ಮತ್ತು ಸಾಮ್ಯತೆಗಳ ಆಧಾರದಲ್ಲಿ ಗಮನಿಸಬೇಕು ಮತ್ತು ಅಭ್ಯಾಸ ಮಾಡಬೇಕು. ಆವಾಗ ಮಾತ್ರ ಅವುಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗ್ರಹಿಸಲೂ ಸಾಧ್ಯವಾಗುತ್ತದೆ.

ಚರಿತ್ರಕಾರರಾಗಿ ನಾವು ಕನಿಷ್ಠ ಪಕ್ಷ ಒಂದು ಚಾರಿತ್ರಿಕ ಅವಧಿಯಲ್ಲಿ, ಅನೇಕ ಸಂಸ್ಕೃತಿಗಳ ಅಸ್ತಿತ್ವದ ಸಾಧ್ಯತೆಯನ್ನು ಗುರುತಿಸಬೇಕು. ಇದೆಂದರೆ ಇಂತಹ ಸಂಸ್ಕೃತಿಗಳ ನಡುವೆ ಸಂವಾದ ಮುಖಾಮುಖಿ ಸಾಧ್ಯವಾಗಿತ್ತೇ? ಮತ್ತು ಅವುಗಳ ಸಂವಾದದ ನೆಲೆ ನಿಲುವುಗಳೇನು? ಎಂಬುದನ್ನು ಕೂಡಾ ಗುರುತಿಸಿ ಕೇಳಬೇಕು. ಇಂತಹ ಪ್ರಶ್ನೆಗಳ ಬಗ್ಗೆ ನಾವು ಈಗ ಆಸಕ್ತರಾಗಿದ್ದೇವೆ. ಆದರೆ ಎಲ್ಲಿ ಒಂದೇ ಪ್ರಬಲ ಸಂಸ್ಕೃತಿಯ ಮೇಲೆ ರಾಷ್ಟ್ರೀಯತೆಯನ್ನು ಗುರುತಿಸಲು ಬಯಸುತ್ತಾರೋ ಮತ್ತು ಅಂತಹ ಸಂಸ್ಕೃತಿ ಒಂದು ದೇಶದ ಸರ್ವಕಾಲೀನ ರಾಜಕೀಯ ಗುರುತೆಂದು ಬಯಸುವವರ ನಡುವೆ ನಾವು ಪುನಃ ಸಮಸ್ಯೆಯನ್ನೇ ಸಾಧಿಸುತ್ತೇವೆ, ಯಾಕೆಂದರೆ ನಾವು ಇಂದು ಬದುಕುತ್ತಿರುವುದು ಒಂದು ಬಹು ಆಯಾಮದ ಬಹುಸಂಸ್ಕೃತಿಯ ಸಮಾಜದಲ್ಲಾದ ಕಾರಣ.

## ಹಿಂದೂಯಿಸಂ ಮತ್ತು ಹಿಂದುತ್ವ

**ರಣ್‌ಬೀರ್ ಚಕ್ರವರ್ತಿ : ಸಾಂಸ್ಕೃತಿಕ ರಾಷ್ಟ್ರವಾದವು ಒಂದು ರಾಷ್ಟ್ರೀಯ ಸಂಸ್ಕೃತಿಗೆ ಸಂವಾದಿಯಾಗಲು ಸಾಧ್ಯವಿದೆಯೇ? ಇನ್ನೊಂದು ನೆಲೆಯಲ್ಲಿ ಒಂದೇ ಸಂಸ್ಕೃತಿ ಇರುವುದೆಂದು ಹೇಳಲಾಗುತ್ತಿದೆ. ಅಲ್ಲಿ ಎಲ್ಲವೂ ಏಕರೂಪಿಯಾದುದು.**

**ರೊಮಿಲಾ ಥಾಪರ್** : ಸಾಂಸ್ಕೃತಿಕ ರಾಷ್ಟ್ರೀಯತೆಯ ರಚನೆಯನ್ನು ನಾವು ಸಾಮ್ರಾಜ್ಯಶಾಹೀ ವ್ಯವಸ್ಥೆಯು ಸಂಸ್ಕೃತಿಯನ್ನು ವ್ಯಾಖ್ಯಾನ ಮಾಡಿದ ಕ್ರಮದ ಮೂಲಗಳಲ್ಲಿ ಹುಡುಕಬಹುದು. ವ್ಯಾಖ್ಯಾನಗಳು ಮಾತ್ರ ವಸಾಹತುಶಾಹೀ ವ್ಯವಸ್ಥೆಗಿಂತ ಮುಂಚೆಯೂ ಇದ್ದುವು. ಮೌರ್ಯರೂ ಹೇಗೆ ಸಂಸ್ಕೃತಿಯನ್ನು ಗ್ರಹಿಸಿದರು ? ಗುಪ್ತರು ತಮ್ಮ ಅವಧಿಯಲ್ಲಿ ಸಂಸ್ಕೃತಿಯ ಯಾವ ಪರಿಕಲ್ಪನೆಯನ್ನು ಹೊಂದಿದ್ದರು ? ಚೋಳರು ಮತ್ತು ಮೊಘಲರೂ ಕೂಡಾ ಇವುಗಳ ಬಗ್ಗೆ ಹೊಂದಿದ್ದ ಅರಿವು ಯಾವುದು ? ಇದರ ಬಗ್ಗೆ ಅಷ್ಟು ಸಲೀಸಾದ ತಿಳುವಳಿಕೆ ಸಾಧ್ಯವಿಲ್ಲ, ಯಾಕೆಂದರೆ ಅದರ ಪುನರ್‌ನಿರ್ಮಾಣ ಅಷ್ಟು ಸುಲಭವೂ ಅಲ್ಲ. ಆದರೆ ಇವುಗಳ ಬಗ್ಗೆ ವಸಾಹತುಶಾಹೀ ವ್ಯವಸ್ಥೆಗಳ ಅಡಿಯಲ್ಲಿದ್ದ ಭೂಪ್ರದೇಶಗಳು ಅಥವಾ ಕಾಲನಿಗಳು ಯೋಚಿಸಬೇಕಷ್ಟೇ. ಮುಖ್ಯವಾಗಿ ಅವುಗಳ ಸಾಂಪ್ರದಾಯಿಕ ಸಂಸ್ಕೃತಿಯನ್ನು ಸಾಮ್ರಾಜ್ಯಶಾಹೀ ರಚನೆಗಳ ಆಧಾರದ ಮೇಲೆ ಸ್ವೀಕರಿಸಲಾಯಿತು ಎಂಬುದು. ಇದು ಭಾರತದ ಬಗೆಗೆ ಎಷ್ಟು ಸತ್ಯವೋ ಇಂಡೋನೇಷ್ಯಾದ ಬಗೆಗೂ ಕೂಡಾ. ಪೆರು ಮತ್ತು ಮೆಕ್ಸಿಕೋ ಪ್ರದೇಶಗಳ ಹಳೆಯ ದಾಖಲೆಗಳನ್ನು ಸ್ಪಾನಿಶ್ ಜನರು ನಾಶಮಾಡಿದಂತಹ ಸಂದರ್ಭದಲ್ಲಿ ಇದು ಇನ್ನೂ ಗುರುತರವಾದುದು.

ಚರಿತ್ರೆಯಿಂದ ಸಂಪ್ರದಾಯಗಳನ್ನು ಗ್ರಹಿಸುವಾಗ ಹಲವು ತಲೆಮಾರುಗಳು ಅಥವಾ ಸಂದರ್ಭಗಳ ಮುಖಾಂತರ ನಾವು ಶೋಧಿಸಬೇಕಾಗುತ್ತದೆಯಾದ ಕಾರಣ ಇಂದಿನ ಸಮಕಾಲೀನ ಸಂಪ್ರದಾಯವೊಂದು ಚಿರಂತನ ಅಥವಾ ಪ್ರಿಸ್ಟೀನ್ ಮತ್ತು ಶತಮಾನಗಳಷ್ಟು ಹಿಂದಿನದೆಂದು ಹೇಳುವಲ್ಲಿ ತೊಡಕನ್ನು ಉಂಟುಮಾಡುತ್ತದೆ. ಈ ಸಂಪ್ರದಾಯಗಳು ಕೆಲವೊಮ್ಮೆ ಮುರಿದ ಅಥವಾ ಭಿನ್ನವಾಗಿ ಹಲವು ಮಧ್ಯಂತರವನ್ನು ಮತ್ತು ಸ್ಥಗನವನ್ನು ಹೊಂದಿರುವುದನ್ನು ಕಾಣಬಹುದು. ಇದಕ್ಕೆ ಪೂರಕವಾಗಿ ನಾನು ಒಂದು ಅನುಭವವನ್ನು ಇಲ್ಲಿ ಚರ್ಚಿಸಲು ಇಷ್ಟಪಡುತ್ತೇನೆ. ಅದು ಸುಮಾರು 1975ರಲ್ಲಿ ಕೇರಳದಲ್ಲಿ ನಂಬೂದಿರಿ ಬ್ರಾಹ್ಮಣರು ಅತ್ಯಂತ ದೀರ್ಘವಾದ ಅಗ್ನಿಚಯನವೆಂಬ ವೈದಿಕ ಕ್ರಿಯಾವಿಧಿಯನ್ನು ಆಚರಿಸಿದ ಸಂದರ್ಭದ್ದು. ಅವರು ಇದಕ್ಕೆ ಸಂಬಂಧಿಸಿದ ವೈದಿಕ ಪಠ್ಯಗಳಿಂದ ಮಂತ್ರಗಳನ್ನು ಅಧಿಕೃತವೆಂಬಂತೆ ಉಚ್ಚರಿಸುತ್ತಿದ್ದರು. ಆದರೆ ಅಲ್ಲಿ ಉಪಸ್ಥಿತರಿದ್ದ, ದೇಶದ ವಿವಿಧೆಡೆಗಳಿಂದ ಬಂದಿದ್ದ ವೈದಿಕ ವಿದ್ವಾಂಸರು ಕ್ರಿಯಾವಿಧಿ ನಡೆಯುತ್ತಿದ್ದ ಸಮಯದಲ್ಲಿ ಮತ್ತು ನಂತರ ಕ್ರಿಯಾವಿಧಿಯ ಬಗ್ಗೆ ಮತ್ತು ಅದರ ಅಧಿಕೃತತೆಯ ಬಗ್ಗೆ ಹಾಗೂ ಮಂತ್ರಗಳ ಉಚ್ಚಾರಣೆಯ ಸರಿಯಾದ ಕ್ರಮದ ಬಗ್ಗೆ ನಿರಂತರ ವಾದ ಮತ್ತು ಚರ್ಚೆಯಲ್ಲಿ ತೊಡಗಿದ್ದರು.

ಇದು ಶಬ್ದಗಳ ಚರಿತ್ರೆಗೂ ಕೂಡಾ ಅನ್ವಯವಾಗುತ್ತದೆ. ಆರ್ಯ ಎನ್ನುವ ಶಬ್ದದ ಮೂಲಗಳನ್ನು ಸಂಸ್ಕೃತ, ಪ್ರಾಕೃತ ಮತ್ತು ಪಾಳಿ ಪಠ್ಯಗಳಲ್ಲಿ ಗಮನಿಸಿದರೆ, ಗಮನಿಸಿ ಪರೀಕ್ಷಿಸಿದರೆ ಈ ಶಬ್ದದ ಅರ್ಥ ಮತ್ತು ಗುರುತು ಚರಿತ್ರೆಯಲ್ಲಿ ಬದಲಾಗುತ್ತಾ





ಹೋಗಿರುವುದನ್ನು ಅವಲೋಕಿಸಬಹುದು ಮತ್ತು ಇಂತಹ ಸಾಧ್ಯತೆಯೂ 19ನೇ ಶತಮಾನದಲ್ಲಿ ಒದಗಿರುವ ಆರ್ಯ ಎನ್ನುವ ಶಬ್ದವನ್ನು ಯಥಾವತ್ತಾಗಿ ಧ್ವನಿಸುವುದಿಲ್ಲ. ಇಲ್ಲಿ ಮುಖ್ಯವಾಗಿ ಯಾರು ಯಾರನ್ನು ಯಾಕೆ ಆರ್ಯ ಎಂದು ಸಂಬೋಧಿಸುತ್ತಿದ್ದಾರೆ ? ಎನ್ನುವ ಪ್ರಶ್ನೆಯನ್ನು ಕೂಡಾ ಕೇಳಬೇಕಾಗುತ್ತದೆ. ಹಾಗಿದ್ದರೆ ಹೇಗೆ ಈ ಶಬ್ದವನ್ನು ಬಳಸಲಾಗುವುದು? ಪಾಲೀ ಕೃತಿಗಳಲ್ಲಿ ಕೆಲವು ಸಾಮಾಜಿಕ ವರ್ಗಗಳನ್ನು ಅವುಗಳ ಉನ್ನತೀಕರಿಸಿದ ಸಾಮಾಜಿಕ ಸ್ಥಾನಮಾನಗಳ ಮೇಲೆ, ವಿಶೇಷವಾಗಿ ಬೌದ್ಧ ಸನ್ಯಾಸಿಗಳನ್ನು ಅವರುಗಳ ಜನಾಂಗೀಯ ಮೂಲ ಮತ್ತು ಜಾತಿ ಅಥವಾ ಅವರ ಈ ಮೊದಲಿನ ವೃತ್ತಿಗಳ ವಿವಕ್ಷೆಯ ಹೊರತಾಗಿಯೂ ಕರೆಯಲಾಗಿದೆ. ಆದಾಗ್ಯೂ ಇಂತಹ ಜನರನ್ನು ನಾಸ್ತಿಕರೆಂದು ಅಥವಾ ನಂಬಿಕೆ ಇಲ್ಲದವರೆಂದು ಕೂಡಾ ವಿಷ್ಣು ಪುರಾಣದಲ್ಲಿ ಟೀಕಿಸಿ ಕರೆಯಲಾಗಿದೆ. ಇಂದು ನಾವು ಬಳಸುತ್ತಿರುವ ಬಳಕೆ ಸಾಮ್ರಾಜ್ಯಶಾಹೀ ಮೂಲದಲ್ಲಿದ್ದು ಅವುಗಳನ್ನು ಅತ್ಯಂತ ಪ್ರಾಚೀನ ಬಳಕೆಗಳೆನ್ನುವಂತೆ ಬಳಸಲಾಗಿದೆ. ಈ ದೇಶೀ ಆರ್ಯವಾದವನ್ನು ಕಾಳಜಿಯಾಗಿ ತೆಗೆದುಕೊಂಡಿದ್ದು ಧಾರ್ಮಿಕ ರಾಷ್ಟ್ರವಾದದ ಉತ್ಪಾದನೆಯ ಭಾಗವಾಗಿರುವ, ಹಿಂದೂ ಸಂಸ್ಕೃತಿಯ ಅಡಿಪಾಯವನ್ನು ಶೋಧಿಸುತ್ತಿರುವ ಒಂದು ವಿದ್ಯಮಾನ. ಅವುಗಳು ಒಂದೇ ಸಂಸ್ಕೃತಿಯೊಂದಿಗಿನ ಅತೀ ಆಪ್ತತೆ ಮತ್ತವುಗಳ ಅತ್ಯಂತ ಪ್ರಾಚೀನ ವಾರಸುದಾರಿಕೆ ಯನ್ನು ಘೋಷಿಸುತ್ತವೆ ಮತ್ತು ಅವುಗಳ ಪ್ರಶಸ್ತಿ ವಿಭಾಗದ ಚರಿತ್ರೆಯೂ ವಂಶಗಳನ್ನು ಪ್ರಶಂಸಿಸುತ್ತದೆ. ಅವರ ಪೂರ್ವಜರು ಮತ್ತು ವಂಶದ ಚರಿತ್ರೆಯೂ ವೈವಿಧ್ಯವಾದುದು. ಮತ್ತವು ವೈವಿಧ್ಯಮಯ ಆಧಾರಗಳನ್ನು ಮಾನ್ಯತೆಗಾಗಿ ಬಳಸುತ್ತವೆ. ಧಾರ್ಮಿಕ ರಾಷ್ಟ್ರವಾದವು ಯಾವಾಗಲೂ ಕೂಡಾ ಸಂಸ್ಕೃತಿಗಳ ಬಹುತ್ವದಿಂದ ದೂರಸರಿಯುತ್ತವೆ. ಅದು ಒಂದೇ ಒಂದು ಧಾರ್ಮಿಕ ಸಂಸ್ಕೃತಿಯನ್ನು ಎತ್ತಿಕೊಳ್ಳುತ್ತಾ ಅದನ್ನು ರಾಷ್ಟ್ರೀಯ ಸಂಸ್ಕೃತಿಯ ಕೇಂದ್ರಕ್ಕೆ ತರುತ್ತವೆ. ಇದು ಜಗತ್ತಿನ ಎಲ್ಲೆಡೆ ಇರುವ ರಾಷ್ಟ್ರೀಯತೆಯ ಒಂದು ಮಾದರಿ ಯಾಗಿದೆ. ಅದು ಸಾಮ್ರಾಜ್ಯಶಾಹೀ ವಿರೋಧದ, ಧಾರ್ಮಿಕ, ಭಾಷಿಕ ಅಥವಾ ಜನಾಂಗೀಯ ರಾಷ್ಟ್ರವಾದದ ವಿವಕ್ಷೆಯನ್ನು ಮೀರಿ ರಾಷ್ಟ್ರೀಯ ಚಳವಳಿಗಳು ಒಂದು ಸಂಸ್ಕೃತಿಯ ಶ್ರೇಷ್ಠತೆಯನ್ನು ಗ್ರಹಿಸಿ ಎತ್ತಿಹಿಡಿಯುತ್ತಾ ರಾಷ್ಟ್ರೀಯ ಸಂಸ್ಕೃತಿಯನ್ನು ಪ್ರತಿಪಾದಿಸುತ್ತದೆ.

ಧಾರ್ಮಿಕ ರಾಷ್ಟ್ರವಾದವು ಒಂದು ಧರ್ಮ, ಒಂದು ಸಂಸ್ಕೃತಿ, ಒಂದು ಭಾಷೆಗಳಿಗೆ ಹೊರತಾಗಿರುವ ಒಳಗೊಳ್ಳದಿರುವಿಕೆಯನ್ನು ಪ್ರತಿಪಾದಿಸುತ್ತವೆ. ಇಂತಹ ಪ್ರಯತ್ನ ಮುಖ್ಯವಾಗಿ ಉದ್ದೇಶಪೂರ್ವಕವಾಗಿ ಹಿಂದುತ್ವ ಎನ್ನುವ ಹೆಸರಿನಲ್ಲಿ ರಾಜಕೀಯ ಸಂಘಟನೆ ಮತ್ತು ಜನರನ್ನು ಒಟ್ಟು ಸೇರಿಸುವ ಪ್ರಯತ್ನದ ನೆಲೆಯಲ್ಲಿ ರಚಿತವಾಗಿದೆ. ಅನೇಕ ವಿದ್ವಾಂಸರುಗಳು ಈಗಾಗಲೇ ತಿಳಿಸಿರುವ ಹಾಗೆ ಹಿಂದೂಯಿಸಮ್ ಮತ್ತು ಹಿಂದುತ್ವ ಒಂದೇ ಅಲ್ಲ. ಹಿಂದೂಯಿಸಮ್ ಒಂದು ಧರ್ಮ ಹಾಗೂ ಹಿಂದುತ್ವ ಒಂದು ರಾಜಕೀಯ ಸಿದ್ಧಾಂತವಾಗಿದೆ. ಹಿಂದುತ್ವವು ಒಂದು ಆಧುನಿಕವಾದ ಸಿದ್ಧಾಂತವಾಗಿದ್ದು ಹಿಂದೂಯಿಸಮ್‌ನ ಒಂದು ಸಣ್ಣ ಭಾಗದಿಂದ ಹುಟ್ಟಿದ್ದಾದರೂ ಕೂಡಾ ಇದರ ನಡುವೆ ಸಾಕಷ್ಟು ವ್ಯತ್ಯಾಸ ಇವೆ. ಈ ಪರಿಕಲ್ಪನೆಯೂ 20ನೇ ಶತಮಾನದಲ್ಲಿ ಚಾಲ್ತಿಗೆ ಬಂದಿದ್ದು ಮತ್ತು ಇದರ ಉದ್ದೇಶ ಹಿಂದೂ ರಾಷ್ಟ್ರವೆನ್ನುವ ಕಲ್ಪನೆಯ ಕಡೆಗೆ ಹಿಂದೂಗಳನ್ನು ರಾಜಕೀಯವಾಗಿ ಒಯ್ಯಲು ಸೃಷ್ಟಿಸಿದ್ದಾಗಿದೆ. ಈ ರೀತಿ ಧರ್ಮದ ಆಧಾರದ ಮೇಲೆ ಒಂದು ಸಿದ್ಧಾಂತವನ್ನು ಸೃಷ್ಟಿಸಿ

ಧರ್ಮದ ಮೂಲಭೂತ ಸಂಗತಿಗಳನ್ನು ಪುನರ್‌ರಚಿಸಬಹುದಾಗಿದೆ ಮತ್ತು ಅಂತಹ ಅಗತ್ಯತೆ ಕೂಡಾ ಅಲ್ಲಿದೆ. ಅಂತಹ ಪುನರ್ ನಿರ್ಮಾಣ ಪದೇ ಪದೇ ಧರ್ಮದ ಒಂದು ಸ್ಥಳೀಯ ಮತ್ತು ಸಾಂಪ್ರದಾಯಿಕ ಅಭಿವ್ಯಕ್ತಿಗಳಿಂದ ಪಡೆಯಲಾಗುತ್ತಿದೆ. ಹಿಂದುತ್ವವು ಒಂದು ನಿಶ್ಚಿತ ಭೂಗೋಳವನ್ನು, ಒಂದೇ ಸಂಸ್ಕೃತಿಯನ್ನು, ಒಂದೇ ಜನಾಂಗವನ್ನು, ಒಂದೇ ಧರ್ಮ ಮತ್ತು ಭಾಷೆಯ ಕುರಿತು ಮಾತನಾಡುತ್ತದೆ. ಹಿಂದೂಗಳು ಸಮಾನವಾದ ಒಂದೇ ಪಿತೃಭೂಮಿ ಮತ್ತು ಪುಣ್ಯಭೂಮಿಯನ್ನೂ, ಪೂರ್ವಜರು ಹಾಗೂ ಧರ್ಮವನ್ನು ಹೊಂದಿದ್ದರು ಎನ್ನುವುದು ಕೂಡಾ ಅದರ ಇನ್ನೊಂದು ಇಂಗಿತ. ಉಳಿದವರೆಲ್ಲ ವಿದೇಶಿಯರು ಎನ್ನುವ ಅರ್ಥಸಾಧ್ಯತೆ ಕೂಡಾ ಇಲ್ಲಿ ಜಾಹೀರಾಗುತ್ತದೆ. ಇಲ್ಲಿ ಧಾರ್ಮಿಕ ಸಂಗತಿಯನ್ನು ಹೊಸ ರೀತಿಯಲ್ಲಿ ಸೆಮಿಟಿಕ್ ಧರ್ಮಗಳು ಇರುವ ರೀತಿಯ ಚಾರಿತ್ರಿಕತೆ ಮತ್ತು ಧಾರ್ಮಿಕ ಏಕರೂಪತೆ ಮತ್ತು ಒಂದು ಪವಿತ್ರ ಗ್ರಂಥ ಮತ್ತು ಮತ ಪರಂಪರೆಗಳನ್ನು ಹೊಂದಿರುವ ನೆಲೆಯ ರೀತಿಯಲ್ಲಿ ಕೇಂದ್ರೀಕರಿಸಿ ವಿನ್ಯಾಸ ಮಾಡಲಾಗಿದೆ. ಇಂತಹ ಪ್ರಯತ್ನವು ಸಾಮಾಜಿಕ ಮತ್ತು ರಾಜಕೀಯವಾದ ಸಂಚಯ, ಸಂಘಟನೆಯನ್ನು ಅತ್ಯಂತ ಸರಳವಾಗಿ ಸಾಧಿಸುತ್ತದೆ. ಈ ಕಾರಣದಿಂದಲೇ ನಾನಿದನ್ನು ಸಿಂಡಿಕೇಟೆಡ್ ಹಿಂದೂಯಿಸಮ್ ಅಥವಾ ಸಮೂಹಸಾಧಿತ ಹಿಂದೂಯಿಸಂ ಎಂದೇ ಕರೆಯುತ್ತೇನೆ.

**ರಣ್‌ಬೀರ್ ಚಕ್ರವರ್ತಿ : ಹೌದು.**

**ರೊಮಿಲಾ ಥಾಪರ್** : ಗತದ, ರಾಷ್ಟ್ರೀಯ ಸಂಸ್ಕೃತಿಗಳ ಆಧಾರದ ಮೇಲೆ ಪರಿಕಲ್ಪಿಸಿದ ನೆಲೆಗಳು ಮಹಾಕಾವ್ಯಗಳಲ್ಲೂ ಕೂಡಾ ತೂರಿ ಸಮಾಜದ ಬಹುಭಾಗದ ಜನರಿಗೆ ಚಿರಪರಿಚಿತವಾಗಿವೆ. ಮಹಾಕಾವ್ಯಗಳ ಸಂದರ್ಭ, ಹಲವು ಆವೃತ್ತಿಗಳು ಇದ್ದಾಗ್ಯೂ ಕೂಡಾ ಒಂದೇ ಒಂದು ಆವೃತ್ತಿಯನ್ನು ಸರಿಯಾದುದೆಂದೂ ಕೂಡಾ ಆರಿಸಲಾಗುತ್ತಿದೆ, ಒಪ್ಪಿಸಲಾಗುತ್ತಿದೆ. ಭಾರತದಲ್ಲಿ ನಾವು ರಾಮಾಯಣದ ಬಗೆಗೆ ಎದುರಿಸುತ್ತಿರುವ ಸಂಕಟವೂ ಕೂಡಾ ಇದೇ ಆಗಿದೆ. ರಾಮಾಯಣವು ಮುಖ್ಯವಾಗಿ ಬಹು ಕ್ರಮಗಳ ಕಥನವಾಗಿದೆ ಮತ್ತು ಕೆಲವೊಮ್ಮೆ ವೈವಿಧ್ಯವೆನಿಸುವ ಆವೃತ್ತಿಗಳನ್ನು ಕಳೆದ ಒಂದು ಶತಮಾನದಲ್ಲಿ ಕಂಡಿದೆ. ರಾಮಾಯಣದ ಸಂದರ್ಭ, ಧಾರ್ಮಿಕ ರಾಷ್ಟ್ರವಾದವು ಒಂದೇ ಒಂದು ಸರಿಯಾದ ಆವೃತ್ತಿಯೆನ್ನುವುದನ್ನು ಪ್ರಜ್ಞಾಪೂರ್ವಕವಾಗಿ ಸಾಗಿಸುತ್ತದೆ, ಆದರೆ ಇಂತಹ ಪ್ರಯತ್ನವನ್ನು ಚರಿತ್ರಕಾರರು, ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಯಾಕೆಂದರೆ ಆಗ್ನೇಯ ಏಷ್ಯಾದಲ್ಲಿನ ರಾಮಾಯಣದ ಪರಂಪರೆಗಳು ಮತ್ತು ಆವೃತ್ತಿಗಳು ಕೂಡಾ ರಾಮಾಯಣದ ಸಾಂಸ್ಕೃತಿಕ ಗುರುತಿನ ಬಹುಮುಖ್ಯ ಭಾಗವಾಗಿದೆ ಮತ್ತು ಅಂತಹ ಆವೃತ್ತಿಗಳು ವಾಲ್ಮೀಕಿ ರಾಮಾಯಣದ ಆವೃತ್ತಿಗಿಂತ ಬಹುಮುಖ್ಯವಾಗಿ ವಿಭಿನ್ನವಾಗಿವೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ಪಠ್ಯವು ಪವಿತ್ರವೆಂದು ಪರಿಗಣಿತವಾಗುವುದು ಆರಂಭದಲ್ಲಿ ಒಂದು ನಿರ್ದಿಷ್ಟ ಪ್ರದೇಶ ಅಥವಾ ಸಮುದಾಯದಲ್ಲಿ. ಆದರೆ ಕ್ರಮೇಣ ಅದು ಉಳಿದವರಿಗೂ ಕೂಡಾ ಅನೇಕ ಕಾರಣಗಳಿಂದ ಸ್ವೀಕಾರಾರ್ಹವಾಗುತ್ತದೆ. ಆಗ ಅವರು ಆ ಪಠ್ಯ ಅಥವಾ ಅದರ ವಿವಿಧ ಭಾಗವನ್ನು ಅವರ ಅಗತ್ಯತೆಗಳಿಗನುಗುಣವಾಗಿ ಪುನರ್‌ರಚಿಸಿಕೊಳ್ಳುತ್ತಾರೆ. ಕೆಲವು ಜನರು ಕೆಲವೊಮ್ಮೆ ಯಾವುದೇ ಒಂದು ಆವೃತ್ತಿಯ ಪಾವಿತ್ರ್ಯತೆಯಲ್ಲಿ ವಿಶ್ವಾಸವಿರಿಸಬಹುದು. ಆದರೆ ಇದು ಉಳಿದ ಆವೃತ್ತಿಗಳ ಅಧ್ಯಯನವನ್ನು ನಿರಾಕರಿಸುವಂತಿಲ್ಲ.





**ರಣ್‌ಬೀರ್ ಚಕ್ರವರ್ತಿ : ನಿಶ್ಚಿತವಾಗಿ.**

**ರೊಮಿಲಾ ಥಾಪರ್** : ಕೆಲವೊಮ್ಮೆ ಚರಿತ್ರೆಯ ಒಂದು ನಿರ್ದಿಷ್ಟವಾದ ಅವಧಿಯನ್ನು ಕ್ಲಾಸಿಕಲ್ ಅಥವಾ ಅಭಿಜಾತ ಅಥವಾ ಅತ್ಯಂತ ಧನಾತ್ಮಕವಾಗಿ ಅತಿಶಯೋಕ್ತಿಗಳಿಂದ ಮತ್ತು ಒಂದು ಪ್ರಬಲವಾದ ಸಂಸ್ಕೃತಿಯ ಅಸ್ತಿತ್ವದ ಅವಧಿಯೆಂದು ಬಣ್ಣಿಸಲು ಬಳಸಲಾಗುತ್ತದೆ.

ಇದು ರಾಷ್ಟ್ರೀಯ ಹೋರಾಟದ ಪ್ರಮುಖವಾದ ತಿರುಳು ಕೂಡಾ ಆಗಿತ್ತು. ಯಾವಾಗ ರಾಷ್ಟ್ರ ರಾಜ್ಯಗಳು ಅಥವಾ ರಾಷ್ಟ್ರವ್ಯವಸ್ಥೆಗಳು ಅಸ್ತಿತ್ವಕ್ಕೆ ಬಂದುವೋ, ಒಂದೇ ಸಂಸ್ಕೃತಿಯನ್ನು ಒಂದು ಪ್ರಬಲ ಬಹುಸಂಖ್ಯಾತ ಸಮುದಾಯದ ಸಂಸ್ಕೃತಿಯೆಂದು ಬಿಂಬಿಸಿದಾಗ ಈ ಸಮಸ್ಯೆಗಳು ಹುಟ್ಟಿದುವು. ಆ ಸಂದರ್ಭದಲ್ಲಿ ಈ ಮೊದಲಿನ ಗ್ರಹಿಕೆಗಳು ತೀರ ಅಗತ್ಯವಾಗಿರಲಿಲ್ಲ. ರಾಷ್ಟ್ರ ಒಂದು ಜಾತ್ಯತೀತ ಪ್ರಭುತ್ವವಾಗಿ ಅಥವಾ ನಾವೆಲ್ಲರೂ ಒಂದು ಎನ್ನುತ್ತಾ, ನಾವು ಇರುವ ಹಾಗೆ, ಅನೇಕ ಉಳಿದ ಸಂಸ್ಕೃತಿಗಳು ಕೂಡಾ ಸಮಾನವಾದ ಸ್ಥಾನಮಾನವನ್ನು ಆಗ್ರಹಿಸಿದವು. ಪ್ರಬಲವಾದ ಬಹುಮತದ ಅಥವಾ ಮೆಜಾರಿಟಿಯನ್ನು ಅದರ ಸಂಸ್ಕೃತಿಯನ್ನು ಪ್ರತಿಪಾದಿಸುವ ಗುಂಪು ಪ್ರಬಲವಾದ ಸಂಸ್ಕೃತಿ ಎಂದೆನಿಸಿಕೊಂಡಿತು. ಇದೇ ಹೊತ್ತಿಗೆ ಉಳಿದ ಸಂಸ್ಕೃತಿಗಳು ಕೂಡಾ ಸರಿಸಮಾನವಾದ ಪ್ರತಿನಿಧಿತ್ವವನ್ನು ಬಯಸುತ್ತವೆ ಕೂಡಾ. ಯಾರಾದರೊಬ್ಬರು ರಾಷ್ಟ್ರೀಯ ಸಂಸ್ಕೃತಿ ಬಗ್ಗೆ ಮಾತನಾಡುವುದಾದರೆ ಅಂತಹ ಮಾತು ಎಲ್ಲ ಸಂಸ್ಕೃತಿಗಳನ್ನು ಒಳಗೊಳ್ಳಬೇಕು. ಭಾರತೀಯ ಸಂದರ್ಭದಲ್ಲಿನ ವೈವಿಧ್ಯದ ಸಂಸ್ಕೃತಿಗಳನ್ನು ಒಳಗೊಳ್ಳಬೇಕು ಮತ್ತು ಆದಿವಾಸಿಗಳು, ದಲಿತರು, ಮಧ್ಯಮ ಜಾತಿ, ಮುಸ್ಲಿಮರು, ಕ್ರಿಶ್ಚಿಯನ್‌ರು, ಪಾರ್ಸಿಗಳು, ಜೈನರು ಮತ್ತು ಯಾರಿಗೆ ರಾಷ್ಟ್ರೀಯತೆಯ ಆರಂಭದ ಘಟ್ಟದಲ್ಲಿ ಸರಿಯಾದ ಪ್ರಾತಿನಿಧ್ಯ ಸಿಗಲಿಲ್ಲವೋ ಅವರುಗಳೆಲ್ಲರನ್ನು ಒಳಗೊಳ್ಳಬೇಕು. ಈ ರಾಷ್ಟ್ರೀಯ ಸಂಸ್ಕೃತಿಯನ್ನು ಸೃಷ್ಟಿಸುವ ಸಂದರ್ಭದಲ್ಲಿ ಬಹುತ್ವ ಮತ್ತು ವೈವಿಧ್ಯತೆಗಳನ್ನು ಪರಿಗಣಿಸಬೇಕು ಮತ್ತು ಅಲ್ಲಿ ಒಂದು ಪ್ರತಿನಿಧಿತ ಸಮಪಾಲು ಹೊಂದಿದ ಚರಿತ್ರೆ ಇರಬೇಕು.

## ವೈವಿಧ್ಯದ ರಾಷ್ಟ್ರೀಯತೆಗಳು ಮತ್ತು ಅಸ್ಮಿತೆಯ ರಾಜಕಾರಣ

**ರಣ್‌ಬೀರ್ ಚಕ್ರವರ್ತಿ : ಅನೇಕ ಸಂದರ್ಭಗಳಲ್ಲಿ ನಾವು ಒಂದು ವಿಚಿತ್ರ ಸನ್ನಿವೇಶವನ್ನು ಎದುರುಗೊಳ್ಳುತ್ತೇವೆ, ಅದೇನೆಂದರೆ ಏಕಸಂಸ್ಕೃತಿಯೊಂದರ, ಒಂದು ಶಕ್ತಿಯುತ ಗುಂಪೊಂದು ಧ್ವನಿತಗೊಳ್ಳುವ ಒಂದು ಬ್ರಾಂಡ್‌ನ ಅಥವಾ ಮುದ್ರೆಯ ಸಂಸ್ಕೃತಿಯ ಪ್ರತಿನಿಧಿತವಾಗುವ ವಿದ್ಯಮಾನದ್ದು. ಈ ರೀತಿಯ ಅಧಿಕಾರ ಅಥವಾ ಶಕ್ತಿಯೆಂದರೆ ಅದು ರಾಜಕೀಯದ ಅಧಿಕಾರ, ಬದಲು ಅದೊಂದು ಸಾಂಸ್ಕೃತಿಕ ಸಂದೇಶ ಅಥವಾ ಅಭಿವ್ಯಕ್ತಿಯಾಗದೇ ಇರುವಂತದ್ದು. ಅದು ಶುದ್ಧವಾದ ರಾಜಕೀಯ ಶಕ್ತಿಯಾಗಿ ರಾಜಕೀಯ ಉದ್ದೇಶ ಮತ್ತು ನಿರೀಕ್ಷೆಗಳನ್ನೂ ಕೂಡಾ ಹೊಂದಿರುವಂತದ್ದು. ಅದು ಕೇವಲ ಸೀಮಿತವಾದ ನೋಟ, ದೃಷ್ಟಿ ಅಥವಾ ಸಮಾಜವೊಂದರ ಯಾವುದೋ ಒಂದು ಭಾಗದ ನಿಲುವು ಮಾತ್ರ ಕೂಡಾ. ಆದರೆ ಅಂತಹ ಸಾಧ್ಯತೆಯು ಒಂದು ಶಕ್ತಿಶಾಲೀ ಮತ್ತು ಪ್ರಭಾವೀ ನಿಲುವನ್ನು ಸಮಾಜದ ಮೇಲೆ ಪ್ರತಿಷ್ಠಾಪಿಸಬಹುದಾದ ಸಾಮರ್ಥ್ಯವನ್ನೂ**

**ಕೂಡಾ ಹೊಂದಿದೆ. ಅದೊಂದು ಸ್ವಘೋಷಿತ ನಿಲುವು, ಹೇಳಿಕೆಯಾಗಿದೆ. ಅದು ಚರಿತ್ರೆಯ ಅಧ್ಯಯನವನ್ನು ಬಾಧಿಸಿ, ಅಪಾಯವೊಡ್ಡಿದೆ.**

**ರೊಮಿಲಾ ಥಾಪರ್ :** ಹೌದು, ಅದು ಚರಿತ್ರೆಯ ಅಧ್ಯಯನವನ್ನು ಮಿತಿಗೊಳಿಸಿ ತೊಂದರೆ, ಅಡ್ಡಿಯನ್ನು ಉಂಟುಮಾಡುತ್ತಿದೆ. ನಮ್ಮ ಆರಂಭದ ಹಂತದಲ್ಲಿ ಹೀಗಿರಲಿಲ್ಲ, ಬದಲು ಈಗ ವಿದ್ವತ್ತಿನ ಗುಣಮಟ್ಟ ಮತ್ತು ಬಹುತ್ವ ಬೆಳೆದಿದೆ ಮತ್ತು ಅದನ್ನು ಬಗೆಬಗೆಯಲ್ಲಿ ಶೋಧಿಸಲಾಗುತ್ತಿದೆ. ಇದರರ್ಥ, ಇಂದು ಅಸ್ತಿತ್ವದಲ್ಲಿರುವ ಹಲವು ಸಮುದಾಯಗಳಿಗೆ ಚರಿತ್ರೆಯ ಎಲ್ಲಾ ಅವಧಿಯಲ್ಲೂ ಕೂಡಾ ಹುಡುಕಿ ಸಮಾನ ಸ್ಥಾನಮಾನಗಳನ್ನು ನೀಡುವುದೆಂದಲ್ಲ. ಬದಲಿಗೆ ಚರಿತ್ರಕಾರ ಬರೀ ಒಂದು ಸಮುದಾಯದ ಮೇಲೆ ಬೆಳಕು ಹರಿಸುವುದಲ್ಲ ಮತ್ತು ಉಳಿದವುಗಳನ್ನು ಆತ ಒಂದೇ ಸಮುದಾಯದ ಅಧ್ಯಯನ ಮಾಡುವ ಸಂದರ್ಭವನ್ನು ಹೊರತುಪಡಿಸಿ ಉಪೇಕ್ಷಿಸುವುದಲ್ಲ. ಅಲ್ಲಿ ನಿಶ್ಚಿತವಾಗಿ ಈ ರೀತಿಯ ಬಹುತ್ವಗಳ ನಡುವೆ ಅಂತರ್ ಸಂಪರ್ಕೀಯ ಕೊಂಡಿಗಳೂ ಕೂಡಾ ಇರುತ್ತವೆ. ಸುಮಾರು ಹತ್ತೊಂಬತ್ತನೆಯ ಶತಕದಲ್ಲಿ ಸಂಭವಿಸಿದ ಸಮಾಜ ಸುಧಾರಣಾ ಚಳವಳಿಗಳಲ್ಲಿ ನಾವಿದನ್ನು ಗಮನಿಸಬಹುದು. ಇವುಗಳ ರಚಯಿತರು ಕೂಡಾ ಅದೇ ರೀತಿಯ ಸಾಮಾಜಿಕ ಹಿನ್ನೆಲೆಗಳಿಂದ ಬಂದವರು ಮತ್ತು ಹಿಂದೂ ಧರ್ಮದಲ್ಲಿ ಅವರು ಪ್ರಸ್ತುಪಡಿಸಿದ ಪರಿವರ್ತನೆ ಮತ್ತು ಸುಧಾರಣೆಗಳೂ ಕೂಡಾ ಪ್ರದೇಶದಿಂದ ಪ್ರದೇಶಕ್ಕೆ ಹೆಚ್ಚು ಭಿನ್ನತೆಯನ್ನು ಹೊಂದಿರಲಿಲ್ಲ. ಆದರೆ ಅವುಗಳ ಆಯ್ಕೆ ಮತ್ತು ರಚನೆಗಳು ಮಾತ್ರ ಪ್ರಾದೇಶಿಕ ಸಂಸ್ಕೃತಿಗಳಿಗೆ ಹೆಚ್ಚು ಬದ್ಧವಾಗಿದ್ದುವು. ಇಂತಹ ಸಂಗತಿಗಳನ್ನು ನಾವು ಚಾರಿತ್ರಿಕವಾಗಿ ಚಿತ್ರಿಸಬೇಕು ಮತ್ತು ವಿವರಣೆಗೆ ಎಳೆಯಬೇಕಾಗಿದೆ.

ಹತ್ತೊಂಬತ್ತನೆಯ ಶತಮಾನದ ಸಾಮಾಜಿಕ ಸುಧಾರಣಾ ಚಳವಳಿಗಳು ಭಾರತೀಯ ಧರ್ಮಗಳ ನಮೂನೆಯನ್ನು ಹೆಚ್ಚು ಕಡಿಮೆ ಬದಲಿಸಿದುವು. ಇಪ್ಪತ್ತನೆಯ ಶತಕದಲ್ಲಿ ವಿದ್ವಾಂಸರು ಈ ಬದಲಾವಣೆಗಳನ್ನು ಗುರುತಿಸಲು ತೊಡಗಿದಾಗ ಮತ್ತು ಬದಲಾವಣೆಯನ್ನು ಬಯಸಿದ ಸಾಮಾಜಿಕ ಗುಂಪುಗಳೂ ಸಹ ಬದಲಾದ ಪರಿಣಾಮದಿಂದ ಅವುಗಳ ಗಮನ ಸಹಜವಾಗಿ ಮೇಲ್ವರ್ಗದ ಜಾತಿಗಳ ಮೇಲೆ ಹರಿಸಲಾಯ್ತು. ಯಾಕೆಂದರೆ ಈ ಹೆಚ್ಚಿನ ಸಾಮಾಜಿಕ ಸುಧಾರಣೆಗಳು ಬಹುಮಟ್ಟಿಗೆ ಮೇಲ್ವರ್ಗದ ಜಾತಿಗಳಿಂದ ಬಾಧಿತವಾಗಿದ್ದ ಕಾರಣ. ಅವುಗಳು ಉಳಿದ ಜಾತಿಗಳನ್ನು ಉಲ್ಲೇಖಿಸಿದರೂ ಕೂಡಾ, ಅವುಗಳ ನಿಜವಾದ ಗಮನ, ಮಿಡಿತವು ತಥಾಕಥಿತ ಉನ್ನತ ಜಾತಿಗಳತ್ತ ಇತ್ತು. ಚಳವಳಿಯ ಆರಂಭದ ನಾಯಕತ್ವವನ್ನು ಸಮಾಜದಲ್ಲಿ ವಹಿಸಿಕೊಂಡ ವರ್ಗ ಕೂಡಾ ಇದುವೇ ಆಗಿತ್ತು. ಇಂತಹ ನಾಯಕತ್ವವು ರಾಷ್ಟ್ರೀಯತೆಯನ್ನೂ ಕೂಡಾ ಅರಿತಿತ್ತು. ಅದು ನಂತರ ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಮೇಲೆ ಅರಳಿತೂ ಕೂಡಾ. ಕೆಲವು ಚರಿತ್ರಕಾರರು ಇಂತಹ ಗುಂಪುಗಳ ರಾಷ್ಟ್ರೀಯವಾದೀ ಹಿನ್ನೆಲೆ ಮತ್ತು ಸಾಂಗತ್ಯವನ್ನು ಅವುಗಳ ಸಾಮಾಜಿಕ ನೆಲೆಗಳ ಹಿನ್ನೆಲೆಯಲ್ಲೂ ಅಧ್ಯಯನ ಮಾಡಿದ್ದಾರೆ. ಇದು ಸಬಾಲ್ಟರ್ನ್ ಅಧ್ಯಯನದ ಮೂಲಕ ಆರಂಭವಾಗಿ ಹೆಚ್ಚು ಸಾರ್ವಜನಿಕ ಆಸಕ್ತಿ ಮತ್ತು ಗಮನವನ್ನು ಸೆಳೆಯಿತಾದರೂ ಕ್ರಮೇಣ ಕೆಳಗಿನ ಸಾಮಾಜಿಕ ಹಂತಗಳಲ್ಲಿ ಹಲವು ಜನರು ಅಂದರೆ ದಲಿತರು, ಆದಿವಾಸಿಗಳು





ಕೂಡಾ ಸ್ವಾತಂತ್ರ್ಯ ಚಳುವಳಿಯಲ್ಲಿ ಹಲವು ಬಗೆಗಳಲ್ಲಿ ಭಾಗವಹಿಸಿದುದನ್ನು ಕಂಡುಕೊಳ್ಳಲಾಯಿತು.

ಇಲ್ಲಿ ಉಳಿದ ಪ್ರಶ್ನೆಗಳನ್ನೂ ಕೂಡಾ ಕೇಳಬಹುದಾಗಿದೆ, ಅದೇನೆಂದರೆ ಯಾವ ಗುಂಪುಗಳು ರಾಷ್ಟ್ರೀಯತೆಯನ್ನು ಇಂದಿನ ಅಸ್ಮಿತೆಯ ರಾಜಕಾರಣ ಮೈದಾಳಿದ ಕಾರಣವಾದ ಧಾರ್ಮಿಕ ರಾಷ್ಟ್ರೀಯತೆಯಾಗಿ ಪರಿವರ್ತಿಸಿದುವು? ಎಂಬುದು. ಮತ್ತೆ ಯಾವ ಗುಂಪು ಮತ್ತು ಯಾರು? ಇಂತಹ ಹೇಳಿಕೆ ಮತ್ತು ನಿಲುವನ್ನು ವಿರೋಧಿಸಿ ರಾಷ್ಟ್ರೀಯತೆಯನ್ನು ಸೆಕ್ಯುಲರ್ ಆಗಿರಬೇಕೆಂದು ಆಗ್ರಹಿಸುತ್ತಿದ್ದಾರೆ? ಎಂಬ ಪ್ರಶ್ನೆಯೂ ಕೂಡಾ ಬಹಳ ಪ್ರಮುಖವಾದುದು. ಇಲ್ಲಿ ಬಹಳ ಪ್ರಮುಖವಾದ ಇನ್ನೊಂದು ಅಂಶವೇನೆಂದರೆ, ಈ ರೀತಿಯಲ್ಲಿ ಕಥಿತವಾಗುವ ರಾಷ್ಟ್ರೀಯತೆ ಅಥವಾ ರಾಷ್ಟ್ರೀಯವಾದವು ಮೂಲತ: ವೈವಿಧ್ಯತೆಗಳ ಫಲವಾಗಿಯೇ ರೂಪುಗೊಂಡಿದ್ದು ಮತ್ತು ಇಂತಹ ವಿಭಿನ್ನ ಮುಖಗಳ ಅಧ್ಯಯನವೇ ರಾಷ್ಟ್ರೀಯತೆ ಎನ್ನುವ ಭಾವಣೆ ಅಥವಾ ಕೊಡೆಯ ರೂಪದಲ್ಲಿ ಒದಗಿರುವಂತದ್ದು. ಇದನ್ನು ನಾವು ವಿದ್ವತ್ತಿನ ನೆಲೆಯಲ್ಲಿ ಚರ್ಚಿಸಬೇಕಷ್ಟೇ.

ಆದರೆ ಇದು ಒಂದು ಜನಪ್ರಿಯ ನೆಲೆಯಲ್ಲಿ ಬರೀ ಭಾಗಶಃ ಮಾತ್ರ ಪ್ರತಿಫಲಿತವಾಗಿದೆ, ಯಾಕೆಂದರೆ ರಾಷ್ಟ್ರೀಯತೆಯ ಒಂದು ವಿಶ್ಲೇಷಣೀಯ ಮತ್ತು ವಿಮರ್ಶೀಯ ಅಧ್ಯಯನವನ್ನು ಇನ್ನೂ ಕೂಡಾ ರಾಜಕಾರಣಿಗಳು ಮತ್ತು ಸಾರ್ವಜನಿಕರು ದೇಶಭಕ್ತಿಯ ವಿವರಣೆಯಿಂದ ಹೊರತಾದುದೆಂದೇ ಬಗೆಯುತ್ತಾರೆ. ನಾವು ಧಾರ್ಮಿಕ ರಾಷ್ಟ್ರೀಯವಾದ ಮತ್ತು ಸೆಕ್ಯುಲರ್ ರಾಷ್ಟ್ರೀಯವಾದದ ನಡುವೆ ಪೃಥಕ್ಕರಣವನ್ನು ಸಾಧಿಸಿದಾಗ ಮಾತ್ರ ಸೆಕ್ಯುಲರ್ ರಾಷ್ಟ್ರೀಯವಾದದ ಸ್ಪಷ್ಟವಾದ ವ್ಯಾಖ್ಯಾನವನ್ನು, ನಾವೀಗ ಗ್ರಹಿಸಿದ್ದಕ್ಕಿಂತ ಭಿನ್ನವಾಗಿ ಅಗತ್ಯೀಕರಿಸಿಕೊಳ್ಳಬೇಕಾಗುತ್ತದೆ.

ಈ ಹಂತದಲ್ಲಿ ಚಾರಿತ್ರಿಕ ಸಂಶೋಧನೆಯು ಇನ್ನೊಂದು ಲಕ್ಷಣ ಅಥವಾ ಅಂಶದಿಂದ ಸಂಕೀರ್ಣವಾಗುತ್ತದೆ. ಚರಿತ್ರೆಯು ರಾಷ್ಟ್ರೀಯತೆಯ ಮತ್ತು ಮೂಲಭೂತವಾದದ ಬಹುಮುಖ್ಯ ಮೂಲಾಂಶವಾದರೆ (ಮತ್ತು ಎರಿಕ್ ಹಾಬ್ಸ್‌ವ್ಯಾಮ್ ತೌಲನಿಕವಾಗಿ ನೋಡುವ ಪೋಪ್ಪಿ ಮತ್ತು ಹೆರಾಯಿನ್ ವ್ಯಸನದ ಕ್ರಮ,) ಈ ವೈವಿಧ್ಯದ ಧಾರ್ಮಿಕ ಅಥವಾ ಭಾಷಿಕ ಅಥವಾ ಜನಾಂಗೀಯ ರಾಷ್ಟ್ರೀಯತೆಗಳು ವೈವಿಧ್ಯದ ಚರಿತ್ರೆಗಳನ್ನು ಕ್ಲೈಮ್ ಮಾಡಿಕೊಳ್ಳುತ್ತವೆ. ಆಗ ಬಹುಬೇಗ ಅಸ್ಮಿತೆ ಅಥವಾ ಗುರುತಿನ ರಾಜಕಾರಣವೂ ಕೂಡಾ ಸಮಾನವಾದ ಬೇಡಿಕೆಗಳನ್ನು ಆಗ್ರಹಿಸುತ್ತವೆ ಹಾಗೂ ನಿರ್ಮಿಸುತ್ತವೆ.

***(ಮುಂದುವರೆಯುವುದು)***

■

# ‘ವಡ್ಡಾರಾಧನೆ’ ಹೆಸರು : ಒಂದು ಹೊಸ ವಿಚಾರ ಮರು ಪರಿಶೀಲನೆ

❑ ಹಂಪ ನಾಗರಾಜಯ್ಯ
ಸ್ವನಿಮಾ, 1079, 18 ‘ಎ’
ಮುಖ್ಯರಸ್ತೆ, 5ನೇ ಬ್ಲಾಕ್,
ರಾಜಾಜಿನಗರ, ಬೆಂ–10

ಪ್ರಜಾವಾಣಿ ಜುಲೈ 17, 2016 ರ ಭಾನುವಾರ ಪುರವಣಿ ಮುಕ್ತಛಂದ ಪುಟ 5ರಲ್ಲಿ ಅಚ್ಚಾಗಿರುವ ಬಿ. ರಾಜಶೇಖರಪ್ಪ ಅವರ ಬರಹಕ್ಕೆ ಈ ಸ್ಪಷ್ಟೀಕರಣ.

ವಡ್ಡಾರಾಧನೆ ಕನ್ನಡ ಸಾಹಿತ್ಯದ ಉಜ್ವಲ ಮಾನಸ್ತಂಭ. 19 ಕಥೆಗಳ ಈ ಚಿರಂತನ ಗದ್ಯ ಗ್ರಂಥದ ಹೆಸರು, ಲೇಖಕ, ಕಾಲ, ಸ್ಥಳ ಕುರಿತು ನೂರು ವರ್ಷಗಳಿಂದ ಚರ್ಚೆ ನಡೆದು ಬಹುಮಟ್ಟಿಗೆ ಒಂದು ನಿಲುಗಡೆಗೆ ಬಂದು ನಿಂತಿದೆ. ರಾಜಶೇಖರಪ್ಪನವರು ಇದೀಗ ಕೃತಿಯ ಹೆಸರು ಕುರಿತು ತಮ್ಮ ಚಿಂತನೆ ಮತ್ತು ಸಂಶೋಧನೆಯನ್ನು ತಿಳಿಸಿದ್ದಾರೆ. ವಡ್ಡಾರಾಧನೆ ಎಂಬ ಹೆಸರಲ್ಲಿ ಇರುವ ‘–ಆರಾಧನೆ’ ಎಂಬ ಉತ್ತರಾರ್ಧದ ವಿಚಾರದಲ್ಲಿ ಚರ್ಚೆಗಳಿಲ್ಲ. ‘ವಡ್ಡ’– ಎಂಬ ಪೂರ್ವಾರ್ಧ ಶಬ್ದ ಕುರಿತು ಜಿಜ್ಞಾಸೆ ನಡೆಸಿ ತಮ್ಮ ನಿಲುವು ಏನೆಂಬುದನ್ನು ಸಾರಿದ್ದಾರೆ. ಜತೆಗೆ ವಡ್ಡಾರಾಧನೆ ಎಂಬ ಹೆಸರಿನ ಬೇರೆ ರೂಪಗಳನ್ನೂ ಅವುಗಳ ಹಿನ್ನೆಲೆ ಮತ್ತು ಶಬ್ದಕೋಶದ ಅರ್ಥಗಳನ್ನೂ ಸಮೀಕ್ಷಿಸಿದ್ದಾರೆ. ಅವರ ಚರ್ಚೆಯಲ್ಲಿ ಕೇಂದ್ರಿಕೃತ ವಾಗಿರುವುದು ‘ವಡ್ಡ’ ಶಬ್ದದ ನಿಷ್ಪತ್ತಿ, ಅರ್ಥ, ವ್ಯಾಪ್ತಿ ಕುರಿತು ಅವರ ಅಭಿಪ್ರಾಯಗಳು ಹಾಗೂ ತಳೆದ ನಿಲವುಗಳನ್ನು ಒಂದೊಂದಾಗಿ ಮರುಪರಿಶೀಲಿಸ ಬೇಕಾಗಿದೆ. ವಡ್ಡಾರಾಧನೆ ಪ್ರಾರಂಭವಾಗುವುದು ವರ್ಧಮಾನರ ಸ್ತೋತ್ರದಿಂದ. ಇದರ ಮೊದಲ ಕಥೆ ವರ್ಧಮಾನ ತೀರ್ಥಂಕರನ ನಮಸ್ಕಾರದೊಂದಿಗೆ ಆರಂಭವಾಗುತ್ತದೆ. ಇದರ ಕೆಲವು ಹಸ್ತಪ್ರತಿಗಳಲ್ಲಿ ಇರುವ ಪ್ರಾಕೃತ ಶಾಹೆಯೂ ವಡ್ಡಮಾಣ





(ವರ್ಧಮಾನ) ಸ್ತುತಿಯಿದೆ. ಕೃತಿಯ ಆರಂಭದಲ್ಲಿ ಕವಿಗಳು ತಮ್ಮ ಇಷ್ಟದೈವ ಅಥವಾ ಮನೆದೇವರನ್ನು ಸ್ತುತಿಸುವ ಪರಂಪರೆಗೆ ಅನುಗುಣವಾಗಿ ಈ ಲೇಖಕನು ವರ್ಧಮಾನವನ್ನು ಸ್ತುತಿಸಿದ್ದಾನೆಂದು ವಿವರಿಸಿರುವುದು ಸಮಂಜಸವಾಗಿದೆ.

ಅಲ್ಲಿಂದ ಮುಂದೆ ಅವರು ತಳೆದ ಅಭಿಪ್ರಾಯಗಳು ಪರಿಶೀಲನಾರ್ಹವಾಗಿವೆ.

1. ಸಂಸ್ಕೃತದಲ್ಲಿ ‘ವರ್ಧಮಾನ’ ಎಂದಿರುವುದನ್ನು ಪ್ರಾಕೃತದಲ್ಲಿ ‘ವಡ್ಡಮಾಣ’ ಎಂದಿರುವುದು–ಕನ್ನಡದಲ್ಲಿ ಸಂಕ್ಷೇಪಗೊಂಡು ‘ವಡ್ಡ’ ಮಾತ್ರ ಶಾಸನಗಳಿಂದ ಸ್ಪಷ್ಟವಾಗಿದೆ > ಎಂದು ತಿಳಿಸಿದ್ದಾದ ಮೇಲೆ < ಜೈನ ಮುನಿಗಳಿಗೆ ವರ್ಧಮಾನದೇವ ಎಂಬ ಹೆಸರು ಇರುತ್ತಿದ್ದಂತೆ ಅದೇ ಅರ್ಥದ ವಡ್ಡದೇವ ಎಂಬ ಹೆಸರು ಕೂಡಾ ಇರುತ್ತಿತ್ತು. ಹಾಗೇ ವರ್ಧಮಾನಾಚಾರ್ಯವ್ರತಿ ಎಂಬುದರ ಬದಲಿಗೆ ವಡ್ಡಾಚಾರ್ಯಬ್ರತಿ ಎಂಬ ಹೆಸರು ಕರೆದಿರುವುದನ್ನು ನೋಡಬಹುದು > ಎಂದು ಹೇಳಿದ್ದಾರೆ. ಜತೆಗೆ ಶ್ರವಣಬೆಳಗೊಳ ಮತ್ತು ಶಿಕಾರಿಪುರ ಶಾಸನಗಳಿಂದ ಉದಾಹರಿಸಿದ್ದಾರೆ.

ಆದರೆ ಶಾಸನಗಳಲ್ಲಿ ಈ ಹೆಸರುಗಳಲ್ಲಿ ಮತ್ತು ಇನ್ನೂ ಹಲವು ಇಂತಹ ಹೆಸರುಗಳಲ್ಲಿ ವಡ್ಡ–ಎಂಬ ಆದಿ ಶಬ್ದ ರೂಪವು ‘ವರ್ಧಮಾನ’ ಎಂಬ ಹೆಸರಿನ ಸಣ್ಣಿಸಿದ ರೂಪಗಳಲ್ಲ. ಇದನ್ನು ಮತ್ತೆ ಚರ್ಚೆಗೆ ಎತ್ತಿಕೊಳ್ಳುವ ಮೊದಲು ಅವರ ಮುಂದುವರಿದ ಇದೇ ಧಾಟಿಯ ವಾಕ್ಯಗಳನ್ನು ಉದಾಹರಿಸುತ್ತೇನೆ;

< ಪ್ರಾಚೀನ ಕಾಲದಲ್ಲಿ ಜೈನ ವ್ಯಕ್ತಿಗಳ ಹೆಸರಲ್ಲಿ ‘ವರ್ಧಮಾನ’ ಎಂಬುದಕ್ಕೆ, ಅಲ್ಲಿಯ ‘–ಮಾನ’ ಎಂಬ ಭಾಗ ಉಚ್ಚಾರಣೆಯಲ್ಲಿ ಮತ್ತು ಹಾಗೇ ಪದರೂಪದಲ್ಲೂ ಬಿಟ್ಟುಹೋಗಿ ಉಳಿದ ‘ವರ್ಧ–’ ಭಾಗಕ್ಕೆ ‘ವಡ್ಡ’ ಎನ್ನುವ ರೂಪ ಬಂದಿರುವುದು ಅಥವಾ ಬಾಳಿಸಿರುವುದು ಸ್ಪಷ್ಟ ಕಾಣುತ್ತದೆ. ‘ವಡ್ಡ’ ಎನ್ನುವುದು ವರ್ಧಮಾನ ಎಂದಂತೆಯೇ ಪರಿಗಣಿತವಾಗುತ್ತಿತ್ತು. ‘ವಡ್ಡ’ ಎಂಬುದು ವರ್ಧಮಾನ ಎಂಬುದಕ್ಕೆ ಕನ್ನಡದಲ್ಲಿ ಬಂದಿರುವ ಒಂದು ಬದಲಿ ಅಥವಾ ಸಂಕ್ಷಿಪ್ತ ಪದರೂಪ>.

ಅವರ ವಾದಸರಣಿ ಮೇಲು ಮೇಲಿನ ತೇಲುನೋಟಕ್ಕೆ ಇರಬಹುದು ಎಂದು ಅನಿಸಬಹುದು. ಒಳಹೊಕ್ಕು ಶಬ್ದಾರ್ಥ ಹಾಗೂ ನಿಷ್ಪತ್ತಿಗಳು ಇದನ್ನು ಅನುಮೋದಿಸುವುದಿಲ್ಲ. ವಡ್ಡದೇವ ಮತ್ತು ವಡ್ಡಾಚಾರ್ಯ ಎಂಬ ಹೆಸರುಗಳು ವರ್ಧಮಾನದೇವ ಹಾಗೂ ವರ್ಧಮಾನಚಾರ್ಯ ಎಂಬ ಹೆಸರುಗಳ ಹಾಗೂ ಅದೇ ಅರ್ಥದ ಬದಲಿ ಹೆಸರುಗಳಲ್ಲ. ‘ವಡ್ಡ’ ಎಂಬುದು ‘ವಡ್ಡಮಾಣ’ ಎಂಬುದರ ಸಂಕ್ಷೇಪರೂಪ ಅಲ್ಲ. ಸಂಸ್ಕೃತ– ಪ್ರಾಕೃತ ಭಾಷೆಗಳ, ಶಬ್ದಗಳ ರಾಚನಿಕ ವಿಶ್ಲೇಷಣೆ ಮತ್ತು ನಿಷ್ಪತ್ತಿಯನ್ನು ಪರಿಪ್ರೇಕ್ಷ್ಯದಲ್ಲಿ ಈ ರೂಪಗಳು ಪಡೆದುಕೊಳ್ಳುವ ಆಕೃತಿಮ ಹಾಗೂ ಸ್ವನ ಮಾರ್ಪಾಟುಗಳನ್ನು ಅನುಸಂಧಾನಿಸ ಬೇಕು. ಸಂಸ್ಕೃತ ವರ್ಧಮಾನ ಪ್ರಾಕೃತದಲ್ಲಿ ವಡ್ಡಮಾಣ ಎಂದು ವ್ಯತ್ಯಾಸ ಪಡೆಯುತ್ತದೆ, ಸರಿಯೆ ಹೀಗೆ ವ್ಯತ್ಯಾಸಗೊಳ್ಳುವಾಗ ವರ್ಧಮಾನ ಹೆಸರಲ್ಲಿ ಮೊದಲರ್ಧವಾದ ‘ವರ್ಧ’ವು ವಡ್ಡ ಎಂದು ಮಾರ್ಪಾಟು ಪಡೆದಿದೆ, ದಿಟ. ಆದರೆ ‘ವಡ್ಡ’ ಎಂಬುದಷ್ಟೇ ಇದ್ದಾಗ ಅದರಿಂದ ವರ್ಧಮಾನ ಎಂಬರ್ಥ ಪ್ರತೀತವಾಗುವುದಿಲ್ಲ. ವಡ್ಡ ಎಂಬ ಶಬ್ದ ಶಾಸನ ದಲ್ಲಾಗಲಿ ಸಾಹಿತ್ಯ ಕೃತಿಗಳಲ್ಲಾಗಲಿ ವರ್ಧಮಾನ ಎಂಬ ಅರ್ಥದಲ್ಲಿ ಪ್ರಯೋಗವಾದಂತಿಲ್ಲ. ವಡ್ಡಾಚಾರ್ಯ, ವಡ್ಡದೇವ ಎಂಬವು ಹಿರಿಯ ಆಚಾರ್ಯ ಹಿರಿಯದೇವ ಎಂಬರ್ಥದ

ಹೆಸರುಗಳು. ಇವು ದೊಡ್ಡಪ್ಪ, ದೊಡ್ಡೇಗೌಡ, ದೊಡ್ಡಸ್ವಾಮಿ, ಹಿರೇಗೌಡ ಎಂಬಂತಹ ಹೆಸರುಗಳು ಅಪಭ್ರಂಶ ಭಾಷೆಯಲ್ಲಿ. ವಿಬುಧ ಶ್ರೀಧರ ಕವಿ ವಿರಚಿತ ವಡ್ಡಮಾಣ ಚರಿತ ಕಾವ್ಯವಿದೆ. ವರ್ಧ ಅಥವಾ ವಡ್ಡ ಎಂದಷ್ಟೇ ಇದ್ದರೆ ಅದು ವರ್ಧಮಾನ, ವಡ್ಡಮಾಣ ಎಂಬರ್ಥ ಕೊಡಲಾರವು..... ಮಾನ, ಅಥವಾ ಮಾಣ ಶಬ್ದಗಳು ಸೇರಿಕೊಂಡೇ ವರ್ಧ–ವಡ್ಡ–ಬರಬೇಕು. ರಾಜಶೇಖರಪ್ಪ ಅವರ ಏಳು ಅಭಿಪ್ರಾಯಗಳಿಗೆ ಸ್ಪಷ್ಟೀಕರಣ ಅಗತ್ಯ.

1. < ಅರ್ಥದ ಗೊಂದಲವಾಗದಂತೆ 'ವರ್ಧಮಾನ' ಎಂಬುದಕ್ಕೆ 'ವಡ್ಡ' ಪದವನ್ನು ಬಳಸುರುವುದು ಒಂದು ವಿಶೇಷ ಎನಿಸುತ್ತದೆ> ವಡ್ಡ ಎಂಬ ಪದವನ್ನು ವರ್ಧಮಾನ ಎಂಬುದಕ್ಕೆ ಪರ್ಯಾಯವಾಗಿ ಬಳಸಿಲ್ಲ. ಅದರಿಂದ ಇಲ್ಲಿ ಯಾವ ವಿಶೇಷತೆಯೂ ಬಂದಿಲ್ಲ.

2. < ಕೃತಿಯ ಆರಂಭದಲ್ಲಿ ಕೃತಿಕಾರ ವರ್ಧಮಾನ ಮಹಾವೀರನನ್ನು ಭಕ್ತಿಯಿಂದ ನಮಸ್ಕಾರಪೂರ್ವಕವಾಗಿ ನೆನೆದಿರುವುದನ್ನು ನೋಡಿದರೆ ಈ ಕೃತಿಯನ್ನು ವರ್ಧಮಾನ ಮಹಾವೀರನಿಗೇ ಅಂಕಿತ ಮಾಡಿದಂತೆ ಭಾಸವಾಗುತ್ತದೆ>.

3. < ಸಂಸ್ಕೃತದ 'ವರ್ಧಮಾನ'ಕ್ಕೆ ಪ್ರಾಕೃತದ ಶಾಹೆಗಳಲ್ಲಿ 'ವಡ್ಡಮಾಣ' ಎಂದೂ ಕನ್ನಡದ ಶಾಸನಗಳಲ್ಲಿ 'ವಡ್ಡ' ಎಂದೂ ಬಂದಿರುವುದನ್ನು ನೋಡಿದರೆ ವಡ್ಡಾರಾಧನೆಯ ಹೆಸರಲ್ಲಿರುವ **ವಡ್ಡ** ಎಂಬ ಭಾಗ **ವರ್ಧಮಾನ** ಎಂಬುದರ ಬದಲಿಗೇ ಬಂದಿರುವ ಶಬ್ದ ಎಂಬಲ್ಲಿ ಅನುಮಾನವಿಲ್ಲ. ಸಂಸ್ಕೃತದ ವರ್ಧಮಾನ ಎಂಬುದು ಪ್ರಾಕೃತದಲ್ಲಿ 'ವಡ್ಡಮಾಣ' ಎಂದು ತದ್ಭವ ಗೊಳ್ಳುತ್ತದೆಯೇ ಹೊರತು 'ವಡ್ಡ' ಎಂದಲ್ಲ. ಕನ್ನಡದ ಶಾಸನಗಳಲ್ಲಿ ಸಂಸ್ಕೃತದ ವರ್ಧಮಾನ ಅಥವಾ ಪ್ರಾಕೃತದ ವಡ್ಡಮಾಣ ಎಂಬುದು ಎಲ್ಲಿಯೂ 'ವಡ್ಡ' ಎಂದು ಬಂದಿಲ್ಲ. ಆ ರೀತಿಯಲ್ಲಿ, ಆ ಅರ್ಥದಲ್ಲಿ ಅದು ರೂಪಗೊಳ್ಳುವುದಿಲ್ಲ. ವಡ್ಡ ಎಂಬ ಶಬ್ಧ ಬಿಡಿಯಾಗಿ ಅಥವಾ ವರ್ಧ ಎಂಬುದಷ್ಟೇ ಒಂಟಿಯಾಗಿ ಇರುವಾಗ ಅವು **ವಡ್ಡಮಾಣ** ಅಥವಾ **ವರ್ಧಮಾಣ** ಎಂಬ ಅರ್ಥವನ್ನು ಕೊಡುವುದಿಲ್ಲ ಮತ್ತು ಕೊಡಲಾರವು. ಪ್ರಾಕೃತದ ವಡ್ಡ–ಶಬ್ದಕ್ಕೆ, ಹಾಗೆಯೇ ಸಂಸ್ಕೃತದ ವರ್ಧ–ಶಬ್ದಕ್ಕೆ –ಮಾಣ ಅಥವಾ ಮಾನ ಎಂದು ಉತ್ತರ ಪದ ಸೇರಿದಾಗ ಮಾತ್ರ ವಡ್ಡಮಾಣ ವರ್ಧಮಾನ ಎಂಬ ಹೆಸರು ಸಿದ್ಧಿಸುತ್ತದೆ ಮತ್ತು ಅರ್ಥಬರುತ್ತದೆ. ಅದರಿಂದ < ವಡ್ಡಾರಾಧನೆಯ ಹೆಸರಲ್ಲಿರುವ ವಡ್ಡ–ಎಂಬ ಭಾಗ ವರ್ಧಮಾನ ಎಂಬ ಹೆಸರು ಸಿದ್ಧಿಸುತ್ತದೆ ಮತ್ತು ಅರ್ಥ ಬರುತ್ತದೆ. ಅದರಿಂದ < ವಡ್ಡಾರಾಧನೆಯ ಹೆಸರಲ್ಲಿರುವ ವಡ್ಡ–ಎಂಬ ಭಾಗ ವರ್ಧಮಾನ ಎಂಬುದರ ಬದಲಿಗೇ ಬಂದಿರುವ ಶಬ್ದ ಎಂಬಲ್ಲಿ ಅನುಮಾನವಿಲ್ಲ> ಎಂಬ ಅವಧಾರಣೆ, ಒತ್ತು ಕೊಟ್ಟು ಹೇಳಿರುವುದು ಸರಿಯಲ್ಲ. ಈ ಗ್ರಹಿಕೆ ಶುದ್ಧಾಂಗ ತಪ್ಪು. ಇದು ಪ್ರಾಕೃತ, ಸಂಸ್ಕೃತ ಭಾಷೆಗಳಲ್ಲಿ ಶಬ್ದರೂಪಗಳು ಸಿದ್ಧಿಸುವ ಮತ್ತು ಶಬ್ದಾರ್ಥ ಪ್ರತೀತವಾಗುವ ವಿಧಾನಕ್ಕೆ ಹೊರತಾದ ದುಡುಕುನಿರ್ಧಾರ.

4. < ಈ ಗ್ರಂಥಕ್ಕೆ ಕೃತಿಕಾರನು ಮೂಲತಃ **'ವರ್ಧಮಾನಾರಾಧನೆ'** ಅಥವಾ **'ವಡ್ಡಮಾಣಾರಾಧನೆ'** ಎಂಬ ಹೆಸರಿಟ್ಟಿದ್ದು ಅದೇ ಮುಂದೆ ವಡ್ಡಾರಾಧನೆ ಎಂದಾಗಿರಬೇಕು.> ಇದು ಕೇವಲ ಊಹೆ. ಒಮ್ಮೆ ಕಲ್ಪನೆಯ ಕುದುರೆ ಹತ್ತಿದರೆ





ಸಾಕು ಅದು ನಮ್ಮನ್ನು ಎಲ್ಲೆಲ್ಲಿಗೂ ಮುಟ್ಟಿಸುತ್ತವೆ. ವಡ್ಡ ಎಂಬ ಶಬ್ದ ವಡ್ಡ (ವರ್ಧ) ಮಾನ ಹೆಸರನ್ನು ಸಣ್ಣಿಸಿದ ರೂಪವೆಂದು ಭ್ರಮಿಸಿ ಅದೇ ಜಾಡಿನಲ್ಲಿ ಹೆಜ್ಜೆ ಹಾಕಿ ಹೊರಟಿದ್ದರಿಂದ ಹೀಗೆ ಊಹೆಗಳು ಹುಟ್ಟುತ್ತವೆ. ಇದು ಭ್ರಮಾಜನ್ಯ–ಸಾದೃಶ್ಯರೂಪಗಳು ದಿಡೀರ್ ನಿರ್ಧಾರಗಳಿಗೆ ಎಡೆಮಾಡಿಕೊಡುತ್ತವೆ. ಕೊಂಬೆರೆಂಬೆಗಳ ರೂಪಮಾಟಗಳು ಬೇಗ ಕಾಣುತ್ತವೆ. ಮರೆಯಲ್ಲಿರುವ ಕಾಂಡಬೇರು ಹುಡುಕಿದರೆ ಸಿಗುತ್ತವೆ.

5. < ವರ್ಧಮಾನ ಮಹಾವೀರ ಮತ್ತು ಅವರ ಕಠೋರವಾದ ಮಹಾ ಆರಾಧನೆ–ತಪಸ್ಸು ಮಾದರಿ ಎನಿಸಿದ್ದರಿಂದ ಅಂಥವರ ಕಥೆಗಳ ಈ ಗ್ರಂಥಕ್ಕೆ 'ವರ್ಧಮಾನ ರೀತಿಯ ಆರಾಧನೆ' ಎಂಬಂತೆ, ಕೃತಿಕಾರ ಇದನ್ನು 'ವರ್ಧಮಾನಾರಾಧನೆ' ಅಥವಾ 'ವಡ್ಡಮಾಣಾರಾಧನೆ' ಎಂದು ಹೆಸರಿಸಿರಬೇಕು. ಅದೇ ಅಮೇಲೆ ಸಂಕ್ಷೇಪಗೊಂಡು 'ವಡ್ಡಾರಾಧನೆ' ಆಗಿರಬೇಕು. ಈ ಕೃತಿಯ ಹೆಸರಿಗೆ ಇದು ಉಚಿತವಾಗಿ ಒಪ್ಪುವ ವಿವರಣೆಯಾಗಿ ಕಾಣುತ್ತದೆ. ಇದರಿಂದ ಈ ಕೃತಿಯ ಹೆಸರಿನ ಒಗಟನ್ನು ಬಿಡಿಸುವ ಸರಿಯಾದ ಕೀಲಿಕೈ ಈಗ ದೊರೆತಂತಾಗಿದೆ.>

ಇದೆಲ್ಲವೂ ಊಹೆಯ ಮಾತುಗಳು. ವರ್ಧಮಾನಾರಾಧನೆ ಎಂಬುದು ಇಲ್ಲ. ಇಲ್ಲದಿರುವುದನ್ನು ಹುಟ್ಟಿಸಿ, ಅದು ವಡ್ಡಾಮಾಣಾರಾಧನೆ ಎಂಬುದೂ ಇಲ್ಲ. ಇಲ್ಲದಿರುವುದನ್ನು ಹುಟ್ಟಿಸಿ, ಅದು ವಡ್ಡಾಮಾಣಾರಾಧನೆ ಎಂದು ರೂಪಾಂತರಗೊಂಡು ಕಡೆಗೆ 'ವಡ್ಡಾರಾಧನೆ' ಆಗಿರಬೇಕು– ಎಂಬಿತ್ಯಾದಿ ವಿವರಿಸಿರುವುದು ಸರಿಯಲ್ಲ. ಆಯಿತು, ಒಂದು ಪಕ್ಷ ಈ ಗ್ರಂಥಕ್ಕೆ ವರ್ಧಮಾನಾರಾಧನೆ – ವಡ್ಡಮಾಣಾರಾಧನೆ ಎಂಬ ಹೆಸರು ಇದ್ದಿದ್ದರೆ ವರ್ಧಮಾನ (ವಡ್ಡಮಾಣ) ನನ್ನ ಕುರಿತು ಪ್ರತಿಕತೆಯಲ್ಲೂ ಪ್ರಸ್ತಾಪ ಹಾಗೂ ಆತನ ಆರಾಧನೆಯ ವಿಚಾರ ಬರಬೇಕಿತ್ತು. ಆದರೆ ಯಾವ ಕಥೆಯಲ್ಲೂ ಬಂದಿಲ್ಲ. ಈ ಕೃತಿಯ ಹೆಸರು ಈಗಿರುವಂತೆ ಸರಿಯಾಗಿಯೇ ಇದೆ. ಅದರಲ್ಲಿ ಬಿಡಿಸಲಾಗದಂತಹ ಒಗಟು ಇಲ್ಲ. ಅದರಿಂದ ಸರಿಯಾದ ಕೀಲಿಕೈ ಈಗ ದೊರೆತಂತೆ ಆಗಲಿಲ್ಲ. ಇವರು ಹೇಳುವ ಕೀಲಿಕೈಯಿಂದ ವಡ್ಡಾರಾಧನೆಯ ಬಾಗಿಲು ತೆರೆಯುವುದಿಲ್ಲ.

6. < ಈ ಮೊದಲಿಗೆ ಬಂದಿರುವ ವಿವರಣೆಗಳು, ಈ ಕೃತಿಯ ಹೆಸರಿನ ಹಿನ್ನೆಲೆಯಲ್ಲಿ 'ವರ್ಧಮಾನ' ಅಥವಾ 'ವಡ್ಡಮಾಣ' ಇರುವುದು ಗೋಚರಿಸದೆ ಅಥವಾ ಗ್ರಹಿಕೆಗೆ ಬಾರದೆ ನೀಡಿದ ಪಂಡಿತನಿಷ್ಪತ್ತಿಯ ವಿವರಣೆಗಳಾಗಿವೆ ಎಂದು ಹೇಳಬೇಕಾಗಿದೆ.

ಈ ಮೊದಲಿಗೆ ಬಂದಿರುವ ವಿವರಣೆಗಳು ಈ ಕೃತಿಗೆ ಇಟ್ಟಿರುವ ವಡ್ಡಾರಾಧನೆ ಹೆಸರಿನ ಹಿನ್ನೆಲೆಯಲ್ಲಿಯೇ ನಡೆದಿವೆ. 'ವರ್ಧಮಾನ' ಅಥವಾ 'ವಡ್ಡಾಮಾಣ' ಎಂಬ ರೂಪವನ್ನು ಯಾಕೆ ಹಿಂದಿನ ವಾಗ್ವಾದ ವಿವೇಚನೆಗಳಲ್ಲಿ ಪರಿಗಣಿಸಿಲ್ಲವೆಂದರೆ ಆ ಹೆಸರು ಇದರಲ್ಲಿ ಇಲ್ಲವೇ ಇಲ್ಲ. ಹೀಗೆ ಇಲ್ಲದಿರುವುದು 'ಗೋಚರಿಸುವುದು' ಹೇಗೆ, ಇಲ್ಲದಿರುವುದು 'ಗ್ರಹಿಕೆಗೆ ಬರುವುದು' ಹೇಗೆ ? ಹಿಂದಿನವರು ನೀಡಿದ್ದು 'ಪಂಡಿತನಿಷ್ಪತ್ತಿಯ ವಿವರಣೆಗಳಾಗಿವೆ' ಎಂದು ಸರಳೀಕರಿಸಿದ್ದು ಉಚಿತವಲ್ಲ. ಹೀಗೆ ವಿದ್ವತ್ ವಿನಯೋಲ್ಲಂಘನೆಯ ದುಬಾರಿ ಮಾತು ಬಳಸಿರುವುದು ರಾಜಶೇಖರಪ್ಪನವರ ಸ್ವಭಾವ ಬಲ್ಲವರಿಗೆ ಅಚ್ಚರಿ ಹುಟ್ಟಿಸುತ್ತದೆ.

ವಡ್ಡಾರಾಧನೆ ಎಂಬ ಸಮಷ್ಟಿಶಬ್ದರೂಪದ ನಿಷ್ಪತ್ತಿ ಮತ್ತು ಶಬ್ದಾರ್ಥ ವಿಶ್ಲೇಷಣೆಗೆ ಸಂಸ್ಕೃತ, ಪ್ರಾಕೃತ ಭಾಷೆಗಳ ಪ್ರವೇಶದ ಜತೆಗೆ ಜೈನ ಸಿದ್ಧಾಂತದ ಪರಿಶ್ರಮವನ್ನೂ ಬಯಸುತ್ತದೆ.

7. < ಕೆಲವು ಸಾಹಿತ್ಯ ಕೃತಿಗಳ ಹೆಸರುಗಳು ದೀರ್ಘವೆನಿಸಿದಾಗ ಮೊಟಕು ಮಾಡಿಕೊಂಡೊ ಇಲ್ಲವೆ ಮೊಟಕಾದ ಬೇರೆ ಹೆಸರನ್ನೊ ಬಳಸುತ್ತ ಬ(ಂದಿ)ರುವುದುಂಟು. ಹಾಗೆಯೇ ವರ್ಧಮಾನಾರಾಧನೆ ಅಥವಾ ವಡ್ಡಮಾಣಾರಾಧನೆ ಎಂಬುದನ್ನು ವಡ್ಡಾರಾಧನೆ ಎಂದು ಸಂಕ್ಷೇಪ ಮಾಡಿಕೊಂಡು, ಅಥವಾ ಈ ಹಿಂದೆ ಶಾಸನೊಲ್ಲೇಖಗಳಲ್ಲಿ ಕಂಡಿರುವಂತೆ ‘ವರ್ಧಮಾನ’ ಕ್ಕೆ ಕನ್ನಡದಲ್ಲಿ ‘ವಡ್ಡ’ ಎನ್ನುವ ಪದ ಬಳಕೆಯಾಗುತ್ತಿದ್ದುದರಿಂದ ಕೃತಿಕಾರ ನೇರವಾಗಿಯೆ ಇದಕ್ಕೆ ‘ವರ್ಧಮಾನಾರಾಧನೆ’ ಎಂಬರ್ಥದಲ್ಲಿ ‘ವಡ್ಡಾರಾಧನೆ’ ಎಂಬ ಹೆಸರು ಕರೆದಿರಲಿಕ್ಕೂ ಸಾಕು, ಒಟ್ಟಿನಲ್ಲಿ ‘ವಡ್ಡಾರಾಧನೆ’ ಎಂದರೆ ‘ವರ್ಧಮಾನಾರಾಧನೆ’ ಎಂದೇ ಅರ್ಥ.

ವ್ಯಕ್ತಿಯ ಇಲ್ಲವೇ ಕೃತಿಯ ಹೆಸರು ಉದ್ದವಾಗಿದ್ದರೆ ಅದನ್ನು ಕಿರಿದಾಗಿಸಿ ಹೇಳುವುದೂ ಬರೆಯುವದೂ ಪ್ರಸ್ತಾಪಿಸುವುದೂ ಸಹಜವೆ. ಆದರೆ ‘ವಡ್ಡ’ ಎಂಬುದು ‘ವಡ್ಡಮಾಣ’ದ ಗಿಡ್ಡರೂಪವಲ್ಲ ಮತ್ತು ವಡ್ಡಾರಾಧನೆ ಎಂಬುದು ವಡ್ಡಮಣಾರಾಧನೆಯ ಸಂಕ್ಷಿಪ್ತ ರೂಪವೂ ಅಲ್ಲ. ಶಾಸನಗಳಲ್ಲಾಗಲಿ, ಸಂಸ್ಕೃತ–ಪ್ರಾಕೃತ–ಕನ್ನಡ ಸಾಹಿತ್ಯ ಕೃತಿಗಳಲ್ಲಾಗಲಿ ವರ್ಧಮಾನ–ವಡ್ಡಮಾಣ ಎಂಬರ್ಥದಲ್ಲಿ ‘ವಡ್ಡ’ ಶಬ್ದ ಬಳಕೆಯಾಗಿಲ್ಲ, ಇನ್ನೂ ಮುಖ್ಯವಾಗಿ ವರ್ಧಮಾನಾರಾಧನೆ ಎಂಬರ್ಥದಲ್ಲಿ ವಡ್ಡಾರಾಧನೆ ಎಂಬ ಹೆಸರು ಖಂಡಿತಾ ಬಳಸಿಲ್ಲ. ಈ ಗ್ರಂಥದ ವಸ್ತು, ಚೌಕಟ್ಟು, ಆಶಯ– ಇವು ವರ್ಧಮಾನ–ವಡ್ಡಮಾಣನಿಗೆ ಸೇರಿದ್ದಲ್ಲ. ಒಟ್ಟಿನಲ್ಲಿ ವಡ್ಡಾರಾಧನೆ ಎಂದರೆ ವರ್ಧಮಾನಾರಾಧನೆ ಎಂದಲ್ಲ. ಸಂಸ್ಕೃತದ ಬೃಹತ್ಕಥಾ ಎಂಬುದು ಪ್ರಾಕೃತ ಮತ್ತು ಕನ್ನಡದಲ್ಲಿ ವಡ್ಡಾಕಥ ಆಗಿದೆ. ಸಂಸ್ಕೃತ ಬೃಹದಾರಾಧನಾ ಎಂಬುದು ಪ್ರಾಕೃತ ಮತ್ತು ಕನ್ನಡದಲ್ಲಿ ವಡ್ಡಾರಾಧನಾ ವಡ್ಡಾರಾಧನೆ ಎಂದಾಗಿದೆ. ಬೃಹದಾರಾಧನಾ ಗ್ರಂಥದ ಹಿನ್ನೆಲೆ ಅರಿತರೆ ವಿಷಯ ನಿಚ್ಚಳವಾಗುತ್ತದೆ.

ವಡ್ಡಾರಾಧನೆ ಗ್ರಂಥ ವರ್ಧಮಾನ ಆರಾಧನೆಗೆ ಸುತರಾಂ ಸಂಬಂಧಿಸಿದ್ದಲ್ಲವೆಂದಾಗ, ಹಾಗಾದರೆ ವಡ್ಡಾರಾಧನೆ’ ಎಂದರೇನು, ಯಾವುದಕ್ಕೆ ಸಂಬಂಧಿಸಿದ್ದು, ಮೂಲ ಆಕರ ಯಾವುದು ಎಂಬ ಪ್ರಶ್ನೆಗಳು ಬರುತ್ತವೆ. ವಡ್ಡಾರಾಧನೆಯ ಮೂಲಚೂಲಗಳನ್ನು ಅರಿಯಬೇಕು.

ವಡ್ಡಾರಾಧನೆಗೆ ಮೂಲ ಆಕರ ಆರಾಧನಾ ಹೆಸರಿನ ಪ್ರಾಚೀನ ಪ್ರಾಕೃತ ಗ್ರಂಥ. ಅದು 2166 ಗಾಥಾ (ಗಾಹೆ)ಗಳನ್ನು ಒಳಗೊಂಡಿದೆ. ಸಮಸ್ತ ಭಾರತೀಯ ವಾಙ್ಮಯದಲ್ಲಿಯೇ ವಿಶಿಷ್ಟವಾದುದು. ವಿಶ್ವಕೋಶ ಮಹತ್ವದ ಈ ತಾತ್ವಕ ಕೃತಿಯನ್ನು ರಚಿಸಿದ್ದು ಶಿವಕೋಟಿ (ಶಿವಾರ್ಯ, ಸಿವಜ್ಜ) ಹೆಸರಿನ ಯತಿ. ಈತ ಕಲಿತದ್ದು ಆರ್ಯಜಿನನಂದಿಗಣಿ, ಸರ್ವಗುಪ್ತಗಣಿ, ಮಿತ್ರ–ನಂದಿ ಮುನಿಗಳ ಬಳಿ. ಚಾರಿತ್ರ ಪ್ರಧಾನವಾದ ಈ ಆರಾಧನಾ ಗ್ರಂಥದಲ್ಲಿ ತಪಸ್ಸು, ಮೋಕ್ಷದ ಚಿಂತನ, ಮಂಥನ, ಮನನ ಮತ್ತು ಧ್ಯಾನ ನಿರತ ಮುನಿ ಮತ್ತು ಗೃಹಸ್ಥರ ವಿವರಗಳೂ ಇವೆ. ಕಾಳಿನಲ್ಲಿ ಕಡಲನ್ನು, ಬಳ್ಳದಲ್ಲಿ ಹಳ್ಳವನ್ನು ತುಂಬುವಂತೆ ಇದರಲ್ಲಿ ಎರಡೆರಡು ಸಾಲಿನ ಪ್ರಾಕೃತ ಗಾಹೆಗಳು ಗಹನವಾದ ಸಿದ್ಧಾಂತಗಳನ್ನು





ನಿರಾಯಾಸವಾಗಿ ನಿರೂಪಿಸುತ್ತವೆ. ಶ್ರಾವಕರಿಗೆ ದಾರಿ ಶ್ರಾವಕಾಚಾರ, ಮುನಿಗಳಿಗೆ ಮಾರ್ಗ ಆರಾಧನಾ. ಇದು ಮರಣಮೀಮಾಂಸೆ. ಪಾಲಿಸಲು ಯೋಗ್ಯವಾದ ಹಾಗೂ ಪಾಲಿಸಬಾರದ ಮರಣಗಳ ಸ್ವರೂಪವನ್ನು ಪರಿಚಯಿಸಿದೆ. ಮರಣವನ್ನು ಮಹೋತ್ಸವವೆಂದು ಬಗೆದು, ಒಂದು ನೋಂಪಿಯಾಗಿ ಆಚರಿಸಿ ಶರೀರವನ್ನು ತ್ಯಜಿಸುವುದೇ ಸಲ್ಲೇಖನ. ಅದು ಆತ್ಮಹತ್ಯೆ ಅಲ್ಲ. ಅದು ಪ್ರಶಾಂತ ಸಮಾಧಿಮರಣ. ಸುದೀರ್ಘ ಇಲ್ಲವೇ ಅಲ್ಪಾಯು ಜೀವನ ಸೌಧಕ್ಕೆ ಮರಣವು ಸುವರ್ಣ ಕಳಶ ಎಂಬ ಗ್ರಹಿಕೆಯ ನೆಲೆಯಲ್ಲಿ ಆರಾಧನಾ ರಚಿತವಾಗಿದೆ. 40 ಅಧ್ಯಾಯಗಳಿರುವ ಈ ಗ್ರಂಥದ 35ನೆಯದರ ಹೆಸರು ಕವಚಾಧಿಕಾರ. ನಾಲ್ಕು ಬಗೆಯ ಅಟ್ಟುಳಿ (ಉಪ್ಸರ್ಗ) ಸಹಿಸಿ ನಿಧನರಾದ ಕೇವಲಿಗಳ ಕಥೆಗಳು ವಡ್ಡಾರಾಧನೆಯಲ್ಲಿವೆ. ಅದರಿಂದಲೇ ವಡ್ಡಾರಾಧನೆಗೆ ‘ಉಪಸರ್ಗ ಕೇವಲಿಗಳ ಕಥ’ ಎಂಬ ಅಡ್ಡ ಹೆಸರು ಬಂದಿರುವುದು. 19 ಕಥೆಗಳ ನಾಯಕರೆಲ್ಲ ಮಹಾಪುರುಷರು, ಅದರಿಂದಾಗಿ ಮಹಾಪುರುಷರ್ಕಳ ಕಥೆಗಳು ಎಂಬ ಸೂಚನೆ ಬಂದಿದೆ. ಆರಾಧನಾದಲ್ಲಿ 157ಕ್ಕೂ ಮಿಕ್ಕ ಕಥಾ ಕೋಶಗಳ ತಾಯಿ. ಸಂಸ್ಕೃತ ಮತ್ತು ಪ್ರಾಕೃತ ಆರಾಧನಾಕಥಾಕೋಶಗಳಲ್ಲಿ ಹೆಚ್ಚು ಕಥೆಗಳಿವೆ. ಕನ್ನಡ ವಡ್ಡಾರಾಧನೆ ಕವಚಾಧಿ ಕಾರವನ್ನು ಮಾತ್ರ ಅವಲಂಬಿಸಿ ಅಲ್ಲಿ ಬರುವ 19 ಕಥೆಗಳನ್ನು ಕೊಟ್ಟಿದೆ.

ಆರಾಧನಾ ಗ್ರಂಥಪೂರ್ವಾಚಾರ್ಯನಿಬದ್ಧ ರಚನೆ. ಆಗಮಗ್ರಂಥಗಳಿಗೆ ತೋರುವ ಮನ್ನಣೆ ಇದಕ್ಕೂ ಸಂದಿರುವುದರಿಂದ *ಭಗವತೀ ಆರಾಧನಾ* ಎಂಬ ಹೆಸರುಂಟು. ಇದು ಮೂಲ ಆಕರ ಸ್ವರೂಪದ ಕೃತಿಯಾದುದರಿಂದ ಮೂಲಾರಾಧನಾ ಎಂದೂ ಬೃಹತ್ ಪ್ರಮಾಣದ ಕೃತಿಯಾದುದರಿಂದ ಬೃಹದಾರಾಧನಾ ಎಂದೂ ಬೇರೆ ಬೇರೆ ಹೆಸರುಗಳಾದುವು. ಈ ವಿವಿಧ ಹೆಸರುಗಳಲ್ಲಿ ಒಂದಾದ ಬೇಹದಾರಾಧನಾ ಎಂಬುದು ಅಖಂಡವಾಗಿ ತದ್ಭವಗೊಂಡು ಪೈಶಾಚಿಪ್ರಾಕೃತ ಭಾಷೆಯಲ್ಲಿ ಬರೆದ ಬೃಹತ್ಕಥಾ ಎಂಬುದರ ಪ್ರಾಕೃತರೂಪ ವಡ್ಡಕಥಾ. ಗಂಗವಂಶದ ದುರ್ವಿನೀತರಾಜನಿಗೆ ವಡ್ಡಕಥಾ ತಿಳಿದಿತ್ತು ಪ್ರಾಕೃತ ಆರಾಧನಾ ಗ್ರಂಥದ ಉಪಾದೇಯತೆ, ಮಾನ್ಯತೆ ಎಷ್ಟೆಂದರೆ ವ್ಯಾಖ್ಯಾನಗಳು ರಚಿತವಾಗಿವೆ. ಅಪರಾಜಿತ ಸೂರಿಯ ವಿಜಯೊದಯಾ ವ್ಯಾಖ್ಯಾನ ಆಶಾಧರ ಸೂರಿಯ ಮೂಲಾರಾಧನಾದರ್ಪಣ ಮೊದಲಾದ ಟೀಕೆಗಳಿವೆ. ವಡ್ಡಾರಾಧನೆಯೂ ಇಂತಹದೊಂದು ವ್ಯಾಖ್ಯಾನ. ವಾಸ್ತವವಾಗಿ ವಡ್ಡರಾಧನೆ ಎಂಬುದು ಇದರ ಮೂಲ ಹೆಸರಲ್ಲ. ಆರಾಧನಾ *ಕರ್ಣಾಟಕೀಕಾ* ಎಂಬುದು ಕನ್ನಡಕೃತಿಕಾರ ಇಟ್ಟಿದ್ದ ಹೆಸರು. ಅಂದರೆ ಆರಾಧನಾಟೀಕಾ ಗ್ರಂಥಗಳ ಸಾಲಿಗೆ ಸೇರಿದ ಕನ್ನಡಟೀಕೆ.

ಕಥೆಗಳು ಟೀಕಾಗ್ರಂಥಗಳಲ್ಲಿ ಅಂತರ್ಗತವಾಗಿ ಬಂದಿವೆ. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಇಂತಹ ಕಥಾಕೋಶಗಳಿವೆ. ಹರಿಷೇಣನ ಬೃಹತ್ಕಥಾಕೋಶ, ಪ್ರಭಾಚಂದ್ರನ ಕಥಾಕೋಶಗಳು ಸಂಸ್ಕೃತದಲ್ಲಿವೆ. ಶ್ರೀ ಚಂದ್ರನ ಕಹಕೋಸು (ಕಥಾಕೋಶ) ಪ್ರಾಕೃತದಲ್ಲಿದೆ. ಕನ್ನಡ ವಡ್ಡಾರಾಧನೆ ಈ ಬಗೆಯ ಕಥಾಕೋಶ. ವಡ್ಡಾರಾಧನೆಗೆ ಮೂಲ ಆಕರ ಹಾಗೂ ನೇರ ಆಕರ ಬೃಹದಾರಾಧನಾ ಗ್ರಂಥ. ಬೃಹದಾರಾಧನಾ ಎಂಬ ಹೆಸರು ವಡ್ಡರಾಧನಾ(ನೆ) ಆಗಿದೆ.

■

# ವಡ್ಡಾರಾಧನೆಯ ಹೆಸರು – ಮರುಪರಿಶೀಲನೆ

❑ ಸೀತಾರಾಮ ಜಾಗೀರ್‌ದಾರ್
'ಕಲ್ಪ', 406/B.I
3ನೇ ಮುಖ್ಯರಸ್ತೆ,
7ನೇ ಅಡ್ಡರಸ್ತೆ, ಸರಸ್ವತೀಪುರಂ
ಮೈಸೂರು–570009

ಪ್ರಜಾವಾಣಿ ಭಾನುವಾರ ಜುಲೈ 17, 2016ರ 'ಮುಕ್ತಛಂದ' ಸಾಪ್ತಾಹಿಕ ವಿಭಾಗದಲ್ಲಿ (ಪು.5) ಬಿ. ರಾಜಶೇಖರಪ್ಪ ಎಂಬ ವಿದ್ವಾಂಸರು ವಡ್ಡಾರಾಧನೆ ಎಂಬ ಹೆಸರು ವರ್ಧಮಾನ ತೀರ್ಥಂಕರನ ಹೆಸರಿನಲ್ಲಿಯ್ಯೆ ಕೀಲಿಕೈ ಇದೆ ಮತ್ತು "ವರ್ಧಮಾನಾರಾಧನೆ", "ವಡ್ಡಮಾಣಾರಾಧನೆ" ಎಂದು ಹೆಸರಿರಬೇಕು. ಅದೇ ಆಮೇಲೆ ಸಂಕ್ಷೇಪಗೊಂಡು 'ವಡ್ಡಾರಾಧನೆ' ಆಗಿರಬೇಕು ಎಂದು ಮುಂತಾಗಿ ವಿಸ್ತಾರವಾಗಿ ಬರೆದಿದ್ದಾರೆ.

ವಡ್ಡಾರಾಧನೆಯನ್ನು ಗ್ರಂಥಸ್ವರೂಪದಲ್ಲಿ ಮೊದಲು ಪ್ರಕಟಿಸಿದವರು ದಿವಂಗತ ಡಿ.ಎಲ್. ನರಸಿಂಹಾಚಾರ್ ಅವರು. ಇವರು ಸಾಕಷ್ಟು ವಿಸ್ತೃತ ಮುನ್ನುಡಿ(ಪೀಠಿಕೆ)ಯೊಂದಿಗೆ, ಅನುಬಂಧ ಗಳೊಂದಿಗೆ ಮತ್ತೆ ಟಿಪ್ಪಣಿಗಳೊಂದಿಗೆ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದಕ್ಕೆ ಕ, ಖ, ಗ, ಘ, ಚ ಮತ್ತು ಛ ಎಂಬ ಸಂಕೇತಗಳನ್ನು ಕೊಟ್ಟು 'ಹಸ್ತ'ಪ್ರತಿಗಳನ್ನು ಸಂಪಾದನೆಗೆ ಬಳಸಿದ್ದಾರೆ. ತಾತ್ಪೂರ್ತಿಕವಾಗಿ ಇದರ ಕಾಲ ಕ್ರಿ.ಶ. 920 ಎಂದು ತಿಳಿಸಿದ್ದಾರೆ. ಈ ಕೃತಿಯನ್ನು ಕುರಿತು ವಿಶೇಷ ಅಧ್ಯಯನ ಮಾಡಿದ ಮೂರು ಮಹಾ ಪ್ರಬಂಧಗಳು (Doctoral Thesis) ಬಂದಿವೆ: (i) *Vaḍḍārādhana A Study* - B.K. Khaḍabade (ii) ಹಂಪನಾ (iii) ಎಸ್. ದಿನೇಶ ಇವರುಗಳು ತಮ್ಮ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಡಿ.ಎಲ್.ಎನ್. ಅವರ ಕೃತಿಯನ್ನೇ ಆಧರಿಸಿ ಅಷ್ಟು ಉತ್ತಮವಲ್ಲದ ಆವೃತ್ತಿಗಳನ್ನು ಹೊರತಂದಿದ್ದಾರೆ





ಕೆಲವರು. ಅಂತಹ ಒಂದು ಆವೃತ್ತಿಯನ್ನು ಆಧರಿಸಿ ಬಿ. ರಾಜಶೇಖರಪ್ಪನವರು ತಮ್ಮ ಸಂಶೋಧನಾ ಲೇಖನವನ್ನು ಸದ್ಯ ಪ್ರಕಟಿಸಿದ್ದಾರೆ.

ಆ.ನೇ. ಉಪಾಧ್ಯೆ ಅವರು ಬೃಹತ್ಕಥಾಕೋಶವನ್ನು ಪ್ರಕಟಿಸಿದ್ದಾರೆ. ಇದರ ಕರ್ತೃ ಹರಿಷೇಣ ಈ ಕೃತಿಯನ್ನು ಕ್ರಿ.ಶ. 932ರಲ್ಲಿ ಸಮಾಪ್ತಿಗೊಳಿಸಿದ್ದಾನೆ. ಇದಕ್ಕೆ ಅವರು 3 ಹಸ್ತಪ್ರತಿಗಳನ್ನು ಬಳಸಿದ್ದಾರೆ.

ಒಂದೇ ಮೂಲದಿಂದ ಹುಟ್ಟಿದ ಕನ್ನಡ ಕೃತಿ ವಡ್ಡಾರಾಧನೆ ಹಾಗೂ ಬೃಹತ್ಕಥಾಕೋಶ ಇವು ದಕ್ಷಿಣ ಭಾರತದ ವ್ಯಕ್ತಿಗಳಿಂದಲೇ ರಚನೆಗೊಂಡಿವೆ. ಹರಿಷೇಣ ಪುನ್ನಾಟ ಸಂಘ(ಕಿತ್ತೂರ ಶ್ರೀಸಂಘ)ಕ್ಕೆ ಸೇರಿದ ವ್ಯಕ್ತಿ. ಪುನ್ನಾಡು–6000ದ ರಾಜಧಾನಿಯು ಹೆಗ್ಗಡದೇವನಕೋಟೆ ತಾಲ್ಲೂಕಿನ ಕಿತ್ತೂರು. ವಡ್ಡಾರಾಧನೆ ಗ್ರಂಥ ಶ್ರೀಕ್ಷೇತ್ರ ಶ್ರವಣ ಬೆಳ್ಗೊಳದ ಪರಿಸರದಲ್ಲೇ ರಚನೆಗೊಂಡಿದೆ. ಈ ಎರಡೂ ಕೃತಿಗೆ ಆಕರ ಶಿವಕೋಟ್ಯಾಚಾರ್ಯನ ಭಗವತೀ ಆರಾಧನಾ ಎಂಬ ಪ್ರಾಕೃತ ಕೃತಿ. ಈ ಪ್ರಾಕೃತ ಕೃತಿಯಲ್ಲಿ ಬಂದಿರುವ 19 ಗಾಹೆಗಳು. (ಭ. ಆರಾಧನಾ ಗಾಹೆಗಳು 1539–1557=19) ಈ 19 ಕಥೆಗಳಿಗೆ ಮೂಲ ಆಕರಗಳು ಸುಕುಮಾರ ಸ್ವಾಮಿಯ ಕಥೆಗೆ ಆಕರ:

| | |
|---|---|
| **ಭಲ್ಲುಕ್ಕಿಯೇಣಣಿಚ್ಚಂ** | **(4+4+4=12)** |
| **ಖಜ್ಜಂತೋ ಘೋರವೇದಣಕ್ಕೋಪಿ** | **(4+4+4+4+2/=18)** |
| **ಆರಾಧಣಂ ಸವಣ್ಣೋ** | **(4+4+4=12)** |
| **ಝಾಣೇಣ ಆವಂತಿ ಸುಕುಮಾರೋ ॥** | **(4+4+1+4+2/=15)** |

ಭಗವತಿ ಆರಾಧನೆ–ಪದ್ಯ : 1539; ಐವತ್ತೇಳು ಅಕ್ಷರದ ಆರ್ಯಾಛಂದದ ಈ ಪದ್ಯ ವಡ್ಡಾರಾಧನೆಯಲ್ಲಿ ಸುಮಾರು 31 ಪುಟದ ಬೃಹತ್ಕಥೆ ಆಗಿದೆ. ಹೀಗೆಯೇ ಇನ್ನೂ 18 ಕಥೆಗಳು. ಆರಾಧನಾ ಪದ್ಯದ ಕಥೆ: ಆವಂತಿ ಎಂಬ ಊರಿನಲ್ಲಿ ಇದ್ದ ಸುಕುಮಾರಸ್ವಾಮಿ ಎಂಬ ವ್ಯಕ್ತಿ ಮುನಿಗಳ ಪ್ರವಚನ ಪ್ರಭಾವದಿಂದ ಪ್ರಾಯೋಪಗಮನ ವಿಧಾನದಿಂದ (=ಸಲ್ಲೇಹಣ>ಸಲ್ಲೇಖನ) ಆ ಊರ ಮಹಾಕಾಳ ಎಂಬ ಶ್ಮಶಾನದಲ್ಲಿ ಮೃತಕಸೆಜ್ಜೆಯ ಶುಕ್ಲಧ್ಯಾನದಿಂದ ಮಲಗುತ್ತಾನೆ. ಆತನ ಪೂರ್ವಜನ್ಮದ ವೈರಿಯಾದ ಅತ್ತಿಗೆ ತನ್ನ ನಾಲ್ಕು ಮಕ್ಕಳು ನರಿಯ ಜನ್ಮತಳೆದವರು ಅಲ್ಲಿಗೆ ಬಂದು ಆ ತಪಸ್ವಿಯ ದೇಹವನ್ನು ಮೂರುದಿವಸ ತಿನ್ನುತ್ತವೆ. ಎಷ್ಟೇ ಘೋರವಾದ ನೋವಾದರೂ ಅದನ್ನು ಸಹಿಸಿ ಆ ಸುಕುಮಾರಸ್ವಾಮಿ ಆರಾಧನ ವ್ರತವನ್ನು ಧ್ಯಾನದಿಂದ ಪೂರೈಸಿ ರತ್ನತ್ರಯವನ್ನು ಸಾಧಿಸಿ ಸಯಸತ್ತಮ (ಸದಾಕಾಲ ಅನ್ನಾದಿದಾನವನ್ನು ನೀಡುವ) ದೇವನಾಗಿ ಹುಟ್ಟುತ್ತಾನೆ. ಏನೇ ಕಷ್ಟಗಳನ್ನು ಕಿಂಚಿದ್ ಮಿಸುಗದೇ ಸಹಿಸಿ ಸಾವನ್ನು ಅಪ್ಪಿ ಮುಂದಿನ ಜನ್ಮಕ್ಕೆ ಉತ್ತಮ ಸ್ಥಾನವನ್ನು – ಸ್ಥಳವನ್ನು ಸಂಪಾದಿಸುವುದು ಈ ಕಥೆಗಳ ಆಶಯ (ಹುನ್ನಾರ).

ರಾಜಶೇಖರಪ್ಪನವರು ತಮ್ಮ ವಾದಕ್ಕೆ ತಳಹದಿಯಾಗಿ ಕೆಳಗಿನ ಮೂರು ಪದ್ಯಗಳನ್ನು ಆಧರಿಸಿದ್ದಾರೆ:

(i) ನಮಃ ಶ್ರೀವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾದರ್ಪಣಾಯತೇ ॥

(ii) ತಿಲೋಯ ಸಬ್ಬಜೀವಾಣಂ ಹಿಯಂ ಧಮ್ಮೋವದೇಸಿಣಂ
ವಡ್ಢಮಾಣಂ ಮಹಾವೀರಂ ವಂದಿತ್ತಾಸಬ್ಬವೇಇಣಂ ॥

(iii) ಯೇಸ ಸುರಾಸುರಮಣುಸಿಂ
ದವಂದಿಯಂ ದೋಢಘಾಯಿ ಕಂಮಮಳಂ ।
ಪಣಮಾಮಿವಡ್ಡಮಾಣಂ
ತಿಚ್ಛಂದಯಸ್ಸ ಕತ್ತಾರಂ ॥

ವಾಸ್ತವದಲ್ಲಿ ಈ ಮೂರೂ ಪದ್ಯಗಳು ವಡ್ಡಾರಾಧನೆಕಾರ ಆ ಕೃತಿಯ ರಚನೆಯಲ್ಲಿ ಬರೆದುವಲ್ಲ. ಮತ್ತೆ ಮೊದಲನೆಯ ಪದ್ಯವು ಎಲ್ಲ ಪ್ರತಿಗಳಲ್ಲಿ ಇಲ್ಲ. ಇದು ಸಮನ್ತಭದ್ರರ ಕೃತಿ *ರತ್ನಕರಂಡಕ ಶ್ರಾವಕಾಚಾರ* ಎಂಬುದರ ನಾಂದೀಪದ್ಯ. ಹಾಗೆಯೇ ಎರಡನೆಯ ಪದ್ಯವು ಕುಂದಕುಂದರ *ಚಾರಿತ್ರ ಭಕ್ತಿ* ಎಂಬುದರಲ್ಲಿಯದು ಮತ್ತು 3ನೆಯದು ಅದೇ ಕುಂದಕುಂದರ *ಪ್ರವಚನಸಾರ* ಕೃತಿಯದ್ದು ಎಂಬುದನ್ನು ಡಿ.ಎಲ್.ಎನ್., ಹಂಪನಾ ಹಾಗೂ ಆ.ನೇ. ಉಪಾಧ್ಯೆ ಮಹೋದಯರು ತೋರಿಸಿಕೊಟ್ಟಿದ್ದಾರೆ. ವಡ್ಡಾರಾಧನೆಯ ಮೂಲಪ್ರತಿಯಲ್ಲಿ ಇವು ಇರಲಿಕ್ಕೂ ಇಲ್ಲ. ಆಗ ವರ್ಧಮಾನ ತೀರ್ಥಂಕರ ಶಬ್ದದಲ್ಲಿಯ ವಧ್ದಮಾನ > ವಡ್ಢಮಾಣ ಆಗಿದೆ. ಕನ್ನಡ ಕೃತಿಯ ಹೆಸರಾಗಿದೆ ಎಂದು ಹೇಳಲು ಬಾರದು. ರಾಜಶೇಖರಪ್ಪನವರ ವಡ್ಡಾರಾಧನೆಯಲ್ಲಿ ಇರುವುದು 'ವಡ್ಡ' ಮತ್ತು 'ವರ್ಧಮಾನ' ಇದು 'ವಡ್ಢ' ಆಗಿದೆ ಇಲ್ಲಿ; ಅಲ್ಪಪ್ರಾಣ ಹಾಗೂ ಮಹಾಪ್ರಾಣಗಳ ಅಸ್ತಿತ್ವವನ್ನು ಮರೆತಿದ್ದಾರೆ. 'ಬೃಹತ್' ಇದು 'ವಡ್ಡ' ಆಗಿದೆ–ಆಗುತ್ತದೆ. ಮತ್ತೆ 'ವರ್ಧಮಾನ' ಇದು 'ವಡ್ಢಮಾಣ' ಆಗಿದೆ. 'ವಡ್ಡ' ಹಾಗೂ 'ವಡ್ಢ' ಇವುಗಳು ಬೇರೆ ಬೇರೆಯ; ಭಿನ್ನ ಭಿನ್ನ ಶಬ್ದಗಳು.

ಇದಕ್ಕೂ ಮಹತ್ವದ ಸಂಗತಿ ಎಂದರೆ ಜೈನಧರ್ಮ ವರ್ಧಮಾನ ತೀರ್ಥಂಕರರು ಹುಟ್ಟುವದಕ್ಕಿಂತ ಮುಂಚೆ ಇದ್ದಿತು. ಸಮ್ಮೇದಶಿಖರ (Parashill) ಇದು ಜೈನಧರ್ಮೀಯರಿಗೆ ಬಹಳ ಮಹತ್ವದ ತೀರ್ಥಕ್ಷೇತ್ರ. ಇಲ್ಲಿ ಇಪ್ಪತ್ತು ಜನ ತೀರ್ಥಂಕರರು ನಿರ್ವಾಣವನ್ನು ಪಡೆದಿದ್ದಾರೆ. (ಅನುಬಂಧವನ್ನು ನೋಡಿ) ಪಾರ್ಶ್ವನಾಥ ತೀರ್ಥಂಕರರು ಸು. 250 ವರ್ಷ ಮೊದಲು ಇದ್ದ ಐತಿಹಾಸಿಕ ವ್ಯಕ್ತಿ ಎಂಬುದು ಈಗ ಎಲ್ಲರೂ ಒಪ್ಪಿರುವ ಸಂಗತಿ. ಅವರೂ 'ವರ್ಧಮಾನ ತೀರ್ಥಂಕರರ', 'ವಡ್ಢಮಾಣ' (?) ಆರಾಧನೆಯನ್ನು ಆಚರಿಸಿದರು ಎಂದು ಹೇಳಬೇಕೆ? ಅವರು ಹುಟ್ಟುವದಕ್ಕಿಂತ ಮುಂಚೆ ಆ ಹೆಸರು ಹೇಗೆ ಬರಲು ಸಾಧ್ಯ? 'ಬೃಹತ್ > ವಡ್ಡ + ಆರಾಧನೆ = ವೊಡ್ಡಾರಾಧನೆ' ಇದು ಪರಂಪರೆ. ರಾಜಶೇಖರಪ್ಪನವರ ನಿರೂಪಣೆಯೆ ಅವರು ಸೂಚಿಸಿದಂತೆ ಪಂಡಿತರ ನಿಷ್ಪತ್ತಿ. ಅದು ಸರಿಯಲ್ಲ, ಗುಣಾಢ್ಯನ ಬೃಹತ್ಕಥೆ 'ವಡ್ಡಕಥೆ' ಆದುದನ್ನೂ ಇಲ್ಲಿ ಗಮನದಲ್ಲಿಟ್ಟುಕೊಂಡಿದ್ದೇನೆ.





## ವಡ್ಡಾರಾಧನೆ – ಸಾಂಸ್ಕೃತಿಕ ಅನುಸಂಧಾನ

ವಡ್ಡಾರಾಧನೆ ಕನ್ನಡ ಸಾಹಿತ್ಯ ಸಮುದ್ರದಲ್ಲಿ ಒಂದು ವಿಶಿಷ್ಟ ಕೃತಿ. ಅದು ಈಗ ಸಾಹಿತ್ಯ ಕೃತಿ ಎಂದು ಪರಿಗಣಿಸಲ್ಪಡುತ್ತಿದ್ದರೂ ವಾಸ್ತವದಲ್ಲಿ ಅದು ಒಂದು ಸಾಂಸ್ಕೃತಿಕ ಕೃತಿ. ಸಾಹಿತ್ಯ ಸಂಸ್ಕೃತಿಯೊಂದಿಗೆ ಅನುಸಂಧಾನಗೊಂಡಿದೆ. ಅಂತೆಯೇ ಈಗ ಅದು ಪುನಃ ಪರಿಶೀಲನೆಗೆ ಒಳಗಾಗಬೇಕಾದ ಮಹತ್ವದ ಕೃತಿ. ಜೈನ ಜನಾಂಗದಲ್ಲಿ ಕೊನೆಯ ಹಂತದಲ್ಲಿ ಜೈನರು ಮರಣಕ್ಕೆ ಸ್ವೀಕರಿಸುವ ವ್ರತದ ಎಂದರೆ ಸಲ್ಲೇಹಣ (>ಸಲ್ಲೇಖನ) ವ್ರತಕ್ಕೆ ಸಂಬಂಧಿಸಿದ ಕೃತಿ–19 ಕಥೆಗಳು. 'ವಡ್ಡಾರಾಧನೆಯ ಕವಚ' ಎಂದೂ ಈ ಅರ್ಥದಲ್ಲೇ ಕರೆಯಲ್ಪಟ್ಟಿದೆ– ಕೆಲವು ಪ್ರತಿಗಳಲ್ಲಿ. ಅದು ಕೆ.ಬಿ. ಪಾಠಕ ಅವರಿಂದ ಮೊದಲು ಲೋಕಕ್ಕೆ ಪರಿಚಯವಾಯಿತು. ಗ್ರಂಥಸ್ವರೂಪದಲ್ಲಿ ಅಲ್ಲ ಪಾಳಿಧ್ವಜ ಎಂಬ ಪದಪುಂಜದ ವಿವರಣೆಯ ಆಕರ ಗ್ರಂಥರೂಪದಲ್ಲಿ, ಆಗ ಅದರ ಹೆಸರು ಆ ಕಟ್ಟಿನ ಕಟ್ಟಿಗೆಯ ಹಲಗೆಯ ಮೇಲೆ ಬರೆದ *ಉಪಸರ್ಗ್ಗ ಕೇವಲಿಗಳ ಕಥೆ* ಕಾಲ ಸು. ಕ್ರಿ.ಶ. 1180, ಇದರ ಕರ್ತೃ ರೇವಕೋಟಾಚಾರ್ಯ್ಯ. ಇದನ್ನೇ ಕವಿಚರಿತೆಯ ಒಂದನೆಯ ಸಂಪುಟದಲ್ಲಿ ನಮೂದಿಸಲಾಗಿದೆ.[1] ಇದರ ಮೂರು ಕಥೆಗಳು 1931ರಲ್ಲಿ *ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ*ಯಲ್ಲಿ ಡಿ.ಎಲ್.ಎನ್. ಅವರಿಂದ ಪ್ರಕಟಿಸಲಾಯಿತು. ಅವರು ಪೂರ್ಣಗ್ರಂಥವನ್ನು 1949ರಲ್ಲಿ ಪ್ರಕಟಿಸಿದ್ದಾರೆ. ತನ್ಮಧ್ಯೆ 1949ಕ್ಕೂ ಮುಂಚೆ ಆ.ನೇ. ಉಪಾಧ್ಯೆ ಅವರಿಂದ ಹರಿಷೇಣನ *ಬೃಹತ್ಕಥಾಕೋಶ* ಎಂಬ ಕೃತಿಯು ವಿಸ್ತಾರವಾದ, ಕೂಲಂಕಷರೂಪದ ಪ್ರೌಢ ಕೃತಿ ಪ್ರಕಟವಾಯಿತು. ಅದೂ ವಡ್ಡಾರಾಧನೆಯ ಕಥೆಗಳನ್ನೇ ಒಳಗೊಂಡಿದೆ. ಅವರು ಕನ್ನಡ ಕೃತಿ ಕುರಿತು ಒಂದು ದೊಡ್ಡ ಲೇಖನವನ್ನು *ಪ್ರಬುದ್ಧ ಕರ್ಣಾಟಕ* ಪತ್ರಿಕೆಯಲ್ಲಿ ಬರೆದಿದ್ದಾರೆ.[3] ['ವಡ್ಡಾರಾಧನೆಯೆಂಬ ಹಳಗನ್ನಡ ಗ್ರಂಥ'; ಸಂಪುಟ–24, ಸಂಚಿಕೆ–2, ಪು. 93–109.]

ವಡ್ಡಾರಾಧನೆ ಗ್ರಂಥದ ಹೆಸರು, ಕರ್ತೃ, ಆತನ ಕಾಲ ಹಾಗೂ ದೇಶ ಎಲ್ಲವುಗಳೂ ಸದ್ಯವಾದಗ್ರಸ್ತ ಸಂಗತಿಗಳು.

(i) ದೇಶದ ಬಗೆಗೆ ಡಿ.ಎಲ್.ಎನ್. ಕೋಗಳಿ ಇರಬೇಕೆಂದು ಊಹಿಸಿದ್ದಾರೆ.[4] ಕೋಗಳಿ ಬಳ್ಳಾರಿ ಜಿಲ್ಲೆಯಲ್ಲಿ ಇದೆ.

(ii) ಹಂಪನಾ ಬೀದರ ಜಿಲ್ಲೆಯ 'ಹಳ್ಳಿಖೇಡ' ಎಂದು ಪ್ರತಿಪಾದಿಸಿದ್ದಾರೆ.[5] ಅಲ್ಲೆ ಇನ್ನೊಂದೆಡೆ ಮಖಳೇಡ ಬ್ರಾಜಿಷ್ಣುವಿನ ಸ್ಥಳ ಎಂದಿದ್ದಾರೆ.[6]

ಗ್ರಂಥದಲ್ಲಿ ಕೃತಿಕಾರ ಎಲ್ಲಿಯೂ ತನ್ನ ಬಗ್ಗೆ ಹೇಳಿಲ್ಲ. ಕೃತಿಯಲ್ಲಿ ಬಂದ ಸ್ಥಳಗಳನ್ನು ಕುರಿತು ಹೇಳುವುದಾದರೆ ಅಲ್ಲಿ ಬಂದಿರುವ ಯಾವುದಾದರೂ ಸ್ಥಳದವನಾಗಿರಬಹುದು. ನೋಡಿ–

(ಅ) ಭದ್ರಬಾಹು ಭಟಾರರ ಕಥೆಯಲ್ಲಿ ವೀಳ್ಯವನ್ನು ಸೇವಿಸುವಾಗ ಶಿವಮೊಗ್ಗ ಜಿಲ್ಲೆಯ ನೆಲ್ಲವತ್ತಿಗೆ ಎಂಬ ಗ್ರಾಮದ ಉಲ್ಲೇಖವಿದೆ. ಅಲ್ಲಿನ ಅಡಕೆ ಈಗಲೂ ಪ್ರಸಿದ್ಧ.

ಮೂಲದಲ್ಲಿ ಎಲ್ಲೂ ಕಾಣದ (ಪ್ರಾಕೃತ ಆಕರಗಳು) ಈ ನೆಲವತ್ತಿಗೆ ಕವಿಯ ಊರು ಏಕಾಗಿರಬಾರದು?

(ಆ) 19ನೇ ಕಥೆ "ವೃಷಭಸೇನರೆಂಬ ರಿಸಿಯರ ಕಥೆ" ನಡೆಯುವುದೇ ಪ್ರಾಚೀನ ಕನ್ನಡ ದೇಶದ ಊರೊಂದರಲ್ಲಿ:

"ಈ ಜಂಬೂದ್ವೀಪ ಭರತ ಕ್ಷೇತ್ರದೊಳ್ ದಕ್ಷಿಣಾ ಪಥದೊಳ್ ಕರಹಟಮೆಂಬುದು ನಾಡಲ್ಲಿ ಕುಣಾಳಮೆಂಬ ಪೊಟಿಲದನಾಳ್ವೊಂ ಧನದನೆಂಬೂನರಸನ್..." ಇತ್ಯಾದಿ. ಈ 'ಕರಹಟ' ಈಗಿನ ಮಹಾರಾಷ್ಟ್ರದ 'ಕರಾಡ್' ಪುಣೆ–ಬೆಂಗಳೂರು ಹೆದ್ದಾರಿಯಲ್ಲಿನ ಒಂದೂರು. ಪೂರ್ವದಲ್ಲಿ ಇದೂ ಶಿಲಾಹಾರರು ಹಾಗೂ ಸಿಂಧರಿಗೆ ಸೇರಿದ ನಾಡಾಗಿತ್ತು. 'ಕುಣಾಳ' ಇದು ಈಗಿನ 'ಪನ್ಹಾಳ' ಇದಕ್ಕೆ ಇನ್ನೊಂದು ಹೆಸರು 'ಕಿಳಿಕಿಳಿ ದುರ್ಗ' ಎಂದು ವಿ.ವಿ. ಮಿರಾಸೆ ಅವರು ಶಿಲಾಹಾರರರ ಶಾಸನ ಸಂಪುಟದ ಪೀಠಿಕೆಯಲ್ಲಿ ದಾಖಲಿಸಿದ್ದಾರೆ. ಇದು ಶಿಲಾಹಾರರ ರಾಜಧಾನಿ ಆಗಿತ್ತು. ಈ ಊರಿನಲ್ಲೇ ನಮ್ಮ ಕನ್ನಡ ಕವಿ ಕರ್ಣಪಾರ್ಯ್ಯ ಇದ್ದನೆಂದು ಅವನ ನೇಮಿನಾಥ ಪುರಾಣಂ ಕಾವ್ಯದಿಂದ ತಿಳಿದುಬರುತ್ತದೆ.[7]

ಕರ್ನಾಟಕದ ವ್ಯಾಪ್ತಿ ಕಾವೇರೀ ತೀರದಿಂದ ಗೋದಾವರಿ (ನಾಸಿಕ ಪ್ರಾಂತದ) ತೀರದವರೆಗೆ. ಪ್ರಾಚೀನ ಕರ್ನಾಟಕದ ಈ ಊರಿನಲ್ಲಿಯೂ ವಡ್ಡಾರಾಧನೆಯ ಕರ್ತೃ ಇದ್ದಿರಬಹುದು.

ವಾಸ್ತವದಲ್ಲಿ ವಡ್ಡಾರಾಧನೆಯು ಹುಟ್ಟಿದ ಪರಿಸರ ಮುಖ್ಯ. ಏಕೆಂದರೆ ಈ ಕಥೆಗಳನ್ನು ಸಲ್ಲೇಹಣ ವ್ರತವನ್ನು ಸ್ವೀಕರಿಸಿ ಮರಣಾವಸ್ಥೆಯಲ್ಲಿ ಇರುವ ವ್ಯಕ್ತಿಗೆ ಹೇಳಲ್ಪಡುತ್ತವೆ.

| | |
|---|---|
| **ಣಮೋ ಅರಿಹಂತಾಣಂ** | ಅ |
| **ಣಮೋ ಸಿದ್ಧಾಣಂ** | ಸಿ |
| **ಣಮೋ ಆಹರಿಯಾಣಂ** | ಆ |
| **ಣಮೋ ಉವಾಜ್ಝಾಯಾಣಂ** | ಉ |
| **ಣಮೋ ಲೊಏ ಸವ್ವಸಾಧೂಣಂ** | ಸಾ |

ಪಂಚಪರಮೇಷ್ಠಿಗಳ ವಂದನೆ ಉಚ್ಚಾರ ಮಾಡುತ್ತಾ ಮಾಡುತ್ತಾ ದೇಹ ಕ್ಷೀಣಿಸುತ್ತ ಕೊನೆಗೆ ಉಸಿರು ನಿಲ್ಲುವ ಸಮಯಕ್ಕೆ 'ಅಸಿಆಉಸಾ' ಇಷ್ಟೇ ಆಗಿ ಇದೂ ನಿಲ್ಲುತ್ತದೆ. ಜೀವನಿರ್ವ್ವಾಣ ಪಡೆಯುತ್ತದೆ– ಇದು ಜೈನ ಸಂಸ್ಕೃತಿ. ಈ ಸಂಸ್ಕೃತಿ ವ್ಯವಹಾರ ನಡೆಯುವಲ್ಲಿ ಮುನಿಗಳ ಬಳಕೆಗಾಗಿ ರಚಿಸಿದ ರಚನೆ ವಡ್ಡಾರಾಧನೆ. ಕಾರಣ ಅದು ಶ್ರವಣ ಬೆಳ್ಗೊಳದ ಆಸುಪಾಸಿನಲ್ಲಿ ಹುಟ್ಟಿದೆ, ವಿಶಿಷ್ಟ ಕಾರ್ಯದ ಬಳಕೆಗಾಗಿ.





## ಅನುಬಂಧ

| ಕ್ರ.ಸಂ. | ತೀರ್ಥಂಕರರು | ಲಾಂಛನ | ತಂದೆ | ತಾಯಿ | ಜನ್ಮಸ್ಥಳ | ನಿರ್ವಾಣ ಸ್ಥಳ |
|---|---|---|---|---|---|---|
| 1. | ವೃಷಭ (ಆದಿ)ನಾಥ | ಎತ್ತು | ನಾಭಿರಾಜ | ಮರುದೇವಿ | ಅಯೋಧ್ಯೆ (ವಿನೀತನಗರ) | ಅಷ್ಟಾಪದ ಕೈಲಾಸ |
| 2. | ಅಜಿನಾಥ | ಆನೆ | ಜಿತಶತ್ರು | ವಿಜಯಾದೇವಿ | " | ಸಮ್ಮೇದ ಶಿಖರ (ಪಾರ್ಶ್ವನಾಥಗಿರಿ) |
| 3. | ಸಂಭವನಾಥ | ಕುದುರೆ | ಜಿತಾರಿ | ಸೇನಾದೇವಿ | ಶ್ರಾವಸ್ತಿ | ಸಮ್ಮೇದ ಶಿಖರ |
| 4. | ಅಭಿನಂದನನಾಥ | ಮಂಗ | ಸ್ವಯಂವರ | ಸಿದ್ಧಾರ್ಥಾದೇವಿ | ಅಯೋಧ್ಯೆ | " |
| 5. | ಸುಮತಿನಾಥ | ಚಕ್ರವಾಕ್ (ದಿ) ಕ್ರೌಂಚವಧೆ (ಈ) | ಮೇಘಪ್ರಭ | ಸುಮಂಗಲಾ | " | " |
| 6. | ಪದ್ಮಪ್ರಭ | ಕಮಲ (ಕೆಂಪು) | ಧರಣ | ಸುಶೀಮಾದೇವಿ | ಕೌಶಾಂಬಿ | " |
| 7. | ಸುಪಾರ್ಶ್ವನಾಥ | ನಂದ್ಯಾವರ್ತ (ದಿ) ಸ್ವಸ್ತಿಕ (ಶ್ವೇ) | ಸುಪ್ರತಿಷ್ಠ | ಪೃಥಿವೀದೇವಿ | ವಾರಣಾಸಿ | " |
| 8. | ಚಂದ್ರಪ್ರಭನಾಥ | ಅರ್ಧಚಂದ್ರ (ಚಂದ್ರ) | ಮಹಾಸೇನ | ಸಲಕ್ಷಣಾದೇವಿ | ಚಂದ್ರಪುರಿ | " |
| 9. | ಪುಷ್ಪದಂತ (ದಿ) ಸುವಿಧಿನಾಥ (ಶ್ವೇ) | ಏಡಿ (ದಿ) ಮಕರ (ಶ್ವೇ) | ಸುಗ್ರೀವ | ರಾಮಾದೇವಿ | ಕಾಕಂದಿನಗರ | " |
| 10. | ಶ್ರೀತಲನಾಥ | ಕಲ್ಪವೃಕ್ಷ | ದೃಢರಥ | ಸುನಂದಾ | ಭದ್ದಿಲಪುರಿ ಭದ್ರಿಕಾಪುರಿ | " |
| 11. | ಶ್ರೇಯಾಂಸನಾಥ | ಗರುಡ (ದಿ) ಗಂಡಕ/ಗೇಂಡಾ | ವಿಷ್ಣು | ವಿಸುಂದರಿ | ಸಿಂಹಪುಕಿರಿ ಸಿಂಹಪುರ (ಶ್ರೇ) | " |
| 12. | ವಾಸುಪೂಜ್ಯ | ಕೋಣ (ಮಹಿಷ) | ವಸುಪೂಜ್ಯ | ವಿಜಯಾ (ದಿ) ಜಯಾ (ಶ್ವೇ) | ಚಂಪಾಪುರಿ | ಚಂಪಾಪುರಿ |

| | | | | | | |
|---|---|---|---|---|---|---|
| 13. | ವಿಮಲನಾಥ | ಕಾಡಹಂದಿ(ವರಾಹ) | ಕೃತವರ್ಮಾ | ಶ್ಯಾಮಾ | ಕಂಪಿಲಾನಗರ | ಸಮ್ಮೇದ ಶಿಖರ |
| 14. | ಅನಂತನಾಥ | ಕರಡಿ (ಏದ) ಶ್ಯೇನ (ಶ್ವೇ) | ಸಿಂಹಸೇನ | ಸರ್ವ್ವಯಶಾ | ಅಯೋಧ್ಯೆ | ” |
| 15. | ಧರ್ಮ್ಮನಾಥ | ವಜ್ರ | ಭಾನು | ಸುವ್ರತಾದೇವಿ | ರತ್ನಪುರ | ” |
| 16. | ಶಾಂತಿನಾಥ | ಚಿಗರೆ (ಜಿಂಕೆ) | ವಿಶ್ವಸೇನ | ಆಚಿರಾ | ಹಸ್ತಿನಾಪುರ ಗಜಪುರ (ಶ್ವೇ) | ” |
| 17. | ಕುಂಥುನಾಥ | ಕುರಿ | ಸೂರ್ಯ್ಯ | ಸಿರಿದೇವಿ | ” | ” |
| 18. | ಅರನಾಥ | ಮೀನ (ದಿ) ನಂದ್ಯಾವರ್ತ (ಶ್ವೇ) | ಸುದರ್ಶನ | ಮಿತ್ರಾ | ” | ” |
| 19. | ಮಲ್ಲಿನಾಥ (ದಿ) ಮಲ್ಲಿ (ಸ್ತ್ರೀ/ಶ್ವೇ) | ಕುಂಭ | ಕುಂಬ | ರಕ್ಷಿತಾ (ದಿ) ಪ್ರಭಾವತಿ (ಶ್ವೇ) | ಮಿಥಿಲಾಪುರಿ (ದಿ) ಮಥುರಾ (ಶ್ವೇ) | ” |
| 20. | ಮುನಿಸುಪುತ್ರ | ಆನೆ (ವೆ) (ಕಾಸವ) | ಸುಮಿತ್ರ | ಪದ್ಮಾವತೀ | ರಾಜಗೃಹ ಕುಶಗ್ರನಗರ | ” |
| 21. | ನಮಿನಾಥ | ನೀಲಕಮಲ (ದಿ) ಅಶೋಕವೃಕ್ಷ (ಶ್ವೇ) | ವಿಜಯ | ವಪ್ರಾ (ದಿ) ವಿಪ್ರಾ (ಶ್ವೇ) | ಮಿಥಿಲಾಪುರಿ ಮಥುರಾ (ಶ್ವೇ) | ” |
| 22. | ನೇಮಿನಾಥ | ಶಂಖ | ಸಮುದ್ರ ವಿಜಯ | ಶಿವಾದೇವಿ | ಶೌರಿಪುರ (ದಿ) ದ್ವಾರಕಾ (ಶ್ವೇ) | ಗಿರಿನಾರಪರ್ವ್ವತ (ಗುಜರಾತ್) |
| 23. | ಪಾರ್ಶ್ವನಾಥ | ಸರ್ಪ್ಪ | ಅಶ್ವಸೇನ | ವಾಮಾದೇವಿ | ವಾರಣಾಸಿ | ಸಮ್ಮೇದ ಶಿಖರ (ಪಾರ್ಶ್ವನಾಥಗಿರಿ) |
| 24. | ಮಹಾವೀರ–ವರ್ಧಮಾನ | ಸಿಂಹ | ಸಿದ್ಧಾರ್ತ್ಥ | ಪ್ರಿಯಕಾರಿಣಿ ತ್ರಿಶಲಾ | ಕುಂಡಪುರ ಕುಂಡಗ್ರಾಮ (ಶ್ವೇ) | ಪಾವಾಪುರಿ |

**ಟಿಪ್ಪಣಿ:** (i) ಪಾರ್ಶ್ವನಾಥ ತೀರ್ಥಂಕರರು ಸಮ್ಮೇದಶಿ ಖರದಲ್ಲಿ ನಿರ್ವ್ವಾಣ ಹೊಂದಿದ ಮೇಲೆ ಆ ಪರ್ವ್ವತಕ್ಕೆ 'ಪಾರ್ಶ್ವನಾಥಗಿರಿ' 'PARASHILLS' ಎಂಬ ಹೆಸರು ಬಂದಿತು. (ii) ದಿಗಂಬರ ಪಂಥದಲ್ಲಿ ಪುರುಷನಿಗೇಪುರುಷ ಆದ ಮೇಲೆ ಮಾತ್ರ ಮುಕ್ತಿ.





## ಕೊನೆಟಿಪ್ಪಣಿ


1. (i) ಕ. *ಕವಿಚರಿತೆ ಸಂಪುಟ–1,* ಪು. 313 ಇತ್ಯಾದಿ (1961)

   (i) Indian Antiquary, Vol. No. XII, P. 96

2. ವಡ್ಡಾರಾಧನೆ (ಸಂ: ಡಿ.ಎಲ್.ಎನ್.) ಮೊದಲ ಮಾತು, ಪು.5, ನಾಲ್ಕನೆಯ ಮುದ್ರಣ (1970)

3. (i) ಪೂರ್ವೋಕ್ತ, *ಕವಿಚರಿತೆ*, ಭಾಗ–1, ಅನು: ಪು. 99

   (ii) ಆ.ನೇ. ಉಪಾಧ್ಯೆ ಅವರ ಕನ್ನಡ ವಾಙ್ಮಯ (ಸಂ. ನಾಡೋಜ ಹಂಪ ನಾಗರಾಜಯ್ಯ), ಪು. 279–292 (ಕ್ರಿ.ಶ. 2011)

4. ವಡ್ಡಾರಾಧನೆ (ಸಂ. ಡಿ.ಎಲ್.ಎನ್.) ನಾಲ್ಕನೆಯ ಮುದ್ರಣ, ಪೀಠಿಕೆ, ಪು.XXXIII

5. ವಡ್ಡಾರಾಧನೆ (ಸಂ. ಹಂಪನಾ), ಪ್ರವೇಶದಾಯಿನಿ, ಪು. 43

6. ಅದೇ, ಪು.33; ಆದರೆ ಈ ಊರು ಅಲ್ಲ. ಏಕೆಂದರೆ ಗ್ರಂಥದ ಪ್ರಕಾರ ಈ ಹಳ್ಳಿಖೇಡ ಸೌರಾಷ್ಟ್ರದ್ದು, ಪು. 146.

7. *ಕರ್ಣಪಾರ್ಯನ ನೇಮಿನಾಥ ಪುರಾಣಂ* (ಸಂ: ಎಲ್. ಶೇಷಯ್ಯಂಗಾರ್ಯ, ಆ.1–24, ಪು.4)


■

# ಪುಸ್ತಕ ವಿಮರ್ಶೆ

## ಭಾರತವೆಂಬ ಬಹುಮುಖಗಳ ಹುಡುಕಾಟದಲ್ಲಿ ವಸು ಮಳಲಿ ಅವರ ಕಳ್ಳು-ಬಳ್ಳಿ ಬರಹಗಳು

❑ **ಸೌಮ್ಯ ಹೇರಿಕುದ್ರು**
ಕನ್ನಡ ಉಪನ್ಯಾಸಕಿ, ಭಂಡಾರ್ಕರ್ಸ್ ಕಾಲೇಜು, ಕುಂದಾಪುರ.
sowmyakannada@gmail.com

***ಒಡಲ ಬೆಂಕಿ ಆರದಿರಲಿ (ಕಳ್ಳು-ಬಳ್ಳಿ ಬರಹಗಳು)***
ಲೇಖಕರು: **ವಸು ಮಳಲಿ,** ಪ್ರಕಾಶನ: **ಚಿಂತನ ಪ್ರಕಾಶನ,** ಬೆಂಗಳೂರು,
ಬೆಲೆ: 140, ಪುಟ: iv+190

ವಸು ಮಳಲಿ ಅವರ ಇತಿಹಾಸ, ರಾಜಕೀಯ ಮತ್ತು ಸಾಮಾಜಿಕ ಕಣ್ಣು ಹರಿದಿರುವ ಬರಹಗಳು ವಿಶಾಲವಾದ ಬೌದ್ಧಿಕ ಜಗತ್ತಿಗೆ ಅಚ್ಚರಿ ಎನಿಸುತ್ತವೆ. ಮೆಚ್ಚುಗೆ ಎನಿಸುತ್ತವೆ. ಬಹುಶಃ ಅವರ ಒಡಲ ಬೆಂಕಿಯಿಂದ ಹುಟ್ಟಿದ **ಕಳ್ಳು-ಬಳ್ಳಿ** ಬರಹಗಳು ಇವು. ವಸು ಬರಹದ ಸ್ವರೂಪವನ್ನು ಗಮನಿಸಿದಾಗ ತೀರಾ ಅಕಾಡಮಿಕ್ ಬರಹಗಳ ಹಂಗಿಲ್ಲದೇ ನಿರ್ಬಿಡೆಯಿಂದ ತನಗನ್ನಿಸಿದ ಸತ್ಯವನ್ನು, ತಾನು ಬದ್ಧಳಾಗಿರುವ ವಿಚಾರವನ್ನು ಮಂಡಿಸುವುದನ್ನು ನೋಡಬಹುದು. ಅವರ ಲೇಖನಗಳ ಸ್ವರೂಪವೇ ಸಮಾಜದ ತೀರಾ ಆಳದಲ್ಲಿ ಮಡುಗಟ್ಟಿದ ಜ್ವಲಂತ ಸಮಸ್ಯೆಯನ್ನು ತೀಕ್ಷ್ಣವಾಗಿ ಎತ್ತಿ ತೋರಿಸಿ ನಮ್ಮೆದುರು ಹಲವಾರು ಪ್ರಶ್ನೆಗಳನ್ನು ಮುಂದಿಡುವಂತದ್ದು. ವಸು ಎತ್ತುವ ಪ್ರಶ್ನೆಗಳು ಯಾರ? ಯಾವ? ವಸ್ತು, ವಿಷಯ ಎನ್ನುವ ಪ್ರಶ್ನೆಗೆ ಒಂದೇ ರೀತಿಯ ಉತ್ತರವಿಲ್ಲ. ಒಂದು ರೀತಿಯಲ್ಲಿ ಆಧುನಿಕೋತ್ತರ ಚಿಂತಕರು ಎತ್ತಬಹುದಾದ ಬಹುರೂಪಿ ಜಗತ್ತಿನ ಅಸ್ತಿತ್ವದ, ಬಾಗುವಿಕೆಯ, ಕುರಿತಾದದ್ದು. ಅದು ತೀರಾ ಬಡವ, ರೈತ, ಜನಸಾಮಾನ್ಯರ ಬಗೆಗೆ, ತೃತೀಯ ಲಿಂಗ, ವೇಶ್ಯೆಯರ ಬಗೆಗೆ, ಕೂಲಿಕಾರ್ಮಿಕರು, ಸ್ಲಂವಾಸಿಗಳು ಮತ್ತು ಅಂಚಿಗೆ ಸರಿದವರ ಬಗೆಗೆ ಹರಹನ್ನು ವಿಸ್ತರಿಸುತ್ತಾ ಸಾಗುತ್ತದೆ.

ವಸು ಚರಿತ್ರೆಯನ್ನು ನೋಡುವ ಬಗೆಯೇ ಒಂದು ರೀತಿಯ ಹುಡುಕಾಟದ, ಹೊಸತನ್ನು ಅನ್ವೇಷಿಸುವ ಮನಸ್ಥಿತಿಯಲ್ಲಿಯೇ ಪ್ರಕಟಗೊಳ್ಳುತ್ತದೆ. ಯಾವುದೋ ಆಫ್ರಿಕಾದ, ಭಾರತದ ಚಾರಿತ್ರಿಕತೆಯನ್ನು ಶೋಧಿಸುವ ಅವರ ಕಣ್ಣು ಅಲ್ಲಿನ ಬದುಕು, ಸಂಸ್ಕೃತಿ, ಒಟ್ಟಾರೆ ಸಾಮಾಜಿಕ ವ್ಯವಸ್ಥೆಯನ್ನೇ ಬದಲಾಯಿಸಿದ ವಸಾಹತುಶಾಹಿ ವ್ಯವಸ್ಥೆಯನ್ನು ಜಿಜ್ಞಾಸೆ ಮಾಡುತ್ತದೆ. ಆಸ್ಟ್ರೇಲಿಯಾದ ಎಬಾರಿಜಿನಲ್ ಮೂಲನಿವಾಸಿಗಳ ಎದೆಯಾಳದ ಹಾಡನ್ನು ನೆನಪಿಸಿಕೊಳ್ಳುವಾಗ, ರೆಡ್ ಇಂಡಿಯನ್ನರನ್ನು ಬ್ರಿಟಿಷ್ ವಸಾಹತು ಕ್ರೂರವಾಗಿ ಬೇಟೆಯಾಡಿದಾಗ, ದಕ್ಷಿಣ ಅಮೇರಿಕಾ ಖಂಡಕ್ಕೆ ವಲಸೆ ಹೋದ ಪೋರ್ಚುಗೀಸರು, ಸ್ಪ್ಯಾನಿಷ್‌ರು ಆ ಖಂಡವನ್ನೇ ಛಿದ್ರಗೊಳಿಸಿದಾಗ ವಸಾಹತು ವ್ಯವಸ್ಥೆ ಉಂಟುಮಾಡಿದ ದಾಸ್ಯಗಳನ್ನು ನಿಧಾನಕ್ಕೆ ತೆರೆದುತೋರಿಸುತ್ತದೆ. 500ಕ್ಕೂ ಹೆಚ್ಚಿನ ಬುಡಕಟ್ಟು ಜನಸಮುದಾಯ ಗಳು ಹೇಗೆ ಬ್ರಿಟಿಷ್ ವಸಾಹತುಶಾಹಿಯೊಳಗೆ ತಮ್ಮ ಅಸ್ತಿತ್ವವನ್ನೇ ಹೇಗೆ ಕಳೆದುಕೊಳ್ಳುತ್ತಾ ಹೋಯಿತು ಎನ್ನುವ ದುರಂತವನ್ನು ಬಿಚ್ಚಿಡುವಾಗ ಅವರ ದೃಷ್ಟಿಯಲ್ಲಿ ಈ ಅಧಿಕಾರಶಾಹಿ, ಸಾಮ್ರಾಜ್ಯಶಾಹಿ ವ್ಯವಸ್ಥೆಯೊಳಗೆ ಬದುಕನ್ನು ಕಳೆದುಕೊಂಡಿದ್ದು ಬರೀ ಆಸ್ಟ್ರೇಲಿಯಾದ





ಬುಡಕಟ್ಟು ಮಾತ್ರವಾಗಿರಲಾರದು. ಅದು ಇತರ ಪೂರ್ವ ದೇಶ, ಅದರಲ್ಲಿ ಭಾರತದ ಬದುಕು, ಚರಿತ್ರೆ ಇಂತಹ ವ್ಯವಸ್ಥೆಯೊಳಗೆ ಸಿಕ್ಕಿ ನರಳಿ ಹೋದ ನೋವಿನ ದಾಖಲಾತಿಯಾಗಿಯೇ ವ್ಯಕ್ತಗೊಳ್ಳುವ ವ್ಯಾಪಕತೆಯನ್ನು ಹೊಂದುತ್ತದೆ.

ವಸಾಹತುಶಾಹಿ ಹೊಸಕಿ ಹಾಕಿದ ಅದೆಷ್ಟೋ ಬುಡಕಟ್ಟು, ಆದಿವಾಸಿ, ಸಮುದಾಯಗಳು ಮತ್ತು ಅವರಲ್ಲಿ ಪ್ರಾಕೃತಿಕವಾಗಿ ಹುಟ್ಟಿದ ಪ್ರಕೃತಿ ಚಿಂತನೆಗಳು ಇಂದು ನಾಶವಾಗಿರುವುದು ವಸಾಹತುಶಾಹಿ ಪ್ರಭಾವಿಸಿದ ಏಕಶಿಲೀಯವಾದ ತನ್ನ ವಿಶ್ವಾತ್ಮಕ ಮಾದರಿಗಳಿಂದ ಒಂದು ರೀತಿಯಲ್ಲಿ ಇಂದಿಗೂ ಅವರು ಬಿಂಬಿಸಿದ, ಬದಲಿಸಿದ ಮಾನಸಿಕವಾದ, ಭೌತಿಕ, ಬೌದ್ಧಿಕ ಗುಲಾಮಗಿರಿಯಿಂದ ಹೊರಬರಲಾರದ ಸ್ಥಿತಿಯಲ್ಲಿ ಇರುವ ವಸಾಹತೀಕರಣಕ್ಕೊಳಪಟ್ಟ ದೇಶಗಳ ಸ್ಥಿತಿಯನ್ನು ತೀರಾ ತಾರ್ಕಿಕ ನೆಲೆಯಲ್ಲಿ ಹೇಳದೇ ಅಲ್ಲಿನ ಆದಿವಾಸಿಗಳ ಅಳಿವಿನ ದುರಂತದ ಹಾಡುಗಳ ಮೂಲಕವೇ ಸಾಮಾನ್ಯರಲ್ಲಿ ಒಂದು ವಸಾಹತೋತ್ತರ ಎನ್ನಬಹುದಾದ ಯೋಚನೆಯನ್ನು ಮೂಡಿಸಿರುವುದು ವಸು ಬರಹಗಳ ವೈಶಿಷ್ಟವೆಂದು ಹೇಳಬಹುದು.

ವಸಾಹತುಶಾಹಿಯಿಂದ ಮುಂದುವರಿದ, ಒಂದು ಮನಃಸ್ಥಿತಿಯೇ ಸಾಮ್ರಾಜ್ಯಶಾಹಿ ನೆಲಗಟ್ಟು. ಇದೊಂದು ರೀತಿಯಲ್ಲಿ ಸರ್ವಾಧಿಕಾರತ್ವವನ್ನು ಕೊನೆಯಲ್ಲಿ ಫ್ಯಾಸಿಸಂನ್ನು ಅಂತಿಮವಾಗಿ ಹೊರಹಾಕಬಲ್ಲ ಆತಂಕವಾಗಿರುವುದನ್ನು ವಸು ಗ್ರಹಿಸುತ್ತಾರೆ. ಅದು ಜಾಗತಿಕ ನೆಲೆಯಲ್ಲಿ ಹಿಟ್ಲರ್, ಮುಸಲೋನಿ, ಫರ್ಡಿನೆಂಡ್ ಮಾರ್ಕೋಸ್, ಕಾಂಬೋಡಿಯಾದ ಡಿಕ್ಟೇಟರ್ ಪೋಲ್‌ಪಾಟ್ ಇವರೆಲ್ಲಾ ಮತ್ತೆ ಮತ್ತೆ ಉದಯಿಸಿ ಹೋದರು ಎಂದರೆ, ಪ್ರಜಾಪ್ರಭುತ್ವ ವ್ಯವಸ್ಥೆ ನಾವು ಕಟ್ಟಿಕೊಂಡ 'ಸುವ್ಯವಸ್ಥಿತ' ಎನ್ನುವ ಚೌಕಟ್ಟು ಹೇಗೆ ಮತ್ತೆ ಮತ್ತೆ ಭ್ರಮನಿರಸನವನ್ನುಂಟು ಮಾಡಬಹುದು. ಇದಕ್ಕೆ ಸಮಾನಾಂತರವಾಗಿ ದೇಶಿಯ ನೆಲೆಯಲ್ಲಿ ತಲೆಎತ್ತುತ್ತಿರುವ ಫ್ಯಾಸಿಸಂನ ಕುರಿತು ಹುಟ್ಟಿಸುವ ಆತಂಕ ಒಂದು ರೀತಿಯಲ್ಲಿ ಸಾಮಾಜಿಕ ವಾಸ್ತವವೇ ಆಗಿದೆ. ಆಧುನಿಕತೆಯ ಒಂದು ಉತ್ಪನ್ನವಾಗಿ ಹುಟ್ಟಿಕೊಂಡ ರಾಷ್ಟ್ರೀಯತೆ ಮೂಲಕವೇ ದೇಶ ತನ್ನ ಅಸ್ತಿತ್ವ, ನಾಯಕತ್ವ, ಐಡೆಂಟಿಟಿ, ಪ್ರಗತಿ ಸಾಧ್ಯವೆಂದು ಬಿಂಬಿಸಲಾಗುತ್ತದೆ. ಆದರೆ ರಾಷ್ಟ್ರೀಯವಾಗಿ ರಚಿತಗೊಂಡ, ಒಂದೊಂದು ಸಲ, ಸಮೂಹಮಾಧ್ಯಮಗಳ ಅತಿರೇಕದ ಬೆಂಬಲದೊಂದಿಗೆ ಹೊರಹೊಮ್ಮುವ ಕೃತಕ, ಪ್ರಶ್ನಾತೀತ ನಾಯಕ ಮುಂದೆ ಜನಸಾಮಾನ್ಯರ ಮನದ ಪ್ರಶ್ನೆಗಳನ್ನೇ ಹೊಸಕಿ ಹಾಕಬಲ್ಲ ಪ್ರಭುತ್ವ ಶಕ್ತಿಯಾಗಿ ಬೆಳೆಯುವ ಆತಂಕವನ್ನು ಹಿಂದೆ ತಳ್ಳುವಂತಿಲ್ಲ. ಒಂದು ರೀತಿ ವಸು ಗುರುತಿಸುವ ನವ ಫ್ಯಾಸಿಸಂ ರೂಪಗಳಿವು.

ರಾಷ್ಟ್ರ ಅದರ ಪ್ರಗತಿಯಲ್ಲಿ ಕಾಣುವ ಕೈಗಾರಿಕೆ, ತಂತ್ರಜ್ಞಾನಗಳು ಇಂದು ಪ್ರಭುತ್ವಶಕ್ತಿಯಾಗಿಯೇ ಬೆಳೆಯುತ್ತದೆ ಹೊರತು ಸಮಾನತೆ, ನ್ಯಾಯ, ಮಾನವೀಯತೆಗಳು ದೂರಸರಿಯುತ್ತವೆ. ರಾಷ್ಟ್ರದ ಜೊತೆ ಜೊತೆಗೆ ಇಂದು ಬಹು ಚರ್ಚಿತ ವಿಷಯ 'ರಾಷ್ಟ್ರೀಯ ಸಂಸ್ಕೃತಿ' ಸಾಂಸ್ಕೃತಿಕ ಯಾಜಮಾನ್ಯವೊಂದು ಹೇಗೆ ಸೂಕ್ಷ್ಮವಾಗಿ ಅಸ್ತಿತ್ವಕ್ಕೆ ಬರುತ್ತದೆ ಎನ್ನುವುದನ್ನು ವಸು ಭಾರತದಲ್ಲಿ ಬ್ರಿಟಿಷರು ಅಧ್ಯಯಿನಿಸಿದ ಜಾತಿ, ಉಪಜಾತಿಗಳ ಪಟ್ಟಿಯಲ್ಲಿ ಗುರುತಿಸುತ್ತಾರೆ. ಸಂಸ್ಕೃತಿ ಎನ್ನುವುದು ಇಂದು ಪ್ರಭುತ್ವದ, ಅಧಿಕಾರಶಕ್ತಿಗಳ ಹಿಡಿತದಲ್ಲಿರುವುದನ್ನು 'ಸಂಸ್ಕೃತಿ ಸಾಮರಸ್ಯಕ್ಕೊಂದು ನೀತಿ' ಎನ್ನುವ ಲೇಖನ ಚಿತ್ರಿಸುತ್ತದೆ. ಧಾರ್ಮಿಕ, ರಾಜಕೀಯ ಶಕ್ತಿಗಳು, ಮಾರುಕಟ್ಟೆ ಒಡೆಯರು, ಬಹುರಾಷ್ಟ್ರೀಯ ಕಂಪೆನಿಗಳು, ಬಲಿಷ್ಠ ದೇಶಗಳು ಹೇಗೆ ಸಂಸ್ಕೃತಿಯನ್ನು ತಮ್ಮ ಹಿತಾಸಕ್ತಿಗಳಿಗೆ ಬಳಸುತ್ತಾ ಬಂದವು

ಎನ್ನುವುದನ್ನು ವಿವರಿಸುತ್ತದೆ. ವಸು ಬಹಳ ಸ್ಪಷ್ಟವಾಗಿ ಭಾರತದ ಸಂದರ್ಭದಲ್ಲಿ ಬಹುರೂಪಿ ಸಾಂಸ್ಕೃತಿಕ ಅಸ್ತಿತ್ವವನ್ನು ಮುಸಲ್ಮಾನ, ದಲಿತ, ಸ್ತ್ರೀ ಎಲ್ಲರನ್ನು ಒಳಗೊಂಡ ವೈವಿಧ್ಯವನ್ನು ಒಪ್ಪಿಕೊಳ್ಳುತ್ತಾ ಇಂತಹ ಬಹುತ್ವಕ್ಕೆ ಧಕ್ಕೆಯಾಗುವ ಏಕಶಿಲೀಯ ಸಾಂಸ್ಕೃತಿಕ ನೀತಿಗಳನ್ನು, ಅದನ್ನು ಬೆಂಬಲಿಸುವ ಅಧಿಕಾರ ಅಥವಾ ಪ್ರಭುತ್ವವನ್ನು ವಿರೋಧಿಸುತ್ತಾರೆ. ವಿಶೇಷವೆಂದರೆ ಅವರ ಲೇಖನಗಳು ಕೇವಲ ಒಂದು ವಿಚಾರದ ಎಳೆಯನ್ನು ಹೇಳದೆ ಒಂದು ರೀತಿಯಲ್ಲಿ ಆಕ್ಟಿವಿಸ್ಟ್ ನೆಲೆಯ ಆಯಾಮಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ತೀಕ್ಷ್ಣವಾಗಿ ಪ್ರತಿಪಾದಿಸುವ ವಿಚಾರಗಳನ್ನು ಖಂಡಿತವಾದವನ್ನು ಗಮನಿಸುತ್ತೇವೆ. ಮಾತ್ರವಲ್ಲ ಅವರ ಲೇಖನ ಹೆಚ್ಚಿನವು ಪ್ರಕಟಪಡಿಸುವಂತೆ ಮಾರುಕಟ್ಟೆ, ಬಂಡವಾಳಶಾಹಿಗಳು, ನಗರಗಳ ಸರಕುಗಳಾಗಿ ಹೋಗುತ್ತವೆ 'ಸಂಸ್ಕೃತಿ'ಯ ವಿವಿಧ ರೂಪಗಳು ಬುಡಕಟ್ಟು, ಅಳಿವಿನಂಚಿನ ಭಾಷೆ, ಧರ್ಮಗಳ ಅಸ್ತಿತ್ವವನ್ನು ಯಾಕೆ ಕಾಪಾಡಲಾಗುತ್ತಿಲ್ಲ ಎಂಬ ಆತಂಕವನ್ನ ಕೂಡಾ ವ್ಯಕ್ತಪಡಿಸುತ್ತದೆ.

ರಾಷ್ಟ್ರ ಎನ್ನುವ ಅಸ್ತಿತ್ವ, ಅನನ್ಯತೆಯನ್ನು ಹಿಡಿದಿಡಲು ಇಂದು ಧರ್ಮವನ್ನು ಅದರೊಂದಿಗೆ ಹೇಗೆ ಬೆಸೆಯಲಾಗುತ್ತಿದೆ ಎನ್ನುವುದನ್ನು 'ರಾಷ್ಟ್ರೀಯತೆಯ ಗುಂಗಿನಲ್ಲಿ ಆಧುನಿಕ ಜಗತ್ತು' ಎನ್ನುವ ಲೇಖನ ವಿವರಿಸುತ್ತದೆ. ಯುರೋಪ್‌ನಲ್ಲಿ ಜ್ಞಾನೋದಯದ ನಂತರದಲ್ಲಿ ಬೆಳವಣಿಗೆಗೊಂಡ ಸಂಗತಿಗಳಾದ ವಿಚಾರವಾದ, ವೈಜ್ಞಾನಿಕವಾದ, ಕೈಗಾರಿಕೀಕರಣ, ಅಭಿವೃದ್ಧಿಯಂತಹ ಸಂಗತಿಗಳು ವ್ಯಾಪಕವಾಗಿ ಮಾನವನ ಒಳಿತನ್ನು ಸಾಧಿಸುವ ನೆಲೆಯಲ್ಲಿ ವಿಶ್ವಾತ್ಮಕವಾಗಿ ಬಳಕೆಗೊಂಡಿದ್ದನ್ನು ನೋಡಬಹುದು. ಭಾರತದಂತಹ ದೇಶದಲ್ಲಿ ರಾಷ್ಟ್ರವೆನ್ನುವುದು ಒಂದು ಪ್ರಬಲ ಸಂಸ್ಕೃತಿಯೊಂದಿಗೆ ಧಾರ್ಮಿಕ ಕವಚವನ್ನು ಧರಿಸಿಕೊಂಡಿದ್ದು ಸುಳ್ಳಲ್ಲ. ಇಂತಹ ಸಂದರ್ಭಗಳೇ ದೇಶವೊಂದನ್ನು ಕೋಮುವಾದದಂತಹ ದಳ್ಳುರಿಗೆ ದೂಡಿಬಿಡುತ್ತದೆ. ಇಂತಹ ಹೊತ್ತಿನಲ್ಲಿ ವಸು ಮಳಲಿ 1857ರ ಭಾರತದ ರಾಷ್ಟ್ರೀಯ ಚಳವಳಿ(ನ್ಯಾಷನಲ್ ಮೂಮೆಂಟ್)ಯ ಮೊಘಲ್ ದೊರೆ ಬಹದ್ದೂರ್ ಷಾ ಜಾಫರ್ ಹೇಗೆ ಏಕತೆಯ ಸಂಕೇತವಾಗಿ ಗುರುತಿಸಲ್ಪಡುತ್ತಾರೆ ಎನ್ನುವುದನ್ನು ಬೊಟ್ಟು ಮಾಡುತ್ತಾರೆ. ಆಧುನಿಕ ರಾಷ್ಟ್ರವೆನ್ನುವ ಏಕತೆ ಒಂದೇ ಭಾಷೆ, ಧರ್ಮ, ಸಂಸ್ಕೃತಿಯನ್ನು ಪೋಷಿಸುತ್ತಾ ಬಹುರೂಪವನ್ನು ಮೂಲಸ್ವರೂಪದಲ್ಲಿಯೇ ನಿರಾಕರಿಸುವುದು ಅದರ ಸಮಸ್ಯೆಯಾಗಿ ಕಂಡುಬರುತ್ತದೆ. ಭಾರತದಲ್ಲಿ ಕೂಡಾ ಸಂಸ್ಕೃತಿಯನ್ನು 'ಏಕರೂಪೀಗೊಳಿಸುವ ಪ್ರಯತ್ನ ಪ್ರಭಾವಶಾಲಿಯಾದ ವೈದಿಕ ಸಂಸ್ಕೃತಿಯ ಮೂಲಕ, ನಡೆದಿರುವುದನ್ನು ಗುರುತಿಸಬಹುದು.

ಇಂತಹ ಸಂದರ್ಭದಲ್ಲಿ ವಸು ಅವರ "ರಾಷ್ಟ್ರೀಯತೆಯ ಗುಂಗಿನಲ್ಲಿ ಆಧುನಿಕ ಜಗತ್ತು" ಎನ್ನುವ ಲೇಖನ ಭಾರತೀಯ ಇತಿಹಾಸದಲ್ಲಿ 'ಏಕತೆ' ಅಥವಾ ರಾಷ್ಟ್ರವನ್ನು ಕಟ್ಟುವ ಪ್ರಾರಂಭದ ಇತಿಹಾಸ ಹೇಗೆ 'ಭಾರತೀಯ ಬಹುಗಳನ್ನು ಒಳಗೊಳ್ಳುವ' ನೆಲೆಯಿಂದು ಅದು ಹಿಂದೂ, ಮುಸ್ಲಿಂ ಎನ್ನುವ ವಿಭೇದವಿಲ್ಲದ ಕೈಂಕರ್ಯವಾಗಿತ್ತು ಎನ್ನುವುದನ್ನ ಗುರುತಿಸುತ್ತಾರೆ. 1885ರಲ್ಲಿ ಆರಂಭವಾದ ನ್ಯಾಷನಲ್ ಕಾಂಗ್ರೆಸ್ ಹಿಂದು ರಾಷ್ಟ್ರೀಯವಾದಿಗಳಂತೆ ಧರ್ಮ ಹಾಗೂ ಸಂಸ್ಕೃತಿಗಳಿಗಾಗಿ ಹೋರಾಡದ ಮನ:ಸ್ಥಿತಿಯನ್ನು ಹೊಂದಿದ್ದರು. ಆದರೆ ನಂತರದಲ್ಲಿ ರಾಷ್ಟ್ರೀಯತೆ ಹೇಗೆ ಧರ್ಮವನ್ನು ಅದರಲ್ಲಿಯೂ ಅರವಿಂದ ಘೋಷರು ಕಾಳಿಕಾ ಮಾತೆಯ ಮುಂದೆ ದೀಕ್ಷೆ ನೀಡುವ ಆಚರಣೆಯನ್ನು ಅನುಶೀಲನಾ ಸಮಿತಿಯಲ್ಲಿ ರೂಢಿಸಿಕೊಂಡಿದ್ದು ಹೇಗೆ ಬ್ರಿಟಿಷರು ಹಿಂದೂ ಮತ್ತು





ಮುಸ್ಲಿಂ ಎನ್ನುವ ಒಡಕನ್ನು ಹೇಗೆ ಮುಂದೊಡ್ಡಿ ಮುಸಲ್ಮಾನರನ್ನು ರಾಷ್ಟ್ರೀಯ ಹೋರಾಟದಿಂದ ದೂರವಿಡುವ ಹುನ್ನಾರವನ್ನು ಮಾಡಿದರು. ಒಂದು ರೀತಿಯಲ್ಲಿ ಧಾರ್ಮಿಕತೆ ರಾಷ್ಟ್ರದ ಚೌಕಟ್ಟಿನೊಳಗೆ ಪ್ರವೇಶಿಸಿದ್ದು ನಂತರದ ಧಾರ್ಮಿಕ ಮೂಲಭೂತವಾದ ಸಂಘರ್ಷಕ್ಕೆ ಕಾರಣವಾಗುತ್ತಾ ಹೋಯಿತು ಎನ್ನುವ ಸುಳಿವು ಇಲ್ಲಿದೆ.

ಭಾಷೆ ಮತ್ತು ಸಂಸ್ಕೃತಿ ಒಂದಕ್ಕೊಂದು ಬೆಸೆದುಕೊಂಡಂತಿದ್ದು, ಇದು ಭಾಷೆ ಪಡೆದುಕೊಳ್ಳುತ್ತಿರುವ ಸ್ಥಿತ್ಯಂತರವನ್ನು ಊಹಿಸುವುದು ಕಷ್ಟ. ಆಧುನಿಕ ಶಿಕ್ಷಣದ ಮೂಲಕ ಇಂದು ಇಂಗ್ಲೀಷ್ ಭಾಷೆ ತನ್ನ ವ್ಯಾಪ್ತಿಯನ್ನು ಹರವಿದೆ. ವಸಾಹತುಶಾಹಿಯ ಕಾರಕೂನರನ್ನು ತಯಾರಿ ಮಾಡುವ ಸಲುವಾಗಿಯೇ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಅಳವಡಿಕೆಯಾಗಿದ್ದನ್ನು ನೋಡಬಹುದು. ಇದು ಕೇವಲ ಬ್ರಿಟಿಷ್ ವಸಾಹತುಶಾಹಿ ಹಾಕಿಕೊಟ್ಟಿದ್ದಲ್ಲ. ಯುರೋಪ್‌ನಲ್ಲಿ ಎನ್‌ಲೈಟನ್‌ಮೆಂಟ್‌ನ ನಂತರದಲ್ಲಿ ಬೆಳೆದ ವಿಜ್ಞಾನ ಅದನ್ನಾಧರಿಸಿ ರೂಪುಗೊಂಡ ಕೈಗಾರಿಕೋದ್ಯಮಗಳು ಅಲ್ಲಿ ದುಡಿಯಲು ಬೇಕಾದ ಪರಿಣತಿಗಾಗಿ ಕಾರ್ಮಿಕರ ತಯಾರಿಗಾಗಿ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡಿತು. ಒಂದು ರೀತಿಯಲ್ಲಿ ಕೈಗಾರಿಕೋದ್ಯಮಿಗಳ, ಬಂಡವಾಳಗಾರನನ್ನು ಪೋಷಿಸುವ ನೆಲೆಯಿಂದಲೇ ಶಿಕ್ಷಣ ನೀತಿಗಳು ಜಾರಿಗೆ ಬಂದವು.

ಭಾರತದ ಸಂದರ್ಭದಲ್ಲಿಯೂ ಕೂಡಾ ಇಂದು ಅಳವಡಿಸಿಕೊಂಡ ಬ್ರಿಟಿಷ್ ಮಾದರಿಯ ಶಿಕ್ಷಣ ಹೇಗೆ ಇಂದಿಗೂ ಕೂಡಾ ಪ್ರಭುತ್ವ, ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಶ್ನಿಸದಂತೆ ಶಿಕ್ಷಣ ಜನರನ್ನು ರೂಪಿಸುತ್ತವೆ ಎನ್ನುವುದನ್ನು ವಸು ಮಳಲಿಯವರ 'ಬಂಡವಾಳಗಾರ ಕೊಂಡು ಮಾರುವ ಭಾಷಾ ಮಾಧ್ಯಮ' ಚಿತ್ರಿಸುತ್ತದೆ. ಒಂದು ರೀತಿಯಲ್ಲಿ ಇಂದಿನ ಶಿಕ್ಷಣ ನವ ವಸಾಹತುಶಾಹಿ ಮನ:ಸ್ಥಿತಿಯನ್ನು ನಮ್ಮಲ್ಲಿ ಉಂಟುಮಾಡಿದೆ. ನಗರದ ವಿದ್ಯಾವಂತ ಮಧ್ಯಮವರ್ಗ ಇಂತಹ ಇಂಗ್ಲೀಷ್ ಭಾಷೆಯನ್ನು ತಮ್ಮ ಬದುಕಿನ ಆದರ್ಶಮಾರ್ಗವನ್ನಾಗಿ ತುಳಿಯುತ್ತಿದ್ದಾರೆ. ಒಟ್ಟಾರೆ ಇಂದು ಇಂಗ್ಲೀಷ್ ಭಾಷೆ ಭೂತಾಕಾರವಾಗಿ ಜನರ ಬದುಕು, ಕನಸುಗಳನ್ನು ನಿರ್ದೇಶಿಸುವ ಶಕ್ತಿಗಳಾಗಿ ಕಂಡುಬರುತ್ತದೆ. ಮಾತ್ರವಲ್ಲ, ಬಂಡವಾಳಶಾಹಿ ಜಾಗತಿಕ ಮಾರುಕಟ್ಟೆ ಇಂಗ್ಲಿಷ್ ಭಾಷೆಯ ಮೂಲಕ ಶಾಲೆ, ಶಿಕ್ಷಣವನ್ನು, ಪಠ್ಯಕ್ರಮವನ್ನು ನಿಯಂತ್ರಿಸುತ್ತದೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಭಾಷೆಯ ಉಳಿವು ಹೇಗೆ? ಎನ್ನುವ ಭೀತಿ, ಆತಂಕ ನಮ್ಮನ್ನು ಕಾಡುತ್ತಲೇ ಹೋಗುತ್ತದೆ.

ಪ್ರಸ್ತುತ ಭಾತರದ ಹಲವಾರು ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ವಸು ಅವರ ಒಟ್ಟಾರೆ ಬರಹಗಳ ತಾತ್ವಿಕತೆಯಿರುವುದನ್ನು ನೋಡಬಹುದು. ಇತಿಹಾಸಜ್ಞೆಯಾಗಿ ವಸು ಅವರಲ್ಲಿ 'ಭಾರತೀಯ' ಎನ್ನುವಂತಹ ಅಸ್ಮಿತೆಯ ಹುಡುಕಾಟಗಳು ವಸಾಹತೋತ್ತರ ಚಿಂತನೆಯ ನೆಲೆಯಲ್ಲಿ ಪಶ್ಚಿಮಪ್ರಣೀತ ಆಧುನಿಕ ಕೈಗಾರಿಕೀಕರಣ, ಅಭಿವೃದ್ಧಿ, ಶಿಕ್ಷಣ, ಚರಿತ್ರೆಗಳೆಲ್ಲವನ್ನು ಪ್ರಶ್ನೆಗೆ ಒಳಪಡಿಸುತ್ತದೆ. ಭಾರತವನ್ನು ಒಳಗೊಂಡಂತೆ ಇಂದು ವಿಶ್ವವೇ ಆಧುನಿಕ ಅಭಿವೃದ್ಧಿಯೆನ್ನುವ ವಿಶ್ವಾತ್ಮಕ ಸಂಸ್ಕೃತಿಯ ಧಾವಂತದ ಓಟದಲ್ಲಿ ತನ್ನ ಬಹುತ್ವವನ್ನು ಕಳೆದುಕೊಳ್ಳುತ್ತಿದೆ. ವಸಾಹತುಶಾಹಿಗೆ ಒಳಪಟ್ಟ ದೇಶಗಳು ಇಂದಿಗೂ ಕೂಡಾ ಮಾನಸಿಕವಾಗಿ ವಸಾಹತುಶಾಹಿಯ ಮನಸ್ಥಿತಿಯಿಂದ ಹೊರಬರಲಾಗದಂತೆ ಸಂಕಟವನ್ನು ಎದುರಿಸುತ್ತಾ, ವಸಾಹತುಶಾಹಿ ರೂಪಿಸಿದ ಏಕರೂಪದ ಭಾಷೆ, ಧರ್ಮ, ಸಂಸ್ಕೃತಿ, ಚರಿತ್ರೆಗಳಿಗೆ ಸಿಕ್ಕಿ ಒಂದು ರೀತಿಯ ವಿಕೃತ ಸಂಸ್ಕೃತಿ, ಮನಃಸ್ಥಿತಿಯನ್ನು ರೂಪಿಸಿ ಕೊಂಡಿರುವುದು ಅವರ ಹೆಚ್ಚಿನ ಲೇಖನಗಳಲ್ಲಿ ಚರ್ಚೆಗೆ ಒಳಗಾಗುತ್ತದೆ.

■

# ಆಕರ ವಿಭಾಗ

## ತುಮಕೂರು ಜಿಲ್ಲೆ ಮಧುಗಿರಿ ತಾಲೂಕು, ಬಿಜ್ಜಾವರ ಗ್ರಾಮದ ವೀರಭದ್ರ ದೇವಾಲಯದ ಜೀರ್ಣೋದ್ಧಾರದ ವೇಳೆ ನೆಲದಲ್ಲಿ ಪತ್ತೆಯಾದ ಕೃಷ್ಣದೇವರಾಯನ ಶಾಸನ

□ **ಡಿ.ವಿ.ಪರಮಶಿವ ಮೂರ್ತಿ**
ಶಾಸನತಜ್ಞರು ಮತ್ತು ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
Parama1963@gmail.com



**ಶಾಸನದ ಪಾಠ**

**1. 0 ಶುಭಮಸ್ತು ಬಿಜಾವರದಗೌಡಿಕೆ ಸೋಮಗೌಡರ ಅಜೆಯ ಸಿಂಗೇಗೌಡರ ಕಾಣಾಚಿಗೌಡಿಕೆ ಶ್ರೀ**

**2. 0 ಬಿಜವರದನಾಡ ಸೇನಬೋಯಿಕೆ ಆಉಬಳ ದೇವಗಳ ಮುತ್ತಯದೇವರಸರ ಕಾಣಾಚಿ ಸೇನಬೋಯಿಕೆ ಶ್ರೀ**

**3. 0 ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷಗಳು 1436 ನೆಯ ಶ್ರೀಮುಖ ಸಂವತ್ಸರದ**

**4. 0 ಚಯಿತ್ರ ಬ 10 ಲೂ ಶ್ರೀ ಮಂಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾ**

**5. 0 ಪ ಶ್ರೀಕೃಷ್ಣರಾಯ ಮಹಾರಾಯರೂ ಲೋಕೋಪಕಾರವಾಗಿ ಮದುವೆಯ ಸುಂಕವನೂ**

**6. 0 ಆಳುವ ರಾಜ್ಯದೊಳಗೆ ಆ ಮದುವೆಯ ಸುಂಕ ಯೆಂದಿಗೆಯೂ ಕೊಳಲಿಲ್ಲಾಯೆಂದು ರಾಯ**

**7. 0 ರ ಮುದ್ರೆಮನುಷ್ಯರು ಬಂದು ಹಾಕಿಸಿದ ಸಿಲಾಶಾಸನ ॥ ಇದಕೆ ತಪಿದವರು ತಂಮ ತಂದೆ ತಾ**

**8. 0 ಯಿಗೆ ತಪಿದವರು ॥ ತಂಮಗುರುವಿಗೆತಪಿದವರು.**

***ಶಾಸನದ ವಿವರ***

ಇದುವರೆಗೂ ಬೆಳಕಿಗೆ ಬರದೇಇದ್ದಈ ಶಾಸನದ ಕಾಲವು **ಕ್ರಿಸ್ತಶಕೆ 1513, ಏಪ್ರಿಲ್ 1ನೇ ದಿನಾಂಕಕ್ಕೆ (ಶುಕ್ರವಾರ)** ಸರಿಹೊಂದುತ್ತದೆ. ಈ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ





ಅರಸನಾದ ಶ್ರೀಕೃಷ್ಣದೇವರಾಯನು ಲೋಕಕ್ಕೆ ಉಪಕಾರವಾಗಲಿ ಎಂದು ಸಾರ್ವಜನಿಕರಿಗೆ ವಿಧಿಸಲಾಗಿದ್ದ ಮದುವೆಯ ಸುಂಕವನ್ನು ವಿನಾಯಿತಿ ನೀಡುತ್ತಾನೆ. ಈ ಸಮಯದಲ್ಲಿ ಬಿಜ್ಜಾವರದಗೌಡನಾದ ಸೋಮಗೌಡರ ಮಗನಾದ ಅಜೇಯ ಸಿಂಗಗೌಡನು, ಶಾನುಭೋಗನಾದ ಆಹೋಬಲದೇವಗಳ ಮಗನಾದ ಮುತ್ತಯ್ಯ ದೇವರಸನೆಂಬುವನು ಇರುತ್ತಾರೆ. ಈ ಶಾಸನದ ವಿಶೇಷವೇನೆಂದರೆ ಈ ಶಾಸನವನ್ನುರಾಜನ ಮುದ್ರೆಮನುಷ್ಯರೇ ಬಂದು ಹಾಕಿಸಿದ್ದಾರೆ. ಶಾಸನಗಳಲ್ಲಿ ಸಿಕ್ಕಿರುವ ಅಪರೂಪದ ಪದಪ್ರಯೋಗಇದಾಗಿದೆ. ಮುದ್ರೆಮನುಷ್ಯರು ಎಂದರೆ ಅಧಿಕೃತ ಅಧಿಕಾರಿಗಳು. ಕೃಷ್ನದೇವರಾಯನು ಎರಡನೆಯ ಬಾರಿಗೆ ಪಟ್ಟಕ್ಕೆ ಬಂದ ನೆನಪಿಗೆ (ಕ್ರಿ.ಶ. 1513, ಮಾರ್ಚ್, 7/11 ) ಈ ಶಾಸನ ಹಾಕಿಸಲಾಗಿದೆ. ಮದುವೆ ಸುಂಕವನ್ನು ವಿನಾಯಿತಿ ಬಿಟ್ಟ ವಿಜಯನಗರಕಾಲದ ಅನೇಕ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಈ ಶಾಸನದಿಂದ ಆ ಕಾಲದ ತೆರಿಗೆ ಪದ್ಧತಿ, ಗೌಡ – ಶಾನುಭೋಗ ಪದ್ಧತಿ ಮತ್ತು ಶಾಸನ ಹಾಕಿಸಲು ಮುದ್ರೆಮನುಷ್ಯರು ಇರುತ್ತಿದ್ದ ಸಂಗತಿ ಬೆಳಕಿಗೆ ಬಂದಿದೆ. ಅಲ್ಲದೆ ಬಿಜಾವರ ಸ್ಥಳನಾಮದ ಇತಿಹಾಸ 503 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಪ್ರಸ್ತುತ ಶಾಸನವು ಬಿಜಾವರದ ವೀರಭದ್ರಗುಡಿಯ ಆವರಣದಲ್ಲಿ ಮಣ್ಣಿನಿಂದ ಮುಚ್ಚಿಹೋಗಿದ್ದ ಬಂಡೆಯ ಮೇಲೆ ಕೆತ್ತಲಾಗಿದೆ. ಕಮ್ಮನಕೋಟೆಗ್ರಾಮದ ಹರಿಹರೇಶ್ವರ ದೇಗುಲದ ಬಳಿಯ ಶಾಸನದ ಪ್ರಕಾರ ಕ್ರಿಸ್ತಶಕ 1428 ರಲ್ಲಿ ಶಿವರಾತ್ರಿ ಪುಣ್ಯಕಾಲದಲ್ಲಿ ಬಿಜಾವರದ ವೀರಭದ್ರದೇವರ ಪೂಜಾರಿಯಾದ ಸಿಂಗಂಣಗಳಿಗೆ ಬಿಜಾವರದಕೆರೆಯ ಕೆಳಭಾಗದಲ್ಲಿ 500 ಅಡಕೆ ಮರದಸ್ಥಳವನ್ನು, ಹಿರಿಯಕೆರೆಯ ಕೆಳಗೆ ಬಿದಿರಮೆಳೆ ಗದ್ದೆಯ ಬಳಿ ಹತ್ತುಖಂಡುಗಗದ್ದೆಯನ್ನೂ ವಾಮನಮುದ್ರೆಕಲ್ಲು ನಿಲ್ಲಿಸಿ ದಾನ ನೀಡಲಾಗಿದೆ. ಅಲ್ಲದೆ ಬಿಜಾವರದ ಸೇನಬೋವನಾದ ರಾಮರಸ ಎಂಬುವನಿಗೆ ದಾದೆಗೊಂಡನಹಳ್ಳಿಗೆ ಆಹೋಬಳಪುರ ಎಂಬ ಪ್ರತಿ ಹೆಸರಿಟ್ಟು ಅಗ್ರಹಾರವನ್ನಾಗಿ ಮಾಡಿ ಕೆರೆಯ ಕೆಳಗೆ 1000 ಅಡಕೆಯ ಮರದ ಸ್ಥಳವನ್ನು ದಾನವಾಗಿ ನೀಡಲಾಗಿದೆ. ಹಾಗೂ ಬಿಜಾವರದ ಸಿಂಗೇಗೌಡರ ಮಕ್ಕಳಾದ ರಾಮಗೌಡರಿಗೆ ಕೊಡುಗೆಯಾಗಿ ಮಧುಗಿರಿಹಳ್ಳಿ 1 ಮತ್ತು 2000 ಅಡಕೆಯ ಮರದ ಸ್ಥಳವನ್ನು ದಾನವಾಗಿ ನೀಡಿದ ವಿವರವಿದೆ. ಈ ಶಾಸನದಿಂದ ಬಿಜಾವರವು ಸುಮಾರು 600 ವರ್ಷಗಳಿಂದಲೂ ಪ್ರಸಿದ್ಧಿಪಡೆದ ಊರಾಗಿತ್ತೆಂದು, ಅಲ್ಲಿನ ವೀರಭದ್ರದೇವರ ಗುಡಿಗೂ ಅಷ್ಟೇ ವರ್ಷಗಳ ಇತಿಹಾಸವಿದೆಯೆಂದು ತಿಳಿದುಬರುತ್ತದೆ.

ತುಮಕೂರು ಜಿಲ್ಲೆಯಲ್ಲಿ ಈವರೆಗೆ ಶ್ರೀಕೃಷ್ಣದೇವರಾಯನ 19 ಶಾಸನಗಳು ಸಿಕ್ಕಿದ್ದವು, ಬಿಜಾವರದ ಈ ಶಾಸನದಿಂದ ಈ ಸಂಖ್ಯೆ 20 ಕ್ಕೆ ಏರುತ್ತದೆ. ಇದೇ ತಾಲೂಕಿನ ದೊಡ್ಡಮಾಲೂರಿನ ಕ್ರಿಸ್ತಶಕ 1510 ರ ಬಂಡೆಗಲ್ಲು ಶಾಸನದಲ್ಲಿ ಮೊದಲಬಾರಿಗೆ ಮದುವೆಯ ಸುಂಕವನ್ನು ವಿನಾಯಿತಿ ಬಿಟ್ಟ ವಿಷಯವಿದೆ. ಈ ಅವಧಿಯಲ್ಲಿ ಶ್ರೀಕೃಷ್ಣದೇವರಾಯನ ಮೊದಲ ಪಟ್ಟಾಭಿಷೇಕ ನಡೆದಿತ್ತು. ಅಂದೂ ಪ್ರಧಾನಿಯಾದ ತಿಮ್ಮದಾಸಯ್ಯ ಆದಪ್ಪ ನಾಯುಡುಗಳು ಅರಸನಿಗೆ ಭಿನ್ನಹ ಮಾಡಿಕೊಂಡು ಪೆನುಗೊಂಡೆ, ಗುತ್ತಿ, ಕರ್ನೂಲು, ಗಂಡಿಕೋಟೆ ಸ್ಥಳದ ಸಿದ್ಧವಟ್ಟದ ಸಿದ್ಧಾಪುರ ಸೀಮೆಯ ಮತ್ತು ನಾಗಮಂಗಲ, ಮುಳುವಾಗಿಲು, ರಾಯದುರ್ಗದ ಸೀಮೆಯ ಮದುವೆಯ ಸುಂಕವನ್ನು ವಿನಾಯ್ತಿ ನೀಡಲಾಗಿದೆ. ತಿಮ್ಮಾಪುರದ ಗಂಗನಾಯನಿ ಮಗ ಚಿಟ್ಟಣ್ಣಯರ್ವಗೊಲ್ಲ, ಬಸವರಸ ಎಂಬುವರು ಪ್ರಧಾನಿಯನ್ನುಕೋರಿಕೊಂಡು ಈ ದಾನವನ್ನು ಬಿಡಿಸುತ್ತಾರೆ.

---

ಶಾಸನವನ್ನು ಓದಲು ಕಾರಣರಾದವರು ಮಧುಗಿರಿಯ ತಹಶೀಲ್ದಾರರಾದ ಶ್ರೀ ಅನಂತರಾಮು ಅವರು, ಮತ್ತು ಗ್ರಾಮಸ್ಥರು ಬಹಳ ನೆರವಾಗಿದ್ದಾರೆ.

■

# ಹಂಪೆಯ ಸೋಮವಾರದ ಬಾಗಿಲ ಸಮೀಪದ ಜೈನಬಸದಿಯ ಅಪ್ರಕಟಿತ ಶಿಲ್ಪಶಾಸನ ಮತ್ತು ಇತರ ಅಂಶಗಳು


❑ **ಎಸ್. ಕಾರ್ತಿಕ್**
**ಶಾಸನತಜ್ಞರು**
**# 413, ಕರ್ನಾಟಕ 'ಡಿ' ಗ್ರೂಪ್ ಎಂಪ್ಲಾಯಿಸ್ ಲೇಔಟ್, 1 ನೆಯ ಬ್ಲಾಕ್, 6 ನೆಯ ಮುಖ್ಯರಸ್ತೆ, ಲಿಂಗಧೀರನಹಳ್ಳಿ (ಹೇರೋಹಳ್ಳಿ), ಅಂದ್ರಹಳ್ಳಿ ಮುಖ್ಯರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–560091**

**ಮತ್ತು**

**ಆರ್. ಮಂಜನಾಯಕ್**
**ಪುರಾತತ್ತ್ವ ಸಹಾಯಕರು**
**ಪುರಾತತ್ತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ, ಹೊಸಪೇಟೆ, ಬಳ್ಳಾರಿ ಜಿಲ್ಲೆ–583221**


**ಕ**ರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ ಹಂಪಿ ಅಥವಾ ಹಂಪೆ ಪ್ರದೇಶವು ಭಾರತದ ಇತಿಹಾಸದಲ್ಲಿಯೇ ಪ್ರಸಿದ್ಧವಾದುದು. ಇಲ್ಲಿ ದೊರಕುವ ಅಸಂಖ್ಯಾತ ಶಾಸನಗಳು, ಸ್ಮಾರಕಗಳು ಮುಂತಾದವು ಇತಿಹಾಸ, ಸಂಸ್ಕೃತಿ, ಆರ್ಥಿಕ ವ್ಯವಸ್ಥೆ ಮುಂತಾದವುಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಪ್ರದೇಶದಲ್ಲಿ ವೈದಿಕ, ಜೈನ, ಬೌದ್ಧ ಮುಂತಾದ ಅನೇಕ ಮತ–ಧರ್ಮಗಳ ಶಾಸನಗಳು ಮತ್ತು ಸ್ಮಾರಕಗಳು ದೊರೆತಿವೆ, ದೊರಕುತ್ತಲೇ ಇವೆ. ಪ್ರಕೃತ ಲೇಖನದಲ್ಲಿ ಹಂಪಿ ಪ್ರದೇಶದ ಸೋಮವಾರದ ಬಾಗಿಲ ಸಮೀಪ ಇರುವ ಜೈನ ಬಸದಿಯಲ್ಲಿ ದೊರೆತ ಶಿಲ್ಪಸಹಿತವಾದ ಶಾಸನವನ್ನು ಪ್ರಕಟಿಸಿ ಬಸದಿಯ ಬಗೆಗೆ ಹಾಗೂ ಶಿಲ್ಪದ ಬಗೆಗೆ ಲಭ್ಯ ಮಾಹಿತಿಯನ್ನು ಆಧರಿಸಿ ವಿಶ್ಲೇಷಿಸಲಾಗಿದೆ. ಮೊದಲು ಸಂಬಂಧಪಡುವ ಅಂಶಗಳನ್ನು ವಿಶ್ಲೇಷಿಸಿ ಲೇಖನದ ಕೊನೆಗೆ ಶಾಸನಪಾಠವನ್ನು ನೀಡಲಾಗಿದೆ.

**ಶಾಸನ ಲಭ್ಯವಾದ ಸ್ಥಳ :** ಈ ಶಾಸನವನ್ನು ಸೋಮವಾರದ ಬಾಗಿಲು ಎಂದು ಕರೆಯಲಾಗುವ **(ಚಿತ್ರ–1)** ಸ್ಥಳದ ಸಮೀಪದಲ್ಲಿ ಇರುವ ಜೈನ ಬಸದಿಯಲ್ಲಿ ದೊರೆತ, ಸುಮಾರು 0.35 ಮೀಟರ್ ಅಗಲ, ಸುಮಾರು 0.32 ಮೀಟರ್ ಎತ್ತರವಿರುವ ಪುಟ್ಟ ವಿಗ್ರಹದ ಪೀಠದ ಪಟ್ಟಿಕೆಗಳ ಮೇಲೆ ಕೆತ್ತಲಾಗಿದೆ **(ಚಿತ್ರ–2)**. ಈ ವಿಗ್ರಹವು ದೊರೆತದ್ದು ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆಯವರು 2014–2015 ನೆಯ ಸಾಲಿನಲ್ಲಿ ಕೈಕೊಂಡಿದ್ದ ಉತ್ಖನನದ ಸಮಯದಲ್ಲಿ. ಈ ಬಸದಿಯ ಅಧಿಷ್ಠಾನದ ಭಾಗ ಮಣ್ಣಿನಲ್ಲಿ





ಮುಚ್ಚಿಹೋಗಿತ್ತು. ಮಣ್ಣನ್ನು ತೆರವುಗೊಳಿಸಿ ಬಸದಿಯನ್ನು ಜೀರ್ಣೋದ್ಧಾರಗೊಳಿಸುವ ಸಂದರ್ಭದಲ್ಲಿ ಈ ವಿಗ್ರಹ ದೊರಕಿದ್ದು, ಬಸದಿಯ ಯಾವ ಭಾಗದಲ್ಲಿ ದೊರಕಿತೆಂಬ ವಿವರ ಲಭ್ಯವಿಲ್ಲವಾಗಿದೆ. ಈ ಬಸದಿಯು ಈಗ ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆಯ ಸಂರಕ್ಷಿತ ಸ್ಮಾರಕವಾಗಿದೆ.

**ಶಾಸನದ ಭಾಷೆ, ಲಿಪಿ, ಕಾಲ ಇತ್ಯಾದಿ ಅಂಶಗಳು :** ಶಾಸನದ ಪಾಠವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದ್ದು, ಕನ್ನಡ ಲಿಪಿಯಲ್ಲಿ ಕೆತ್ತಲಾಗಿದೆ. ಶಾಸನದಲ್ಲಿ ಕಾಲ ದಾಖಲಾಗಿಲ್ಲ. ಲಿಪಿಯ ಆಧಾರದಿಂದ ಕ್ರಿ.ಶ. ಸು 14 ನೆಯ ಶತಮಾನ ಎಂದು ಹೇಳಬಹುದು. ವಿಗ್ರಹದ ಪೀಠದ ಮೇಲೆ ಕೆತ್ತಿರುವ ಕಾರಣ ಅಕ್ಷರಗಳನ್ನು ಬಹು ಒತ್ತಾಗಿ ಕಂಡರಿಸಲಾಗಿದೆ. ಕೆಲವು ಅಕ್ಷರಗಳನ್ನು ಸ್ಥಳಾವಕಾಶವನ್ನು ನೋಡಿಕೊಂಡು ದೊಡ್ಡ ಗಾತ್ರದಲ್ಲಿ, ಮತ್ತೆ ಕೆಲವನ್ನು ಸಣ್ಣಗಾತ್ರದಲ್ಲಿ ಕೆತ್ತಲಾಗಿದೆ. ಇದರಿಂದಾಗಿ ಕೆಲವು ಕಡೆಯ ಅಕ್ಷರಗಳನ್ನು ಓದುವುದೇ ಕಷ್ಟ ಎನ್ನುವಂತಾಗಿದೆ.

**ಶಾಸನವಿರುವ ವಿಗ್ರಹದ ಸ್ವರೂಪ ಮತ್ತು ಇತರ ಅಂಶಗಳು :** ಈ ಬಸದಿಯಲ್ಲಿ **(ಚಿತ್ರ–3)** ದೊರೆತ ಭಗ್ನವಿಗ್ರಹದ ಪೀಠದ ಕೆಳಗಿನ ಪಟ್ಟಿಕೆಯ ಮೇಲೆ 'ಪದ್ಮಾವತಿ' ಎಂದು ಸ್ಪಷ್ಟವಾಗಿ ಕೆತ್ತನೆ ಇರುವುದರಿಂದ ಈ ವಿಗ್ರಹವು ಯಕ್ಷಿ ಪದ್ಮಾವತಿಯದ್ದೆಂದು ಸ್ಪಷ್ಟಪಡುತ್ತದೆ. ಪದ್ಮಾವತಿಯು ಜೈನರ 23 ನೆಯ ತೀರ್ಥಂಕರನಾದ ಪಾರ್ಶ್ವನಾಥನ ಯಕ್ಷಿಯಾಗಿರುವುದರಿಂದ ಈ ಬಸದಿಯು ಪಾರ್ಶ್ವನಾಥನ ಬಸದಿಯಾಗಿರಬೇಕೆಂದು ತಿಳಿಯುವುದು ಸೂಕ್ತ. ಆದರೂ ಕೂಡ ಇದು ಮೊದಲು ತ್ರಿಕೂಟ ಗರ್ಭಗೃಹವನ್ನು ಹೊಂದಿದ್ದ ಕಾರಣ ಒಂದು ಗರ್ಭಗೃಹದಲ್ಲಿ ಪಾರ್ಶ್ವನಾಥನ ಮೂರ್ತಿ ಇದ್ದಿರಬಹುದು. ಮಿಕ್ಕೆರಡರಲ್ಲಿ ಯಾವ ತೀರ್ಥಂಕರನ ವಿಗ್ರಹಗಳಿತ್ತು ಎಂಬುದು ತಿಳಿಯುವುದಿಲ್ಲ. ಈಗ ಬಸದಿಯಲ್ಲಿ ಯಾವುದೇ ತೀರ್ಥಂಕರನ ವಿಗ್ರಹ ಕಂಡುಬರುವುದಿಲ್ಲ. ಈ ಪದ್ಮಾವತಿಯ ವಿಗ್ರಹದ ಒಟ್ಟು ಲಕ್ಷಣಗಳನ್ನು ಮತ್ತು ಸ್ವರೂಪವನ್ನು ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ.

* **ಚತುರ್ಭುಜಗಳನ್ನು ಉಳ್ಳ ಈ ಮೂರ್ತಿಯ ತಲೆಯ ಭಾಗ ತುಂಡಾಗಿದೆ.**
* **ಕೆಳಗಿನ ಬಲಗೈ ಅಭಯಹಸ್ತ**
* **ಹಿಂದಿನ ಬಲಗೈ ಕಮಲಪುಷ್ಪ (ತುಂಡಾಗಿರುವ ಕಾರಣ ಕಮಲಪುಷ್ಪವನ್ನು ನೋಡಲು ಸಾಧ್ಯವಿಲ್ಲ)**
* **ಕೆಳಗಿನ ಎಡಗೈಯಲ್ಲಿ ಹಣ್ಣುಗಳು**
* **ಹಿಂದಿನ ಎಡಗೈಯಲ್ಲಿ ಮಣಿಸರ**
* **ಪದ್ಮಾವತಿಯು ಮೂರು ಪಟ್ಟಿಕೆಗಳಿಂದ ಕೂಡಿರುವ ಪೀಠದ ಮೇಲೆ ಕುಳಿತಿದ್ದು, ಪೀಠದ ಮೇಲ್ಪಟ್ಟಿಕೆಯಲ್ಲಿ 5 ಸಾಲುಗಳ ಶಾಸನಪಾಠವನ್ನು ಕೆತ್ತಲಾಗಿದೆ. ಕೆಳಪಟ್ಟಿಕೆಯಲ್ಲಿ ಒಂದು ಸಾಲನ್ನು ಕೆತ್ತಲಾಗಿದೆ.**
* **ಕೊರಳಲ್ಲಿ, ಭುಜದಲ್ಲಿ ಆಭರಣಗಳು, ಕೈಗಳಲ್ಲಿ ಬಳೆಗಳು ಇವೆ.**
* **ಪದ್ಮಾವತಿಯ ಪಾದದ ಬಳಿ ಕುಕ್ಕುಟಸರ್ಪವನ್ನು ಕೆತ್ತಲಾಗಿದೆ. ಇದು ಪದ್ಮಾವತಿಯ ವಾಹನವಾಗಿದೆ.**

*** ವಿಗ್ರಹದ ಸುತ್ತಲೂ ಪ್ರಭಾವಳಿ ಇರುವ ಸೂಚನೆ ಇದ್ದು, ಈಗ ಭಗ್ನಗೊಂಡಿದೆ. ಆದರೂ ಲಭ್ಯವಿರುವ ಭಾಗವನ್ನು ಗಮನಿಸಿದರೆ ಇದು ದ್ರಾವಿಡ ಶೈಲಿಯದೆಂದು ಹೇಳಬಹುದು.**

*** ವಿಗ್ರಹವನ್ನು ನೆಡಲು ಅನುಕೂಲವಾಗುವಂತೆ ಪೀಠದ ಕೆಳಗೆ ವಿಗ್ರಹವನ್ನು ಕೆತ್ತಿರುವ ಕಲ್ಲನ್ನೇ ಚೂಪಾಗಿ ಗೂಟದಂತೆ ಪರಿವರ್ತಿಸಲಾಗಿದೆ. ಈ ಗೂಟವು ಸುಮಾರು 0.08 ಮೀಟರ್ ಉದ್ದವಿದೆ. ಇದನ್ನು ಪೀಠದಲ್ಲಿ ಇರಿಸಲು ಮಾಡಿದಂತಹುದಾಗಿದೆ ಎಂದು ಹೇಳಬಹುದು.**

**ಶಾಸನವಿರುವ ವಿಗ್ರಹ ದೊರೆತ ಬಸದಿಯ ಸ್ವರೂಪ :** ಈ ಬಸದಿಯ ಬಗೆಗೆ ಮೊದಲು ವಿವರವಾಗಿ ದಾಖಲಿಸಿದವರು ಜಾರ್ಜ್ ಮಿಶೆಲ್ ಅವರು[1]. ತಮ್ಮ ಕೃತಿಯಲ್ಲಿ ತಳನಕ್ಷೆಗಳ ಸಹಿತವಾಗಿ ಈ ಬಸದಿಯ ಸ್ವರೂಪವನ್ನು ವಿವರಿಸಿದ್ದಾರೆ. ಇದೇ ವಿವರಗಳನ್ನೇ ಎಚ್.ಟಿ. ತಳವಾರ್ ಅವರು ತಮ್ಮ ಕೃತಿಯಲ್ಲಿ ಯಥಾವತ್ತಾಗಿ ದಾಖಲಿಸಿದ್ದಾರೆ[2]. ಸಿ.ಎಸ್. ವಾಸುದೇವನ್ ಅವರು ಇದೇ ವಿವರಗಳನ್ನು ಅವಲಂಬಿಸಿ, ಮತ್ತೊಮ್ಮೆ ಕ್ಷೇತ್ರಕಾರ್ಯವನ್ನೂ ನಡೆಸಿ ಸ್ವಲ್ಪಮಟ್ಟಿಗೆ ವಿಭಿನ್ನ ರೀತಿಯ ವಿಶ್ಲೇಷಣೆಯನ್ನು ನಡೆಸಿದ್ದಾರೆ[3]. ಈ ಬಸದಿಯ ಮೂಲ ಸ್ವರೂಪವನ್ನು ತಿಳಿಯಲು ಈ ಮೂವರು ಸಂಶೋಧಕರಿಂದ ಪ್ರಕಟವಾಗಿರುವ ಬರಹಗಳು ಮತ್ತು ಛಾಯಾಚಿತ್ರಗಳೇ ಪ್ರಮುಖ ಆಕರಗಳಾಗಿವೆ. ಇವುಗಳ ಆಧಾರದಿಂದ ಈ ಬಸದಿಯ ವಾಸ್ತುವಿನ್ಯಾಸವನ್ನು ಕೆಳಗೆ ಸಂಕ್ಷಿಪ್ತವಾಗಿ ಸಂಗ್ರಹಿಸಿಕೊಡಲಾಗಿದೆ.

**ಈ ಬಸದಿಯು ವಿಶಾಲವಾದ ನವರಂಗ, ಮುಖಮಂಟಪ, ತ್ರಿಕೂಟ ಗರ್ಭಗೃಹವನ್ನು ಹೊಂದಿತ್ತು. ಉದ್ದನೆಯ ಅರ್ಧಮಂಟಪ, ಪಾಳು ಬಿದ್ದಿರುವ ಚೌಕಾಕಾರದ ನವರಂಗವಿದ್ದು, ಇಲ್ಲಿ ಕೆಲವು ಕಂಬಗಳು ಬಿದ್ದಿರುವುದನ್ನು ಕಾಣಬಹುದು. ಇದರ ದ್ವಾರವು ಮಣಿವಿನ್ಯಾಸವನ್ನು ಹೊಂದಿದೆ. ಬಾಗಿಲವಾಡವು ಆಕರ್ಷಕ ವಿನ್ಯಾಸವನ್ನು ಹೊಂದಿದ್ದು, ಇದರ ಲಲಾಟದಲ್ಲಿ ಕುಳಿತಿರುವ ಜಿನನ ಉಬ್ಬುಶಿಲ್ಪವಿದ್ದು, ಇದರ ಮೇಲೆ ತೊಲೆ, ತೊಲೆಯ ಮೇಲೆ ಕೀರ್ತಿಮುಖವನ್ನು ಕಾಣಬಹುದು. ಇಲ್ಲಿ ಕಂಡುಬರುವ ಕಂಬಗಳು ಕ್ರಿ.ಶ. 14 ನೆಯ ಶತಮಾನದ ಶೈಲಿಯಲ್ಲಿವೆ. ಇಲ್ಲಿಂದ ಮುಂದೆ ಸಾಗಿದರೆ, ಮುಖಮಂಟಪದ ದ್ವಾರವಿದ್ದು, ಇದರ ಬಾಗಿಲುವಾಡವು ಸರಳ ವಿನ್ಯಾಸವನ್ನು ಹೊಂದಿದೆ. ಇದರ ಲಲಾಟದಲ್ಲಿಯೂ ಜಿನನ ಶಿಲ್ಪವನ್ನು ಕಾಣಬಹುದು. ಈ ದ್ವಾರದ ಕೆಳಭಾಗದಲ್ಲಿ ಪೂರ್ಣಕುಂಭದ ವಿನ್ಯಾಸವಿದ್ದು ಬಾಗಿಲ ಎರಡೂ ಕಡೆ ದ್ವಾರಪಾಲಕರನ್ನು ಕೆತ್ತಲಾಗಿದ್ದು, ಇವರುಗಳ ಒಂದು ಕೈಯಲ್ಲಿ ಗದೆಯಿದ್ದು, ಮತ್ತೊಂದು ಕೈ ಅಭಯ ಮುದ್ರೆಯಲ್ಲಿದೆ. ದ್ವಾರಪಾಲಕರ ಪಕ್ಕದ ಭಿತ್ತಿಯ ಎರಡೂ ಬದಿಯಲ್ಲಿ ಆನೆಯ ಮೇಲೆ ಕುಳಿತಿರುವ ಧರಣೇಂದ್ರ ಯಕ್ಷನ ಶಿಲ್ಪವಿದೆ. ಉತ್ಕೃಷ್ಟ ಕೆತ್ತನೆಗಳುಳ್ಳ ಮುಖಮಂಟಪವು ನಂತರದ ಕಾಲದಲ್ಲಿ ಸೇರ್ಪಡೆಗೊಂಡಿದ್ದು, ಇಲ್ಲಿ ಮಧ್ಯಭಾಗದಲ್ಲಿ ಸ್ವತಂತ್ರವಾಗಿ ನಿಂತಿರುವ ಕಂಬಗಳು ಷೋಡಶ, ಅಷ್ಟ, ಷೋಡಶ ವಿನ್ಯಾಸವನ್ನು ಹೊಂದಿವೆ. ತಳಭಾಗದಲ್ಲಿ ವಿಭಿನ್ನ ಆಕಾರದಲ್ಲಿ ಕುಳಿತಿರುವ ಯಾಳಿ ಶಿಲ್ಪಗಳಿವೆ. ಕಂಬದ ಮಧ್ಯಭಾಗದಲ್ಲಿ ಬಳ್ಳಿ, ಹಂಸ, ಪೌರಾಣಿಕ ಪ್ರಾಣಿಗಳು ಮತ್ತು ಕೋತಿಯ ಶಿಲ್ಪವಿದೆ. ಕಂಬದ ಮೇಲ್ಭಾಗ ದಲ್ಲಿ ಯಾಳಿ ಮತ್ತು ಗಿಣಿಯ ಶಿಲ್ಪಗಳನ್ನು ಕಾಣಬಹುದು. ಮೇಲ್ಛಾವಣಿಯು ಕಮಲಭುವನೇಶ್ವರಿಯನ್ನು ಹೊಂದಿದೆ. ಗರ್ಭಗೃಹದ ಮೇಲ್ಭಾಗದ ಶಿಖರವು ಇಟ್ಟಿಗೆಯಲ್ಲಿ ನಿರ್ಮಾಣಗೊಂಡಿದ್ದು ಪ್ರಕೃತ ಪಾಳುಬಿದ್ದು ಹಾಳಾಗಿದೆ. ಹೊರ**





**ಭಾಗದ ಮುಖಮಂಟಪವು ಎರಡು ತಳ ಅಧಿಷ್ಠಾನಗಳನ್ನು ಹೊಂದಿದ್ದು ಉಪಾನ, ಜಗತೀ, ಕಂಠ, ಕುಮುದ, ಪಟ್ಟಿಕಾ ಮತ್ತು ಕಂಠ ಎಂಬ ಭಾಗಗಳನ್ನು ಕ್ರಮವಾಗಿ ಹೊಂದಿದೆ. ಮುಖಮಂಟಪದ ಗೋಡೆಯು ಒಳ ಹೊರ ಚಾಚುಗಳನ್ನು ಹೊಂದಿದೆ. ಮೂಲೆಯ ಹೊರಚಾಚು ಸರಳವಾಗಿದ್ದು, ದಕ್ಷಿಣಭಾಗದ ಹೊರಚಾಚುಗಳು ಆಕರ್ಷಕವಾಗಿದ್ದು ಗೂಡುಗಳನ್ನು ಹೊಂದಿದೆ. ಪೂರ್ವ ಮತ್ತು ಪಶ್ಚಿಮದ ಭಾಗಗಳು ಕುಂಭಪಂಜರಗಳಿಂದ ಅಲಂಕೃತವಾಗಿವೆ. ಈ ಲಕ್ಷಣಗಳನ್ನು ಗಮನಿಸಿದರೆ ಇದು ಕ್ರಿ.ಶ. ಸು 15 ನೆಯ ಶತಮಾನದ ಸೇರ್ಪಡೆ ಎಂದು ಹೇಳಬಹುದು.**

ಮೇಲಿನ ವಿವರಗಳು ಬಸದಿಯು ಮೊದಲು ಇದ್ದ ಸ್ವರೂಪದ್ದಾಗಿದೆ. ಬಹುವಾಗಿ ಹಾಳಾಗಿದ್ದ, ಹಾಳಾಗುತ್ತಿದ್ದ ಇದನ್ನು ಈಚೆಗೆ ಬಹಳವಾಗಿ ಜೀರ್ಣೋದ್ಧಾರ ಮಾಡಿ ಸಂರಕ್ಷಿಸಲಾಗಿದೆ **(ಚಿತ್ರಗಳು–4, 5)**. ಈ ಬಸದಿಯ ಕಾಲವನ್ನು ವಾಸ್ತುಶಿಲ್ಪದ ಆಧಾರದ ಮೇಲೆ ಕ್ರಿ.ಶ. ಸು 14 ನೆಯ ಶತಮಾನವೆಂದು ಊಹಿಸಲಾಗಿತ್ತು. ಈಗ 14 ನೆಯ ಶತಮಾನದ ಲಿಪಿಲಕ್ಷಣವನ್ನು ಹೊಂದಿರುವ ಶಾಸನ ದೊರೆತಿರುವುದರಿಂದ ಈ ಬಸದಿಯ ನಿರ್ಮಾಣ ಕಾಲವನ್ನು ಕ್ರಿ.ಶ. 14 ನೆಯ ಶತಮಾನದ ಸುಮಾರೆಂದು ಖಚಿತವಾಗಿ ಹೇಳಬಹುದು. ಸೋಮವಾರದ ಬಾಗಿಲ ಉಲ್ಲೇಖ ಈ ಬಸದಿಯ ಸಮೀಪದ ಗುಡ್ಡದಲ್ಲಿರುವ ವೀರಬುಕ್ಕರಾಯನ {ಒಂದನೆಯ ಬುಕ್ಕರಾಯ, ಕ್ರಿ.ಶ. 1355–1377} ಶಾಸನದಲ್ಲಿ ದೊರಕುತ್ತದೆ[4]. ಇದರಿಂದ ಸೋಮವಾರದ ಬಾಗಿಲ ಉಲ್ಲೇಖವಿರುವ ಶಾಸನದ ಕಾಲ ಮತ್ತು ಬಸದಿಯ ನಿರ್ಮಾಣದ ಕಾಲ ಒಂದೇ ಅವಧಿಯದ್ದಾಗಿದೆ ಎಂದು ಖಚಿತವಾಗಿ ಹೇಳಬಹುದು. ಇದಕ್ಕೆ ಬಸದಿಯಲ್ಲಿ ದೊರೆತ ಶಾಸನದ ಲಿಪಿಯೂ ಪುಷ್ಟಿಯನ್ನೊದಗಿಸುತ್ತದೆ. ವಿಜಯನಗರ ಸಾಮ್ರಾಜ್ಯದ ಆರಂಭದ ವರ್ಷಗಳಲ್ಲಿಯೇ {ಬಹುಶಃ ಒಂದನೆಯ ಬುಕ್ಕರಾಯನ ಅವಧಿಯಲ್ಲಿ} ಈ ಬಸದಿಯ ನಿರ್ಮಾಣ ವಾಗಿರುವುದು ಗಮನಾರ್ಹ ಅಂಶ.

**ಶಾಸನಪಾಠದ ಅರ್ಥ ಮತ್ತು ಇತರ ಅಂಶಗಳು :** ಶಾಸನದಪಾಠವು ಲಿಪಿಕಾರ, ಕಂಡರಣೆಕಾರನಿಂದಾಗಿರುವ ಸ್ಖಾಲಿತ್ಯಗಳ ಕಾರಣದಿಂದ ಸಮರ್ಪಕವಾಗಿ ಅರ್ಥ ವಾಗುವುದಿಲ್ಲ. ಮಲಪ್ಪನ ಮಗ ಗುಮ್ಮಿ[ದೇ]ವಯ್ಯನು ಬಸದಿಗೆ ಪದ್ಮಾವತಿಯ ವಿಗ್ರಹವನ್ನು ಮಾಡಿಸಿಕೊಟ್ಟಿದ್ದಾನೆ ಎಂದು ತಿಳಿಯಲು ಸಾಧ್ಯವಿದೆ. ಚಕುಲಿಯ ಎಂಬ ಶಬ್ದವು ಸಂದರ್ಭದ ಬಲದಿಂದ ಹೇಳುವುದಾದರೆ ಯಾವುದೋ ಊರಿನ ಹೆಸರಿರಬೇಕೆಂದು ಕಾಣುತ್ತದೆ. ಹಲಿಯ ಎಂಬುದು ಬಹುಶಃ ಮನೆತನದ ಹೆಸರಿರಬೇಕೆಂದು ಊಹಿಸುವಂತಿದೆ. ಚಕುಲಿಯ, ಹಲಿಯ ಎಂಬುದಾಗಿ ಷಷ್ಠ್ಯಂತ ರೂಪಗಳಿರುವುದರಿಂದ ಈ ರೀತಿಯ ಊಹೆಯನ್ನು ಮಾಡಲು ಅವಕಾಶವಿದೆ. ವಟ್ಟಿ ಎಂಬುದು ವಿಟ್ಟ ಅಥವಾ ಬಿಟ್ಟ ಎಂಬುದಕ್ಕೆ ಬದಲಾಗಿ ಕೆತ್ತಲಾಗಿರುವ ತಪ್ಪು ರೂಪವಾಗಿದೆ. ಕಾಣಿ ಎಂದರೆ ನೀಡುವುದು, ಕೊಡುವುದು ಎಂದರ್ಥ. ಇದಕ್ಕೆ ಬೇರೆ ಬೇರೆ ಅರ್ಥಗಳಿದ್ದರೂ ಈ ಶಾಸನದ ಸಂದರ್ಭಕ್ಕೆ ಬಹುಶಃ ಹೊಂದುವುದಿಲ್ಲ. ಕಾಣಿಕೆ ಎನ್ನುವ ಶಬ್ದವನ್ನು ಕಾಣಿ ಎಂದು ಕೂಡ ಕೆತ್ತಿರುವ ಸಾಧ್ಯತೆ ಇದೆ. ಅಂದರೆ ಚಕುಲಿ ಎಂಬ ಊರಿನ ಹಲಿ ಮನೆತನದ ಮಲಪ್ಪನ ಮಗ ಗುಮ್ಮಿದೇವಯ್ಯನು ಬಸದಿಗೆ ಪದ್ಮಾವತಿಯ ಪ್ರತಿಮೆಯನ್ನು ಮಾಡಿಸಿಕೊಟ್ಟಿದ್ದಾನೆ

ಎಂಬುದಾಗಿ ಸ್ಥೂಲವಾಗಿ ಅರ್ಥವನ್ನು ಹೇಳಬಹುದು. ಇದಕ್ಕಿಂತ ಬೇರೆ ರೀತಿಯಲ್ಲಿ ಅರ್ಥವನ್ನು ಹೇಳಲು ಸದ್ಯದಲ್ಲಂತೂ ಸಾಧ್ಯವಾಗುತ್ತಿಲ್ಲ. ಚಕುಲಿ ಎಂಬುದು ಸ್ಥಳನಾಮವೇ ಆಗಿದೆ ಎಂಬುದು ಖಚಿತಪಟ್ಟು, ಆ ಸ್ಥಳದ ಶೋಧನೆ ಸಾಧ್ಯವಾದರೆ ಮತ್ತಷ್ಟು ಹೆಚ್ಚಿನ ಮಾಹಿತಿ ಲಭ್ಯವಾಗುತ್ತದೆ.

**ಹಂಪಿ ಪರಿಸರದಲ್ಲಿ ಜೈನ ಧರ್ಮ** : ಹಂಪಿ ಪರಿಸರದಲ್ಲಿ ಜೈನ ಧರ್ಮದ ಕುರುಹುಗಳು ಬಹಳವಾಗಿ ದೊರೆತಿಲ್ಲವಾದರೂ ತಕ್ಕಮಟ್ಟಿಗೆ ದೊರೆತಿವೆ. ಆನೆಗೊಂದಿಯಲ್ಲಿನ ಶಾಸನಗಳನ್ನೂ ಪರಿಗಣಿಸಿದರೆ ಸುಮಾರು 25 ರಷ್ಟು ಜೈನಶಾಸನಗಳು ಲಭ್ಯವಾಗಿವೆ ಎಂದು ಹೇಳಬಹುದು. ಇವುಗಳಲ್ಲಿ ಸು 15–20 ಶಾಸನಗಳು ನಿಸಿಧಿ ಶಾಸನಗಳೇ ಆಗಿವೆ. ಮಿಕ್ಕ ಶಾಸನಗಳು ಬಲುಮಟ್ಟಿಗೆ ದಾನ–ದತ್ತಿಗಳಿಗೆ ಸಂಬಂಧಪಟ್ಟವಾಗಿವೆ. ಈ ಎಲ್ಲ ಶಾಸನಗಳಿಂದ ಹೆಚ್ಚು ವಿವರಗಳು ತಿಳಿದುಬರುವುದಿಲ್ಲವಾದರೂ ಜೈನ ಮುನಿಗಳ ಇತಿಹಾಸ ಮತ್ತು ಜೈನಶಿಲ್ಪಗಳ ಬಗೆಗೆ ಅರಿಯಲು ಉತ್ತಮ ಆಕರಗಳಾಗಿವೆ. ಈ ಶಾಸನಗಳ ಕಾಲ ಕ್ರಿ.ಶ. ಸು 11 ಶತಮಾನದಿಂದ ಕ್ರಿ.ಶ. ಸು 17 ನೆಯ ಶತಮಾನದ ವರೆಗೂ ಹಬ್ಬಿದೆ. ಈ ಎಲ್ಲ ಶಾಸನಗಳೂ ಸೂಕ್ತ ವಿವರಗಳು ಮತ್ತು ಪರಿಷ್ಕೃತಪಾಠಗಳ ಸಹಿತ ಒಂದೆಡೆ ಸಂಕಲಿತವಾಗಬೇಕಿದೆ.

ಹಂಪಿ ಪರಿಸರದಲ್ಲಿ ಅನೇಕ ಬಸದಿಗಳು ಕಂಡುಬರುತ್ತಿದ್ದರೂ ಹಲವು ನಾಶವಾಗಿವೆ, ಮತ್ತೆ ಕೆಲವು ಜೀರ್ಣೋದ್ಧಾರಗೊಂಡಿವೆ. ಕೆಳಗೆ ಹಂಪಿ ಪರಿಸರದ ಜೈನ ಬಸದಿಗಳ ಬಗೆಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಲಾಗಿದೆ. ಇವುಗಳ ವಾಸ್ತುಶಿಲ್ಪ, ಶಿಲ್ಪಕಲೆ ಇತ್ಯಾದಿ ಅಂಶಗಳ ಬಗೆಗೆ ಈಗಾಗಲೇ ವಿಶ್ಲೇಷಣೆ ನಡೆದಿರುವುದರಿಂದ ಇಲ್ಲಿ ಅವುಗಳ ಬಗೆಗೆ ಚರ್ಚಿಸಿಲ್ಲ. ಇದರ ಮಾಹಿತಿಗೆ ಸಂಬಂಧಪಟ್ಟ ಆಕರಗಳನ್ನು ಅವಶ್ಯವಾಗಿ ಗಮನಿಸಬೇಕು.

1. **ಗಾಣಿಗಿತ್ತಿ ಜಿನಾಲಯ (ಕುಂಥುನಾಥ ಜಿನಾಲಯ) – ಕಮಲಾಪುರ–ಕಂಪ್ಲಿ ರಸ್ತೆಯಲ್ಲಿ ಭೀಮನ ಬಾಗಿಲಿಗೆ ಸಮೀಪದಲ್ಲಿದೆ. ಇದನ್ನು ಕ್ರಿ.ಶ. 1386 ರಲ್ಲಿ ಇರುಗಪ್ಪ ದಂಡನಾಯಕನು ನಿರ್ಮಿಸಿದ.**
2. **ಪಾರ್ಶ್ವನಾಥ ಬಸದಿ – ಪಾನ್ ಸುಪಾರಿ ಬಜಾರ್‌ನಲ್ಲಿರುವ ಈ ಬಸದಿಯನ್ನು ಕ್ರಿ.ಶ. 1426 ರಲ್ಲಿ ಎರಡನೆಯ ದೇವರಾಯನು ನಿರ್ಮಿಸಿದಂತೆ ತಿಳಿದುಬರುತ್ತದೆ.**
3. **ಶಾಂತಿನಾಥ ಬಸದಿ : ಪಾನ್ ಸುಪಾರಿ ಬಜಾರ್‌ನಲ್ಲಿ ಹಿಂದೂ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಬಸದಿ ಇದಾಗಿದೆ.**
4. **ಸೋಮವಾರದ ಬಾಗಿಲ ಬಳಿ ಇರುವ ಜೈನ ಬಸದಿ : ಪ್ರಕೃತ ಲೇಖನದಲ್ಲಿ ಪ್ರಕಟಿಸಿರುವ ಶಿಲ್ಪಶಾಸನ ದೊರೆತ ಬಸದಿಯಲ್ಲದೆ ಮತ್ತೊಂದು ಬಸದಿಯೂ ಸೋಮವಾರದ ಬಾಗಿಲ ಬಳಿ ಇದೆ (ಇದು ಸೋಮವಾರದ ಬಾಗಿಲು ಮತ್ತು ಸಿಂಘಾರದ ಹೆಬ್ಬಾಗಿಲ ನಡುವೆ ಇದೆ).**
5. **ಕಡೆರಾಮಪುರದಲ್ಲಿರುವ ಜೈನ ಬಸದಿ**
6. **ಕಂಪ್ಲಿ ರಸ್ತೆಯಲ್ಲಿರುವ ಜೈನ ಬಸದಿ ಇದು ಬಹಳವಾಗಿ ಹಾಳಾಗಿದೆ.**
7. **ಹೊದೆಯ ಹೆಬ್ಬಾಗಿಲ ಉತ್ತರಕ್ಕೆ ಕಮಲ ಮಹಲ್‌ನಿಂದ ತುರ್ತಾ ಕಾಲುವೆ**





**ಕಡೆ ಹೋಗುವ ದಾರಿಯಲ್ಲಿ ಇರುವ ಕದಂಬ–ನಾಗರ ಶಿಖರವನ್ನು ಉಳ್ಳ ಬಸದಿ. ಶೈಲಿಯನ್ನು ಗಮನಿಸಿದರೆ ಕ್ರಿ.ಶ. ಸು 7–8 ಶತಮಾನದ ನಿರ್ಮಾಣ ವೆಂದು ಹೇಳಬಹುದು.**

8. **ಸಿಂಘಾರದ ಹೆಬ್ಬಾಗಿಲ ಬಳಿ ಇರುವ ಎರಡು ಕಟ್ಟಡಗಳು ಬಸದಿಗಳೆಂದು ಅನುಮಾನಿಸಲು ಆಸ್ಪದವಿದೆ. ಆದರೆ ಹೆಚ್ಚು ಹಾಳಾಗಿರುವ ಕಾರಣ ಖಚಿತ ಪಡಿಸಲು ಸಾಧ್ಯವಾಗುತ್ತಿಲ್ಲ.**
9. **ಆನೆಗೊಂದಿಯಲ್ಲಿರುವ ಮಹಾವೀರ ತೀರ್ಥಂಕರನ ಬಸದಿ. ಇದರ ಕಾಲ ಕ್ರಿ.ಶ. ಸು 12 ನೆಯ ಶತಮಾನ ಎಂದು ಹೇಳಬಹುದು.**

ಮೇಲಿನ ಸಂಕ್ಷಿಪ್ತ ವಿವರಗಳಿಂದ ಹಂಪಿ ಪರಿಸರದಲ್ಲಿ ಜೈನಧರ್ಮದ ಪ್ರಭಾವವೂ ಇತ್ತು ಎಂಬುದು ಸ್ಪಷ್ಟಪಡುತ್ತದೆ. ಮೇಲೆ ಹೆಸರಿಸಿರುವ ಬಹುತೇಕ ಬಸದಿಗಳು ಹಾಳಾಗಿವೆ. ಇವುಗಳಲ್ಲಿ ಕೆಲವು ಬಸದಿಗಳ ನಿರ್ಮಾಣ ಕಾಲ ಕ್ರಿ.ಶ.ಸು 14–16 ನೆಯ ಶತಮಾನ ಎಂಬುದಾಗಿ ತಿಳಿಯಲು ಸಾಧ್ಯವಿದೆ. ಇವು ಯಾವ ತೀರ್ಥಂಕರನಿಗೆ ಸಂಬಂಧಪಟ್ಟದ್ದು ಎಂದು ಕೂಡ ಹೇಳಲು ಸಾಧ್ಯವಿಲ್ಲ. ಶಾಸನಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಬಹುತೇಕ ಶಾಸನಗಳು ತ್ರುಟಿತಗೊಂಡಿದ್ದು ಆಶಯವೇ ಸ್ಪಷ್ಟವಾಗಿ ತಿಳಿಯದಂತಾಗಿದೆ. ಆದರೂ ಶಾಸನೋಕ್ತ ಬಸದಿಗಳ ಶೋಧ ನಡೆಯಬೇಕಿದೆ. ಪ್ರಕೃತ ಲೇಖನದಲ್ಲಿ ಹಂಪಿಯ ಸೋಮವಾರದ ಬಾಗಿಲ ಸಮೀಪದ ಜೈನ ಬಸದಿಯಲ್ಲಿ ದೊರೆತ ಶಿಲ್ಪಶಾಸನವನ್ನು ವಿವರಗಳ ಸಹಿತ ಪ್ರಕಟಿಸಲಾಗಿದೆ ಮತ್ತು ಬಸದಿಯ ಬಗೆಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇಲ್ಲಿ ಕೆಲವು ಅಂಶಗಳನ್ನು ಅನಿವಾರ್ಯವಾಗಿ ಪ್ರಕಟಿಸುವುದು ಸಾಧ್ಯವಿಲ್ಲದ ಸ್ಥಿತಿ ಇರುವುದು ಕೂಡ ಗಮನಾರ್ಹವೇ ಆಗಿದೆ. ಈ ವಿಶ್ಲೇಷಣೆಯಲ್ಲಿ ಸಾಮಗ್ರಿಗಳ ಅಭಾವದ ಕಾರಣ ಲೋಪದೋಷಗಳೂ ಇದ್ದಿರಬಹುದು. ಇವುಗಳನ್ನು ಆಧಾರಸಹಿತವಾಗಿ ತಿಳಿಸಿದಲ್ಲಿ ಕೃತಜ್ಞತೆಯಿಂದ ತಿದ್ದಿಕೊಳ್ಳಲಾಗುವುದು. ಈಗ ಲಭ್ಯವಾಗಿರುವ ಶಿಲ್ಪಶಾಸನವನ್ನು, ಸಾಹಿತ್ಯ, ಶಿಲ್ಪಕಲೆ ಇತ್ಯಾದಿಗಳನ್ನು ಬಳಸಿಕೊಂಡು ಹಂಪಿ ಪರಿಸರದ ಜೈನಧರ್ಮದ ಬಗೆಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ[5].

### ಆಧಾರಸೂಚಿ ಮತ್ತು ಕೊನೆಟಿಪ್ಪಣಿ


1. (ಅ) ***Vijayanagara Architectural Inventory of the Urban Core {Volume-1, Text, Maps, Line Drawings}*** - George Michell, Directorate of Archaeology & Museums, Mysore-1990, pp 155-156

   (ಆ) ***Vijayanagara Architectural Inventory of the Urban Core {Volume-2, Photographs}*** - George Michell, Directorate of Archaeology & Museums, Mysore-1990, pp 164-165
2. ***Jaina Art and Architecture at Vijayanagara (Hampi)***-H.T. Talwar, Directorate of Archaeology & Museums, Mysore-1997, pp 12-13
3. 'Locational Analysis of Jain Monuments at Hampi'-C.S. Vasudevan, *Jainsim through the Ages* (Ed) R.Gopal, Directorate of Archaeology & Museums, Mysore-2011, pp 527-540



ಚಿತ್ರ ೧



ಚಿತ್ರ ೨



ಚಿತ್ರ ೩



ಚಿತ್ರ ೪



ಚಿತ್ರ ೫



ಚಿತ್ರ ೬





4. ***Vijayanagara progress of Research 1983-84***, (Ed) M.S. Nagaraja Rao, Directorate of Archaeology & Museums, Mysore-1985, pp 23, 96
5. ಈ ಲೇಖನವನ್ನು ಸಿದ್ಧಪಡಿಸಲು ಅಗತ್ಯವಾದ ಮಾಹಿತಿಗಳನ್ನು ಛಾಯಾಚಿತ್ರಗಳನ್ನು ಒದಗಿಸಿದ ಟಿ.ಎಸ್. ಗಂಗಾಧರ (ನಿವೃತ್ತ ಉಪನಿರ್ದೇಶಕರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು, ಪರಂಪರೆ ಇಲಾಖೆ, ಹಂಪೆ) ಅವರಿಗೂ ಸಿ.ಎಸ್. ವಾಸುದೇವನ್ (ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಅವರಿಗೂ ಪಿ.ವಿ. ಕೃಷ್ಣಮೂರ್ತಿ (ಶಾಸನಲಿಪಿ ತಜ್ಞರು, ಬೆಂಗಳೂರು) ಅವರಿಗೂ ಪಿ.ಜಯಸಿಂಹ (ಸಂಶೋಧಕರು, ದ ಮಿಥಿಕ್ ಸೊಸೈಟಿ, ಬೆಂಗಳೂರು) ಅವರಿಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪಿಎಚ್.ಡಿ ವ್ಯಾಸಂಗ ಮಾಡುತ್ತಿರುವ ರೇವಣ್ಣಗೌಡ ಅವರಿಗೂ ಕೃತಜ್ಞತೆಗಳು.

**ಶಾಸನದ ಪಾಠ (ಚಿತ್ರ–6)**

**ಪದ್ಮಾವತಿ ವಿಗ್ರಹದ ಪೀಠದ ಮೇಲಿನ ಪಟ್ಟಿಕೆಯಲ್ಲಿರುವ ಪಾಠ**

1 ಚಕುಲಿಯ ಹಲಿಯ

2 ಮಲಪ್ಪನ ಮಗ ಗುಂ

3 ಮಿ

4 [ದೇ*]ವುಯ ವಟ್ಟಿ ಕಾಣಿ

**ವಿಗ್ರಹದ ಪೀಠದ ಕೆಳಗಿನ ಪಟ್ಟಿಕೆಯಲ್ಲಿರುವ ಪಾಠ**

5 ಪದ್ಮಾವತಿ

■

# ‘ಇತಿಹಾಸ ದರ್ಪಣ’ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

‘ಇತಿಹಾಸ ದರ್ಪಣ’ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು ‘ನುಡಿ’ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ–ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು ‘ಪೂರ್ವೋಕ್ತ’ ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕ್ಷಣದಲೇ ಉಲ್ಲೇಖಿಸುವ ಸಂದರ್ಭದಲ್ಲಿ ‘ಇಲ್ಲೇ’ ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’ ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **‘itihasadarpana@gmail.com’**ಗೆ ಇ–ಮೇಲ್ ಮಾಡುವುದು.

**–ಸಂಪಾದಕರು**





## ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ

| ಸಂಚಿಕೆಗಳು | ರೂ. | ✓ | ಪುಸ್ತಕಗಳು | ರೂ. | ✓ |
|---|---|---|---|---|---|
| ಇತಿಹಾಸ ದರ್ಪಣ ಪುಸ್ತಕ –1* | 10 | | ಇತಿಹಾಸ ದರ್ಪಣ ಪುಸ್ತಕ –16 | 40 | |
| ಇತಿಹಾಸ ದರ್ಪಣ ಪುಸ್ತಕ –2* | 10 | | ಇತಿಹಾಸ ದರ್ಪಣ ಪುಸ್ತಕ –17 | 60 | |
| ಇತಿಹಾಸ ದರ್ಪಣ ಪುಸ್ತಕ –3* | 10 | | ಇತಿಹಾಸ ದರ್ಪಣ ಪುಸ್ತಕ –18 | 70 | |
| ಇತಿಹಾಸ ದರ್ಪಣ ಪುಸ್ತಕ –4*[1] | 90 | | ಇತಿಹಾಸ ದರ್ಪಣ ಪುಸ್ತಕ –19 | 75 | |
| ಇತಿಹಾಸ ದರ್ಪಣ ಪುಸ್ತಕ –5 | 10 | | ಇತಿಹಾಸ ದರ್ಪಣ ಪುಸ್ತಕ –20 | 75 | |
| ಇತಿಹಾಸ ದರ್ಪಣ ಪುಸ್ತಕ –6,7* | 20 | | ಇತಿಹಾಸ ದರ್ಪಣ ಪುಸ್ತಕ –21,22 | 150 | |
| ಇತಿಹಾಸ ದರ್ಪಣ ಪುಸ್ತಕ –8 [2] | 100 | | ಇತಿಹಾಸ ದರ್ಪಣ ಪುಸ್ತಕ –23 | 80 | |
| ಇತಿಹಾಸ ದರ್ಪಣ ಪುಸ್ತಕ –9 | 20 | | ಇತಿಹಾಸ ದರ್ಪಣ ಪುಸ್ತಕ –24 | 90 | |
| ಇತಿಹಾಸ ದರ್ಪಣ ಪುಸ್ತಕ –10 | 30 | | ಇತಿಹಾಸ ದರ್ಪಣ ಪುಸ್ತಕ –25 [4] | 180 | |
| ಇತಿಹಾಸ ದರ್ಪಣ ಪುಸ್ತಕ –11 | 30 | | ಇತಿಹಾಸ ದರ್ಪಣ ಪುಸ್ತಕ –26 | 75 | |
| ಇತಿಹಾಸ ದರ್ಪಣ ಪುಸ್ತಕ–12, 13[3] | 110 | | ಇತಿಹಾಸ ದರ್ಪಣ ಪುಸ್ತಕ –27 | 100 | |
| ಇತಿಹಾಸ ದರ್ಪಣ ಪುಸ್ತಕ –14 | 30 | | ಇತಿಹಾಸ ದರ್ಪಣ ಪುಸ್ತಕ –28 | 100 | |
| ಇತಿಹಾಸ ದರ್ಪಣ ಪುಸ್ತಕ –15 | 40 | | ಇತಿಹಾಸ ದರ್ಪಣ ಪುಸ್ತಕ – 29 | 100 | |

**ಒಟ್ಟು ಮೊತ್ತ**

ಹಿಂದಿನ ಸಂಚಿಕೆಗಳು ಬೇಕಾಗಿರುವವರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ, ಅವುಗಳ ಒಟ್ಟು ಮೊಬಲಗುವನ್ನು **“Editor, Itihasa Darpana”** ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ತೆಗೆಸಿದ **ಚೆಕ್ / ಡಿ.ಡಿ** ಮೂಲಕ ಪಟ್ಟಿಯನ್ನು ನಮ್ಮ ವಿಳಾಸಕ್ಕೆ ಕಳುಹಿಸಿ ಕಳುಹಿಸಕೊಟ್ಟಲ್ಲಿ ತಮಗೆ ಅಂಚೆಯ ಮೂಲಕ ಕಳುಹಿಸಿಕೊಡಲಾಗುವುದು.

**ವಿಶೇಷ ಕೊಡುಗೆ:** ***ಇತಿಹಾಸ ದರ್ಪಣ*** ನಿಯತಕಾಲಿಕೆಯ ಎಂಟನೇ ವಾರ್ಷಿಕೋತ್ಸವದ ಪ್ರಯುಕ್ತ ರೂ. 500/– ಮೇಲ್ಪಟ್ಟ ಮೊತ್ತದ ಸಂಚಿಕೆಗಳ ಖರೀದಿಯ ಮೇಲೆ ಶೇ 15% ರಷ್ಟು ಹಾಗೂ ರೂ. 1000/– ಮೇಲ್ಪಟ್ಟ ಮೊತ್ತದ ಪುಸ್ತಕ ಖರೀದಿಯ ಮೇಲೆ ಶೇ 25% ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು.
**–ಸಂಪಾದಕರು.**

**ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು – 560091. ಮೊ. 7829404063.**

1. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ – ವಿಶೇಷ ಸಂಚಿಕೆ.
2. ನಮ್ಮ ಬೆಂಗಳೂರು – ವಿಶೇಷ ಸಂಚಿಕೆ.
3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು – ವಿಶೇಷ ಸಂಚಿಕೆ.
4. ಹೈದರಾಲಿ ಮತ್ತು ಟಿಪೂ ಸುಲ್ತಾನರ ಮೂಲ ದಾಖಲೆ– ವಿಶೇಷ ಸಂಚಿಕೆ.

* ಸಂಚಿಕೆಗಳು ಲಭ್ಯವಿರುವುದಿಲ್ಲ.